ದಿಂದಾಗಲೀ ತರಲಿ ಅದನ್ನು ಅರಣ್ಯ ಉತ್ಪನ್ನವೆಂದು ಪರಿಗಣಿಸಬೇಕಿತ್ತು. ಸರ್ಕಾರವು ದಿನಾಂಕ ೧೬-೩-೧೯೮೯ರ ಅಧಿಸೂಚನೆಯ ಸಂಖ್ಯೆ ಎಲ್‌ಡಬ್ಲ್ಯು ೧೦ ಎಲ್‌ಜಿಎನ್ ೮೭ರಲ್ಲಿ "ರಬ್ಬರ್ ಲ್ಯಾಟಿಕ್ಸ್" ಮತ್ತು ಕೋಕೋ ಬೀನ್ಸ್ ಅಥವಾ ಪಾಡ್ಸ್‌ನ್ನು ಕರ್ನಾಟಕ ಅರಣ್ಯ ಅಧಿನಿಯಮದ ನಿಯಮ (೨)ರ ಕೆಳಗಿನ ಉಪ ನಿಯಮ (೭) ಸೇರಿಸಲು ತಿದ್ದುಪಡಿಯನ್ನು ಹೊರಡಿಸಿತು. ಅದರ ಪ್ರಕಾರ "ರಬ್ಬರ್ ಲ್ಯಾಟಿಕ್ಸ್ ಮತ್ತು ಕೋಕೋ ಬೀನ್ಸ್ ಅಥವಾ ಪಾಡ್ಸ್" ಅರಣ್ಯ ಉತ್ಪನ್ನವಾಗಿರುತ್ತದೆ. ಮೇಲ್ಕಂಡ ಅಧಿಸೂಚನೆಯ ಪ್ರಕಾರ ಅರಣ್ಯಗಳಿಂದ ಮಾತ್ರವಲ್ಲದೆ ಬೇರೆ ಯಾವುದೇ ಮೂಲದಿಂದಾಗಲೀ ರಬ್ಬರ್ ಲ್ಯಾಟಿಕ್ಸ್, ಕೋಕೋ ಬೀನ್ಸ್ ಮತ್ತು ಪಾಡ್ಸ್‌ನ್ನು ತಂದರೂ ಸಹ ಅದು ಅರಣ್ಯ ಉತ್ಪನ್ನವಾಗಿರುತ್ತದೆ ಮತ್ತು ಅದರ ಸಾಗಾಣಿಕೆಗೆ ಈಗ ಪರವಾನಗಿ ಬೇಕಾಗಿರುತ್ತದೆ.

ಸರ್ಕಾರಕ್ಕೆ ಅನೇಕ ವರ್ತುಲಗಳಿಂದ ಇದರ ಬಗ್ಗೆ ಆದ ತೊಂದರೆಗಳ ಬಗ್ಗೆ ಅರ್ಜಿಗಳು ಬಂದುದರಿಂದ ಇನ್ನೊಂದು ಪರಿಷ್ಕೃತ ಪ್ರಸ್ತಾವನೆಯು ಅರಣ್ಯ ಇಲಾಖೆಯಿಂದ ಬಂದಿದ್ದು ಇದರ ಪ್ರಕಾರ ಅರಣ್ಯಗಳಲ್ಲಿ ಕಂಡುಬಂದ ಮತ್ತು ಅರಣ್ಯಗಳಿಂದ ತಂದ ರಬ್ಬರ್ ಲ್ಯಾಟಿಕ್ಸ್ ಮತ್ತು ಕೋಕೋ ಬೀನ್ಸ್ ಅಥವಾ ಪಾಡ್ಸ್‌ನ ಉತ್ಪನ್ನಗಳನ್ನು ಮಾತ್ರ ಅರಣ್ಯ ಉತ್ಪನ್ನವೆಂದು ಪರಿಗಣಿಸಲು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಪಿ. ಸಿ. ಸಿದ್ದನಗೌಡರ್.—(ಮಾನ್ಯ ಸದಸ್ಯರು ಹಾಜರಿರಲಿಲ್ಲ)*

ಉಪಾಧ್ಯಕ್ಷರು.—ಈಗ ಮಾನ್ಯ ಮಂತ್ರಿಗಳು ಬೇಡಿಕೆಗಳನ್ನು ಮಂಡಿಸುವುದು.

Financial Business

Discussion and voting of the Demands for grants for the year 1990-91 D. No. 23—Food and Civil Supplies 26—Transport, Motor Vehicles. 30, 55-56—Cooperation of Regelated Markets.

ಶ್ರೀ ಅಜೀಜ್ ಸೇಠ್.—(ಆಹಾರ ಮತ್ತು ನಾಗರೀಕಸರಬರಾಜು ಮಂತ್ರಿಗಳು).—

Demand No. 23—Food and Civil Supplies *

MADAM, on the recommendation of the Governor, I beg to move:

"That a sum not exceeding Rs. 50,16,06,000 on Revenue Account inclusive of the sum granted on account be granted to the Government to defray the charges which will come in course of payment during the financial year ending 31st day of March 1991 in respect of food and Civil Supplies".

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಖಾತೆ ರಾಜ್ಯ ಮಂತ್ರಿಗಳು)—

ಅಭಿಯಾಚನೆ ಕ್ರಮಾಂಕ ೨೬—ವಾಹನ ತೆರಿಗೆ

ಮಾನ್ಯ ಉಪಾಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾಹನ ತೆರಿಗೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೮.೭೦,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ. ಹಾಗೂ

ಅಭಿಯಾಚನೆ ಕ್ರಮಾಂಕ ೩೦— ರಸ್ತೆ ಸಾರಿಗೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆ ಸಾರಿಗೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ೫೦,೦೦ ೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩೬.೩೧,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಡಾ. ಎಚ್. ಆರ್. ರಾಜು (ಸಹಕಾರ ರಾಜ್ಯ ಮಂತ್ರಿಗಳು).

ಅಭಿಯಾಚನೆ ಕ್ರಮಾಂಕ ೫೫—ಸಹಕಾರ (ಕ್ರಮಪಡಿಸಿದ ಮಾರುಕಟ್ಟೆಗಳ ಹೊರತು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೭೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಹಕಾರಕ್ಕೆ ಕ್ರಮಪಡಿಸಿದ (ಮಾರುಕಟ್ಟೆಗಳ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೬,೩೨,೭೭,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೩,೪೫,೭೨,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ ಹಾಗೂ

ಅಭಿಯಾಚನೆ ಕ್ರಮಾಂಕ ೫೬—ಕ್ರಮಪಡಿಸಿದ ಮಾರುಕಟ್ಟೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ ೩೧-೩-೧೯೭೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕ್ರಮಪಡಿಸಿದ ಮಾರುಕಟ್ಟೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೦,೭೭,೪೧,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಬೇಡಿಕೆ ಸಂಖ್ಯೆಗಳಾದ ೨೩, ೨೬, ೩೦, ೫೫, ಮತ್ತು ೫೬ನ್ನು ಸಭೆಯ ಮುಂದೆ ಮಂಡಿಸಲಾಗಿದೆ, ಈಗ ಚರ್ಚೆಯನ್ನು ಆರಂಭಿಸಬಹುದು,

ಶ್ರೀ ವಾಟಳ್ ನಾಗರಾಜ್.—ಅದಕ್ಕಿಂತ ಮುಂಚೆ ಒಂದು ಮನವಿ. ನನಗೆ ಅವಕಾಶ ಮಾಡಿ ಕೊಡಬೇಕು.

ಉಪಾಧ್ಯಕ್ಷರು.—ಏಕಾಂತಯ್ಯನವರು ಇನಿಷಿಯೇಟ್ ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ, ಮೊದಲೇ ತಮಗೆ ಒಂದು ಪತ್ರ ಬರೆದಿದ್ದೇನೆ. ಅಧ್ಯಕ್ಷರಿಗೆ ಬರೆದಿದ್ದೇನೆ. ಅದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ. ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಖಾತೆ ಮಂತ್ರಿಗಳು ವಿದೇಶಕ್ಕೆ ಹೋಗುತ್ತಾರೆಂದು ಸದನಕ್ಕೆ ತಿಳಿಸಿದ್ದರು. ಆದರೆ ಅವರು ವಿದೇಶಕ್ಕೆ ಹೋಗಿಲ್ಲ. ಅವರು ಇನ್ನೂ ದೆಹಲಿಯಲ್ಲೇ ಇದ್ದಾರೆ. ವಿದೇಶಕ್ಕೆ ಅವರು ಏತಕ್ಕೆ ಹೋಗಿಲ್ಲ? ಇದರ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತೇನೆ. ಇದು ಬಹಳ ಮುಖ್ಯವಾದ ವಿಷಯ. ಸರ್ಕಾರ ಇದರ ಬಗ್ಗೆ ಉತ್ತರ ಕೊಡಲಿ. ಗಣಿ ಮತ್ತು ಭೂ ವಿಜ್ಞಾನ ಸಚಿವರು.........

ಉಪಾಧ್ಯಕ್ಷರು.—ವಾಟಾಳ್ ನಾಗರಾಜ್ ಅವರೇ, ಸುಮ್ಮನೆ ಕಾಗದ ಕಳುಹಿಸಿ ಹೀಗೆ ಕೇಳಿದರೆ ಯಾರು ಉತ್ತರ ಕೊಡಬೇಕು ?

ಶ್ರೀ ಎಂ. ಪಿ. ವೆಂಕಟೇಶ್.—ಇದು ಬಹಳ ಮುಖ್ಯವಾದ ವಿಷಯ.

ಶ್ರೀ ವಾಟಾಳ್ ನಾಗರಾಜ್.—ಅವರು ವಿದೇಶಕ್ಕೆ ಏತಕ್ಕೆ ಹೋದರು ?

ಉಪಾಧ್ಯಕ್ಷರು.—ಸುಮ್ಮನೆ ಕಾಗದವನ್ನು ಕಳುಹಿಸಿ ಇಲ್ಲಿ ಪ್ರಶ್ನೆ ಎತ್ತಿದರೆ ಯಾರು ಉತ್ತರ ಕೊಡುತ್ತಾರೆ ?

ಶ್ರೀ ಎಂ. ವೀರಪ್ಪ ಮೊಯಿಲಿ—ಇದನ್ನು ಈಗ ಎತ್ತಲಿಕ್ಕೆ ಬರುವುದಿಲ್ಲ,

ಉಪಾಧ್ಯಕ್ಷರು.—ದಯವಿಟ್ಟು ಏಕಾಂತಯ್ಯನವರು ಭಾಷಣ ಪ್ರಾರಂಭ ಮಾಡಲಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದು ಕಡತದಲ್ಲಿ ಕೂಡ ಬರಬಾರದು,

ಉಪಾಧ್ಯಕ್ಷರು.—ಹೌದು. ಈಗತಾನೆ ಕಾಗದ ಕೊಟ್ಟಿದ್ದಾರೆ. ನಾಳೆ ಬೇಕಾದರೆ ಎತ್ತಬಹುದು,

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಅವರು ಒಂದು ವಿಷಯ ಪ್ರಸ್ತಾಪ ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್,—ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ತಕ್ಷಣ ಉತ್ತರ ಕೊಡಬೇಕೆಂದು ಹೇಳುತ್ತಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಮಂತ್ರಿಗಳು ಈ ಸದನದಲ್ಲೇ ಇರುವುದರಿಂದ ತಕ್ಷಣವೇ ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ. ತಕ್ಷಣವೇ ಉತ್ತರ ಕೊಡಿ ಎಂದು ಹೇಳುವುದಿಲ್ಲ. ಆದರೆ ಒಂದು ವಿಚಾರವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಉತ್ತರ ಕೊಡಲು ಸಮಯ ತೆಗೆದುಕೊಳ್ಳಲಿ ಏಕೆಂದರೆ...

ಉಪಾಧ್ಯಕ್ಷರು.—ಈಗ ತಾನೆ ನೋಟೀಸ್ ಕೊಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡೋಣ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಬೇರೆ ವಿಷಯ ಇದ್ದರೆ ನಾನು ಸಹ ಸರಿ ಎಂದು ಹೇಳುತ್ತಿರಲಿಲ್ಲ. ಆದರೆ ವಿಚಾರವೇನೆಂದರೆ, ನಮ್ಮ ಸರ್ಕಾರದ ಮಂತ್ರಿಗಳಾದ ಶ್ರೀಮಾನ್ ಶಿವಣ್ಣನವರು ವಿದೇಶಕ್ಕೆ ಸರ್ಕಾರದ ಅಧಿಕೃತ ಕಾರ್ಯಕ್ರಮದ ಮೇಲೆ ಹೋಗಿದ್ದಾರೆ. ಆದರೆ ಮಾನ್ಯ ಸದಸ್ಯರು ಅವರು ವಿದೇಶಕ್ಕೆ ಹೋಗಿಲ್ಲ, ಈ ದೇಶದಲ್ಲೇ ಇದ್ದಾರೆ ಎಂಬ ಮಾತನ್ನು ಹೇಳಿದ್ದಾರೆ. ಆದ್ದರಿಂದ ಅವರು ಎಲ್ಲಿದ್ದಾರೆ ? ವಿದೇಶಕ್ಕೆ ಹೋಗಿದ್ದರೆ ಹೋಗಿದ್ದಾರೆ ಅಂತ ಹೇಳಿ. ಇಲ್ಲದಿದ್ದರೆ ಈ ದೇಶದಲ್ಲಿದ್ದರೆ ಈ ದೇಶದಲ್ಲೇ ಇದ್ದಾರೆ ಅಂತ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಉಪಾಧ್ಯಕ್ಷರೇ, ಯಾವುದೇ ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕಾದರೂ ಅದಕ್ಕೆ ಸಭೆಯ ನಿಯಮಾವಳಿಗಳು ಇವೆ. ಅದನ್ನು ಬಿಟ್ಟು ಏಕಾಏಕಿ ಮಧ್ಯದಲ್ಲಿ ಎದ್ದು ಅದರಲ್ಲೂ ಸದನದ ಕಾರ್ಯಕಲಾಪಗಳು ನಡೆಯುವಾಗ ಮಧ್ಯದಲ್ಲಿ ಎದ್ದು ನಿಂತು ವಿಷಯವನ್ನು ಪ್ರಸ್ತಾಪ ಮಾಡುವುದು ನಿಯಮಗಳಿಗೆ ಸರಿಹೋಗಲಾರದು. ದಯಮಾಡಿ ತಾವು ತಾಳ್ಮೆಯಿಂದ ಇರಿ. ಆದರೆ ಇಂತಹ ಪರಿಪಾಠವನ್ನು ನಾವು ಹಾಕಿಕೊಳ್ಳುತ್ತಾ ಹೋದರೆ ಎಲ್ಲಿಗೆ ತಲುಪುತ್ತೇವೆಂಬುದು ನನಗೆ ಅರ್ಥವಾಗುತ್ತಿಲ್ಲ. ಆದರೆ ಮಾನ್ಯ ಸದಸ್ಯರಾದ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ವಿಷಯವನ್ನು ಎತ್ತಿದ್ದಾರೆ. ಮಾನ್ಯ ಉಪಾಧ್ಯಕ್ಷರೇಯವರೆ ತಮಗೂ ಗೊತ್ತಿದೆ, ಅವರು ತಮಗೂ ಕಾಗದ ಬರೆದಿದ್ದಾರೆ. ಸನ್ಮಾನ್ಯ ಶಿವಣ್ಣನವರು ಸಂಬಂಧಪಟ್ಟ ಒಂದು ಅಧಿಕೃತ ಕಾರ್ಯಕ್ರಮದ ಮೇಲೆ ವಿದೇಶಕ್ಕೆ ಹೋಗುವುದಕ್ಕೆ ಪ್ರವಾಸ ಕಾರ್ಯಕ್ರಮ ಹಾಕಿರುವುದನ್ನು ತಮ್ಮ ಗಮನಕ್ಕೂ ತಂದಿದ್ದಾರೆ. ಅದಕ್ಕೆ ತಮ್ಮ ಅನುಮತಿಯನ್ನೂ ಪಡೆದಿದ್ದಾರೆ. ಆದರೆ ಅವರು ವಿದೇಶಕ್ಕೆ ಹೋಗಿಲ್ಲ, ದೆಹಲಿಯಲ್ಲಿದ್ದಾರೆಂಬುದು ಬರೀ ಊಹಾಪೋಹ. ಅವರು ತಮ್ಮ ಕಾರ್ಯಕ್ರಮದ ಪ್ರಕಾರ ಎಲ್ಲಿಗೆ ಹೋಗಬೇಕೋ ಅಲ್ಲಿಗೆ ಹೋಗಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಅವರು ವಿದೇಶಕ್ಕೆ ಹೋಗಿಲ್ಲ. ದೆಹಲಿಯ ಕರ್ನಾಟಕ ಭವನದಲ್ಲಿದ್ದಾರೆ.

ಉಪಾಧ್ಯಕ್ಷರು.—ಏಕಾಂತಯ್ಯನವರೇ, ತಾವು ಬೇಡಿಕೆಯ ಮೇಲೆ ಚರ್ಚೆ ಪ್ರಾರಂಭ ಮಾಡಿ.

† ಶ್ರೀ ಎಚ್. ಏಕಾಂತಯ್ಯ (ಚಿತ್ರದುರ್ಗ).—ಸನ್ಮಾನ್ಯ ಸಭಾಧ್ಯಕ್ಷರೇಯವರೆ, ಈಗತಾನೆ ಮಾನ್ಯ ಮಂತ್ರಿಗಳು ಈ ಸಭೆಯಲ್ಲಿ ಮಂಡನೆ ಮಾಡಿದಂತಹ ಬೇಡಿಕೆಗಳನ್ನು ವಿರೋಧಿಸುತ್ತಾ ಆ ಬೇಡಿಕೆಗಳಿಗೆ ಸಂಬಂಧಪಟ್ಟಂತೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಲು ಇಷ್ಟಪಡುತ್ತೇನೆ.

ಶ್ರೀ ಅಜೀಜ್ ಸೇಠ್.—ಆಹಾರಕ್ಕೂ ವಿರೋಧ ಮಾಡುವುದು ಅಂದರೆ ಹೇಗೆ ? ವಿರೋಧಿಸುತ್ತೇನೆಂದು ಹೇಳಬೇಡಿ. ಸಲಹೆ ಕೊಡುತ್ತೇನೆಂದು ಹೇಳಿ.

ಶ್ರೀ ಎಚ್. ಏಕಾಂತಯ್ಯ.—ಅವರು ಈ ಕಡೆ ಇದ್ದಾಗ ಏನು ಮಾಡುತ್ತಿದ್ದರು ಅಂತ ಮರೆತಿದ್ದಾರೆ ಅಂತ ಕಾಣುತ್ತದೆ. ಸಹಕಾರ ಇಲಾಖೆಯ ಬೇಡಿಕೆಯ ಬಗ್ಗೆ ಕೆಲವು ವಿಚಾರಗಳನ್ನು ಮೊಟ್ಟಮೊದಲನೆಯಾಗಿ ಪ್ರಸ್ತಾಪ ಮಾಡಲು ಇಷ್ಟಪಡುತ್ತೇನೆ. ಸಹಕಾರ ಇಲಾಖೆಯ ಬೇಡಿಕೆ ಅಂದ ತಕ್ಷಣ ನಮಗೆ ನೆನಪಿಗೆ ಬರುವಂತಹ ನಮ್ಮ ಈ ಶತಮಾನದ ಒಂದನೇ ದಶಕದಿಂದ ಇಲ್ಲಿಯವರೆವಿಗೂ ಸಹ ಸಹಕಾರಿ ಚಳುವಳಿಯ ಬಗ್ಗೆ ಅದರ ಬೆಳವಣಿಗೆಯ ಬಗ್ಗೆ ನಾವು ಮಾತನಾಡುತ್ತೇವೆ. ಅದೇ ರೀತಿ ಈ ಸಹಕಾರಿ ಕ್ಷೇತ್ರದ, ಅಥವಾ ಸಹಕಾರಿ ಕ್ಷೇತ್ರದಲ್ಲಿರತಕ್ಕ ಸಂಸ್ಥೆಗಳ ಬಗ್ಗೆ, ಸಹಕಾರಿ ಚಳುವಳಿಯ ಬಗ್ಗೆ, ಅದರ ತತ್ವದ ಬಗ್ಗೆ ಮಾತನಾಡುವಾಗ ಅನೇಕ ಸಂದರ್ಭದಲ್ಲಿ ನಮ್ಮ ರಾಷ್ಟ್ರದ ಹಿರಿಯರ ಹೆಸರುಗಳನ್ನು ನಾವು ಉದಾಹರಿಸುತ್ತೇವೆ. ಮತ್ತು ಅವರ ಅಭಿಪ್ರಾಯಗಳನ್ನು ಉಲ್ಲೇಖ ಮಾಡುತ್ತೇವೆ. ಮುಖ್ಯವಾಗಿ ಮಹಾತ್ಮ ಗಾಂಧೀಜಿಯವರು ಸಹಕಾರ ಚಳುವಳಿಯ ಬಗ್ಗೆ ಹೇಳಿದಂತಹ ಮಾತುಗಳನ್ನು ಪಂಡಿತ್ ಜವಾಹರಲಾಲ್ ನೆಹರೂ ಹೇಳಿದ ಮಾತುಗಳನ್ನು ಸಹಜವಾಗಿ ನಾವು ಹೆಚ್ಚು ಪ್ರಸ್ತಾಪ ಮಾಡುತ್ತೇವೆ. ಇದು ಹೊಸದೇನೂ ಅಲ್ಲ. ಯಾವ ಉದ್ದೇಶಕ್ಕೋಸ್ಕರ ಸಹಕಾರ ಕ್ಷೇತ್ರದಲ್ಲಿರತಕ್ಕ ಈ ಸಂಸ್ಥೆಗಳು ಸ್ಥಾಪನೆಯಾಗಿವೆಯೋ ಆ ಉದ್ದೇಶಕ್ಕಾಗಿ ಅವುಗಳು ಇತ್ತೀಚಿನ ವರ್ಷಗಳಲ್ಲಿ, ಸಹಕಾರ ಚಳುವಳಿಗೆ ಸಹಕಾರಿಯಾದ ರೀತಿಯಲ್ಲಿ ನಡೆಯುತ್ತಿವೆಯೋ ಎಂಬುದನ್ನು ನೇರವಾಗಿ ಪ್ರಸ್ತಾಪ ಮಾಡಲು ಇಷ್ಟಪಡುತ್ತೇನೆ.

ಸನ್ಮಾನ್ಯ ಅಧ್ಯಕ್ಷಿಣಿಯವರೇ, ಈ ಬೇಡಿಕೆಗೆ ಸಂಬಂಧಪಟ್ಟ ಹಾಗೆ ಮಾತನಾಡುವುದಕ್ಕಿಂತ ಮುಂಚೆ ಈ ಸಹಕಾರಿ ಕ್ಷೇತ್ರದ ಮಹತ್ವದ ಬಗ್ಗೆ ಒಂದು ಮಾತನ್ನು ಹೇಳಿದರೆ ತಪ್ಪಾಗಲಾರದು. ನಮ್ಮ ರಾಷ್ಟ್ರದ, ನಮ್ಮ ರಾಜ್ಯದ ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಯಲ್ಲಿ ಈ ಸಹಕಾರಿ ತತ್ವ ಮತ್ತು ಈ ಸಂಸ್ಥೆಗಳು ಪ್ರಾಮುಖ್ಯವಾದ ಪಾತ್ರವನ್ನು ವಹಿಸುತ್ತವೆಂದು ನಾವು ಒಪ್ಪಿಕೊಂಡಿದ್ದೇವೆ. ಇಂತಹ ಪ್ರಮುಖ ಪಾತ್ರ ವಹಿಸುವ ಈ ಸಂಸ್ಥೆಗಳು ಇವತ್ತಿನ ದಿವಸ ಯಾವ ದಿಸೆಯಲ್ಲಿ ಸಾಗುತ್ತಿವೆ ಎಂದರೆ ಇವುಗಳಿಂದ ಜನರಿಗೆ ಯಾವ ರೀತಿ ಉಪಯೋಗ ಆಗಬೇಕೋ ಆ ಬಗ್ಗೆ ಯಾವ ನಿರೀಕ್ಷೆ ಮಾಡಿದ್ದೆವೋ ಆ ನಿರೀಕ್ಷಿತ ರೀತಿಯಲ್ಲಿ ನಡೆಯುತ್ತಿವೆಯೇ ಎಂಬುದನ್ನು ರಚನಾತ್ಮಕ ದೃಷ್ಟಿಯಿಂದ ನಾವು ನೋಡಬೇಕಾಗಿದೆ. ಮಾನ್ಯ ಸಭಾಧ್ಯಕ್ಷರು ನಿನ್ನೆ ಹೇಳಿದರು. ಈ ಕಡೆ ಮಾತನಾಡುವಾಗ. ಆ ಕಡೆಯಿಂದ ಮಾತನಾಡುವಾಗ, ಏನನ್ನಾದರೂ ಮಾತನಾಡಿದರೆ ಮುಂದೆ ಆ ಮಾತುಗಳನ್ನು ನಾವು ಎದುರಿಸಬೇಕಾಗುತ್ತದೆಂದು ಹೇಳಿದರು. ಅದನ್ನು ನಾನು ಖಂಡಿತವಾಗಿ ಒಪ್ಪುತ್ತೇನೆ ನಾನು ಆ ಕಡೆ ಏನು ಮಾತನಾಡಿದ್ದೆ ಏನು ಟೀಕೆ ಮಾಡಿದ್ದೆ ಅವುಗಳನ್ನು ಗಣನೆಯಲ್ಲಿ ಇಟ್ಟುಕೊಂಡು ನೆನಪಿನಲ್ಲಿ ಇಟ್ಟುಕೊಂಡು ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿ ಈ ಕಡೆ ಮಾತನಾಡಿದ ಹಿರಿಯ ಸಹಕಾರಿಗಳು, ಅಂದಿನ ವಿರೋಧಪಕ್ಷದಲ್ಲಿ ಇದ್ದಂತಹ ಸದಸ್ಯರು, ನಾಯಕರು ಈಗ ಆ ಕಡೆ ಕುಳಿತಿದ್ದು ಅವರಿಗೂ ಈ ಮಾತನ್ನು ಹೇಳುತ್ತೇನೆ. ತಾವು ಏನು ಈ ಕಡೆ ನಿಂತು ಮಾತನಾಡಿದ್ದಿರಿ ಅದನ್ನು ತಾವು ಆ ಕಡೆ ಇರುವಾಗ ಗಮನದಲ್ಲಿ ಇಟ್ಟುಕೊಂಡು ಮಾತನಾಡುತ್ತೀರೆಂದು ಹಾಗೂ ನನಗೆ ಉತ್ತರವನ್ನು ಕೊಡುತ್ತೀರೆಂದು ನಾನು ಭಾವಿಸಿದ್ದೇನೆ. ಸನ್ಮಾನ್ಯ ಅಧ್ಯಕ್ಷಿಣಿಯವರೇ, ಇವತ್ತಿನ ದಿವಸ ಈ ದೇಶದಲ್ಲಿ ಯಾರು ಅಶಕ್ತರಿದ್ದಾರೆ, ಅಬಲರಿದ್ದಾರೆ, ಆರ್ಥಿಕವಾಗಿ ಸಾಮಾಜಿಕವಾಗಿ ತಮ್ಮ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವುದಕ್ಕೆ ಸಹಕಾರಿ ಸಂಸ್ಥೆಗಳ ಮೊರೆ ಹೊಕ್ಕಿದ್ದಾರೆ, ಅಂತಹ ನಾಗರೀಕರು ಏನು ಇದ್ದಾರೆ ಸದಸ್ಯರು ಏನಿದ್ದಾರೆ ಅವರು ಯಾವ ದೃಷ್ಟಿಯಿಂದ ಈ ಒಂದು ಮೊರೆಹೊಕ್ಕಿದ್ದಾರೆ ಅವರು ಆ ದೃಷ್ಟಿಯಲ್ಲಿ ಸಫಲರಾಗಿದ್ದಾರೆಯೇ, ಅವರಿಗೆ ಪ್ರಯೋಜನ ಆಗಿದೆಯೇ ಇಲ್ಲವೇ ಎಂಬುದನ್ನು ನಾವು ನೋಡಬೇಕಾಗುತ್ತದೆ. ಈ ರಾಜ್ಯದಲ್ಲಿ ಸಾವಿರಾರು ಸಹಕಾರಿ ಸಂಸ್ಥೆಗಳು ಇವೆ. ಸುಮಾರು ೨೬ ಸಾವಿರಕ್ಕಿಂತಲೂ ಹೆಚ್ಚು ಸಹಕಾರಿ ಸಂಸ್ಥೆಗಳು ನಮ್ಮಲ್ಲಿ ಇವೆ. ಆ ಬಗ್ಗೆ ವಿವರವನ್ನು ಆ ನಂತರ ಕೊಡುತ್ತೇನೆ. ಅದಕ್ಕಿಂತಲೂ ಮೊಟ್ಟಮೊದಲನೆಯದಾಗಿ ಈ ಸಹಕಾರಿ ಕ್ಷೇತ್ರದಲ್ಲಿ ಸಾಲ ವಿತರಣೆ ಏನು ಇದೆ, ಅದು ಕೂಡಾ ಕೃಷಿ ಉತ್ಪನ್ನಗಳ ಸಾಲದ ವಿತರಣೆ ಏನಿದೆ ಅದು ವಿಶೇಷವಾಗಿ ಮಹತ್ವದ್ದು ಇದೆ. ತಮಗೆ ಗೊತ್ತಿರುವ ಹಾಗೆ ೧೯೮೯-೯೦ರಲ್ಲಿ ಏನು ನಮಗೆ ೧೭೨ ದಶಲಕ್ಷ ಮೆಟ್ರಿಕ್ ಟನ್ ಆಹಾರದ ಉತ್ಪಾದನೆ ಇದ್ದರೆ ನಮ್ಮ ನಿಮ್ಮ ಅಂದಾಜು ಪ್ರಕಾರ ಪರಿಣಿತರ ಸಮೀಕ್ಷೆ ಪ್ರಕಾರ ಈ ಶತಮಾನದ ಅಂತ್ಯದೊಳಗೆ ನಮಗೆ ಬೇಕಾಗಿರತಕ್ಕ ಆಹಾರ ಧಾನ್ಯ ಎಷ್ಟು ಎಂದರೆ, ಇವತ್ತು ಎಷ್ಟು ನಾವು ಉಪಯೋಗಿಸುತ್ತಿದ್ದೇವೆ ಅಷ್ಟು ಪ್ರಮಾಣದಲ್ಲಿ ಉಪಯೋಗಿಸಿದರೂ ಕನಿಷ್ಟ ೨೦೦ ದಶಲಕ್ಷ ಮೆಟ್ರಿಕ್ ಟನ್ ಆಹಾರ ಬೇಕಾಗುತ್ತದೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಈ ಒಂದು ಉತ್ಪಾದನಾ ಗುರಿಯನ್ನು ನಾವು ಮುಟ್ಟಬೇಕಾದರೆ ಇವತ್ತಿನ ದಿವಸ ವ್ಯವಸಾಯ ಕ್ಷೇತ್ರದಲ್ಲಿ ದುಡಿಯುವ ಜನರು ಏನಿದ್ದಾರೆ, ರೈತ ಕಾರ್ಮಿಕರೇನಿದ್ದಾರೆ, ರೈತರೇನಿದ್ದಾರೆ, ಪ್ರಾಥಮಿಕ ಪತ್ತಿನ ಸಹಕಾರಿ ಸಂಘಗಳ ಸದಸ್ಯರು ಏನಿದ್ದಾರೆ ಅವರಿಗೆ ಸಾಲವನ್ನು ಕೊಡುವ ಮೂಲಕ ಅವರಿಗೆ ಶಕ್ತಿಯನ್ನು ನೀಡಿ, ಅವರು ಹೆಚ್ಚು ಉತ್ಪತ್ತಿ ಮಾಡುವುದಕ್ಕೆ ಬೇಕಾದ ನೆರವನ್ನು ಕೊಡಬೇಕಾಗುತ್ತದೆ. ಅದನ್ನು ಕೊಡುವ ಪ್ರಮಾಣವನ್ನು ಹಿಂದಿನ ಫಲಿತಾಂಶದ ದೃಷ್ಟಿಯಿಂದ ನೋಡಿದರೆ ಈ ನೆರವು ಇತ್ತೀಚೆಗೆ ಕಡಿಮೆಯಾಗುತ್ತಿದೆ ಎಂದು ನಾವೆಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಇದಕ್ಕೆ ನಾನು ರಾಜ್ಯ ಸರ್ಕಾರವನ್ನಾಗಲೀ ಅಥವಾ ಈಗಿರುವ ಪಕ್ಷದ ಸರ್ಕಾರವನ್ನಾಗಲೀ ದೂಷಣೆ ಮಾಡುವುದಿಲ್ಲ. ಸರ್ವೇ ಸಾಮಾನ್ಯವಾಗಿ ಈ ರಾಜಕೀಯ ಕ್ಷೇತ್ರದಲ್ಲಿರುವ ಜನ, ಸಾಲಮನ್ನಾ, ಸಾಲ ಮೇಳದ ಬಗ್ಗೆ ಏನು ಭಾವನೆಗಳನ್ನು ವ್ಯಕ್ತ ಮಾಡಿದ್ದಾರೆ ಆ ಭಾವನೆಗಳಿಂದಾಗಿ ಪ್ರತೀಕೂಲ ಪರಿಣಾಮ ಉಂಟಾಗಿ ಅನೇಕ ಸಹಕಾರಿ ಸಂಘಗಳು ಅಶಕ್ತವಾಗಿವೆ. ಇದರಿಂದ ಯಾವ ಸಾಲವನ್ನು ವಿತರಣೆ ಮಾಡಬೇಕಾಗಿತ್ತೋ, ಯಾವ ಗುರಿಯನ್ನು ಹೊಂದಬೇಕಾಗಿತ್ತೋ ಅದನ್ನು ಹೊಂದುವುದಕ್ಕೆ ಸಾಧ್ಯವಾಗಿಲ್ಲ. ಹಣಕಾಸಿನ ಸಂಸ್ಥೆಗಳು ಹಿಂದಿನಿಂದ ಬಂದ ರೀತಿಯನ್ನು ನೋಡಿದರೆ ಇತ್ತೀಚೆಗೆ ನಾವು ಹೆಚ್ಚು ಹೆಚ್ಚು ಹಣವನ್ನು ಈ ಒಂದು ಸಹಕಾರಿ ಸಂಘಗಳ, ಹಣಕಾಸಿನ ಸಂಸ್ಥೆಗಳ ಮುಖಾಂತರ ಹಣವನ್ನು ಸಾಲವಾಗಿ ನೀಡುತ್ತಿವೆ. ೧೯೬೯ರಲ್ಲಿ ಸುಮಾರು ಒಟ್ಟು ಕೃಷಿ ಸಾಲದ ವಿತರಣೆ ೧,೦೭೫ ಕೋಟಿ ಇದ್ದರೆ ಇದು ೧೯೭೫ರಲ್ಲಿ ೨,೭೨೩ ಕೋಟಿಯಾದರೆ ೧೯೮೭ರಲ್ಲಿ ೧೭,೬೦೦ ಕೋಟಿಗಿಂತಾ ಹೆಚ್ಚು ಹಣವನ್ನು ನಾವು ಇವತ್ತಿನ ದಿವಸ ಕೃಷಿ ಸಾಲವಾಗಿ ಹಂಚಿದ್ದೇವೆ.

ಆ ಪೈಕಿ ಶೇಕಡ ೬೫ರಷ್ಟು ಹಣ ಸಹಕಾರಿ ಸಂಸ್ಥೆಗಳಿಂದ ಬಂದಿದೆ, ಶೇಕಡ ೩೧ರಷ್ಟು ಹಣ ವಾಣಿಜ್ಯಬ್ಯಾಂಕುಗಳಿಂದ ಬಂದಿದೆ. ಶೇಕಡ ೪ರಷ್ಟು ಹಣ ಗ್ರಾಮೀಣ ಬ್ಯಾಂಕುಗಳ ಮುಖಾಂತರ ಹಂಚಿದ್ದೇವೆ. ಈ ರೀತಿಯಾಗಿ ಏನು ಸಾಲವನ್ನು ಹಂಚಿದ್ದೇವೆ, ಅದನ್ನು ನೀವು ಗಮನದಲ್ಲಿಟ್ಟುಕೊಳ್ಳುವುದಾದರೆ, ಸಹಕಾರಿ ಕ್ಷೇತ್ರದಲ್ಲಿ ಏನು ಸಾಲ ವಿತರಣೆ ಮಾಡಿದ್ದಾರೆ ಅದು ೧೯೭೬ನೇ ಇಸವಿಯಲ್ಲಿ ಶೇಕಡ ೮೦ರಷ್ಟು ಇದ್ದರೆ ಇವತ್ತು ಅದು ಶೇಕಡವಾರು ಪ್ರಮಾಣ ಕೇವಲ ೪೭ಕ್ಕೆ ಇಳಿದಿದೆ. ಇದರ ಅರ್ಥ ಏನೆಂದರೆ ಸಹಕಾರಿ ಕ್ಷೇತ್ರದಲ್ಲಿ ನಾವು ಏನು ಸಾಲವನ್ನು ವಿತರಣೆ ಮಾಡಿದ್ದೇವೆ ಆ ಸಾಲದ ಪ್ರಮಾಣ ಇವತ್ತಿನ ದಿವಸ ಗಣನೀಯವಾಗಿ ಇಳಿಮುಖವಾಗಿದೆ ಎಂಬುದನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಅದಕ್ಕೆ ಕಾರಣ ಏನೆಂಬುದನ್ನು ನಾನು ಈಗಾಗಲೇ ಹೇಳಿದ್ದೇನೆ. ಅನೇಕ ಲೋಪದೋಷಗಳಿರಬಹುದು. ಸರ್ಕಾರ ಅನುಸರಿಸುತ್ತಿರುವ ನೀತಿಯಿಂದ ಇರಬಹುದು. ಮತ್ತೆ ಯಾವುದೇ ಕಾರಣವಿರಬಹುದು. ವಸ್ತುಸ್ಥಿತಿ ಏನಾಗಿದೆ ಅಂದರೆ ಸಹಕಾರ ಸಂಸ್ಥೆಗಳ ಮುಖಾಂತರ ಸಾಲ ವಿತರಣೆ ಮಾಡುವ ಪ್ರಮಾಣ ಏನಿದೆ ಆ ವೇಗ ಇಳಿದಿದೆ ಅದನ್ನು ತಡೆಹಿಡಿಯಬೇಕಾಗಿರುವುದು ಅವಶ್ಯಕ. ಈ ರಾಜ್ಯದಲ್ಲಿ ೨೬,೬೦೦ಕ್ಕೂ ಹೆಚ್ಚು ಸಹಕಾರ ಸಂಘಗಳಿವೆ. ಅವುಗಳಲ್ಲಿ ೧ ಕೋಟಿ ೧೪ ಲಕ್ಷ ಜನ ಸದಸ್ಯರಿದ್ದಾರೆ. ಸುಮಾರು ೪೨೦ ಕೋಟಿ ರೂಪಾಯಿ ಶೇರು ಬಂಡವಾಳವಿದೆ. ದುಡಿಯುವ ಬಂಡವಾಳ ಮೂರು ಸಾವಿರ ಕೋಟಿಗಿಂತ ಹೆಚ್ಚು ಇದೆ. ಇಂತಹ ಪರಿಸ್ಥಿತಿಯಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ ಅಂಶ ಅಂದರೆ ನಮ್ಮಲ್ಲಿ ಪ್ರಾಥಮಿಕ ಸಹಕಾರ ಸಂಘಗಳ ಸ್ಥಿತಿ ಏನಾಗಿದೆ ಎಂಬುದರ ಬಗ್ಗೆ ನಾವು ಆಲೋಚನೆ ಮಾಡಬೇಕಾಗಿದೆ. ಅವುಗಳಿಂದ ನಾವು ಏನು ಸಾಲ ವಿತರಣೆ ಮಾಡಿದ್ದೇವೆ, ಅದರಲ್ಲಿ ೬೫೦ ಕೋಟಿ ರೂಪಾಯಿಗಳನ್ನು ಕರ್ನಾಟಕ ರಾಜ್ಯದಲ್ಲಿರುವಂತಹ ಪತ್ತಿನ ಸಹಕಾರ ಸಂಘಗಳ ಮುಖಾಂತರ ವಿತರಣೆ ಮಾಡಿದ್ದೇವೆ. ಇವುಗಳ ಆರ್ಥಿಕ ಪರಿಸ್ಥಿತಿಯನ್ನು ಸ್ವಲ್ಪ ಮಟ್ಟಿಗೆ ಚಿಂತನೆ ಮಾಡುವುದಾದರೆ ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳು ಏನಿವೆ, ಅವುಗಳು ಹೆಚ್ಚು ಕಡಿಮೆ ನಾಶವಾಗಿವೆ ಅಥವಾ ಅವಸಾನ ಸ್ಥಿತಿಯಲ್ಲಿವೆಯೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಏತಕ್ಕೆಂದರೆ ಅವುಗಳಿಂದ ಬರಬೇಕಾದ ಸಾಲ, ಏನಿದೆ ಅದು ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳಿಂದ ಬರಬೇಕು. ಅವರು ಡಿಸಿಸಿ ಬ್ಯಾಂಕು ಮತ್ತು ಮಧ್ಯವರ್ತಿಗಳಿಗೆ ಕೊಡತಕ್ಕ ಹಣವನ್ನು ಗಣನೆಗೆ ತೆಗೆದುಕೊಂಡಾಗ ಸುಮಾರು ೩೦ ಕೋಟಿ ರೂಪಾಯಿಗಿಂತಲೂ ಹೆಚ್ಚು ಹಣ ನಷ್ಟದಲ್ಲಿವೆ. ಈ ಎರಡೂ ಅಂಶಗಳನ್ನು ನಾವು ಹೋಲಿಕೆ ಮಾಡಿದರೆ ಪ್ರಾಥಮಿಕ ಪತ್ತಿನ ಸಹಕಾರ ಸಂಘದ ಸದಸ್ಯರಿಗೆ ಕೊಟ್ಟ ಸಾಲ ಬಹುಭಾಗ ಸ್ವಲ್ಪ ಮಟ್ಟಿಗಾದರೂ ಸಹ ವಾಪಸ್ಸು ಬರಲಾರದ ಸಾಲವಾಗಿದೆ. ಅದನ್ನೂ ನಾವು ಗಮನಕ್ಕೆ ತೆಗೆದುಕೊಂಡಾಗ ಇವತ್ತಿನ ದಿವಸ ಕೇವಲ ೩೦ ಕೋಟಿ ಅಲ್ಲ ಅದಕ್ಕಿಂತ ಹೆಚ್ಚು ಹಣ ನಷ್ಟವಾಗಿದೆ. ಈ ಎರಡೂ ಅಂಶಗಳನ್ನು ನಾವು ಹೋಲಿಕೆ ಮಾಡಿದರೆ ಹೆಚ್ಚು ಹಣ ಈ ಸಹಕಾರ ಸಂಘಗಳಿಂದ ನಷ್ಟವನ್ನು ಅನುಭವಿಸಿದ್ದೇವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಶ್ರೀ ಟಿ ಎಂ. ಮಂಜುನಾಥ.—ಮಾನ್ಯ ಉಪಾಧ್ಯಕ್ಷಿಣೀಯವರೆ, ಮಾನ್ಯ ಸದಸ್ಯರು ಒಂದು ನಿಮಿಷ ಈಲ್ಡ್ ಆಗುವುದಾದರೆ, ಮಾನ್ಯ ಸದಸ್ಯರು ಹಿರಿಯರಾಗಿದ್ದಾರೆ. ಅವರು ಸಹಕಾರ ಮಂತ್ರಿಗಳಾಗಿದ್ದರು. ಎಲ್ಲ ವಿಚಾರಗಳು ಅವರಿಗೆ ಅಮೂಲಾಗ್ರವಾಗಿ ಅವರಿಗೆ ಗೊತ್ತಿದೆ. ಅವರಲ್ಲಿ ನಾನು ಕೇಳತಕ್ಕದ್ದು ಇಷ್ಟೆ. ಈ ಸಹಕಾರ ಸಂಘಗಳು ಈ ಮಟ್ಟಕ್ಕೆ ಬರುವುದಕ್ಕೆ ಕಾರಣವೇನು ? ಅವುಗಳು ಸರಿಯಾಗಬೇಕಾದರೆ ಏನು ಮಾಡಬೇಕು ? ಅದರ ಬಗ್ಗೆ ಸಲಹೆ ಕೊಟ್ಟರೆ ಒಳ್ಳೆಯದು. ಸಹಕಾರ ಸಂಘಗಳು ಯಾವ ಕಾಲದಲ್ಲಿ ಕೆಟ್ಟು ಹೋದವು ? ಅವುಗಳನ್ನು ಜೀವಂತವಾಗಿ ಇಡಬೇಕಾದರೆ ಯಾವ ರೀತಿ ಮಾಡಬೇಕು ? ಈ ಸಾಲ ಮಜಾ ಮಾಡುವುದರಿಂದ ಎಷ್ಟು ಅನಾಹುತವಾಗುತ್ತದೆ ಎನ್ನುವ ಬಗ್ಗೆ ತಮ್ಮ ಸಲಹೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ.—ನಾನು ಮಾನ್ಯ ಸದಸ್ಯರಿಗೆ ಸಲಹೆಯನ್ನು ಕೊಡುತ್ತೇನೆ. ತಮಗೆ ಒಂದೇ ಒಂದು ಶರತ್ತು, ನಾನು ಮಾತನಾಡುವ ತನಕ ತಾವು ಪೂರಾ ಇಲ್ಲಿಯೇ ಇರಬೇಕು.

ಉಪಾಧ್ಯಕ್ಷರು.—ಮಾನ್ಯ ಏಕಾಂತಯ್ಯನವರು ತಾವು ಈಗ ಭಾಷಣ ಶುರುಮಾಡಿದ್ದೀರಿ. ತಮಗೆ ಇನ್ನು ಎಷ್ಟು ಸಮಯ ಬೇಕು. ಅರ್ಧಗಂಟೆಯಲ್ಲಿ ಮುಗಿಸುತ್ತೀರಾ ?

ಶ್ರೀ ಹೆಚ್. ಏಕಾಂತಯ್ಯ.—ಮಾನ್ಯ ಉಪಾಧ್ಯಕ್ಷಿಣಿಯವರೇ ನಾನು ಈಗತಾನೇ ಭಾಷಣ ಶುರುಮಾಡಿದ್ದೇನೆ. ನನಗೆ ಇನ್ನು ಒಂದು ಗಂಟೆ ಸಮಯಬೇಕು. ನಮ್ಮ ಕಡೆಗೆ ಹೆಚ್ಚು ಮಾತನಾಡುವವರು ಇಲ್ಲ. ಆದ್ದರಿಂದ ನನಗೆ ಹೆಚ್ಚಾಗಿ ಸಮಯವನ್ನು ಕೊಡಿ.

ಶ್ರೀ ಪಿ. ಸಿ. ಸಿದ್ದನಗೌಡರ್ .—ಮಾತನಾಡುವವರ ಪೈಕಿ ನಾನೂ ಒಬ್ಬ ಇದ್ದೇನೆ.

ಶ್ರೀ ಹೆಚ್. ಏಕಾಂತಯ್ಯ .—ಹೆಚ್ಚು ಮಾತನಾಡುವವರು ಇಲ್ಲವೆಂದು ನಾನು ಹೇಳಿದ್ದೇನೆ.

ಉಪಾಧ್ಯಕ್ಷರು .—ಈಗ ಸಭೆಯನ್ನು ಮುಂದೂಡಲಾಗಿದೆ. ಪುನ: ಸಭೆಯು ಎರಡು ಗಂಟೆಗೆ ಸೇರುವುದು.

(ಸದನವು ೧೨ ಗಂಟೆ ೫೯ ನಿಮಿಷಗಳಿಗೆ ಮುಕ್ತಾಯವಾಯಿತು)

(ಸದನವು ಮಧ್ಯಾಹ್ನ ೨-೦೫ ಗಂಟೆಗೆ ಮತ್ತೆ ಸಮಾವೇಶಗೊಂಡಿತು)

(ಮಾನ್ಯ ಉಪಾಧ್ಯಕ್ಷಿಣಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಹೆಚ್. ಏಕಾಂತಯ್ಯ .—ಸನ್ಮಾನ್ಯ ಉಪಾಧ್ಯಕ್ಷರೇ, ನಾನು ಬೆಳಿಗ್ಗೆ ಪ್ರಾಸ್ತಾವಿಕವಾಗಿ ಮಾತನಾಡುತ್ತಾ ನಮ್ಮ ರಾಜ್ಯದ ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳು ಯಾವ ಮೂಲ ಉದ್ದೇಶ ದಿಂದ, ಯಾವ ದೃಷ್ಟಿಯನ್ನಿಟ್ಟುಕೊಂಡು ಸ್ಥಾಪನೆಯಾದವೋ ಆ ಉದ್ದೇಶ ಸಾಧನೆಯಲ್ಲಿ ವಿಫಲವಾಗಿವೆ ಅಥವಾ ಅವುಗಳ ಪ್ರಗತಿ ಕಳೆದ ಕೆಲವು ವರ್ಷಗಳಿಂದ, ಅನೇಕ ಕಾರಣಗಳಿಂದ ಇಳಿಮುಖವಾಗಿದೆ ಎಂಬುದನ್ನು ನಾನು ಹೇಳುತ್ತಿದ್ದೆ. ಅದೇ ರೀತಿ ಈ ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳ ಜೊತೆಗೆ ಪ್ರಾಥಮಿಕ ಕೃಷಿ ಭೂ ಅಭಿವೃದ್ಧಿ ಬ್ಯಾಂಕುಗಳ ಮುಖಾಂತರ ನಾವು ಏನು ದೀರ್ಘಾವಧಿ ಸಾಲವನ್ನು ಕೊಡುತ್ತಿದ್ದೇವೆ, ಆ ಕ್ಷೇತ್ರದಲ್ಲೂ ಕೂಡ ನಾವೂ, ನೀವೂ ನಿರೀಕ್ಷಿಸಿದ ಮಟ್ಟದಲ್ಲಿ ಪ್ರಗತಿ ಆಗಿಲ್ಲ ಎಂಬುದನ್ನು ನಾವು ಒಪ್ಪಿಕೊಳ್ಳಬೇಕಾಗಿದೆ. ಏಕೆಂದರೆ ಸಾಕಷ್ಟು ಸಾಲದ ವಿತರಣೆ ಆಗಿದ್ದರೂಕೂಡ ನಿಮ್ಮ, ನಮ್ಮ ನಿರೀಕ್ಷೆಯ ಸಮೀಕ್ಷೆಯಂತೆ ಇನ್ನೂ ಕೆಲವು ವರ್ಷಗಳವರೆಗೆ ಪ್ರಗತಿಯು ಮಟ್ಟವನ್ನು ಮುಟ್ಟಲಿಕ್ಕಾಗವುದಿಲ್ಲ ಎಂಬ ಮಾತನ್ನು ನನ್ನ ದೃಷ್ಟಿಯಲ್ಲಿಟ್ಟುಕೊಂಡು ನಾನು ಈ ಮಾತನ್ನು ಹೇಳುತ್ತಿದ್ದೇನೆ. ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳು, ಪ್ರಾಥಮಿಕ ಕೃಷಿ ಭೂ ಅಭಿವೃದ್ಧಿ ಬ್ಯಾಂಕುಗಳ ಮುಖಾಂತರ ಏನು ಸಾಲವನ್ನು ವಿತರಣೆ ಮಾಡುತ್ತೇವೆ, ಆ ಸಾಲದ ಬಡ್ಡಿಯ ದರದ ಬಗ್ಗೆ ಕೂಡ ನಾವು ಸ್ವಲ್ಪ ಮಟ್ಟಿಗೆ ಚಿಂತನೆಯನ್ನು ಮಾಡಬೇಕಾಗಿದೆ. ನಬಾರ್ಡ್‌ನಿಂದ ನಾವು ೩ ರಿಂದ ೫ ಪರ್ಸೆಂಟ್‌ವರೆಗೆ ನಾವು ಹಣವನ್ನು ತಂದರೂ ಕೂಡ ಅದು ಕೇಂದ್ರ ಭೂ ಅಭಿವೃದ್ಧಿ ಬ್ಯಾಂಕ್‌ನ ಮುಖಾಂತರ ಇಲ್ಲವೇ ಅಪೆಕ್ಸ್ ಬ್ಯಾಂಕ್‌ನ ಮುಖಾಂತರ ಮಾನ್ಯ ಸದಸ್ಯರಿಗೆ ಸಾಲವನ್ನು ವಿತರಣೆ ಮಾಡುತ್ತೇವೆ. ಅನರಲ್ಲೂ ಸಹ ಅಪೆಕ್ಸ್ ಬ್ಯಾಂಕ್ ಮುಖಾಂತರ ಮತ್ತು ಮಧ್ಯವರ್ತಿ ಬ್ಯಾಂಕು ಗಳಾದ ಜಿಲ್ಲಾ ಕೇಂದ್ರ ಬ್ಯಾಂಕ್‌ಗಳ ಮೂಲಕ ಪ್ರಾಥಮಿಕ ಸಹಕಾರ ಸಂಘಗಳ ಸದಸ್ಯರಿಗೆ ಸಾಲ ಸಿಕ್ಕುವ ಹೊತ್ತಿಗೆ ಅದು ೧೦ ಪರ್ಸೆಂಟ್‌ಗಿಂತ ಜಾಸ್ತಿಯಾಗುತ್ತದೆ. ಅನೇಕ ಸಂದರ್ಭಗಳಲ್ಲಿ ಶೇಕಡಾ ೧೫ ಪರ್ಸೆಂಟ್‌ನಷ್ಟು ಬಡ್ಡಿಯನ್ನು ನಾವು ಅವರಿಂದ ವಸೂಲಿ ಮಾಡುತ್ತೇವೆ.

ನಾವು ಅನೇಕ ಸಂದರ್ಭಗಳಲ್ಲಿ, ಕಡಿಮೆ ಬಡ್ಡಿ ದರದಲ್ಲಿ ಸಾಲ ಕೊಡಬೇಕೆಂಬ ಮಾತನ್ನು ಹೇಳುತ್ತೇವೆ. ಆದರೆ ಇಲ್ಲಿಂದ ಸಾಲವನ್ನು ಪ್ರಾಥಮಿಕ ಸಹಕಾರ ಸಂಘದ ಸದಸ್ಯರಿಗೆ ಕೊಡಲು ತಗಲತಕ್ಕ ಖರ್ಚು ಅಂದರೆ ಸಾಲ ವಿತರಣಾ ವೆಚ್ಚ ದುಬಾರಿ ಆಗುತ್ತಿದೆ. ಅದರ ಜೊತೆಗೆ ಇತ್ತೀಚಿಗೆ ಯಾವ ಒಂದು ನೀತಿಯನ್ನು ಇಲಾಖೆಯವರು ಅನುಸರಿಸುತ್ತಿದ್ದಾರೆಂದು ಗೊತ್ತಿಲ್ಲ. ನನಗೆ ತಿಳಿದಿರುವ ಮಟ್ಟಿಗೆ ಈ ವ್ಯತ್ಯಾಸ ಏನಿದೆ. ಸಾಲವನ್ನು ಯಾವ ಬಡ್ಡಿ ದರದಲ್ಲಿ ಪಡೆಯುತ್ತಾ ಇದೇವೆ, ಯಾವ ಬಡ್ಡಿ ದರದಲ್ಲಿ ವಿತರಣೆ ಮಾಡುತ್ತೇವೆ, ಈ ವ್ಯತ್ಯಾಸವನ್ನು ಗಮನಿಸಿದಾಗ ನನಗನ್ನಿಸುತ್ತದೆ ಕೇಂದ್ರ ಮತ್ತು ರಾಜ್ಯಮಟ್ಟದ ಬ್ಯಾಂಕುಗಳು ಹೆಚ್ಚು ಲಾಭವನ್ನು ಇದರಿಂದ ಪಡೆಯುತ್ತಿದೆ ಎಂದು. ಅದು ನಿಲ್ಲಬೇಕೆಂಬ ಮಾತನ್ನು ನಾನು ಅನೇಕ ಸಂದರ್ಭಗಳಲ್ಲಿ ಅಲ್ಲಿದ್ದಾಗಲೂ ಹೇಳಿದ್ದೇನೆ ಮತ್ತು ಇವೊತ್ತು ಸಹ ನಾನು ಒತ್ತಾಯಿಸುತ್ತೇನೆ ಕಾರಣ ಇಷ್ಟೆ. ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳು ಏನಿವೆ. ಅವು ಬಲವಾಗದಿರುವುದಕ್ಕೆ ಅದೂ ಒಂದು ಕಾರಣವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದ್ದರಿಂದ ಈ ವ್ಯತ್ಯಾಸ ಏನಿದೆ ಅದನ್ನು ಹೋಗಲಾಡಿಸಿ ಸಾಲದ ಬಡ್ಡಿ ಹಣದಲ್ಲಿ ಹೆಚ್ಚು ಭಾಗವನ್ನು ಪ್ರಾಥಮಿಕ ಸಹಕಾರ ಸಂಘಗಳಿಗೆ ಕೊಡಬೇಕಾದದು ಅವಶ್ಯಕ. ಕೇವಲ ಬಡ್ಡಿಯನ್ನು ಹೆಚ್ಚು ವಸೂಲ್ಮಾಡಿ ಅದರಲ್ಲಿ ಹೆಚ್ಚು ಬಾಗನ್ನು ಪ್ರಾಥಮಿಕ ಸಹಕಾರಸಂಘಗಳಿಗೆ ಕೊಡುವುದರಿಂದ ಬಲಯುತ ವಾಗುತ್ತವೆಂದು ನಂಬಿಲ್ಲ. ಅದರ ಜೊತೆಗೆ ಅವನ್ನು ಬಲಯುತವಾಗಿ ಮಾಡಬೇಕಾದರೆ ಅನೇಕ ಕಾರ್ಯಕ್ರಮಗಳನ್ನು ನಾವು ತೆಗೆದುಕೊಳ್ಳಬೇಕಾಗಿದೆ. ಈಗಾಗಲೇ ಅನೇಕಕಾರ್ಯಕ್ರಮಗಳನ್ನು ಹಿಂದಿನ

ಅನೇಕ ಸರ್ಕಾರಗಳು ತೆಗೆದುಕೊಂಡಿವೆ. ಅದು ಎನ್.ಸಿ.ಡಿ.ಸಿ. ಯೋಜನೆ ಆಗಿರಬಹುದು, ಅಥವಾ ಐ.ಆರ್.ಡಿ.ಪಿ. ಯೋಜನೆ ಆಗಿರಬಹುದು. ಈ ರೀತಿಯಲ್ಲಿ ಪ್ರಾಥಮಿಕ ಸಹಕಾರ ಸಂಘಗಳನ್ನು ಪುನಶ್ಚೇತನಗೊಳಿಸುವುದಕ್ಕೆ ಮತ್ತು ಸಾಲ ವಿತರಣಾ ವ್ಯವಸ್ಥೆಯನ್ನು ಬಲಪಡಿಸುವುದಕ್ಕೆ ಕೆಲವು ಕ್ರಮಗಳನ್ನು ತೆಗೆದುಕೊಂಡಿರಬಹುದು. ಆದರೆ ಅವು ತೆಗೆದುಗೊಂಡ ಕಾರ್ಯಕ್ರಮಗಳಿಂದ ನಾವು ನಿರೀಕ್ಷೆ ಮಾಡಿದಂತೆ ಸಫಲವಾಗಿವೆಯೋ ಎಂದರೆ ನಮ್ಮ ನಿರೀಕ್ಷೆಯಂತೆ ಅಲ್ಲಿ ಸಫಲವಾಗಿಲ್ಲ. ಇವತ್ತು ಸಹ ಅನೇಕ ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳು ನಿಷ್ಕ್ರಿಯವಾಗಿವೆ ಎಂಬ ಮಾತನ್ನು ನಾವು ಒಪ್ಪಿಕೊಳ್ಳ ಬೇಕಾಗುತ್ತದೆ. ಇದಕ್ಕೋಸ್ಕರ ಹಿಂದೆ ನಾವು ಒಂದು ಯೋಜನೆ ಮಾಡಿ ಪ್ರಾಥಮಿಕ ಸಹಕಾರ ಸಂಘಗಳನ್ನು ಬಲಪಡಿಸುವುದು ಮತ್ತು ಅವುಹೆಚ್ಚು ಹೆಚ್ಚಿನ ಉಪಯೋಗವಾಗುವಂತೆ ಮಾಡುವುದಕ್ಕೆ ಸಂಯೋಜನೆ ಮಾಡಬೇಕು, ಮಂಡಲ ಪಂಚಾಯಿತಿ ವ್ಯಾಪ್ತಿಗೆ ಒಂದರಂತೆ ಸಂಯೋಜನೆ ಮಾಡುವುದರ ಮೂಲಕ ನಾವು ಹೆಚ್ಚು ಹೆಚ್ಚು ಸಾಲವನ್ನು ಅಂದರೆ ಕನಿಷ್ಟಪಕ್ಷ ೫–೧೦ಲಕ್ಷ ರೂಪಾಯಿಗಳನ್ನು ಆದರೂ ಸಾಲ ವಿತರಣೆ ಮಾಡುವ ಮೂಲಕ ತನ್ನ ಆದಾಯ ವನ್ನು ಹೆಚ್ಚಿಸಿಕೊಂಡರೆ ತನ್ನ ನೌಕರರಿಗೆ ಸಂಬಳ ಸಾರಿಗೆಗಳನ್ನು ಕೊಡುವುದಕ್ಕೆ ಅನುಕೂಲವಾಗುತ್ತ ದೆಂದು ಹೇಳಿದ್ದೇವೆ. ಆದರೆ ಇವತ್ತಿನ ಪರಿಸ್ಥಿತಿ ಏನಿದೆ ಎಂದರೆ ೧೦೦ಕ್ಕೆ ೯೦ರಷ್ಟು ಪ್ರಾಥಮಿಕ ಸಹಕಾರ ಪತ್ತಿನ ಸಂಘಗಳು ತನ್ನ ನೌಕರರಿಗೆ ಸಂಬಳ ಕೊಡುವ ಸ್ಥಿತಿಯಲ್ಲಿ ಇಲ್ಲ. ಆ ನೌಕರರನ್ನು ಸರ್ಕಾರಿ ನೌಕರರಂತೆ ನೋಡಿಕೊಳ್ಳಬೇಕು, ಸರ್ಕಾರಿ ಸಂಬಳ ಸಾರಿಗೆಗಳನ್ನು ಕೊಡಬೇಕೆಂದು ಅನೇಕ ನನ್ನ ಸ್ನೇಹಿತರು ಹೇಳುತ್ತಿದ್ದಾರೆ. ಆದರೆ ಅವಕ್ಕೆ ಈಗಿನ ಸಂಬಳ ಕೊಡುವುದಕ್ಕೆ ದುಡ್ಡಿಲ್ಲ. ಸರ್ಕಾರೀ ನೌಕರರಂತೆ ಅಂದರೆ ಸರ್ಕಾರ ನೀತಿ ನಿರ್ಣಯ ಮಾಡಿ ಕೊಡುವುದಾದರೆ ಸರಿ. ಆದರೆ ಸರ್ಕಾರೀ ದರದಲ್ಲಿ ಸಹಕಾರ ಸಂಘಗಳೇ ಕೊಡುವುದಾದರೆ ಒಂದೆರಡು ವರ್ಷಗಳಲ್ಲಿ ಅವನ್ನು ಮುಚ್ಚಬೇಕಾಗುತ್ತದೆ. ನಾನು ತಮಗೆ ಹೇಳುವುದು ಇಷ್ಟೆ, ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳನ್ನು ಬಲಯುತವಾಗಿ ಮಾಡುವುದಕ್ಕೆ ಮತ್ತು ಈ ಸಂಘಗಳನ್ನು ಮಂಡಲವಾರು ಆರ್ಥಿಕವಾಗಿ ಬೆಳೆಯಬೇಕು ಎಂದು ಏನು ಮಾಡಿದ್ದೇವೆ ಅದರಂತೆ ಅವು ಪ್ರಬಲವಾದ ಆರ್ಥಿಕ ಕೇಂದ್ರವಾಗಿ ಬೆಳೆಯಬೇಕಾದರೆ, ಒಂದು ಸಹಕಾರ ಸಂಘವನ್ನು ಈ ದಿಸೆಯಲ್ಲಿ ಬೆಳೆಸುವುದಕ್ಕೆ ಹಿಂದೆ ಏನು ಒಂದು ಪ್ರಯತ್ನ ನಡೆದಿತ್ತು ಅದನ್ನು ಮುಂದುವರಿಸಬೇಕು. ಮುಖ್ಯವಾಗಿ ಆರ್ಥಿಕ ಕೇಂದ್ರ ಸ್ಥಾನದಲ್ಲಿ ಅಂತಹ ಸಹಕಾರ ಸಂಘವನ್ನು ಬೆಳೆಸಲಿಕ್ಕೆ ತಾವು ಕ್ರಮ ಕೈಗೊಳ್ಳಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅನೇಕ ವಿಚಾರ ಗಳನ್ನು ಪ್ರಸ್ತಾಪ ಮಾಡದೆ ಕೇವಲ ಕೃಷಿ ಸಾಲಕ್ಕೆ ಸಂಬಂಧಪಟ್ಟಂತೆ ಇನ್ನು ಒಂದೇ ವಿಚಾರವನ್ನು ಮಾತ್ರ ಪ್ರಸ್ತಾಪಿಸುತ್ತೇನೆ. ಈ ಕೃಷಿ ಸಾಲವನ್ನು ವಿತರಣೆ ಮಾಡುವಾಗ ಅನೇಕ ವಿಧವಾಗಿ ಸಾಲ ಕೊಡುತ್ತಿದ್ದಾರೆ. ಅದು ಅಲ್ಪಾವಧಿ, ಮಧ್ಯಮಾವಧಿ ಅಥವಾ ದೀರ್ಘಾವಧಿ ಇರಬಹುದು, ಬೇರೆ ಬೇರೆ ಕಾರಣಗಳಿಗೋಸ್ಕರ ಈ ಸಾಲಗಳನ್ನು ಕೊಡುತ್ತಿದ್ದಾರೆ. ಈ ಎಲ್ಲ ಸಾಲಗಳನ್ನು ಸಹ ಮಂಡಲವಾರು ಕೇಂದ್ರ ಸಹಕಾರ ಸಂಘವನ್ನು ಸ್ಥಾಪಿಸುವುದರ ಮೂಲಕ ಈ ಎಲ್ಲಾ ವಿಧವಾದ ಸಾಲಗಳನ್ನು ಅಲ್ಲಿ ಕೊಡುವುದಕ್ಕೆ ಸಾಧ್ಯವೇ ಇಲ್ಲವೇ ಎಂಬುದನ್ನು ತಾವು ಪರಿಶೀಲಿಸಬೇಕು. ಏತಕ್ಕೋಸ್ಕರ ನಾವು ೩ ಹಂತಗಳಲ್ಲಿ ಈ ಸಾಲವನ್ನು ವಿತರಣೆ ಮಾಡಬೇಕು ? ನಬಾರ್ಡ್‌ನಿಂದ ಅಪೆಕ್ಸ್ ಬ್ಯಾಂಕಿಗೆ, ಅಪೆಕ್ಸ್ ಬ್ಯಾಂಕಿನಿಂದ ಡಿಸಿಸಿ ಬ್ಯಾಂಕಿಗೆ, ಡಿಸಿಸಿ ಬ್ಯಾಂಕ್‌ನಿಂದ ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳಿಗೆ ಕೊಡುತ್ತಾರೆ. ಮತ್ತೊಂದು ಕಡೆ ನಬಾರ್ಡ್‌ನಿಂದ ಕೃಷಿ ಬ್ಯಾಂಕಿಗೆ, ಕೃಷಿ ಬ್ಯಾಂಕಿನಿಂದ ಪ್ರಾಥಮಿಕ ಸಹಕಾರ ಸಂಘಗಳಿಗೆ ಕೊಡುತ್ತೇವೆ.

ಈ ರೀತಿಯಾಗಿ ಎರಡು ವಿಧದ ಸಾಲ ಕೊಡುವ ವ್ಯವಸ್ಥೆ ಏನಿದೆ ಅಲ್ಪಾವಧಿ ಮತ್ತು ಮಧ್ಯಮಾವಧಿ ಅಥವಾ ಅಲ್ಪಾವಧಿ ಮತ್ತು ದೀರ್ಘಾವಧಿ ಸಾಲ ಕೊಡುವುದಕ್ಕೆ ಬೇರೆ ಬೇರೆ ಸಂಸ್ಥೆಗಳನ್ನು ನಾವು ಮಾಡಿಕೊಂಡಿದ್ದೇವೆ. ಈ ಸಂಸ್ಥೆಗಳ ಅವಶ್ಯಕತೆ ಇದೆಯೋ ಎಂಬ ಬಗ್ಗೆ ಯೋಚನೆ ಮಾಡಬೇಕಾಗಿದೆ. ಈ ಸಂಸ್ಥೆಗಳು ಕೇವಲ ಗ್ರಾಮೀಣ ಮಟ್ಟದಲ್ಲಿ ಮಾತ್ರ ನಾನು ಹೇಳುತ್ತಿಲ್ಲ, ಜಿಲ್ಲಾ ಮಟ್ಟದಲ್ಲಿ ಮಾತ್ರ ಹೇಳುತ್ತಿಲ್ಲ, ರಾಜ್ಯ ಮಟ್ಟದಲ್ಲೂ ಸಹ ಎರಡು ಸಂಸ್ಥೆಗಳನ್ನು ಅಪೆಕ್ಸ್ ಬ್ಯಾಂಕ್ ಮತ್ತು ಕೆ.ಎಸ್.ಎಲ್.ಡಿ. ಬ್ಯಾಂಕುಗಳ ಬಗ್ಗೆಯೂ ಹೇಳುತ್ತಿದ್ದೇನೆ. ಈ ಎರಡೂ ಬ್ಯಾಂಕುಗಳು ಒಂದೇ ಉದ್ದೇಶಕ್ಕಾಗಿ ಸ್ಥಾಪನೆಯಾಗಿರುವುದರಿಂದ ಒಬ್ಬರು ದೀರ್ಘಾವಧಿ ಸಾಲ ಕೊಡಬಹುದು, ಒಬ್ಬರು ಅಲ್ಪಾವಧಿ ಸಾಲ ಕೊಡಬಹುದು, ಆದರೆ ಎರಡು ವಿಧವಾದ ಸಾಲಗಳನ್ನು ಕೊಡುವುದಕ್ಕೆ ಒಂದೇ ವಿಧವಾದ ಸಂಸ್ಥೆಗಳನ್ನು ಉಳಿಸಿಕೊಂಡು ಮತ್ತು ಈ ಮೂರು ಹಂತ ಏನಿದೆ ಅದನ್ನು ತಪ್ಪಿಸಿ ಎರಡು ಹಂತದಲ್ಲಿ ಸಾಲ ಕೊಡುವ ಮೂಲಕ ಪ್ರಾಥಮಿಕ ಹಂತದ ಸಹಕಾರ ಸಂಘಗಳನ್ನು ಬಲಪಡಿಸುವುದಕ್ಕೆ ಸಾಧ್ಯ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಬಗ್ಗೆ ತಾವು

ಆಲೋಚನೆ ಮಾಡಿ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದಾದಮೇಲೆ ರೈತನಿಗೆ ಸಾಲ ಮಾತ್ರ ಬೇಕಾಗಿಲ್ಲ. ಸಾಲದ ಜೊತೆಗೆ ಬೆಳೆದಂಥ ಬೆಳೆಗೆ ನ್ಯಾಯವಾದ ಬೆಲೆ ಕೊಡಬೇಕು. ಅದನ್ನು ಹೇಳಬೇಕಾದರೆ ನಾನು ಯಾರನ್ನೂ ದೂಷಣೆ ಮಾಡುವುದಿಲ್ಲ. ಸಹಕಾರ ಇಲಾಖೆಯನ್ನು ಸಹ ನಾನು ಈ ವಿಷಯದಲ್ಲಿ ದೂಷಣೆ ಮಾಡುವುದಿಲ್ಲ. ಆದರೆ ಇವತ್ತಿನ ದಿವಸ ಇರತಕ್ಕ ಮಾರಾಟ ಸಹಕಾರ ಸಂಘಗಳಿಂದ ಸ್ವಲ್ಪ ಮಟ್ಟಿಗೂ ಉಪಯೋಗ ಆಗುತ್ತಿಲ್ಲ. ನಾವು ೮ ದಶಲಕ್ಷ ಟನ್ ಗೊಬ್ಬರ ವಿತರಣೆ ಮಾಡಿದರೆ ಎರಡು ಲಕ್ಷ ಟನ್ ಕೂಡ ಈ ಸಹಕಾರ ಸಂಘಗಳಿಂದ ಕೊಡುವುದಕ್ಕಾಗುತ್ತಿಲ್ಲ. ಅದಕ್ಕಿಂತ ಹೆಚ್ಚಾಗಿ ಅವರು ಏನು ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ನೋಡಬೇಕು. ಅನೇಕ ಸಂದರ್ಭದಲ್ಲಿ ನಮ್ಮ ಅಜೀಜ್ ಸೇಠ್ ಸಾಹೇಬರು ಅಕ್ಕಿ, ಗೋಧಿಯನ್ನು ಕೊಡುತ್ತಾರೆ. ಅದನ್ನು ಅವರು ತೆಗೆದುಕೊಂಡು ಹೋಗುತ್ತಾರೆ. ಅದನ್ನು ಸಂಬಂಧಪಟ್ಟ ಪ್ರಾಥಮಿಕ ಸಹಕಾರ ಸಂಘಕ್ಕೆ ಅಥವಾ ಫೇರ್ ಪ್ರೈಸ್ ಡಿಪೋಗೆ ಕೊಡುತ್ತಾರೆ. ಅದರಿಂದ ಗಳಿಸಿದಂಥ ಲಾಭವನ್ನು ಅವರು ಉಪಯೋಗಿಸಿಕೊಳ್ಳುತ್ತಾರೆ. ಇದನ್ನು ಬಿಟ್ಟರೆ ಬೆಂಗಳೂರಿನ ಚಿಕ್ಕಪೇಟೆಯಲ್ಲಿ ಒಂದು ಬಟ್ಟೆ ತೆಗೆದುಕೊಂಡು ಹೋಗಿ ಹಂಚುವುದರ ಮೂಲಕ ಸಹಕಾರ ಸಂಘದವರು ವ್ಯಾಪಾರ ಮಾಡುತ್ತಿದ್ದಾರೆ. ಸಂಘಗಳ ಮೂಲಭೂತವಾದ ಉದ್ದೇಶ ಏನೆಂದರೆ ಮಾರಾಟ ಸಹಕಾರ ಸಂಘಗಳು ರೈತರು ಬೆಳೆದಂಥ ಬೆಳೆಗೆ ನ್ಯಾಯವಾದ ಬೆಲೆಯನ್ನು ಒದಗಿಸುವುದಕ್ಕೆ ಸಹಾಯ ಮಾಡಬೇಕು ಎಂಬುದು. ಅದರ ಜೊತೆಗೆ ಬಳಕೆದಾರರಿಗೂ ಸಹ ಕೆಲವು ಸಹಾಯ ಮಾಡುವ ಕಾರ್ಯಕ್ರಮಗಳನ್ನು ಈ ಮಾರಾಟ ಸಹಕಾರ ಸಂಘಗಳು ಹಮ್ಮಿಕೊಂಡಿವೆ. ಈ ಎರಡೂ ದಿಸೆಯಲ್ಲಿ ನೋಡಿದಾಗ ಈ ಮಾರಾಟ ಸಹಕಾರ ಸಂಘಗಳು ಸಂಪೂರ್ಣವಾಗಿ ವಿಫಲವಾಗಿವೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಹಾಗಿದ್ದರೆ ತಾವು ಕೇಳಬಹುದು, ನೀವು ಮಂತ್ರಿಯಾಗಿದ್ದಾಗ ಏನು ಹೇಳಿದ್ದೀರಿ ಎಂದು. ನಾನು ಮಂತ್ರಿಯಾಗಿದ್ದಾಗಲೂ ಇದನ್ನೇ ಹೇಳಿದ್ದೇನೆ. ಇವತ್ತೂ ಇದನ್ನೇ ಹೇಳುತ್ತಿದ್ದೇನೆ ನಿಜವಾಗಿ ನಾವು ಇದನ್ನು ಸರಿಪಡಿಸದೇ ಇದ್ದರೆ ಮಾರಾಟ ಸಹಕಾರ ಸಂಘಗಳು ತನ್ನಷ್ಟಕ್ಕೇ ತಾನೇ ಅವಸಾನ ಹೊಂದುವ ಒಂದು ಸ್ಥಿತಿಯನ್ನು ತಲುಪುತ್ತವೆ ಎಂದು ನಾನು ಹೇಳುತ್ತೇನೆ. ಇದರ ಜೊತೆಗೆ ಮಾರಾಟ ಸಹಕಾರ ಸಂಘಗಳು ಕೆಲವು ಸಂಸ್ಕರಣ ಘಟಕಗಳನ್ನು ಹೊಂದಿವೆ. ಕೆಲವು ಕಡೆ ಅಕ್ಕಿ ಗಿರಣಿ, ಮತ್ತೊಂದು ಕಡೆ ಎಣ್ಣೆ ಗಿರಣಿ ಹೀಗೆ ಅನೇಕ ವಿಧವಾದ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಕೆಲವು ಕಡೆ ಲಾರಿಗಳನ್ನು ಇಟ್ಟುಕೊಂಡಿರಬಹುದು. ಎಲ್ಲಾ ಕಾರ್ಯಕ್ರಮಗಳ ಅಡಿಯಲ್ಲಿ ಕೂಡ ಏನು ಕೆಲಸವಾಗುತ್ತಿದೆ ಎಂದರೆ ನಿಜವಾಗಿ ಯಾವ ಉದ್ದೇಶಕ್ಕಾಗಿ ಮಾರಾಟ ಸಹಕಾರ ಸಂಘಗಳು ಸ್ಥಾಪನೆಯಾಗಿದೆಯೋ ಆ ಉದ್ದೇಶ ಬಿಟ್ಟು ಉಳಿದೆಲ್ಲ ಕೆಲಸಗಳನ್ನು ಈ ಮಾರಾಟ ಸಂಘಗಳು ಮಾಡುತ್ತಿವೆ. ಬಹಳಷ್ಟು ಸಹಕಾರ ಸಂಘಗಳು ಈ ವರದಿಯಲ್ಲಿ ತಿಳಿಸಿರುವಂತೆ ಇವೊತ್ತಿನ ದಿವಸ ನಿಷ್ಕ್ರಿಯವಾಗಿದೆ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದನ್ನು ಬಲಪಡಿಸುವುದಕ್ಕೆ ಸಹ ಅನೇಕ ಯೋಜನೆಗಳನ್ನು ಹಿಂದಿನ ಸರ್ಕಾರ ಮಾಡಿದೆ. ದುರಾದೃಷ್ಟವಶಾತ್ ಈ ಯೋಜನೆಗಳು ಪೂರ್ಣವಾಗಿ ಫಲಕಾರಿಯಾಗುವಂತೆ ಜಾರಿಯಾಗಲಿಲ್ಲ. ಇದಾದಮೇಲೆ ರಾಜ್ಯ ಮಟ್ಟದಲ್ಲಿ ನಾವು ಕೆಲವು ಸಹಕಾರ ಸಂಘಗಳನ್ನು ಇಟ್ಟುಕೊಂಡಿದ್ದೇವೆ. ರಾಜ್ಯಮಟ್ಟದಲ್ಲಿ ಅಪೆಕ್ಸ್ ಲೆವೆಲ್‌ನಲ್ಲಿ ಏನಿವೆ ಅದು ಮಾರಾಟ ಮಹಾ ಮಂಡಲ ಆಗಿರಬಹುದು, ಕೆ.ಎಸ್.ಎಲ್.ಡಿ. ಬ್ಯಾಂಕ್ ಆಗಿರಬಹುದು ಇದರ ಬಗ್ಗೆ ಸ್ವಲ್ಪಮಟ್ಟಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಈಗಾಗಲೇ ಹೇಳಿದಂತೆ ಈ ಅಪೆಕ್ಸ್ ಬ್ಯಾಂಕ್‌ನವರೂ ಸಹ ಒಂದು ನೀತಿಯನ್ನು ಅನುಸರಿಸುತ್ತಿದ್ದಾರೆ. ಸಣ್ಣವರಿಗೆ ಹೆಚ್ಚು ಪ್ರಯೋಜನವಾಗುವ ನೀತಿಗಳನ್ನು ಅನುಸರಿಸುತ್ತಿದ್ದಾರೆ ಈ ಮಾತನ್ನು ಮೊದಲೂ ಹೇಳಿದ್ದೇನೆ. ಇವತ್ತೂ ಹೇಳುತ್ತೇನೆ. ನಬಾರ್ಡ್‌ನಿಂದ ಬಂದ ಹಣವನ್ನು ಕೊಡುವಾಗ ೭೫ ಪೈಸೆ ತೆಗೆದುಕೊಳ್ಳುತ್ತಾರೆ ಎಂದು ಕಾಣುತ್ತದೆ. ಮೊದಲು ಇನ್ನೂ ಜಾಸ್ತಿ ತೆಗೆದುಕೊಳ್ಳುತ್ತಿದ್ದರು, ಅದನ್ನು ಇನ್ನೂ ಕಡಿಮೆ ಮಾಡಬೇಕೆಂದು ಪ್ರಸ್ತಾವ ಇತ್ತು. ಅದನ್ನು ಇನ್ನೂ ಕಡಿಮೆ ಮಾಡಬೇಕಾದ ಅವಶ್ಯಕತೆ ಇದೆ ಎಂಬ ಮಾತನ್ನು ಹೇಳುತ್ತೇನೆ.

ಅದರ ಜೊತೆಗೆ ಇನ್ನೊಂದು ವಿಚಾರವನ್ನು ಪ್ರಸ್ತಾಪ ಮಾಡಿದರೆ ತಪ್ಪು ಆಗಲಿಕ್ಕಿಲ್ಲ. ಅನೇಕ ಕೇಂದ್ರ ಸ್ಥಾನದಲ್ಲಿರುವ ರಾಜ್ಯ ಮಟ್ಟದ ಸಂಘಸಹಕಾರ ಸಂಸ್ಥೆಗಳಿಗೆ ಅನೇಕ ವಿಧವಾದ ಸಹಾಯಗಳನ್ನು ಮಾಡುತ್ತಿದ್ದೀರಿ ಬೇರೆ ಬೇರೆ ಉದ್ದೇಶಗಳಿಗೋಸ್ಕರ ಬೇರೆ ಬೇರೆ ರೀತಿಯ ನಿಧಿಗಳಿಗೆ ತಾವು ಕೊಡುಗೆಯನ್ನು ಅಥವಾ ಕಾಂಟ್ರಿಬ್ಯೂಷನ್ ಅಂತ ಅವರಿಗೆ ಕೊಡುತ್ತೀರಿ. ಈ ರೀತಿಯಾಗಿ ನೀವು ಹಣವನ್ನು ಕೊಟ್ಟ ಮೇಲೆ ಅವರು ಯಾವ ಉದ್ದೇಶಕ್ಕೆ ಆ ಹಣವನ್ನು ಉಪಯೋಗಿಸಬೇಕೆಂದು ತಿಳಿಸಿದ್ದೀರೋ ಆ ಉದ್ದೇಶಕ್ಕಾಗಿ ಆ ಹಣವನ್ನು ಉಪಯೋಗಿಸಿದ್ದಾರೆಯೋ ಎಂಬುದನ್ನು ತಾವು ನೋಡಬೇಕು. ಅವರು ಆ ಹಣವನ್ನು ಸರಿಯಾಗಿ ಬಳಸದೆ, ತಮ್ಮ ವ್ಯವಹಾರದಲ್ಲಿ ಉಪಯೋಗಿಸಿರು

ವಂತಹದ್ದನ್ನು ನಾವು ನೋಡಬಹುದು. ೬ ಕೋಟಿ ಇಲ್ಲವೇ ೮ ಕೋಟಿ ರೂಪಾಯಿಗಳನ್ನು ಒಂದೊಂದು ಸಂಸ್ಥೆಗಳಿಗೆ ಕೊಟ್ಟಿದ್ದೀರಿ. ಸರ್ಕಾರ ಇದರಲ್ಲಿ ಬಡ್ಡಿ ಪಡೆಯುತ್ತಿಲ್ಲ. ಡಿವಿಡೆಂಡ್ ಪಡೆಯುತ್ತಿಲ್ಲ. ಆದರೂ ಯಾವ ಉದ್ದೇಶಕ್ಕಾಗಿ ಹಣವನ್ನು ಪಡೆದುಕೊಂಡಿದ್ದಾರೋ, ಆ ಉದ್ದೇಶಕ್ಕಾಗಿ ಆ ಹಣವನ್ನು ಬಳಸದೆ ತಮ್ಮ ಸ್ವಂತ ವ್ಯವಹಾರದಲ್ಲಿ ತೊಡಗಿಸಿ ಅದರಿಂದ ಲಾಭವನ್ನು ಪಡೆಯುತ್ತಿದ್ದಾರೆ. ಈ ಹಣವನ್ನು ಯಾವುದೇ ಹಣವನ್ನು ಬ್ಯಾಂಕಿನಲ್ಲಿಟ್ಟರೂ ಬಡ್ಡಿ ಬರುತ್ತದೆ ೮ ಕೋಟಿ ರೂಪಾಯಿಗಳನ್ನು ಒಂದು ಬ್ಯಾಂಕಿನಲ್ಲಿಟ್ಟರೆ ಅಪೆಕ್ಸ್ ಬ್ಯಾಂಕಿನಲ್ಲಿ ಇಟ್ಟರೆ. ಅಥವಾ ಬೇರೆ ಬ್ಯಾಂಕಿನಲ್ಲಿ ಇಟ್ಟರೆ ಒಂದು ಕೋಟಿ ರೂಪಾಯಿಗಳ ಲಾಭ ಬರುತ್ತದೆ. ಅವರೇ ಮಾಡಿದಂತಹ ವ್ಯವಹಾರದಿಂದ ಬಂದಂತಹ ಲಾಭ ಅಲ್ಲ. ಆದರೂ ಲಾಭ ಮಾಡಿದ್ದೇವೆಂದು ಹೇಳುತ್ತಾರೆ. ತಾವು ಕೊಟ್ಟಂತಹ ಹಣವನ್ನು ಯಾವ ಉದ್ದೇಶಕ್ಕಾಗಿ ಕೊಟ್ಟಿದ್ದೀರೋ ಆ ಉದ್ದೇಶಕ್ಕೆ ಆ ಹಣವನ್ನು ಉಪಯೋಗಿಸಿ ಅದರಿಂದ ಲಾಭವನ್ನು ಗಳಿಸುವ ಬದಲು ಬ್ಯಾಂಕಿನಲ್ಲಿಟ್ಟು, ಅದರಿಂದ ಬಂದಂತಹ ಬಡ್ಡಿಯನ್ನು ಲಾಭವೆಂದು ಪರಿಗಣಿಸಿ, ಇದನ್ನೇ ಲಾಭ ಮಾಡಿದ್ದೇವೆಂದು ಹೇಳಿಕೊಳ್ಳುವ ಸಹಕಾರ ಸಂಘಗಳನ್ನು ಇವತ್ತು ನಾವು ನೋಡುತ್ತಿದ್ದೇವೆ. ಇದು ಅತ್ಯಂತ ದುರದೃಷ್ಟಕರ. ನೀವು ಕೊಟ್ಟ ೮ ಕೋಟಿ ರೂಪಾಯಿಗಳ ಪೈಕಿ ಅವರಿಗೆ ಒಂದು ಕೋಟಿ ಬಡ್ಡಿ ಬಂದರೆ ಅದನ್ನು ಅವರು ತಮಗೆ ಬೇಕಾದ ಸೌಕರ್ಯಗಳನ್ನು ಕಲ್ಪಿಸಿಕೊಳ್ಳುವುದಕ್ಕೋಸ್ಕರ ಅವಕಾಶ ಮಾಡಿಕೊಟ್ಟರೆ ಖಂಡಿತವಾಗಿ ಇದಕ್ಕಿಂತ ಕೆಟ್ಟ ಸಂಪ್ರದಾಯ ಮತ್ತೊಂದಿಲ್ಲ ಎಂದು ಹೇಳುತ್ತೇನೆ. ಇದರ ಬಗ್ಗೆ ೩-೧೧-೮೮ ರಲ್ಲಿ ಸರ್ಕಾರ ಒಂದು ಆಜ್ಞೆಯನ್ನು ಹೊರಡಿಸಿದೆ. ಇತ್ತೀಚೆಗೆ ಅದನ್ನು ಏನಾದರೂ ತಿದ್ದುಪಡಿ ಮಾಡಿದ್ದೀರೋ, ಅಥವಾ ಅದನ್ನು ಹಿಂದಕ್ಕೆ ತೆಗೆದುಕೊಂಡಿದ್ದೀರೋ ಎಂಬುದು ಗೊತ್ತಿಲ್ಲ. ಆದರೆ ನನಗೆ ಬಂದಿರುವ ಮಾಹಿತಿ ಪ್ರಕಾರ ಅದಕ್ಕೆ ಹಿಂದಕ್ಕೆ ತೆಗೆದುಕೊಂಡಿದ್ದೀರೆಂದು ಕೇಳಿದ್ದೇನೆ. ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಿ ಹಿಂದೆ ತೆಗೆದುಕೊಂಡಿದ್ದರೆ, ಯಾವ ಉದ್ದೇಶಕ್ಕಾಗಿ ಹಣವನ್ನು ಪಡೆದುಕೊಳ್ಳುತ್ತಾರೋ ಆ ಉದ್ದೇಶಕ್ಕಾಗಿ ಆ ಹಣವನ್ನು ಬಳಸದೆ ತಮ್ಮ ಸ್ವಂತ ಇಚ್ಛೆಗನುಸಾರವಾಗಿ ಉಪಯೋಗಿಸಿಕೊಳ್ಳುವುದಕ್ಕೆ ಅವರಿಗೆ ಅನುಕೂಲ ಮಾಡಿಕೊಟ್ಟ ಹಾಗೆ ಆಗುತ್ತದೆ. ಆ ದೃಷ್ಟಿಯಿಂದ ಇದನ್ನು ಮಾಡಬಾರದೆಂದು ಹೇಳುತ್ತೇನೆ. ಮತ್ತೆ ಬೇರೆ ಬೇರೆ ಬ್ಯಾಂಕುಗಳಲ್ಲಿ ತಮ್ಮ ವ್ಯವಹಾರ ಮಾಡಿಕೊಳ್ಳುತ್ತಾರೆ. ಇದರಿಂದ ಸಹಕಾರ ಸಂಘಗಳನ್ನು ಯಾವ ಉದ್ದೇಶಕ್ಕಾಗಿ ಸ್ಥಾಪನೆ ಮಾಡಲಾಗಿದೆಯೋ ಆ ಉದ್ದೇಶವನು ಪೂರ್ಣಮಾಡುವ ಸಲುವಾಗಿ ಪೂರ್ಣವಾಗಿ ಕೆಲಸ ಮಾಡುತ್ತಿಲ್ಲವೆಂಬ ಮಾತನ್ನು ಹೇಳುತ್ತೇನೆ. ಸಹಕಾರ ಮಾರಾಟ ಮಹಾಮಂಡಲ ಎಂದು ಇದೆ. ಇದರಲ್ಲಿ ಏನು ಮಾಡುತ್ತಿದ್ದಾರೆಂದರೆ, ಇವರಿಗೆ ಗೊಬ್ಬರವನ್ನು ಪಡೆಯಲಿಕ್ಕೆ ಹೇಳಿದ್ದೇವೆ. ಗೊಬ್ಬರವನ್ನು ಕೊಡುಕೊಳ್ಳುವುದಕ್ಕೆ ಸರ್ಕಾರದಿಂದ ಹಣ ಬರುತ್ತದೆ ಕೇಂದ್ರ ಸರ್ಕಾರದಿಂದ ಅವರಿಗೆ ಸಬ್ಸಿಡಿ ಕೊಡುತ್ತಾರೆ ಇಷ್ಟೆಲ್ಲಾ ಆದರೂ ಸಹ ಈ ಮಹಾ ಮಂಡಲದ ಕಾರ್ಯವೈಖರಿಯನ್ನು ನೋಡಿದರೆ, ಕಟ್ಟ ಕಡೆಗೆ ರೈತನಿಗೆ ಗೊಬ್ಬರವನ್ನು ಕೊಡುವಾಗ ಗೊಬ್ಬರದ ಬೆಲೆ, ಅದರ ಪಕ್ಕದಲ್ಲಿ ಇರುವ ಖಾಸಗಿ ವ್ಯಾಪಾರಿಯ ಅಂಗಡಿಯ ಬೆಲೆಗೆ ಹೋಲಿಕೆ ಮಾಡಿ ನೋಡಿದಾಗ, ಇದನ್ನು ಅನೇಕ ಸಂದರ್ಭದಲ್ಲಿ ಹೇಳಿದ್ದೇನೆ. ಈಗಲೂ ಅದನ್ನೇ ಹೇಳುತ್ತಿದ್ದೇನೆ. ಮಹಾಮಂಡಲದವರು ಮಾರಾಟ ಮಾಡುವ ಗೊಬ್ಬರದ ಬೆಲೆ ಖಾಸಗಿ ಅಂಗಡಿಯವನು ಮಾರಾಟ ಮಾಡುವ ಬೆಲೆಗಿಂತ ಹೆಚ್ಚು ಆಗಿರುತ್ತದೆ. ಇದು ದುರದೃಷ್ಟಕರ. ಇದನ್ನು ಮಾಡಿದ್ದ ಉದ್ದೇಶವೇನೆಂದರೆ ರೈತರಿಗೆ ಕಡಿಮೆ ಬೆಲೆಗೆ ಗೊಬ್ಬರ ಸಿಕ್ಕಬೇಕೆಂಬುದು. ರೈತ ಬೆಳೆದ ಬೆಳೆಗೆ ಸರಿಯಾದ ಬೆಲೆ ಕೊಡುವುದು ಸರ್ಕಾರದ ನೀತಿಯಾಗಿದೆ. ಆ ನೀತಿಗನುಗುಣವಾಗಿ ಕೆಲಸ ಮಾಡಬೇಕೆಂದು ಹೇಳಿದರೂ ಸಹ ಅನೇಕ ಸಂದರ್ಭದಲ್ಲಿ ಆ ಒಂದು ಕೆಲಸ ಕಾರ್ಯಗಳನ್ನು ಮಾಡದೆ, ಕೇವಲ ತಮ್ಮ ಸ್ವಾರ್ಥಕ್ಕಾಗಿ ಕೆಲಸ ಮಾಡುವಂತಹ ಕೆಳಮಟ್ಟಕ್ಕೆ ಸಹಕಾರ ಸಂಘಗಳು ಇಳಿದಿವೆ. ಗೊಬ್ಬರವನ್ನು ಇವರು ನೇರವಾಗಿ ಕಾರ್ಖಾನೆಯಿಂದ ಕೊಂಡುಕೊಳ್ಳಬೇಕು. ಆದರೆ ಇವರು ಆ ರೀತಿ ಮಾಡುತ್ತಿಲ್ಲ. ಏಜೆಂಟ್‌ಗಳ ಹತ್ತಿರದಿಂದ ಗೊಬ್ಬರವನ್ನು ಕೊಂಡುಕೊಳ್ಳುತ್ತಾರೆ. ಇದರಿಂದ ಅದರ ಬೆಲೆ ಜಾಸ್ತಿಯಾಗುತ್ತದೆ. ತಮಗೂ ಗೊತ್ತಿರಬೇಕು. ಗ್ರಾಹಕರ ಮಹಾ ಮಂಡಲಿ ಎಂಬ ಸಹಕಾರ ಸಂಸ್ಥೆಯೊಂದು ಇದೆ. ಅವರಿಂದ ಕೆಲವು ಸಾಮಾನುಗಳನ್ನು ತರಿಸುತ್ತಾರೆ. ನಾನು ಮಂತ್ರಿಯಾಗಿದ್ದಾಗಲೂ ಕೊಟ್ಟರು. ಈಗ ನೀವು ಬಂದಿದ್ದೀರಿ. ನಿಮಗೂ ಅವರು ಕೊಟ್ಟಿರಬೇಕು. ನಿಮ್ಮ ಗಮನಕ್ಕೂ ಅದು ಬಂದಿರಲಿಕ್ಕೆ ಸಾಕು. ಮಂತ್ರಿಗಳ ಮನೆಗೆ ಬೇಕಾದ ಸಾಮಾನುಗಳನ್ನು ಅವರು ನೇರವಾಗಿ ಪರ್ಚೇಸ್ ಮಾಡಿ ಸರಬರಾಜು ಮಾಡಬೇಕು. ಆದರೆ ಇವರು ಪಕ್ಕದ ಅಂಗಡಿಯಿಂದ ಪರ್ಚೇಸ್ ಮಾಡಿ ನಮಗೆ ಸರಬರಾಜು ಮಾಡುತ್ತಾರೆ. ಅಲ್ಲಿ ಬಿಲ್ ಹಾಕಿಸಿ ನಮಗೆ ಮಾಲನ್ನು ತಂದುಕೊಡುತ್ತಾರೆ. ಇದು ನಡೆಯುತ್ತಿರುವ ವ್ಯವಹಾರ ಈ ಕೆಲಸ ಅವರೇ ಮಾಡಬೇಕೇ ? ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಯಾವ ಉದ್ದೇಶಕ್ಕೆ ಗ್ರಾಹಕರ ಮಹಾಮಂಡಲ ಅಥವಾ ಮಾರಾಟ ಸಹಕಾರ ಸಂಘಗಳ ಈ ಸಾಮಾನು

ಗಳನ್ನು ಕೊಂಡುಕೊಂಡು ಇವತ್ತು ಬೇರೆ ಬೇರೆ ಸರ್ಕಾರದ ಸಂಸ್ಥೆಗಳಿಗೆ ಕೊಡಬೇಕೆಂದು ಇದೆ. ಅದು ಇಲ್ಲಿ ಅನ್ವಯವಾಗುವುದಿಲ್ಲ. ಇವತ್ತು ಅಲ್ಲಿ ಕಡಿಮೆ ಬೆಲೆಗೆ ಸಿಗಬೇಕು ಎಂದು ಹೇಳುತ್ತೇವೆ ಆದರೆ ಈ ಒಂದು ಅವಕಾಶವನ್ನು ಅನೇಕ ಸಂದರ್ಭಗಳಲ್ಲಿ ಅಧಿಕಾರಿಗಳು ಇರಬಹುದು ರಾಜಕಾರಣಿಗಳು ಇರಬಹುದು ಅಥವಾ ಆಡಳಿತ ಮಂಡಲಿಯವರು ಇರಬಹುದು, ಇದರಲ್ಲಿ ಎಲ್ಲರೂ ಒಳ್ಳೆಯವರು ಅಥವಾ ಎಲ್ಲರೂ ಕೆಟ್ಟವರು ಎಂದು ಹೇಳುವುದಿಲ್ಲ, ಅನೇಕ ಸಂದರ್ಭಗಳಲ್ಲಿ ಶಾಮೀಲಾಗಿ ಇಂತಹ ಅವ್ಯವಸೆ ದುರವಸ್ಥೆ ನಡೆದಿದೆ. ಇದಕ್ಕೆ ಆಧಾರ ಇದೆಯೇ ? ಇದೆ. ಹಿಂದಿನ ಕಡತಗಳನ್ನು ತೆಗೆದರೆ ಗೊತ್ತಾಗುತ್ತದೆ. ಅಥವಾ ತಮಗೆ ಏನು ಕೊಟ್ಟಿದ್ದಾರೆ, ಆ ಸಾಮಾನುಗಳ ಬಗ್ಗೆ ಪಕ್ಕದ ಅಂಗಡಿಗೆ ಹೋಗಿ ಕೇಳಿದರೆ ತಮಗೇ ಗೊತ್ತಾಗುತ್ತದೆ. ಈ ವಿಷಯವನ್ನು ಹೇಳುವಾಗ ಯಾವುದೇ ವ್ಯಕ್ತಿಯ ಮೇಲೆ, ಅಧಿಕಾರಿಯ ಮೇಲೆ ನಾನು ದುರುದ್ದೇಶದಿಂದ ಹೇಳುತ್ತಾ ಇಲ್ಲ. ಅನೇಕ ಉತ್ತಮ ಅಧಿಕಾರಿಗಳು ಇದ್ದಾರೆ. ಅದಕ್ಕೋಸ್ಕರವಾಗಿ ಇಲ್ಲಿಯವರೆಗೂ ಸ್ವಲ್ಪ ಮಟ್ಟಿಗಾದರೂ ಸಹಕಾರಿ ಕ್ಷೇತ್ರ ಈ ದೇಶದಲ್ಲಿ ಇನ್ನೂ ಉಳಿದಿದೆ. ಯಾರೂ ಇಲ್ಲ ಎಂದು ಹೇಳುವುದಿಲ್ಲ. ಆದರೆ ಅನೇಕ ಸಂದರ್ಭಗಳಲ್ಲಿ ಅಧಿಕಾರಿಗಳು ಮತ್ತು ಅಧಿಕಾರೇತರರು ಶಾಮೀಲಾಗಿ ತಮ್ಮದೇ ಆದ ಕಾರ್ಯ ನೀತಿಯನ್ನು ಅನುಸರಿಸುವುದರಿಂದ ಈ ದೇಶದ ಜನಸಾಮಾನ್ಯರ ಹಿತವನ್ನು ಕಾಪಾಡುವುದಕ್ಕೆ ಈ ಸಂಸ್ಥೆಗಳ ಮೂಲಕ ಸಾಧ್ಯವಾಗಿಲ್ಲ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ತಮಗೂ ಗೊತ್ತಿರಬೇಕು. ಗುಲ್ಬರ್ಗಾದಿಂದ ಹೆಸರುಬೇಳೆಯನ್ನು ಗ್ರಾಹಕರ ಮಹಾಮಂಡಲಕ್ಕೆ ಕಳುಹಿಸಿದರೆ ಅದು ಬೆಂಗಳೂರನ್ನು ಬಂದು ಮುಟ್ಟುವುದೇ ಇಲ್ಲ. ಇದು ಇವತ್ತಿನದಲ್ಲ, ಬಹಳ ಹಿಂದೆಯೇ ಆಯಿತು. ನಾನು ಹುಡುಕುವುದಕ್ಕೆ ಪ್ರಯತ್ನಪಟ್ಟೆ. ಆದರೆ ನನಗೆ ಅದು ಸಿಗಲಿಲ್ಲ. ನಿಮಗೆ ಸಿಗುವುದಾದರೆ ಹುಡುಕಿ. ಸಿಕ್ಕಿದರೆ ಸಂತೋಷ. ಮಾನ್ಯ ಬಸವಲಿಂಗಪ್ಪನವರ ಇಲಾಖೆಯಲ್ಲಿ ಗಂಧದ ಮರ ಡ್ರೈಯೇಜ್ ಎಂದರೆ ಒಣಗಿ ಹೋಗುವುದಕ್ಕೆ ೨ ಲಕ್ಷ ರೂಪಾಯಿ ಖರ್ಚಾಯಿತೆಂದು ಹೇಳುತ್ತಾರೆ. ಇಂತಹವು ನಮ್ಮ ಇಲಾಖೆಯಲ್ಲಿ ಹೊಸದೇನಲ್ಲ. ಇವತ್ತು ಕಡಲೇಕಾಯಿ ಕೊಂಡುಕೊಂಡು ಮಾರಾಟ ಮಾಡುವುದರೊಳಗೆ ಎಷ್ಟು ಒಣಗಿ ಹೋಗಿದೆ, ಡ್ರೈಯೇಜ್ ಆಗಿದೆ, ಶೇಕಡಾವಾರು ಪ್ರಮಾಣ ಎಷ್ಟು ಎಂದು ತಾವು ನೋಡಿ. ಕೆಲವು ಉದಾಹರಣೆಗಳನ್ನು ನಾನು ಹೇಳುತ್ತಿದ್ದೇನೆ. ಯಾವುದೋ ಒಂದು ಉದ್ದೇಶದಿಂದ ನಾನು ಇದನ್ನು ಹೇಳುತ್ತಾ ಇಲ್ಲ. ಇಂತಹ ಕಾರ್ಯ ನೀತಿಯನ್ನು ಅನುಸರಿಸುವುದು ಏಕೆ ? ಅವನ್ನು ಮುಂದೆ ಹೇಳುತ್ತೇನೆ. ಇದೆಲ್ಲಾ ಗಮನಕ್ಕೆ ಬರುತ್ತದೆ. ಇದು ಗಮನಕ್ಕೆ ಬಂದ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿರಿ ? ಏನು ಕ್ರಮ ತೆಗೆದುಕೊಳ್ಳಬಹುದೆಂದು ಚಿಂತನೆ ಮಾಡಬೇಕು. ನಿಜ. ನಾವು ರಾಜಕೀಯ ಪಕ್ಷದಲ್ಲಿರುವ ಎಲ್ಲಾ ರಾಜಕಾರಣಿಗಳು, ಎಲ್ಲಾ ಕಾಲದಲ್ಲೂ ಹೇಳುತ್ತೇವೆ. ಈ ದೇಶದಲ್ಲಿ ನಾವು ಒಪ್ಪಿಕೊಂಡಿರತಕ್ಕ ಜನತಂತ್ರ ಆಡಳಿತ ವ್ಯವಸ್ಥೆಯಲ್ಲಿ ಅಥವಾ ಅಧಿಕಾರಶಾಹೀ ಆಡಳಿತ ವ್ಯವಸ್ಥೆಯಲ್ಲಿ ನಾವು ಭ್ರಷ್ಟಾಚಾರವನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತೇವೆ. ಆದರೆ ಕಡಿಮೆ ಮಾಡುವುದಕ್ಕೆ ಸಾಧ್ಯವಿಲ್ಲವೇ ? ಅನೇಕ ಸಂದರ್ಭದಲ್ಲಿ ನಮಗೆ ನಾಚಿಕೆಯಾಗುವುದು ಉಂಟು. ಇದರ ಬಗ್ಗೆ ನಾವು ಮಾತನಾಡಬೇಕೇ ಎಂದು ನಮ್ಮಷ್ಟಕೆ ನಾವೇ ಹೇಳುತ್ತೇವೆ ಇವತ್ತಿನದಿವಸ ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಕೂಡ. ಆಡಳಿತ ನೀತಿ ಏನಿದೆ ತಮ್ಮ ಆಡಳಿತ ಕಾಲದಲ್ಲಿ ತಮಗೆ ಸಂಬಂಧಪಟ್ಟ ಇಲಾಖೆಯ ಮಿತಿಯಲ್ಲಿ ಆ ನೀತಿಯನ್ನು ಅಲ್ಲಿ ಅನುಸರಿಸಬೇಕಾದರೆ, ನಿರ್ಧಾರ ಮಾಡಬೇಕಾದರೆ ತಮ್ಮದೇ ಆದ ನೀತಿಯನ್ನು ತಾವು ನಿರ್ಧಾರ ಮಾಡಬಹುದು. ಅದಕ್ಕೆ ಖಂಡಿತಾ ನಮ್ಮ ಅಭ್ಯಂತರ ಮಾಡುವುದಿಲ್ಲ. ಯಾವುದೇ ರಾಜಕೀಯ ಪಕ್ಷ ತನ್ನ ಧ್ಯೇಯ ಧೋರಣೆಗಳಿಗನುಗುಣವಾಗಿ ಪಕ್ಷದ ಸಿದ್ಧಾಂತದ ಮೇಲೆ ತಮ್ಮ ನೀತಿಯನ್ನು ನಿರ್ಧಾರ ಮಾಡುವುದಾದರೆ ಅದು ನಮಗೆ ಇಷ್ಟ ಇರಲಿ ಬಿಡಲಿ ಅದನ್ನು ಒಪ್ಪುತ್ತೇವೆ. ಆದರೆ ಆ ನೀತಿಯನ್ನು ಜಾರಿ ಮಾಡುವಾಗ ರಾಜಕೀಯ ಹಸ್ತಕ್ಷೇಪ ಏನಿದೆ ಅದಕ್ಕೆ ನಾವು ವಿರೋಧ ಮಾಡುತ್ತೇವೆ. ನಾವು ಭ್ರಷ್ಟಾಚಾರ ಇದೆ ಎಂಬುದನ್ನು ಹೇಳುತ್ತೇವೆ, ಭ್ರಷ್ಟಾಚಾರ ನಡೆದಿದೆ ಎಂದು ಹೇಳುತ್ತೇವೆ. ಇದನ್ನು ಈ ಕಡೆಯ ಸದಸ್ಯರೂ ಹೇಳುತ್ತಾರೆ ಆ ಕಡೆಯ ಸದಸ್ಯರೂ ಹೇಳುತ್ತಾರೆ. ಇದನ್ನು ನಮ್ಮ ಪಕ್ಷ ಅಧಿಕಾರದಲ್ಲಿ ಇದ್ದಾಗಲೂ ಹೇಳಿದ್ದೇನೆ. ಆದರೆ ಇಷ್ಟೆಲ್ಲಾ ಸರ್ಕಾರದ ಗಮನಕ್ಕೆ ಬಂದರೂ ಕೂಡಾ ಅದನ್ನು ಕೊನೆಗಾಣಿಸಲು ದೃಢವಾದ ಕಾರ್ಯ ಕ್ರಮವನ್ನು ಖಚಿತ ರೀತಿಯಲ್ಲಿ ತೆಗೆದುಕೊಳ್ಳದೇ ಇದ್ದರೆ ರಾಜಕೀಯವಾಗಿ ಅವರಿಗೆ ಪೋಷಣೆ ಅಥವಾ ರಕ್ಷಣೆ ಕೊಡುವ ಒಂದು ನೀತಿಯನ್ನು ಅನುಸರಿಸುವುದಾದರೆ ಇವತ್ತಿನ ಪರಿಸ್ಥಿತಿಯಲ್ಲಿ ಈ ಒಂದು ಭ್ರಷ್ಟಾಚಾರವನ್ನು ನಾವು ತೆಗೆಯುವುದಕ್ಕೆ ಸಾಧ್ಯವಾಗುತ್ತದೆಯೇ ? ಖಂಡಿತಾ ಸಾಧ್ಯವಾಗುವುದಿಲ್ಲ ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಇನ್ನೂ ಅನೇಕ ಮುಖ್ಯ ಪ್ರಸಂಗಗಳು ಇದ್ದು ಅದನ್ನು ತಮ್ಮ ಗಮನಕ್ಕೆ ತರುತ್ತೇನೆ. ಯಾವ ಉದ್ದೇಶದಿಂದ ಎಂದರೆ ಎಲ್ಲಿಯವರೆಗೆ ತಮ್ಮ ಪಕ್ಷ ಸಿದ್ಧಾಂತದ ಆಧಾರದ ಮೇಲೆ ಒಂದು ನೀತಿಯನ್ನು ನಿರೂಪಣೆ ಮಾಡುವುದರಲ್ಲಿ, ಅವನ್ನು ಜಾರಿಗೆ ಕೊಡುವುದಕ್ಕೆ

ಪ್ರಯತ್ನ ಮಾಡಿದಾಗ, ಅದನ್ನು ಜಾರಿ ಮಾಡುವಾಗ ರಾಜಕೀಯ ಹಸ್ತಕ್ಷೇಪದಿಂದ, ಕೆಟ್ಟ ಜನರ ಅಥವಾ ಅಧಿಕಾರಿಗಳೇ ಇರಬಹುದು ಅವರು ಕೆಟ್ಟವರೇ ಆಗಿರಬಹುದು ಅವರಿಗೆ ನೀವು ರಕ್ಷಣೆ ಕೊಡುವ ಮನಸ್ಸು ಏನು ಮಾಡುತ್ತೀರೋ ಅಲ್ಲಿಯವರೆಗೆ ಈ ದೇಶದಲ್ಲಿ ಭ್ರಷ್ಟಾಚಾರವನ್ನು, ಸ್ವಜನ ಪಕ್ಷಪಾತವನ್ನು ನಾವು ನಿರ್ಮೂಲ ಮಾಡುವುದಕ್ಕೆ ಸಾಧ್ಯವಿಲ್ಲ.

ಆ ದೃಷ್ಟಿಯಲ್ಲಿ ನಾವು ಕೇಳುವುದು ಇಷ್ಟೆ, ಕೇವಲ ಇದರ ವಿರುದ್ಧವಾಗಿ ಮಾತನಾಡಿದರೆ ಸಾಲದು. ಇದನ್ನು ಪರಿಣಾಮಕಾರಿಯಾಗಿ ಭ್ರಷ್ಟಾಚಾರವನ್ನು ನಿಲ್ಲಿಸಬೇಕಾದರೆ ಕನಿಷ್ಟಪಕ್ಷ ಕಡಿಮೆ ಮಾಡಬೇಕಾದರೆ ಈ ಹಸ್ತಕ್ಷೇಪವನ್ನು ನಿಲ್ಲಿಸಬೇಕಾಗಿದೆ. ಈ ಪತ್ತಿನ ಸಹಕಾರ ಸಂಘ ಮತ್ತು ಸಾಲ ವಿತರಣೆ ವ್ಯವಸ್ಥೆಯ ಬಗ್ಗೆ ನಾನು ಹೇಳಿದ್ದೇನೆ. ಅನೇಕ ಯೋಜನೆಗಳು ಈಗ ಜಾರಿಯಲ್ಲಿದೆ. ಆ ಬಗ್ಗೆ ಕೆಲವು ಜಾರಿ ಆಗದಿರಬಹುದು. ಈ ಒಂದು ತತ್ವವನ್ನು ತಮ್ಮ ಗಮನಕ್ಕೆ ತೆಗೆದುಕೊಂಡು ಈ ಕಾರ್ಯಕ್ರಮವನ್ನು ಏನಾದರೂ ಜಾರಿಗೆ ಕೊಡಲಿಕ್ಕೆ ಪ್ರಯತ್ನ ಮಾಡಿದರೆ ಆವೊತ್ತಿನ ದಿವಸ ಒಳ್ಳೆಯ ಆಡಳಿತ ಕೊಡುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಜ, ಇವತ್ತು ಪತ್ತಿನ ಪ್ರಾಥಮಿಕ ಸಹಕಾರ ಸಂಘಗಳ ಆಡಳಿತದ ಬಗ್ಗೆ ಕೊನೆಯ ಮಾತನ್ನು ಹೇಳುತ್ತೇನೆ. ಕಳೆದ ಕೆಲವಾರು ವರ್ಷಗಳಿಂದ ಬಡ್ಡಿ ರಿಯಾಯಿತಿ ಯೋಜನೆಯನ್ನು ಜಾರಿಗೆ ತಂದಿದ್ದೇವೆ. ಅದು ಸರಿಯೋ ತಪ್ಪೋ ಅದು ನಮ್ಮ ಸರ್ಕಾರದ ತೀರ್ಮಾನ. ಕಳೆದ ಹಲವಾರು ವರ್ಷಗಳಿಂದ ೧೭೫ ಕೋಟಿ ರೂಪಾಯಿ ಬಡ್ಡಿ ರಿಯಾಯಿತಿಯನ್ನು ನಾವು ಕೊಟ್ಟಿದ್ದೇವೆ. ಈ ಯೋಜನೆಯನ್ನು ಪುನರ್ ವಿಮರ್ಶೆ ಮಾಡುತ್ತೇವೆ ಎನ್ನುವ ಮಾತನ್ನು ನಮ್ಮ ಸರ್ಕಾರದವರು ಹೇಳಿದ್ದಾರೆ. ನಾನು ನಿಮ್ಮನ್ನು ಕೇಳುವುದು ಇಷ್ಟೆ. ಸಾಲ ಮನ್ನಾ ಮಾಡುವುದು ಬಿಡುವುದು ಅದು ಕೇಂದ್ರ ಸರ್ಕಾರದ ನೀತಿ ಇರಬಹುದು, ನಮ್ಮ ಸರ್ಕಾರದ ನೀತಿಯಿರಬಹುದು. ಆದರೆ ವೈಯುಕ್ತಿಕವಾಗಿ ನಾನೊಂದು ಪಕ್ಷದ ವಕ್ತಾರನಾಗಿ ಹೇಳುತ್ತಿದ್ದೇನೆ. ಬಡ್ಡಿ ರಿಯಾಯಿತಿಯ ಬಗ್ಗೆ ಪುನರ್ ವಿಮರ್ಶೆ ಮಾಡಿ. ಕಡಿಮೆ ಬಡ್ಡಿ ದರದಲ್ಲಿ ಈ ದೇಶದಲ್ಲಿರುವ ಕೃಷಿಕರಿಗೆ ಯಾವುದೇ ಅಡೆತಡೆಯಿಲ್ಲದೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಕೊಡುವ ವ್ಯವಸ್ಥೆಯನ್ನು ಮಾಡಬೇಕು. ಅದರ ಫಲ ರೈತನಿಗೆ ಹೋಗಬೇಕು. ಇವತ್ತು ಕಾರ್ಮಿಕರಿಗೆ ಅನೇಕ ಸೌಲಭ್ಯಗಳನ್ನು ಕೊಡುತ್ತಿದ್ದೇವೆ. ಈ ದೇಶದಲ್ಲಿ ಸುಶಿಕ್ಷಿತ ಸರ್ಕಾರಿ ನೌಕರರಿಗೆ ಅನೇಕ ಸೌಲಭ್ಯಗಳನ್ನು ಕೊಡುತ್ತಿದ್ದೇವೆ. ಈ ದೇಶದ ಎಲ್ಲರಿಗೂ ಸರ್ಕಾರ ನೆರವು ನೀಡುವಾಗ ಈ ದೇಶದ ರೈತನಿಗೆ ಅಂತಹ ನೆರವು ಸಿಗಬೇಕೋ ಬೇಡವೋ? ಈ ರಾಜ್ಯದಲ್ಲಿರತಕ್ಕ ಎಲ್ಲಾ ವರ್ಗದ ಜನರ ಹಿತವನ್ನು ಸಹ ಗಮನದಲ್ಲಿಟ್ಟು ಆಲೋಚನೆ ಮಾಡಬೇಕಾಗಿದೆ. ಈ ದೇಶದಲ್ಲಿ ರೈತ ಕೃಷಿ ಉತ್ಪಾದನೆ ಜಾಸ್ತಿಯಾಗದಿದ್ದರೆ ಬಹಳ ಕಷ್ಟವಾಗುತ್ತದೆ. ಈ ದಶಕದಲ್ಲಿ ೨೦ ಲಕ್ಷ ಟನ್ ಹೆಚ್ಚಿಗೆ ಆಹಾರ ಉತ್ಪಾದನೆ ಮಾಡದಿದ್ದರೆ ನಾವೂ ನೀವೂ ಏನು ಅನ್ನವನ್ನು ಉಣ್ಣುತ್ತಿದ್ದೇವೆ, ಅದನ್ನು ಉಣ್ಣಲಿಕ್ಕೆ ಸಾಧ್ಯವಿಲ್ಲ. ನಾವೆಲ್ಲ ಪರದೇಶಗಳಿಗೆ ಹೋಗಬೇಕಾಗುತ್ತದೆ. ಕೃಷಿಕನ ಉತ್ಪಾದನಾಶಕ್ತಿಯನ್ನು ಹೆಚ್ಚು ಮಾಡಲಿಕ್ಕೆ ನೆರವು ಕೊಡುವುದು ರಾಜ್ಯ ಸರ್ಕಾರದ ಕರ್ತವ್ಯ. ಈ ದಿಶೆಯಲ್ಲಿ ನಾನು ತಮಗೆ ಕೇಳುತ್ತೇನೆ, ಬಡ್ಡಿ ರಿಯಾಯಿತಿ ಯೋಜನೆಯಲ್ಲಿ ಶೇಕಡ ೭ ರಷ್ಟು ಅಥವಾ ಶೇಕಡ ೫ ರಷ್ಟು ಆದರೂ ಕೊಡಿ ಒಟ್ಟಿನಲ್ಲಿ ರೈತನಿಗೆ ಕಡಿಮೆ ಬಡ್ಡಿದರದಲ್ಲಿ ಸಾಲವನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು ಒತ್ತಾಯಪೂರ್ವಕವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ವಿಫಲವಾದ ತೋಡುಬಾವಿಗಳಿಗೆ ಸಹಾಯ ಧನ ಕೊಡುವ ಬಗ್ಗೆ ಒಂದು ಕಾನೂನು ಇದೆಯೆಂದು ನಾನು ಭಾವಿಸಿದ್ದೇನೆ. ಆದರೆ ಇತ್ತೀಚಿನ ಆಜ್ಞೆಯೊಂದರ ಪರಿಣಾಮವಾಗಿ ರೈತರು ಕೊರೆದ ಕೊಳವೆ ಬಾವಿಗಳು ವಿಫಲವಾದರೆ ನಾನು ಅಂದುಕೊಂಡಿದ್ದೇನೆ. ಇವತ್ತಿನವರೆಗೂ ಸಹ ಈ ಸರ್ಕಾರದಲ್ಲಿ ಸಹಾಯ ಮಾಡುವಂತಹ ಸರ್ಕಾರಿ ಆಜ್ಞೆ ಬಂದಿಲ್ಲ. ನಮ್ಮ ಸರ್ಕಾರ ಹೋಗುವ ಕೊನೆಯ ದಿವಸವೆಂದು ಕಾಣುತ್ತದೆ. ನನಗೆ ಜ್ಞಾಪಕವಿದೆ, ದಿನಾಂಕ ೧೧-೮-೧೯೮೮ರಂದು ನಾನು ಆವೊತ್ತಿನ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ. ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಅವರ ಗಮನಕೆ ತಂದಿದ್ದೇನೆ. ಅದು ಆದಮೇಲೆ ಎರಡು ವರ್ಷಗಳು ಕಳೆದಿದೆ. ಈಗ ಅದು ಏನಾಗಿದೆಯೋ ಗೊತ್ತಿಲ್ಲ. ಅದರ ಬಗ್ಗೆ ವಿಚಾರ ಮಾಡಬೇಕು. ರೈತ ಕೊರೆದಂತಹ ಕೊಳವೆ ಬಾವಿಗಳು ವಿಫಲವಾದರೆ ಅವನಿಗೆ ಸಹಾಯ ಕೊಡಬಹುದೆನ್ನುವ ಉದ್ದೇಶ ಸರ್ಕಾರಕ್ಕೆ ಇದ್ದರೆ, ಸಂಬಂಧಪಟ್ಟ ಅಧಿಕಾರಿಗಳ ತಪ್ಪಿರಬಹುದು. ಅಥವಾ ಬೇರೆ ಯಾವುದೇ ಕಾರಣವಿರಬಹುದು, ಇದನ್ನು ಸರಿಪಡಿಸಿ ಹೊಸ ಆದೇಶವನ್ನು ಈ ದಿಸೆಯಲ್ಲಿ ಹೊರಡಿಸಬೇಕು ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೃಷಿ ಉತ್ಪಾದನೆಗೆ ಸಂಬಂಧಪಟ್ಟ ಹಾಗೆ ಕೆಲವು ವಿಚಾರಗಳನ್ನು ಹೇಳಿದ್ದೇನೆ. ಮಾರಾಟ ಸಹಕಾರಸಂಘಗಳಿಗೆ ಸಹಾಯ ಮಾಡುವ ಬಗ್ಗೆ ಮಾನ್ಯ ಕೆ.ಹೆಚ್. ಪಾಟೀಲ್‌ರವರು ಹೇಳುತ್ತಿದ್ದರು. ಅವರು ಈಗ ಸಭೆಯಲ್ಲಿಲ್ಲ. ಅವರು ಹೇಳಿದಂತಹ ಮಾತನ್ನು ನಾನು ಓದಿದ್ದೇನೆ. ಈಗ ನಾನು ಅವರನ್ನು ಹೇಳುತ್ತಿದ್ದೇನೆ. ಮಾರಾಟ ಸಹಕಾರಸಂಘಗಳಿಗೆ

ಒಂದು ಯೋಜನೆ ಜಾರಿಗೆ ತರಬೇಕು. ಅದರ ಜೊತೆಗೆ ಮಾರಾಟ ಸಹಕಾರ ಸಂಘಗಳ ಮತಿಯಿಂದ ಪರಿವರ್ತನಾ ಸಹಕಾರ ಸಂಘಗಳನ್ನು ಅಥವಾ ಸಂಸ್ಕರಣ ಘಟಕಗಳನ್ನು ಮಾಡಬೇಕೆಂದು ಅವರು ಹೇಳಿದ್ದರು. ನಾನು ಇವತ್ತಿನ ದಿವಸ ಕೇಳುತ್ತೇನೆ, ಅದನ್ನು ಈಗ ಅವರು ಮಾಡಬೇಕಾಗಿದೆ. ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಸಹ ಮಾಡುವಂತಹ ಜನ ಏನಿದ್ದಾರೆ, ಅವರು ಬಹಳ ಕಡಿಮೆ ಇದ್ದಾರ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.— ಮಾನ್ಯ ಏಕಾಂತಯ್ಯನವರೆ, ಮಾಡುವಂತಹ ಜನರಿದ್ದಾರೋ, ಮಾರುವಂಥ ಜನರಿದ್ದಾರೋ?

೨.೩೫ ಪಿ. ಎಂ.

ಶ್ರೀ ಹೆಚ್. ಏಕಾಂತಯ್ಯ.— ಅದನ್ನೇ ನಾನು ಹೇಳುತ್ತಿರುವುದು. ಮಾಡುವಂಥ ಜನ ಬಹಳ ಕಡಿಮೆ ಇದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಸದಸ್ಯರು ಬಹಳ ಅಭಿಮಾನದಿಂದ ನಮ್ಮ ಸಹಕಾರ ಕ್ಷೇತ್ರ ಎಂದು ಹೇಳುತ್ತಿದ್ದಾರೆ. ನಿಮ್ಮದು ಎಂದು ಅವರು ಹೇಳುತ್ತಿಲ್ಲ.

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್.—ಅಂತಹವರು ಸಚಿವ ಸ್ಥಾನದಲ್ಲಿ ಮುಂದುವರಿಯಲು ನೀವು ಬಿಡಲಿಲ್ಲ. ಹೊರಗೆ ತೆಗೆದು ಹಾಕಿಬಿಟ್ಟಿರಿ, ಆಗ ಅವರು ಒಳ್ಳೆಯ ಕೆಲಸ ಮಾಡುತ್ತಿದ್ದರು.

ಶ್ರೀ ಎಚ್. ಏಕಾಂತಯ್ಯ — ಅದು ಈಗ ಪ್ರಸ್ತುತ ಅಲ್ಲ. ಅನೇಕ ಸಂದರ್ಭಗಳಲ್ಲಿ ನಾವು ಅಧಿಕಾರದಲ್ಲಿರುವುದು ಆಕಸ್ಮಿಕ ಹೊರಗಡೆ ಇರುವುದೇ ಜಾಸ್ತಿ. ಅಧಿಕಾರಕ್ಕೆ ನಾವು ಬರಬಹುದು; ನೀವು ಬರಬಹುದು, ಅದು ಮುಖ್ಯವಲ್ಲ. ಅಧಿಕಾರದಲ್ಲಿದ್ದಾಗ ಏನು ಮಾಡಿದ್ದೇವೆ ಎಂಬುದು ಮುಖ್ಯವಾದದ್ದು. ಏತಕ್ಕೋಸ್ಕರ ಈ ಮಾತನ್ನು ನಾನು ಹೇಳುತ್ತಿದ್ದೇನೆ ಎಂದರೆ ಈ ಅನೇಕ ಪರಿವರ್ತನ ಸಹಕಾರಸಂಘಗಳು ಎಂದು ಏನು ಕರೆಯುತ್ತೇವೆ, ನಾನು ಹೆಚ್ಚು ವೇಳೆಯನ್ನು ಇದಕ್ಕಾಗಿ ಉಪಯೋಗಿಸಿಕೊಳ್ಳಲಿಕ್ಕೆ ಇಷ್ಟಪಡುವುದಿಲ್ಲ, ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದು ಸಕ್ಕರೆ ಕಾರ್ಖಾನೆ ಇರಬಹುದು ಅಕ್ಕಿಗಿರಣಿ ಇರಬಹುದು ಎಣ್ಣೆಗಿರಣಿಇರಬಹುದು ನೂಲಿನ ಗಿರಣಿ ಇರಬಹುದು. ಈ ಎಲ್ಲಾ ಸಂಸ್ಕರಣಾ ಘಟಕಗಳು ಇವತ್ತಿನ ದಿವಸ ಹೇಗೆ ನಡೆಯುತ್ತಿವೆ? ಇವುಗಳೇನೂ ಹೊಸದಾಗಿ ನಡೆಯುತ್ತಿಲ್ಲ. ಕೆಲವು ಚೆನ್ನಾಗಿ ನಡೆಯುತ್ತಿರಬಹುದು. ಶ್ರೀ ಕೆ. ಹೆಚ್. ಪಾಟೀಲರದ್ದು ಹತ್ತಿಗಿರಣಿ ಚೆನ್ನಾಗಿ ನಡೆಯುತ್ತಿದೆ. ನಾನು ನೋಡಿಕೊಂಡು ಬಂದಿದ್ದೇನೆ. ಹಾಗಾದರೆ ಬೇರೆಯವರದ್ದು ಏಕೆ ನಡೆಯುತ್ತಿಲ್ಲ? ಏತಕ್ಕೋಸ್ಕರ ಈ ಮಾತನ್ನು ನಾನು ಹೇಳುತ್ತಿದ್ದೇನೆ ಎಂದರೆ, ಅನೇಕ ಸಂದರ್ಭಗಳಲ್ಲಿ ರಾಜಕಾರಣಿಗಳಂಥ ನಾವು ಸಹಕಾರಿಗಳ ನೆಪದಲ್ಲಿ ಅಥವಾ ವೇಷದಲ್ಲಿ ಹೊಸಹೊಸ ಸಹಕಾರ ಸಂಘಗಳನು ಹುಟ್ಟುಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಏತಕ್ಕೋಸ್ಕರ? ಲಾಭ ಪಡೆಯುವುದಕ್ಕೋಸ್ಕರ. ಅದು ಬಂದ ಮೇಲೆ ಸ್ಥಾಪನೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಎನ್‌ಸಿಡಿಸಿಯವರು, ಸಾರ್ವಜನಿಕರು ಹಣ ಕೊಡುತ್ತಾರೆ. ಸರ್ಕಾರದವರು ಷೇರು ಕೊಡುತ್ತಾರೆ. ಆದರೆ ಇವೆಲ್ಲಾ ಆದ ಮೇಲೆ ಈ ಸಹಕಾರ ಸಂಘಗಳ ಸರಿಯಾಗಿ ಕೆಲಸ ಮಾಡದೆ ಕೆಡುತ್ತವೆ. ಇದಕ್ಕೆ ಕಾರಣಗಳು ಅನೇಕ ಇರಬಹುದು. ಅಲ್ಲಿರತಕ್ಕಂಥ ಆಡಳಿತವರ್ಗ ಕಾರಣ ಇರಬಹುದು, ಅಲ್ಲಿರತಕ್ಕಂಥ ಅಧಿಕಾರಿಗಳು ಕಾರಣ ಇರಬಹುದು, ಅಥವಾ ಸರ್ಕಾರದ ನೀತಿ ತಪ್ಪಾಗಿರಬಹುದು ಅಥವಾ ಇನ್ನೂ ಅನೇಕ ಕಾರಣ ಇರಬಹುದು. ಈ ಎಲ್ಲಾ ಸಂದರ್ಭಗಳಲ್ಲಿ ಸಹ ನಾವು ಈ ಕಾರಣಗಳನ್ನು ಪತ್ತೆ ಹಚ್ಚಿ ಸರಿಪಡಿಸುವಂಥ ಮನೋಭಾವನೆಯನ್ನು ಇವತ್ತಿನ ದಿವಸ ಮಾಡಿಲ್ಲ. ಬಹಳ ಸಂದರ್ಭದಲ್ಲಿ ನಾವು ಏನು ತಿಳಿದುಕೊಂಡಿದ್ದೇವೆ ಎಂದರೆ ಆಡಳಿತ ವರ್ಗದವರ ತಪ್ಪಿನಿಂದಾಗಿಯೇ ಇವತ್ತು ಈ ಸಹಕಾರ ಸಂಘಗಳು ಸರಿಯಾಗಿ ಕೆಲಸ ಮಾಡಿಲ್ಲ ಎಂದು. ಇವುಗಳು ಕೆಲಸ ಮಾಡಿಲ್ಲವೆಂದರೆ ಕೇವಲ ಕೆಲವರನ್ನೇ ದೂರುವುದು ಅನಾವಶ್ಯಕ. ಇಂತಹ ತಪ್ಪನ್ನು ಕಂಡುಹಿಡಿದಾಗ ನಾವು ಏನು ಮಾಡುತ್ತೇವೆ ಎಂದರೆ ನಾನು ಹೇಳಿದ ಮಾತನ್ನು ಹೇಳಬೇಕಾಗುತ್ತದೆ. ಇವರು ನಮ್ಮ ಪಕ್ಷದವರು, ಅವರು ನಮ್ಮ ಜಾತಿಯವರು, ಇವರು ನಮಗೆ ಬೇಕಾದಂಥವರು ಎಂಬ ಕಾರಣದಿಂದ ತಪ್ಪು ಮಾಡಿದವರ ಮೇಲೆ ದೃಢವಾದ ಕಠಿಣವಾದ ಕ್ರಮಗಳನ್ನು ತೆಗೆದುಕೊಳ್ಳದೆ ಇರುವುದರಿಂದ, ಅಂತಹ ದೃಢವಾದ ನೀತಿಯನ್ನು ಸರ್ಕಾರ ಅನುಸರಿಸದೇ ಇರುವುದರಿಂದ, ಇವತ್ತಿನ ದಿವಸ ಈ ಪರಿವರ್ತನ ಸಹಕಾರ ಸಂಘಗಳು ಕೆಡುತ್ತಿವೆ. ನಾನು ಇಲ್ಲಿ ಯಾವುದೇ ಹೆಸರನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಅನೇಕ ಸಕ್ಕರೆ ಕಾರ್ಖಾನೆಗಳು ಇರಬಹುದು, ಅವು ಒಳ್ಳೆಯ

ದಿಲ್ಲವೆಂದು ನಾನು ಹೇಳುತ್ತಿಲ್ಲ. ಕೆಲವು ನೂಲಿನ ಗಿರಣಿಗಳು ಇರಬಹುದು. ಆದರೆ ಒಂದು ಹೆಸರನ್ನು ಇಲ್ಲಿ ಹೇಳಿದರೆ ತಪ್ಪಾಗುವುದಿಲ್ಲವೆಂದು ಭಾವಿಸುತ್ತೇನೆ. ರಾಯಚೂರಿನಲ್ಲಿ ನಾನು ಆಗ ಸಹಕಾರ ಮಂತ್ರಿಯಾಗಿರಲಿಲ್ಲ. ಒಂದು ಸಮಿತಿಯ ಸದಸ್ಯನಾಗಿ ಹೋಗಿದ್ದೆ. ಆದ್ದರಿಂದ ನನಗೆ ಸ್ವಲ್ಪ ವಿಚಾರ ಗೊತ್ತಿದೆ. ಅಲ್ಲಿ ಅರಳೆ ಕೊಂಡಿದ್ದಾರೆ. ನಾವು ನೀವು ಆ ಅರಳೆಯನ್ನು ನೋಡಿದರೆ ನಮ್ಮ ಕಣ್ಣಿಗೆ ಅನ್ನಿಸುತ್ತದೆ, ಈ ಅರಳೆ ಯೋಗ್ಯವಾದುದಲ್ಲ ಎಂದು. ಅದು ನೂಲಿಗೆ ಯೋಗ್ಯವಾದ ಅರಳೆ ಅಲ್ಲ, ಬೆಡ್ ಮಾಡುವುದಕ್ಕೆ ಎಂದು ಏನು ಹೇಳುತ್ತಾರೆ ಅದಕ್ಕೆ ಯೋಗ್ಯವಾದದ್ದು. ಅಂದರೆ ಇಂತಹ ಅರಳೆಯನ್ನು ಕೊಂಡುಕೊಳ್ಳುವಂಥ ಕೆಲಸವನ್ನು ಅಲ್ಲಿಯ ವ್ಯವಸ್ಥಾಪಕ ನಿರ್ದೇಶಕರಾಗಲಿ, ಆಡಳಿತವರ್ಗವಾಗಲಿ ಕೆಲಸ ಮಾಡಿದರೆ ನಾವು ಏನು ಕ್ರಮ ತೆಗೆದುಕೊಂಡಿದ್ದೇವೆ? ಅದು ಒಂದು. ಇದನ್ನು ನಾನು ಉದಾಹರಣೆಯಾಗಿ ಹೇಳಿದೆ. ಎಷ್ಟೋ ಸಹಕಾರ ಸಂಘಗಳಲ್ಲಿ ಕೋಟಿಗಟ್ಟಲೆ ಬೆಲೆಯ ಬಿಡಿಭಾಗಗಳನ್ನು ನಾವು ಕೊಂಡುಕೊಳ್ಳುತ್ತೇವೆ. ಅದನ್ನು ಎಂದು ಕೊಂಡಿದ್ದೀರಿ, ಎಂದು ಉಪಯೋಗ ಮಾಡಿದ್ದೀರಿ ಎಂದರೆ ಅನೇಕ ಸಹಕಾರ ಸಂಘಗಳು ಅನೇಕ ಸಕ್ಕರೆ ಫ್ಯಾಕ್ಟರಿಗಳು ಇರಬಹುದು, ೧೦-೧೨ ವರ್ಷಗಳ ಹಿಂದೆ ಖರೀದಿ ಮಾಡಿದ್ದಿರಬಹುದು. ಆದರೆ ಅದು ಇನ್ನೂ ಉಪಯೋಗ ಆಗಿಲ್ಲ. ಆದು ಉಪಯೋಗವಾಗಿಲ್ಲದಿದ್ದರೂ ಸಹಿತ ಹೊಸದನ್ನು ಕೊಂಡುಕೊಳ್ಳುತ್ತಾರೆ. ಈ ಮಾತನ್ನು ಏಕೆ ಹೇಳುತ್ತಿದ್ದೇನೆ ಎಂದರೆ ನಾವು ನಮ್ಮ ಹಣವನ್ನು ವಿನಿಯೋಗಿಸುವಾಗ ವಿಚಕ್ಷತೆ ಇಲ್ಲದೆ ಇರುವುದರಿಂದ ಒಳ್ಳೆಯ ವ್ಯವಹಾರಿಕತೆ ಇಲ್ಲದೆ ಇರುವುದರಿಂದ ಅನೇಕ ಸಂದರ್ಭಗಳಲ್ಲಿ ಸಾರ್ವಜನಿಕರ ಹಣಪೋಲಾಗುತ್ತದೆ ಅಥವಾಸರಿಯಾದ ರೀತಿ ಯಲ್ಲಿ ಉಪಯೋಗವಾಗುತ್ತಿಲ್ಲ ಎಂಬುದನ್ನು ಸಹ ನಾವು ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಅದು ಸಕ್ಕರೆ ಕಾರ್ಖಾನೆ ಇರಬಹುದು, ನೂಲಿನ ಗಿರಣಿ ಇರಬಹುದು ಒಂದು ಬೇಲ್ ಹತ್ತಿ ಉಪಯೋಗಿಸಿದರೆ ಎಷ್ಟು ನೂಲು ಬರಬೇಕು ಎಷ್ಟು ಅಪವ್ಯಯವಾಗಬೇಕು ಎಂದು ಆದಕ್ಕೆ ಒಂದು ಅಂಕಿಅಂಶ ಇದೆ. ಎಷ್ಟು ವಿದ್ಯುಚ್ಛಕ್ತಿ ಉಪಯೋಗಿಸಿಕೊಳ್ಳಬೇಕು, ಎಷ್ಟು ಆಯಿಲ್, ಅಥವಾ ಕಟ್ಟಿಗೆ ಅಥವಾ ಬೇಕಾದಂಥ ಬೇರೆ ಬೇರೆ ವಸ್ತುಗಳನ್ನು ಉಪಯೋಗಿಸಿಕೊಳ್ಳಬೇಕೆಂದು ಒಂದು ಅಂದಾಜು ಇದೆ. ಅದಕ್ಕೆ ಸರಿಯಾದ ರೀತಿಯಲ್ಲಿ ನಾವು ಉಪಯೋಗ ಮಾಡಿಕೊಂಡಿದ್ದೇವೆಯೇ ?

ಎಷ್ಟು ಶೇಕಡಾವಾರು ಪ್ರಮಾಣದಲ್ಲಿ ಸಕ್ಕರೆ ಉತ್ಪಾದನೆಯಾಗಬೇಕೋ, ಅಷ್ಟು ಸಕ್ಕರೆ ಉತ್ಪಾದನೆಯಾಗುತ್ತಿದೆಯೇ ಎಂಬುದನ್ನು ನೋಡಬೇಕು. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಸರಿಯಾದ ರೀತಿಯಲ್ಲಿ ವಿಚಕ್ಷಣೆಯಿಂದ ಪರಿವೀಕ್ಷಣೆ ಮಾಡದೇ ಇರುವುದರಿಂದ, ಇವತ್ತಿನದಿವಸ ನಮ್ಮಲ್ಲಿರತಕ್ಕ ಅನೇಕ ಸಹಕಾರಿ ಸಂಸ್ಥೆಗಳು ಅದರಲ್ಲೂ ಮುಖ್ಯವಾಗಿ, ಈ ಸಂಸ್ಕರಣ ಘಟಕಗಳು ಏನಿವೆ, ಅದು ನೂಲಿನ ಗಿರಣಿಯಾಗಿರಬಹುದು, ಸಕ್ಕರೆ ಕಾರ್ಖಾನೆಗಳಾಗಿರಬಹುದು, ಅದಕ್ಕಿಂತ ಹೆಚ್ಚಾಗಿ, ಬಹಳ ಮುಖ್ಯವಾದ ಹಾಗೂ ಆಹ್ಲಾದಕರ ವಿಚಾರ ಏನೆಂದರೆ, ಅಲ್ಲಿ ನೌಕರರನ್ನು ನೇಮಿಸುವುದು. ಯಾರೇ ಬರಲಿ, ಅವರಿಗೆ ಬೇಕಾದವರು ೨೫ ಜನ, ತಮಗೆ ಬೇಕಾದವರು ೨೫ ಜನ ಈ ರೀತಿಯಾಗಿ ಎಲ್ಲಾ ವಿಧವಾದ ಸಹಕಾರ ಸಂಘಗಳಲ್ಲೂ ಯಾವುದೇ ಒಂದು ಇತಿಮಿತಿ ಇಲ್ಲದೆ, ಕಾನೂನು ಪುಸ್ತಕದಲ್ಲಿದೆ, ಸೆಕ್ಷನ್ ೧೧೭ ಇರಬಹುದು, ನನಗೆ ಜ್ಞಾಪಕ ಇಲ್ಲ. ಕಾನೂನು ಇದ್ದರು ಕೂಡ ತಮಗೆ ಬೇಕಾದವರನ್ನು, ಬೇಕಾದಷ್ಟು ಸಂಖ್ಯೆಯಲ್ಲಿ ನೇಮಕ ಮಾಡುವಂಥ ಅವ್ಯವಹಾರಿಕವಾದ ನೀತಿ ಏನಿದೆ, ಅದನ್ನು ತಪ್ಪಿಸ ಬೇಕು. ಅವರನ್ನು ನೇಮಕ ಮಾಡಿಕೊಂಡರೆ ಅವರಿಗೆ ಸಂಬಳ ಕೊಡಬೇಕು, ಇಲ್ಲದೇ ಹೋದರೆ ಅವರು ಕೋರ್ಟಿಗೆ ಹೋಗುತ್ತಾರೆ. ಎಲ್ಲೆಲ್ಲೋ ಹೋಗುತ್ತಾರೆ. ನಮಲ್ಲೋ ನಿಮ್ಮಲ್ಲೋ ಪ್ರಭಾವ ಮಾಡಿ, ವಿಧಾನ ಸೌಧದಲ್ಲೂ ಎಷ್ಟೋ, ಅವರು ನೌಕರರಾಗಿದ್ದಾರೆ, ಅವರಿಗೆ ನಾವೂ ಕೂಡ ಮಾನವೀಯತೆ ದೃಷ್ಟಿಯಿಂದ ಸಂಬಳಕೊಡಬೇಕೆಂದು ಹೇಳುತ್ತೇವೆ. ಅವರಿಗೆ ಸಂಬಳವನ್ನು ಎಲ್ಲಿಂದ ತಂದುಕೊಡಬೇಕು. ಈ ರೀತಿ ಯಾವುದೇ ವಿವೇಕ ಇಲ್ಲದ ರೀತಿಯಲ್ಲಿ ನೇಮಕ ಮಾಡಿಕೊಂಡು, ಸಂಬಳ ಸಾರಿಗೆ ಕೊಟ್ಟಿದ್ದೇವೆ. ಈ ರೀತಿ ಎಲ್ಲಾ ಸಹಕಾರ ಸಂಘಗಳಲ್ಲೂ ಇದೆ ಎಂದು ಹೇಳದಿದ್ದರೂ ಸಹ ಬಹುತೇಕ ಸಹಕಾರಿ ಸಂಘಗಳಲ್ಲಿ ಇಂತಹ ಅವ್ಯವಹಾರಿಕ ನೀತಿಯನ್ನು ಅನುಸರಿಸುವುದರಿಂದ ನಷ್ಟವಾಗುತ್ತಿದೆಯೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಇನ್ನು ಇವತ್ತಿನದಿವಸ ಹೇಳುವುದಾದರೆ ಈ ಗ್ರಾಹಕರ ಸಹಕಾರ ಸಂಘಗಳು ಇವೆ. ಇದರ ಬಗ್ಗೆ ಕಡಿಮೆ ಹೇಳಿದರೆ ಒಳ್ಳೆಯದೆಂದು ಕಾಣಿಸುತ್ತದೆ, ಈ ಗ್ರಾಹಕರ ಸಹಕಾರ ಸಂಘಗಳು ಮಾನ್ಯ ಅಜೀಜ್‌ಸೇಠ್‌ರವರ ಕೃಪೆಯಿಂದ ಸ್ವಲ್ಪಮಟ್ಟಿಗೆ ನಡೆಯುತ್ತಿವೆ. ಅವರ ಕೃಪೆ ಎಲ್ಲಿ ಇಲ್ಲವೋ ಅಲ್ಲಿ ನಡೆಯುತ್ತಿಲ್ಲ. ಅವರು ಕೃಪೆಯನ್ನು ನಮಗೆ ವಿತರಣೆ ಮಾಡುವುದಕ್ಕೆ ಉಪಯೋಗಿಸುವುದಿಲ್ಲ. ಅದಕ್ಕೆ ಬದಲಾಗಿ, ಏತಕ್ಕೆ ಉಪಯೋಗಿಸುತ್ತಾರೆಂದು ನನಗಿಂತ ಹೆಚ್ಚಾಗಿ ತಮಗೆ ಗೊತ್ತಿದೆ. ಅನೇಕ

ಸಂದರ್ಭಗಳಲ್ಲಿ ನಾನು ಪರಿವೀಕ್ಷಣೆ ಮಾಡಿದಂಥ ಸಂದರ್ಭಗಳಲ್ಲಿ ನಾನು ನೋಡಿದ್ದೇನೆ. ಬಹುತೇಕ ಸಹಕಾರ ಸಂಘಗಳಲ್ಲಿ, ಕಂಟ್ರೋಲ್‌ನಿಂದ ಕಂಟ್ರೋಲ್ ರೇಟಿಗೆ ಏನು ಪಡೆಯುತ್ತಾರೆ, ಅದನ್ನು ಸರಿಯಾಗಿ ವಿತರಣೆ ಮಾಡುತ್ತಿಲ್ಲ. ಅದರಿಂದ ಹೆಚ್ಚು ಲಾಭ ಬರುವುದಿಲ್ಲ. ಬಹಳಷ್ಟು ಬಳಕೆದಾರರ ಸಹಕಾರ ಸಂಘಗಳು ನಿಷ್ಕ್ರಿಯವಾಗಿವೆ, ಅವುಗಳನ್ನು ಬಲಪಡಿಸುವುದಕ್ಕೆ ಕೆಲವೊಂದು ನಿಯಂತ್ರಣ ಹಾಕಿಕೊಳ್ಳಬೇಕು. ಬಳಕೆದಾರರ ಚಟುವಟಿಕೆ ಏನಿದೆ, ಗ್ರಾಮಾಂತರ ಪ್ರದೇಶಗಳಲ್ಲಿ ಮಾಡುವುದಕ್ಕೆ ಕೇಂದ್ರ ಸ್ಥಾನದಲ್ಲಿ, ಈಗಾಗಲೇ ನಾನು ಹೇಳಿದಂತೆ, ಪ್ರಾಥಮಿಕ ಪತ್ತಿನ ಸಹಕಾರ ಸಂಘಗಳು ಏನಿವೆ, ಅವುಗಳನ್ನು ಉಪಯೋಗಿಸಿಕೊಂಡು, ಈ ಕೆಲಸವನ್ನು ಮಾಡಬೇಕು. ಹೆಚ್ಚಿನ ಸಹಕಾರ ಸಂಘಗಳ ಅಗತ್ಯ ಇಲ್ಲ ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಉಗ್ರಾಣಗಳ ಬಗ್ಗೆ ಹೇಳಬೇಕಾಗಿದೆ. ನನಗೆ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳ ಹೆಚ್ಚಿನ ಪರಿಚಯ ಇಲ್ಲ. ಆದ್ದರಿಂದ ನಾನು ಹೇಳುತ್ತೇನೆ, ನಾನು ಸರ್ಕಾರದ ಸಹಕಾರ ಮಂತ್ರಿಯಾಗಿ ಯಾವ ನೀತಿಯನ್ನು ಅನುಸರಿಸಿದೆ ಮತ್ತು ನನ್ನ ಅಭಿಪ್ರಾಯಗಳು ಏನು ಎಂಬುದರ ಬಗ್ಗೆ ಇಲ್ಲಿ ಚರ್ಚೆ ಮಾಡುವ ಮೊದಲು ನಮ್ಮ ಸರ್ಕಾರಿ ವಶದಲ್ಲಿರತಕ್ಕಂಥ ಸಹಕಾರಿ ಇಲಾಖೆಯ ಕಡತಗಳನ್ನು ತೆಗೆದು ನೋಡಿದರೆ ಹೆಚ್ಚಿನ ಉಪಯೋಗವಾಗುತ್ತದೆ.

ಶ್ರೀ ಅಜೀಜ್ ಸೇಠ್.—ಸಹಕಾರ ಸಂಘದ ವಿಚಾರದಲ್ಲಿ ಮಾತನಾಡುವಾಗ, ಫೇರ್ ಪ್ರೈಸ್ ಡಿಪೋ ಬಗ್ಗೆ ಹಿಂದೆ ಇದ್ದ ಸರ್ಕಾರದ ನೀತಿಯಲ್ಲಿ ತಮ್ಮಂಥ ಅನುಭವಸ್ಥರು ಕೋ-ಆಪರೇಟಿವ್ ಇಲಾಖೆಯಲ್ಲಿ ಇದ್ದರೂ ಸಹ ಸಹಕಾರಿ ಸಂಘಗಳನ್ನು ತೆಗೆದು, ಪ್ರೈವೇಟ್ ಜನಕ್ಕೆ ಈ ಫೇರ್ ಪ್ರೈಸ್ ಡಿಪೋಗಳನ್ನು ಕೊಟ್ಟಿರಲ್ಲ. ಅದಕ್ಕೆ ತಾವು ಏನು ಹೇಳುತ್ತೀರಿ ?

ಶ್ರೀ ಹೆಚ್. ಏಕಾಂತಯ್ಯ.—ನಾನು ಈಗಾಗಲೇ ಹೇಳಿದೆ, ಈ ಸಹಕಾರಿ ಕ್ಷೇತ್ರವನ್ನು ಸರಿಯಾಗಿ ಉಪಯೋಗಿಸಿಕೊಳ್ಳುವ ಮೂಲಕ ಈ ಶೋಷಣೆಯನ್ನು ತಪ್ಪಿಸಬೇಕು ಎಂದು ಆದರೆ ಸಹಕಾರಿ ಸಂಸ್ಥೆಗಳು ಏನು ನ್ಯಾಯಬೆಲೆ ಅಂಗಡಿಗಳನ್ನು ತೆಗೆದಿದ್ದಾರೆ, ಅವರೂ ಸಹ ಬೇರೆ ವ್ಯಾಪಾರಸ್ಥರು ಮಾಡುವ ಅಕ್ರಮಗಳನ್ನು ಮಾಡುವುದಾದರೆ, ಅದಕ್ಕೂ, ಇದಕ್ಕೂ ಏನೂ ವ್ಯತ್ಯಾಸ ಇಲ್ಲ. ಇವತ್ತಿನ ದಿವಸ, ಈ ಬಳಕೆದಾರರ ಸಹಕಾರ ಸಂಘಗಳು, ಏನಿವೆ, ಅದಕ್ಕಿಂತ ಹೆಚ್ಚಾಗಿ, ಸಹಕಾರ ಸಂಘಗಳ ಉಗ್ರಾಣಗಳ ನಿರ್ಮಾಣ ಯೋಜನೆಯಲ್ಲಿ ಸುಮಾರು ೭ ಲಕ್ಷ ಟನ್ ಸಾಮರ್ಥ್ಯದ ಉಗ್ರಾಣಗಳನ್ನು ಮಾಡಿದ್ದೇವೆ. ಅದರ ಬಳಕೆಯನ್ನು ನೋಡಿದಾಗ, ಅವು ಉಪಯೋಗ ಆಗುತ್ತಾ ಇಲ್ಲ. ಎನ್.ಸಿ.ಡಿ.ಸಿ.ಯವರ ೩ನೇ ಯೋಜನೆಯಲ್ಲಿ ಸುಮಾರು ೧೮ ಕೋಟಿ ಯೋಜನೆಯಲ್ಲಿ ಉಗ್ರಾಣಗಳನ್ನು ಕಟ್ಟುವುದಕ್ಕೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದಾರೆ, ಅದರಲ್ಲಿ ಬಹುಪಾಲು ಆಗಿದೆಯೆಂದು ತಿಳಿದುಕೊಂಡಿದ್ದೇನೆ. ಆದರೂ ಸಹ ಅದರಿಂದ ಪೂರ್ಣಪ್ರಮಾಣದಲ್ಲಿ ಉಪಯೋಗ ಆಗುತ್ತಿಲ್ಲವೆಂದು ಹೇಳುತ್ತೇನೆ. ಅದಕ್ಕಿಂತ ಹೆಚ್ಚಾಗಿ, ಸಹಕಾರಿ ಕ್ಷೇತ್ರ ಇದು ಯಾವ ಕ್ಷೇತ್ರವನ್ನೂ ಕೈಬಿಟ್ಟಿಲ್ಲ. 'ಆಡು ಮುಟ್ಟದ ಸೊಪ್ಪಿಲ್ಲ' ಎಂದು ಏನು ಹೇಳುತ್ತೇವೆ ಹಾಗೆ, ಈ ಸಹಕಾರಿ ಕ್ಷೇತ್ರ ಎಲ್ಲಾ ವಿಚಾರದಲ್ಲೂ ವ್ಯಾಪಿಸಿದೆ. ಆದರಲ್ಲೂ ಬಹಳ ಮುಖ್ಯವಾಗಿ ಇವತ್ತಿನದಿವಸ, ಗೃಹನಿರ್ಮಾಣ ಸಹಕಾರ ಸಂಘಗಳ ಬಗ್ಗೆ ಹೇಳುತ್ತೇನೆ.

ಈ ಗೃಹನಿರ್ಮಾಣ ಸಹಕಾರ ಸಂಘಗಳು ಸುಮಾರು ಸಾವಿರ ಚಿಲ್ಲರೆ ಇದ್ದು ಅದರಲ್ಲಿ ನಾಲ್ಕು ನೂರಕ್ಕಿಂತ ಹೆಚ್ಚು ಬೆಂಗಳೂರಿನಲ್ಲಿವೆ ಎಂದು ತಿಳಿದುಕೊಂಡಿದ್ದೇನೆ. ಈ ಗೃಹನಿರ್ಮಾಣ ಸಹಕಾರ ಸಂಘಗಳು ಎಂದ ತಕ್ಷಣ ಎಲ್ಲರ ಕಿವಿ ಸ್ವಲ್ಪ ನೆಟ್ಟಗಾಗುತ್ತದೆ. ಆಗಬೇಕಾದುದೇ. ಏತಕ್ಕೆಂದರೆ ಆ ರೀತಿ ಇದೆ. ನಿಮ್ಮ ವರದಿಯ ಪೇಜ್ ೫೦ ಪ್ಯಾರಾ ೧೭.೧ ರಲ್ಲಿ ಈ ರೀತಿ ಹೇಳಿದ್ದೀರಿ.

ಡಿಸೆಂಬರ್ ೧೯೮೯ರ ಅಂತ್ಯಕ್ಕೆ ರಾಜ್ಯದಲ್ಲಿ ೧೭೦೬ ಗೃಹನಿರ್ಮಾಣ ಸಹಕಾರ ಸಂಘಗಳು ಇದ್ದು ಈ ಪೈಕಿ ೪೮೯ ಬೆಂಗಳೂರಿನಲ್ಲಿರುತ್ತವೆ. ೫೦೧ ಸಂಘಗಳು ನಿಷ್ಕ್ರಿಯಗೊಂಡಿದ್ದು, ಇವುಗಳ ಪೈಕಿ ೫೦ ಬೆಂಗಳೂರಿನಲ್ಲಿರುತ್ತವೆ. ಸಹಕಾರ ಸಂಘಗಳ ಮೂಲಕ ಇಲ್ಲಿಯವರೆಗೆ ೩೭.೬೨೯ ನಿವೇಶನಗಳನ್ನು ಹಂಚಲಾಗಿದೆ. ಬೆಂಗಳೂರು ನಗರದ ೯೮ ಸಹಕಾರ ಸಂಘಗಳ ಕಾರ್ಯವೈಖರಿ ಬಗ್ಗೆ ವಿವರಗಳನ್ನು ತಿಳಿಯಲು ಸಹಕಾರ ಸಂಘಗಳ ಕಾಯಿದೆ ಕಲಂ ೬೪ರ ವಿಚಾರಣೆಯನ್ನು ಮಾಡಲು ಆದೇಶಿಸಿದ್ದು ವಿಚಾರಣಾ ವರದಿ ಬಂದಿದ್ದು, ಅದರ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಟೆಲಿಫೋನ್ ಕದ್ದಾಲಿಕೆಯ ಬಗ್ಗೆ ಎರಡು ದಿವಸ ಮಾತನಾಡಿದರು. ಆದರೆ ಇದರ ಬಗ್ಗೆ ಏನಾದರೂ ಮಾತನಾಡುವುದಾದರೆ ಎರಡು ವಾರ ಬೇಕಾಗಬಹುದು. ಆದರೆ ಹಿಂದೆ ಈ ಗೃಹನಿರ್ಮಾಣ ಸಹಕಾರ ಸಂಘಗಳ ಬಗ್ಗೆ ಚರ್ಚೆ ಆಗಿದ್ದರೂ ಸಹ ಅದೃಷ್ಟವಶಾತ್ ಅಥವಾ ದುರಾದೃಷ್ಟವಶಾತ್ ಈ ಸಂಘಗಳ ಮೇಲೆ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಏತಕ್ಕೋಸ್ಕರ ಎಂಬುದಕ್ಕೆ ಪೂರ್ವಭಾವಿಯಾಗಿ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ೯೮ ಗೃಹ ನಿರ್ಮಾಣ ಸಹಕಾರ ಸಂಘಗಳು ಏನಿದ್ದಾವೆ ಇವುಗಳ ಕಾರ್ಯವೈಖರಿ ಬಗ್ಗೆ ವಿಚಾರಣೆ ನಡೆಸಲು ಹಿಂದೆ ಒಂದು ಸಮಿತಿಯನ್ನು ನೇಮಕ ಮಾಡಿದ್ದೆವು. ವಿಚಾರಣಾ ಸಮಿತಿ ೧೦-೩-೧೯೮೮ರಲ್ಲಿ ನೇಮಕ ಆಯಿತು. ನಂತರ ದಿನಾಂಕ ೯-೫-೧೯೮೮ರಲ್ಲಿ ಅದು ಮಧ್ಯಂತರ ವರದಿ ಕೊಟ್ಟಿತು. ಆಮೇಲೆ ದಿನಾಂಕ ೧೬-೭-೧೯೮೯ರಲ್ಲಿ ಅದು ಫೈನಲ್ ರಿಪೋರ್ಟ್ ಕೊಟ್ಟಿತು. ಕೊಟ್ಟಂತಹ ಸಂದರ್ಭದಲ್ಲಿ ಈ ವರದಿಯ ಮೇಲೆ ಈ ಸಭೆಯಲ್ಲಿ ಚರ್ಚೆ ಆಯಿತು. ಚರ್ಚೆ ಆದಂಥ ಸಂದರ್ಭದಲ್ಲಿ ಅಂದು ವಿರೋಧ ಪಕ್ಷದಲ್ಲಿದ್ದು ಇಂದು ಆಡಳಿತ ಪಕ್ಷದಲ್ಲಿರುವಂತಹ ಪಕ್ಷದ ಸದಸ್ಯರು ಅಂದಿನ ಸರಕಾರದ ಮೇಲೆ ಅನೇಕ ಆರೋಪಗಳನ್ನು ಮಾಡಿದರು. ಇವುಗಳಲ್ಲಿ ಅನೇಕ ಅಕ್ರಮಗಳಾಗಿವೆ, ಖೋಟಾ ಸದಸ್ಯತ್ವ ಆಗಿದೆ, ಇಲ್ಲಿ ಮಧ್ಯವರ್ತಿಗಳ ಹಾವಳಿ ಜಾಸ್ತಿಯಾಗಿದೆ. ಕಾನೂನಿಗೆ ವಿರುದ್ಧವಾದ ಕರಾರುಗಳನ್ನು ಮಾಡಿ ಕೊಂಡು ನಿಮ್ಮದೇ ಆದಂಥ ಸಂಬಂಧ ಹೊಂದಿದ್ದು, ಇದರ ದುರುಪಯೋಗ ಆಗಿದೆ ಎಂದು ಈ ರೀತಿಯಾಗಿ ಅನೇಕ ಆರೋಪಗಳನ್ನು ಆವತ್ತು ಅವರು ಮಾಡಿದರು. ಅಷ್ಟೆಲ್ಲಾ ಆರೋಪಗಳನ್ನು ಮಾಡಿ, ಇದರ ಬಗ್ಗೆ ಪರಿಪೂರ್ಣವಾದ ವಿಚಾರಣೆ ಆಗಬೇಕಾಗಿದೆ, ಪರಿವೀಕ್ಷಣೆ ಆಗಬೇಕಾಗಿದೆ, ಇದಕ್ಕೆ ಸಿಓಡಿ ಅಲ್ಲ, ಸಿ.ಬಿ.ಐ. ಎನ್‌ಕ್ವೈರಿನೇ ಮಾಡಿ ಎಂಬ ಮಾತನ್ನು ಹೇಳಿದರು. ವಿಚಾರಣಾ ವರದಿ ಬಂತು, ವಿಚಾರಣಾ ವರದಿ ಬರುವುದಕ್ಕಿಂತ ಮುಂಚಿನ ಒಂದು ವಿಚಾರ ಹೇಳುತ್ತೇನೆ. ದಿನಾಂಕ ೧೦-೩-೧೯೮೮ ರಲ್ಲಿ ನೇಮಿಸಿದಂತಹ ಒಂದು ಸಮಿತಿ ೯-೫-೧೯೮೮ರಲ್ಲಿ ಒಂದು ವರದಿ ಕೊಟ್ಟಿತು. ಆ ವರದಿ ಕೊಟ್ಟಮೇಲೆ ಸರಕಾರ ಏನೂ ಸುಮ್ಮನೆ ಕುಳಿತುಕೊಳ್ಳಲಿಲ್ಲ. ಏನು ಮಧ್ಯಂತರ ವರದಿ ಕೊಟ್ಟರು, ಅದರ ಆಧಾರದ ಮೇಲೆ ತನ್ನದೇ ಆದಂಥ ಸೂಚನೆಗಳನ್ನು ಕೊಟ್ಟು, ಆಗಿರುವಂತಹ ಅಕ್ರಮಗಳನ್ನು ತಡೆ ಹಿಡಿಯಲಿಕ್ಕೆ ಕೆಲವು ಸೂಚನೆಗಳನ್ನು ಕೊಟ್ಟು, ಅದನ್ನು ಜಾರಿ ಮಾಡಬೇಕಾದುದು ಅವಶ್ಯ ಎಂಬ ಮಾತನ್ನು ಹೇಳಿದೆವು. ನಮ್ಮ ಸರಕಾರ ಹೋಗುವ ಕೆಲವು ದಿವಸಗಳ ಹಿಂದೆ, ಜುಲೈ ತಿಂಗಳಲ್ಲಿ ಈ ಒಂದು ಸೂಚನೆಯನ್ನು ಮಾಡಿ ಇದನ್ನು ಜಾರಿ ಮಾಡಬೇಕೆನ್ನುವ ಮಾತನ್ನು ನಾವು ಹೇಳಿದ್ದೆವು. ಇವತ್ತು ಏನಾಗಿದೆ ಸ್ವಾಮಿ ಅದು. ಇಂತಹ ಅಕ್ರಮಗಳನ್ನು ಕಡಿಮೆ ಮಾಡುವುದಕ್ಕೆ ಮತ್ತು ತಡೆ ಹಿಡಿಯುವುದಕ್ಕೆ ಏನು ಮಾಡಿದ್ದೀರಿ. ವರದಿಯ ವಿಚಾರಗಳಿಗೆ ಆಮೇಲೆ ಬರುತ್ತೇನೆ. ಮಧ್ಯಂತರ ವರದಿ ಆಧಾರದ ಮೇಲೆ ಇಂತಿಂತಹ ಕ್ರಮಗಳನ್ನು ತೆಗೆದುಕೊಳ್ಳುವುದರ ಮುಖಾಂತರ ಕ್ರಮ ತೆಗೆದುಕೊಳ್ಳಬೇಕೆಂದು ತಾವು ಅಂದು ಆ ಕಡೆ ಕುಳಿತು ಆರೋಪಗಳನ್ನು ಮಾಡಿದಿರಿ. ಇವತ್ತು ವಿಚಾರಣೆ ವರದಿ ಬಂದಿದೆ. ಇಲ್ಲ ಎಂದು ಹೇಳುವುದಿಲ್ಲ.

ಆ ವಿಚಾರಣಾ ವರದಿಯಲ್ಲಿ ಸ್ಪಷ್ಟಗೊಳಿಸಿರುವ ಕಾರಣಗಳಿಂದಾಗಿ ನಾವು ಕ್ರಮ ತೆಗೆದು ಕೊಳ್ಳಲು ಆಗಿಲ್ಲ. ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ? ಅದಾದ ಮೇಲೆ ೧೬-೭-೮೯ರಲ್ಲಿ ಆಗ ನಾನು ಸಹಕಾರ ಮಂತ್ರಿಯಾಗಿರಲಿಲ್ಲ. ಅದಾದ ನಂತರ ಮುಂದಿನ ಮಾರ್ಚ್ ತಿಂಗಳಲ್ಲಿ ಎಂದು ಕಾಣುತ್ತದೆ. ಇದರ ಬಗ್ಗೆ ವಿಶೇಷ ಚರ್ಚೆ ಆಯಿತು. ಚರ್ಚೆಯಾದಂತಹ ಸಂದರ್ಭದಲ್ಲಿ ಸಹ ಅವತ್ತು ಹೇಳಿದ್ದೇವೆ. ಸಂಬಂಧಪಟ್ಟವರಿಗೆ ನೋಟೀಸ್ ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದರು. ಆ ನೋಟೀಸ್‌ಗೆ ಉತ್ತರ ಇನ್ನೂ ಬಂದಿಲ್ಲವೆ? ಬಂದಿದ್ದರೆ ಏನು ಕ್ರಮ ತೆಗೆದುಕೊಂಡಿದ್ದೀರಿ? ನೀವು ಇಲ್ಲದ್ದಾಗ ಅಂದು ಸರ್ಕಾರದಲ್ಲಿ ಇದ್ದಂತಹ ಜನರ ಮೇಲೆ ಆರೋಪ ಮಾಡುತ್ತಿದ್ದುದ್ದು ಉಂಟು. ಆ ಆರೋಪಗಳ ಬಗ್ಗೆ ತನಿಖೆ ಮಾಡಿ ಅದರ ಬಗ್ಗೆ ನಮ್ಮ ಅಭ್ಯಂತರ ಏನೂ ಇಲ್ಲ. ಆದರೆ ಇವತ್ತಿನ ದಿವಸ ಏನು ಖೋಟಾ ಸದಸ್ಯರು ಹಾವಳಿ ಅಥವಾ ಕಾನೂನಿಗೆ ವಿರುದ್ಧವಾಗಿ ಕರಾರುಗಳನ್ನು ಮಾಡಿ ಕೊಂಡು ಸುಮಾರು ೯೦ ಕೋಟಿ ರೂಪಾಯಿಗಳಿಗೂ ಹೆಚ್ಚು ಹಣವನ್ನು ಬೆಂಗಳೂರು ನಗರದಲ್ಲಿ ಇರುವ ಗೃಹ ನಿರ್ಮಾಣ ಸಹಕಾರ ಸಂಘಗಳು, ಅಡ್ವಾನ್ಸ್ ಹಣವಾಗಿ ಕೊಟ್ಟಿದ್ದಾರೆ. ಆ ಹಣವನ್ನು ಯಾರ್ಯಾರಿಗೆ ಕೊಟ್ಟಿದ್ದಾರೆ. ಒಂದು ಸೊಸೈಟಿಯವರು ೧೪ ಕೋಟಿ ರೂಪಾಯಿಗಳನ್ನು ಇನ್ನೊಂದು ಸೊಸೈಟಿ ಯವರು ಒಂದೂವರೆ ಕೋಟಿ ರೂಪಾಯಿಗಳಷ್ಟು ಹಣ ಕೊಟ್ಟಿದ್ದಾರೆ. ಹೀಗೆ ಕೋಟ್ಯಾಂತರ ರೂಪಾಯಿಗಳ ಹಣವನ್ನು ಕಾನೂನಿಗೆ ವಿರುದ್ಧವಾಗಿ ಅವತ್ತು ಕೊಟ್ಟಿದ್ದಾರೆಂದು ತಾವುಗಳು ಹೇಳುತ್ತಿದ್ದುದ್ದು ಉಂಟು. ಇದರಲ್ಲಿ ಯಾರ್ಯಾರಿಗೆ ಎಷ್ಟೆಷ್ಟು ಸೇರಿದೆ ಎಂದು ನನಗಂತೂ ಏನೂ ಗೊತ್ತಿಲ್ಲ. ಇದರ ಬಗ್ಗೆ ತಾವು ವಿಚಾರಣೆ ಮಾಡಿ ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಬಹಳ ಗಂಭೀರವಾದ ಆರೋಪಗಳನ್ನು ಮಾಡಿದಂತಹ ಜನರು ಏನಿದ್ದೀರಿ, ಇವತ್ತಿನ

ದಿವಸ ಆ ಆರೋಪಗಳ ವಿಚಾರಣೆ ಮಾಡುವುದಕ್ಕೆ ಮತ್ತು ಸಂಬಂಧಪಟ್ಟವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ. ಈ ಒಂದು ಸಹಕಾರ ಸಂಘಗಳು ತಪ್ಪು ಮಾಡಿದೆಯೆಂದು ನಾವು ಹೇಳಿದ್ದೇವೆ ಸುಮಾರು ೮೩ ಸಹಕಾರ ಸಂಘಗಳಗಲ್ಲಿ ಅಕ್ರಮ ಮಾಡಿದ್ದಾರೆ ಎಂದು ಆ ವರದಿಯಲ್ಲಿಯೂ ಸಹ ಬಂದಿದೆ. ಸಂಬಂಧಪಟ್ಟ ಗೃಹನಿರ್ಮಾಣ ಸಹಕಾರ ಸಂಘಗಳ ಮೇಲೆ ತಾವು ಏತಕ್ಕೆ ಕ್ರಮ ಕೈಗೊಳ್ಳಬಾರದು? ಅದರಲ್ಲಿ ಇನ್ನೂ ೫೦-೬೦ ಗೃಹನಿರ್ಮಾಣ ಸಹಕಾರ ಸಂಘಗಳು ಏನು ತಪ್ಪನ್ನು ಮಾಡಿಲ್ಲ. ನಾನು ಈ ಬಗ್ಗೆ ಹೆಚ್ಚು ಏನನ್ನು ಹೇಳುವುದಕ್ಕೆ ಹೋಗುವುದಿಲ್ಲ. ಎಲ್ಲಾ ಹೇಳುತ್ತಾ ಹೋದರೆ ಗಂಟೆ ಗಟ್ಟಲೆ ಸಮಯ ಆಗುತ್ತದೆ. ಆದರೆ ನಾನು ಹೇಳುವುದು ಇಷ್ಟೇ. ಅಕ್ರಮವಾಗಿ ಕೋಟ್ಯಾಂತರ ರೂಪಾಯಿಗಳ ಹಣವನ್ನು ತಮಗೆ ಬೇಕಾದವರಿಗೆ, ತಮಗೆ ಬೇಕಾದ ರೀತಿಯಲ್ಲಿ ಹಣ ಕೊಟ್ಟು ಇದರಲ್ಲಿ ವಂಚನೆ ನಡೆದಿದೆ ಮೋಸ ನಡೆದಿದೆ ಎನ್ನುವ ಮಾತನ್ನು ತಾವು ಹೇಳಿದ್ದೀರಿ ಆದರೆ ಆಧಾರದ ಮೇಲೆ ವರದಿಯಲ್ಲಿ ಸಹ ಬಂದಿದೆ. ಅದರ ಮೇಲೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ತಾವು ಹೇಳ ಬಹುದು ನೀವು ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ ಎಂದು.

(ಶ್ರೀ ಎಸ್ ಎಚ್ ಕೌಜಲಗಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅದಕ್ಕೆ ನಾನು ಹೇಳುತ್ತೇನೆ. ನಾನು ಎಲ್ಲಿಯವರೆಗೆ ಸಹಕಾರ ಮಂತ್ರಿಯಾಗಿ ಇದ್ದೆ, ಮತ್ತು ನಮ್ಮ ಸರ್ಕಾರ ಅಧಿಕಾರದಲ್ಲಿ ಇತ್ತೋ ಅಲ್ಲಿಯವರೆಗೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದು ಕೊಳ್ಳ ಬೇಕೆನ್ನುವ ನಿಲುವು ನಮ್ಮದು ಆಗಿತ್ತು. ಅದಕ್ಕಿಂತ ಬೇರೆ ನಿಲುವು ಕಡತದಲ್ಲಿದ್ದ ಅದನ್ನು ತೋರಿಸಿ ನೋಡೋಣ. ಆ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇವೆ. ಆದರೆ ಇವತ್ತಿನ ದಿವಸ ಗೃಹ ನಿರ್ಮಾಣ ಸಹಕಾರ ಸಂಘಗಳು ಏನು ಇವೆ ಇವರ ಒಂದು ದೊಡ್ಡ ಲಾಬಿ ಇದೆ. ಇದು ನಮಗೂ ನಿಮಗೂ ಎಲ್ಲರಿಗೂ ಗೊತ್ತಿದೆ. ಈ ದೇಶದಲ್ಲಿ ಯಾವುದೇ ಸರ್ಕಾರ ಜನತಂತ್ರ ವ್ಯವಸ್ಥೆ ಮೇಲೆ ಚುನಾವಣೆಯಲ್ಲಿ ಗೆದ್ದು ಬಂದರೂ ಸಹ ಅನೇಕ ಸಂದರ್ಭಗಳಲ್ಲಿ ಅನೇಕ ಕಾರಣಗಳಿಗೋಸ್ಕರ ಯಾವುದೇಪಕ್ಷದ ಸರ್ಕಾರ ಇದ್ದರೂ ಸಹ ಅನೇಕ ಲಾಬಿಗಳ ವಶದಲ್ಲಿ ಅನೇಕ ಲಾಬಿಗಳ ಪ್ರಭಾವದಲ್ಲಿ ಇರುವುದನ್ನು ನಾವು ನೋಡಿದ್ದೇವೆ. ನಾನು ಹೆಸರುಗಳನ್ನು ಹೇಳುವಂತಹ ಅವಶ್ಯಕತೆ ಇಲ್ಲ. ಆದರೆ ಈ ಲಾಬಿಗಳು ಸಹ ತನ್ನದೆ ಆದ ಒಂದು ಪ್ರಭಾವವನ್ನು ಹೊಂದಿರುತ್ತವೆ. ಇದಕ್ಕೆ ಕಾರಣವೇನು? ಇವತ್ತಿನ ದಿವಸ ಹೊಸ ಸರ್ಕಾರ ಬಂದಿದೆ. ತಾವು ಈ ಕಡೆ ಇದ್ದಾಗ ಗಂಭೀರವಾದ ಆರೋಪಗಳನ್ನು ನಮ್ಮ ಮೇಲೆ ಮಾಡಿದ್ದೀರಿ. ಆ ಆರೋಪಗಳ ಬಗ್ಗೆ ವಿಚಾರಣೆ ಮಾಡದೆ ಇರುವುದಕ್ಕೆ ಕಾರಣವೇನು?ಸಂಬಂಧಪಟ್ಟವರ ಮೇಲೆ ಕಾರ್ಯಕ್ರಮ ತೆಗೆದು ಕೊಳ್ಳದೆ ಸುಮ್ಮನೆ ಇರಲು ಕಾರಣವೇನು? ನಾನು ಇದಕ್ಕೆ ಏನು ಹೇಳಬೇಕು? ನಾನು ಏನನ್ನೂ ಹೇಳುವುದಿಲ್ಲ.

ಶ್ರೀ ಕೆ. ಎಚ್. ಪಾಟೀಲ್:—ಮಾನ್ಯ ಸದಸ್ಯರಾದ ಏಕಾಂತಯ್ಯನವರು ಸಹಕಾರಿಗಳು ಹೌದು, ಸಹಕಾರ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಅವರ ಆಡಳಿತದಲ್ಲಿ ೯೨ಕ್ಕೂ ಹೆಚ್ಚು ಗೃಹನಿರ್ಮಾಣ ಸಹಕಾರ ಸಂಘಗಳು ಆರೋಪಕ್ಕೆ ಒಳಗಾಗಿದ್ದವು ಎಂದು ಕಾಣುತ್ತದೆ. ಅವರಲ್ಲಿ ಬಹು ಭಾಗ ಗೃಹ ನಿರ್ಮಾಣ ಸಹಕಾರ ಸಂಘಗಳು ತಪ್ಪು ಮಾರ್ಗವನ್ನು ಅನುಸರಣೆ ಮಾಡಿದ್ದವು. ಆದ್ದರಿಂದ ಅವರ ಅನುಭವದಿಂದ ಈಗಿನ ಸರ್ಕಾರಕ್ಕೆ ಯಾವ ರೀತಿಯಲ್ಲಿ ಕಾರ್ಯಕ್ರಮಗಳನ್ನು ಕೈಗೊಂಡರೆ ಸೂಕ್ತ ಎನ್ನುವುದನ್ನು ತಿಳಿಸಿಕೊಟ್ಟರೆ ಹೆಚ್ಚು ರಚನಾತ್ಮಕ ಸಲಹೆ ಆಗುತ್ತದೆ. ಆ ಬಗ್ಗೆ ನಾನು ಕಾದು ನಿರೀಕ್ಷೆ ಮಾಡುತ್ತೇನೆ.

ಶ್ರೀ ಎಚ್. ಏಕಾಂತಯ್ಯ:—ಮಾನ್ಯ ಅಧ್ಯಕ್ಷರೇ, ಮಾನ್ಯ ಮೊಯಿಲಿಯವರು ಬಂದ ಮೇಲೆ ನಾನು ಹೇಳಲೇಬೇಕಾಗುತ್ತದೆ. ಏತಕ್ಕೆಂದರೆ ಅವರು ಇಲ್ಲಿ ಇದ್ದಾಗ ಮಾತನಾಡಿ ಸಿ ಬಿ ಐ ತನಿಖೆ ಆಗ ಬೇಕೆಂದು ಹೇಳಿದ್ದರು. ನಾನು ತಮಗೆ ಒಂದು ಮಾತು ಹೇಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳಾದ ಕೆ. ಎಚ್. ಪಾಟೀಲ್‌ರವರ ಗಮನಕ್ಕೆ ಒಂದು ವಿಷಯವನ್ನು ತರಲು ಇಷ್ಟಪಡುತ್ತೇನೆ. ಮಧ್ಯಂತರ ವರದಿ ಬಂದ ಮೇಲೆ ನಾನು ಸಹಕಾರ ಮಂತ್ರಿಗಳಾಗಿದ್ದಂತಹ ಕಾಲದಲ್ಲಿ ಯಾವ ಯಾವ ಸಹಕಾರ ಸಂಘಗಳ ವಿರುದ್ಧ ಆರೋಪ ಇರುವಂತಹ ಕಾರಣಗಳಿಗೋಸ್ಕರ, ಯಾವ ಸಹಕಾರ ಸಂಘಗಳ ಮೇಲೆ ಇಂತಹ ಕಾರಣಗಳು ಇವೆ ಎಂದು ತೋರಿಸಿದಂತಹ ಲೋಪದೋಷಗಳನ್ನು ತೆಗೆದು ಹಾಕ ಬೇಕೆಂದು, ಆ ಲೋಪದೋಷಗಳನ್ನು ನಿವಾರಣೆ ಮಾಡಬೇಕೆಂದು ಆ ಬಗ್ಗೆ ಯಾವ ಕ್ರಮ ತೆಗೆದು ಕೊಳ್ಳಬೇಕೆಂದು ಕಡತದಲ್ಲಿ ಇದೆ, ಅದನ್ನು ತಾವು ಸ್ವಲ್ಪ ತೆಗೆದು ನೋಡಿ. ಅಷ್ಟೇ ಅಲ್ಲ, ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತೇನೆ. ನಾನು ಆ ಮಾತು ಹೇಳಿ ಎರಡು ವರ್ಷ

ಆಯಿತು. ಇವತ್ತಿನ ದಿವಸ ಆ ಕಡತದಲ್ಲಿರುವ ಸೂಚನೆ ಮೂಲಕ ತಾವು ಏನು ಕ್ರಮ ತೆಗೆದು ಕೊಂಡಿದ್ದೀರಿ ಎನ್ನುವುದನ್ನು ನಾನು ಮೊದಲು ಕೇಳುವುದಕ್ಕೆ ಇಷ್ಟಪಡುತ್ತೇನೆ ಈ ಕಾಯಿಲೆಗೆ ಔಷಧಿ ಇಲ್ಲ ಎಂದು ನಾನು ಹೇಳುತ್ತಿಲ್ಲ. ಔಷಧಿ ಇದೆ ಅವರೆ ನಮ್ಮಲ್ಲಿದೆ ಅದ ಕೆಲವು ಕಾರಣಗಳಿಂದ ನಮ್ಮಲ್ಲಿದೆ ಅವ ಕೆಲವು ನೀತಿಗಳಿಂದ ಈ ಪಟ್ಟಭದ್ರಹಿತಾ ಸಕ್ತಿಗಳ ಶಕ್ತಿ ಏನು ಇದೆ ಅದನ್ನು ಎದುರಿಸುವುದಕ್ಕಾಗದೆ ರಾಜಕೀಯ ಕಾರಣಗಳಿಂದಾಗಿ ನಾವು ನೀವು ಇವತ್ತಿನ ದಿವಸ ಏನೂ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಆದ್ದರಿಂದ ನಾನು ಹೊಸದಾಗಿ ಈ ಬಗ್ಗೆ ಸೂಚನೆ ಕೊಡಬೇಕಾಗಿಲ್ಲವೆಂದು ತಿಳಿದುಕೊಂಡಿದ್ದೇನೆ. ಈ ಮನೆಯ ಹಿರಿಯ ಸದಸ್ಯರಾಗಿರುವಂಥ ಕೆ. ಎಚ್. ಪಾಟೀಲರಿಗೆ ಸಹಕಾರ ಸಂಘಗಳ ಪೂರ್ಣ ವಿಚಾರ ಗೊತ್ತಿದೆ. ಅವರು ಸಹಕಾರ ಕ್ಷೇತ್ರದಲ್ಲಿ ಅಪಾರ ಅನುಭವವುಳ್ಳವರು ಆಗಿದ್ದಾರೆ. ಅವರಿಗೆ ನಾನು ಏನನ್ನೂ ಹೇಳಿಕೊಡಬೇಕಾಗಿಲ್ಲ. ಇವತ್ತಿನ ದಿವಸ ಸಹಕಾರ ಸಂಘಗಳ ಮೂಲಕ ಕೋಟ್ಯಾಂತರ ರೂಪಾಯಿಗಳು ನಷ್ಟವಾಗಿದೆ ಎಂಬುದು ತಮಗೂ ಗೊತ್ತಿದೆ. ಈ ರೀತಿ ನಷ್ಟ ಅನುಭವಿಸುತ್ತಿರುವ ಸಹಕಾರ ಸಂಘಗಳನ್ನು ಸೂಪರ್‌ಸೀಡ್ ಮಾಡುತ್ತೇವೆಂದು ನಮ್ಮ ಸರ್ಕಾರ ಇದ್ದಾಗ ನಾವು ಹೇಳಿದ್ದಕ್ಕೆ ನೀವುಗಳು ಯಾವುವೇ ಕಾರಣಕ್ಕೂ ಸೂಪರ್‌ಸೀಡ್ ಮಾಡಬಾರದೆಂದು ಹೇಳುತ್ತಿದ್ದೀರಿ ಆದರೆ ತಾವೇ ಈಗ ಅಧಿಕಾರಕ್ಕೆ ಬಂದ ಮೇಲೆ ಏನು ಮಾಡಿದ್ದೀರಿ. ಸಹಕಾರ ಸಂಘಗಳಲ್ಲಿ ಆಗಿರುವ ಮತ್ತು ಆಗುತ್ತಿರುವ ನಷ್ಟಗಳ ಬಗ್ಗೆ ಏನಾದರೂ ಕ್ರಮಗಳನ್ನು ತೆಗೆದು ಕೊಂಡಿದ್ದೀರಾ ? ಎಷ್ಟು ಸಹಕಾರ ಸಂಘಗಳಿಗೆ ತಾವು ನೋಟೀಸ್ ಕೊಟ್ಟು ಇಂತಹ ಸಹಕಾರ ಸಂಘಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದೀರಿ ? ಈ ಕಡೆ ಇದ್ದಾಗ ನೀವು ಮಾಡುತ್ತಿದ್ದ ಆರೋಪಗಳನ್ನೇ ನಾನು ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಇವತ್ತಿನ ದಿವಸ ತಪ್ಪು ಮಾಡುತ್ತಿರುವ ಸಹಕಾರ ಸಂಘಗಳ ವಿರುದ್ಧ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನೀವು ನಿಸ್ಸಹಾಯಕರಾಗಿದ್ದೀರಿ. ನಾನು ಸಹಕಾರ ಮಂತ್ರಿಯಾಗಿದ್ದಾಗ ನಷ್ಟವನ್ನು ಮಾಡುತ್ತಿರುವ ಸಹಕಾರ ಸಂಘಗಳ ವಿರುದ್ಧ ಯಾವ ರೀತಿಯಾದ ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬುದರ ಬಗ್ಗೆ ನಾನು ಕಡತದಲ್ಲಿ ಬರೆದಿದ್ದೆ ತಾವು ಆ ಕಡತವನ್ನು ಬೇಕಾದರೆ ತೆಗೆದು ನೋಡಬಹುದು. ಆಗ ಸಹಕಾರ ಸಂಘಗಳು ಹೆಚ್ಚು ಕಡಿಮೆ ಒಂದೇ ದಾರಿಯಲ್ಲಿವೆ. ಇದು ಗುಂಡೂರಾಯರ ಕಾಲದಲ್ಲಿ ಆಗಿತ್ತೇ ಹೆಗಡೆಯವರ ಕಾಲದಲ್ಲಿ ಆಗಿತ್ತೇ ? ಆಗ ಸಹಕಾರ ಸಂಘಗಳದ್ದು ಇತ್ತೀಚೆಗೆ ಆಗಿರಬಹುದು. ಈ ಮೊದಲೂ ಸಹ ಈ ರೀತಿ ಆಗಿತ್ತು. ಇದಕ್ಕೆ ಯಾರು ಕಾರಣರೆಂದು ಹೇಳುವುದಕ್ಕೆ ಹೋದರೆ ಏನೂ ಉಪಯೋಗವಿಲ್ಲ. ಇವತ್ತಿನ ದಿವಸ ಸಹಕಾರ ಸಂಘಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅದರಲ್ಲೂ ಹೌಸಿಂಗ್ ಸಹಕಾರ ಸಂಘಗಳವರು ಜನರನ್ನು ಶೋಷಣೆ ಮಾಡುತ್ತಿದ್ದಾರೆ. ಮಧ್ಯವರ್ತಿಗಳು ಬಹಳಷ್ಟು ಲಾಭವನ್ನು ಮಾಡುತ್ತಿದ್ದಾರೆ. ಇದರ ಬಗ್ಗೆ ವಿವರವಾದ ವರದಿ ಬಂದಿದ್ದರೂ ಸಹಾ ಇದುವರೆಗೆ ಯಾವ ಸಹಕಾರ ಸಂಘಗಳ ಮೇಲೂ ಕ್ರಮಗಳನ್ನು ತೆಗೆದುಕೊಂಡ ಉದಾಹರಣೆಗಳು ಇಲ್ಲ, ಗೃಹ ನಿರ್ಮಾಣ ಸಹಕಾರ ಸಂಘಗಳವರಿಂದ ಸಾವಿರಾರು ಜನರು ಶೋಷಣೆಗೆ ಒಳಗಾಗಿದ್ದಾರೆ. ಸರ್ಕಾರದವರೇ ಒಂದು ನೀತಿಯನ್ನು ರೂಪಿಸಿ ಕಡಿಮೆ ಬೆಲೆಯಲ್ಲಿ ಜನರುಗಳಿಗೆ ನಿವೇಶನ ಕೊಡುವ ವ್ಯವಸ್ಥೆಯನ್ನು ಮಾಡಬೇಕು ಇವತ್ತಿನ ದಿವಸ ಗೃಹ ನಿರ್ಮಾಣ ಸಹಕಾರ ಸಂಘಗಳವರು ರಚನೆ ಮಾಡಿಕೊಂಡಿರುವವರು ಲಕ್ಷಾಂತರ ರೂಪಾಯಿಗಳನ್ನು ಮಾಡಿಕೊಂಡಿದ್ದಾರೆ. ಇದುವರೆಗೆ ಯಾವುದಾದರು ಒಂದು ಗೃಹ ನಿರ್ಮಾಣ ಸಹಕಾರ ಸಂಘದವರ ಮೇಲೆ ಕ್ರಮವನ್ನು ತೆಗೆದುಕೊಂಡಿದ್ದನ್ನು ನಾವು ನೋಡಿಲ್ಲ, ಅಕ್ರಮಗಳನ್ನು ನಡೆಸುವ ಸಹಕಾರ ಸಂಘಗಳ ವಿರುದ್ಧ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ ಸರ್ಕಾರ ಆಲೋಚನೆ ಮಾಡಬೇಕು. ಶಿಸ್ತಿನ ಕ್ರಮಗಳನ್ನು ತೀವ್ರವಾಗಿ ತೆಗೆದುಕೊಂಡಾಗ ಮಾತ್ರ ಸಹಕಾರ ಸಂಘಗಳಲ್ಲಿ ನಡೆಯುವ ಅಕ್ರಮಗಳನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆ. ನಾನು ಸಹಕಾರ ಮಂತ್ರಿಯಾಗಿದ್ದಾಗ ಒಂದು ಆದೇಶವನ್ನು ಹೊರಡಿಸಿದ್ದೆ. ಯಾವುದಾದರೂ ಸಹಕಾರ ಸಂಘಗಳಲ್ಲಿ ನಷ್ಟವಾಗಿದ್ದರೆ, ಆ ನಷ್ಟಕ್ಕೆ ಯಾರು ಕಾರಣರಾಗಿರುತ್ತಾರೋ ಅಂದರೆ ಅವರು ಅಧಿಕಾರಿಗಳಾಗಿರಲಿ ಅಥವಾ ಅಧಿಕಾರೇತರರಾಗಲಿ, ಅವರುಗಳಿಂದ ಆ ನಷ್ಟದ ಹಣವನ್ನು ವಸೂಲಿ ಮಾಡಬೇಕೆಂದು ಹೇಳಿದ್ದೆ. ಆ ಆದೇಶ ಜಾರಿಗೆ ಬರುವುದರೊಳಗೆ ನಮ್ಮ ಸರ್ಕಾರ ಹೋಯಿತು. ಇದುವರೆಗೂ ಆ ಬಗ್ಗೆ ನಿಮ್ಮ ಸರ್ಕಾರದವರು ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಯಾವುದಾದರು ಸಹಕಾರಿ ಸಂಘಗಳಲ್ಲಿ ನಷ್ಟ ಆಗಿದ್ದರೆ, ಆ ನಷ್ಟಕ್ಕೆ ಯಾರು ಕಾರಣ ರಾಗಿರುತ್ತಾರೋ, ಅಧಿಕಾರಿಗಳಾಗಿರಲಿ, ಅಧಿಕಾರೇತರರಾಗಿರಲಿ ಅವರಿಂದ ಆ ನಷ್ಟದ ಹಣವನ್ನು ವಸೂಲಿ ಮಾಡಬೇಕು. ಆ ರೀತಿ ವಸೂಲಿ ಮಾಡಿದರೆ ಇನ್ನು ಮುಂದೆ ಆಗುವ ನಷ್ಟವನ್ನು ತಪ್ಪಿಸುವುದಕ್ಕೆ ಅನುಕೂಲವಾಗುತ್ತದೆ. ಅಧಿಕಾರಿಗಳು ಕರ್ತವ್ಯ ಲೋಪ ಮಾಡಿದ್ದರೆ ಅವರ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಬೇಕು. ಅಧಿಕಾರೇತರರು ಕರ್ತವ್ಯ ಲೋಪ ಮಾಡಿದ್ದರೂ ಅವರ ಮೇಲೂ ಸಹ ಕ್ರಮವನ್ನು ತೆಗೆದುಕೊಳ್ಳಬೇಕು.

ಕ್ರಿಮಿನಲ್ ಅಪರಾಧವನ್ನು ಮಾಡಿದ್ದರೆ ಕ್ರಿಮಿನಲ್ ಮೊಕದ್ದಮೆಗಳನ್ನು ಅವರ ಮೇಲೆ ಹಾಕಬೇಕು, ಆ ರೀತಿ ಮಾಡಿದರೆ ಸಹಕಾರ ಸಂಘಗಳಲ್ಲಿ ನಷ್ಟವನ್ನು ಬಹಳ ಮಟ್ಟಿಗೆ ತಪ್ಪಿಸಬಹುದು, ಇದರ ಬಗ್ಗೆ ನಾನೇ ಮಂತ್ರಿಯಾಗಿದ್ದಾಗ ಕ್ರಮ ತೆಗೆದುಕೊಳ್ಳಬೇಕೆಂದಿದ್ದೆ. ಅಷ್ಟರಲ್ಲಿ ನಮ್ಮ ಸರ್ಕಾರ ಹೋಯಿತು. ನಮ್ಮ ಸರ್ಕಾರ ಹೋದ ಮೇಲೆ ನಿಮ್ಮ ಸರ್ಕಾರ ಬಂದಿದೆ. ನಿಮ್ಮ ಸರ್ಕಾರ ಬಂದ ಮೇಲೆ ಎಷ್ಟು ಸಹಕಾರ ಸಂಘಗಳಲ್ಲಿ ದುರ್ವ್ಯವಹಾರ ಮಾಡಿರುವ ಅಧಿಕಾರಿಗಳ ಮೇಲೆ ಮತ್ತು ಅಧಿಕಾರೇತರರ ಮೇಲೆ ಕ್ರಮವನ್ನು ತೆಗೆದುಕೊಂಡಿದ್ದೀರೆಂದು ಸ್ವಲ್ಪ ಸಂಖ್ಯೆಯನ್ನು ಹೇಳಿ ನೋಡೋಣ. ನಾನು ಈ ಮಾತನ್ನು ಯಾವ ದುರುದ್ದೇಶದಿಂದಲೂ ಹೇಳುತ್ತಾ ಇಲ್ಲ. ನಾವು ಕೇವಲ ಒಳ್ಳೆಯ ಮಾತುಗಳನ್ನು ಆಡುವ ಮುಖಾಂತರ ಈ ಭ್ರಷ್ಟವ್ಯವಸ್ಥೆಯಿಂದಾಗಿ ಸಮಾಜದಲ್ಲಿ ಯಾರು ಶೋಷಣೆಗೆ ಒಳಗಾಗಿದ್ದಾರೆ, ಅವರಿಗೆ ಸಹಾಯ ಮಾಡುವಂಥ ನೀತಿಯನ್ನು ನಾವು ಅನುಸರಿಸುತ್ತೇವೆ ಎಂದರೆ ಸಾಧ್ಯವಿಲ್ಲ. ನಾವು ಯಾವ ನೀತಿಯನ್ನು ಅನುಸರಿಸುತ್ತೇವೆ ಎಂದು ಹೇಳುತ್ತೇವೆ ಅದನ್ನು ಜಾರಿ ಮಾಡಬೇಕಾದರೆ ಅಲ್ಲಿ ರಾಜಕೀಯ ಹಸ್ತಕ್ಷೇಪ ಇಲ್ಲದ ಹಾಗೆ ನೋಡಿಕೊಳ್ಳಬೇಕಾಗುತ್ತದೆ. ಈ ಬಗ್ಗೆ ಒಂದು ಉದಾಹರಣೆಯನ್ನು ತಮಗೆ ಕೊಡಬಯಸುತ್ತೇನೆ. ನಮ್ಮ ಊರಿನಲ್ಲಿ ಒಂದು ಸಕ್ಕರೆ ಕಾರ್ಖಾನೆ ಇದೆ. ಆ ಬಗ್ಗೆ ನಾನು ಹೋದ ಅಧಿವೇಶನದಲ್ಲಿ ಹೇಳಿದ್ದರೂ ಕೂಡ ಸರಕಾರದವರು ಏಕೋ ಅಷ್ಟು ಗಮನವನ್ನು ಕೊಡಲಿಲ್ಲ. ಅಲ್ಲಿ ಒಂದು ಡಿಸ್ಟಲರಿ ಇದೆ. ಅದನ್ನು ಒಂದು ಖಾಸಗಿ ಕಂಪನಿಯವರಿಗೆ ೧೦ ವರ್ಷಗಳ ಅವಧಿಗೆ ಗುತ್ತಿಗೆ ಕೊಟ್ಟಿದ್ದಾರೆ. ೧೨–೨–೮೧ರಲ್ಲಿ ಸರಕಾರದ ಒಪ್ಪಿಗೆಯ ಮೇಲೆ ೧೦ ವರ್ಷಗಳ ಅವಧಿಗೆ ಆ ಕಂಪನಿಗೆ ಗುತ್ತಿಗೆ ಕೊಟ್ಟರು. ಅದರ ಹೆಸರು ಬಿಟಿ ಎಂಡ್ ಎಂ. ಸಿ. ಪ್ರೈವೇಟ್ ಲಿಮಿಟೆಡ್ ಎಂದು. ಗುತ್ತಿಗೆಯ ಪ್ರಕಾರ ಮುಂದಿನ ಹತ್ತು ವರ್ಷದ ನಂತರ ಮುಂದುವರಿಸುವುದಾದರೆ, ಇಬ್ಬರ ಸಮ್ಮತಿಯ ಮೇರೆಗೆ ಮುಂದುವರಿಸಬಹುದು ಎಂಬ ಕರಾರು ಇತ್ತು. ಆದರೆ ಇನ್ನೂ ಹತ್ತು ವರ್ಷಗಳು ಆಗಿಲ್ಲ, ಆದರೂ ಅವರು ಮೊದಲೇ ಗುತ್ತಿಗೆ ಕೊಡಲಿಕ್ಕೆ ಪ್ರಾರಂಭ ಮಾಡಿದರು. ೨೩–೩–೮೮ರಲ್ಲಿ ಇನ್ನೂ ಮೂರು ವರ್ಷಗಳ ಅವಧಿ ಇದ್ದರೂ ಕೂಡ ಆ ಕಾಲದಲ್ಲಿ ನಾವು ಅಧಿಕಾರದಲ್ಲಿದ್ದುದರಿಂದ ನಾವು ಕೊಟ್ಟು ಬಿಡುತ್ತೇವೆ ಎಂಬ ಒಂದು ನಂಬಿಕೆಯಿಂದ ಆಗಿದ್ದಂಥ ಕಾರ್ಖಾನೆಯ ಆಡಳಿತ ಮಂಡಳಿಯವರು ಪ್ರಯತ್ನಶೀಲರಾದರು. ಆದರೆ ದುರಾದೃಷ್ಟವಶಾತ್ ಆ ಕಾರ್ಖಾನೆಯು ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವುದರಿಂದ ಅಲ್ಲಿಯ ಜನರು ಬಂದು ನನ್ನಲ್ಲಿ ವಿಷಯ ಕೇಳಿಕೊಂಡರು. ನಾನೇನು ಸಕ್ಕರೆ ಕಾರ್ಖಾನೆ ಮಂತ್ರಿಯಾಗಿರಲಿಲ್ಲ. ಆದರೂ ಕೂಡ ಜನರು ನನ್ನನ್ನು ಕಂಡು ಖಡಾಖಂಡಿತವಾಗಿ ಕೇಳಿದರು. ಇದಕ್ಕೆ ಅವಕಾಶ ಕೊಡಬಾರದು ಎಂದು ಅವರ ಇಚ್ಛೆಯಾಗಿತ್ತು. ನಾನು ಆ ಸಂದರ್ಭದಲ್ಲಿ ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದೆ. ಆಗ ಸರ್ಕಾರದವರು ಕರಾರನ್ನು ಮುಂದುವರಿಸಬಾರದು ರದ್ದುಗೊಳಿಸಬೇಕೆಂದು ಹೇಳಿತು. ಆದರೆ ಯಾವುದೇ ಸರಕಾರ ಇರಬಹುದು, ರಾಮಕೃಷ್ಣ ಹೆಗಡೆಯವರ ಸರಕಾರವೇ ಇರಲಿ, ಬೊಮ್ಮಾಯಿಯವರ ಸರಕಾರವೇ ಇರಲಿ, ಈಗಿನ ವೀರೇಂದ್ರಪಾಟೀಲರ ಸರಕಾರವೇ ಇರಲಿ. ಈ ಮೂರು ಸರಕಾರಗಳು ಎಚ್ಚರಿಕೆ ನೀಡಿದ್ದರೂ ಸಹ, ಆ ಕರಾರನ್ನು ಮುಂದುವರಿಸಬಾರದು ಎಂದು ಧೋರಣೆಯನ್ನು ತಾಳಿದ್ದರೂ ಸಹ, ಇದನ್ನು ರದ್ದುಮಾಡಬೇಕೆಂಬ ಮನಸ್ಸು ಇದ್ದರೂ ಸಹ ನಮ್ಮ ಆಡಳಿತ ವ್ಯವಸ್ಥೆಯಲ್ಲಿ ನಮ್ಮ ಅಧಿಕಾರಿಗಳು ಹೇಗೆ ವರ್ತಿಸುತ್ತಾರೆ ಎಂಬುದಕ್ಕೆ ಇದಕ್ಕಿಂತ ಬೇರೆ ಉದಾಹರಣೆಗಳನ್ನು ಕೊಡಬೇಕಾಗಿಲ್ಲ. ಒಂದು ವೇಳೆ ಅಲ್ಲಿಯ ಎ. ಡಿ. ಯನ್ನು ಕರೆದು ಮಾಡಬೇಡಿ ಎಂದು ಹೇಳಿದರೂ ಕೂಡ ಅವನು ಹೋಗಿ ಕರಾರಿಗೆ ಸಹಿ ಮಾಡುತ್ತಾನೆ. ನಿಮ್ಮಲ್ಲಿರುವ ಸಬ್‌ರಿಜಿಸ್ಟ್ರಾರ್‌ಗೆ ನೀವು ಏನಾದರೂ ನಿರ್ದೇಶನ ನೀಡಿದರೂ ಕೂಡ, ಅವನು ತಾನು ಏನು ಮಾಡಬೇಕಾಗಿದೆಯೋ ಅದನ್ನೇ ಮಾಡುತ್ತಾನೆ. ಆದಾಯ ತೆರಿಗೆ ಸರ್ಟಿಫಿಕೇಟ್ ಕೊಡಬೇಡಿ ಎಂದು ನೀವು ಹೇಳಿದರೂ ಸಹ ಕಳ್ಳತನದಲ್ಲಿ ಕೊಟ್ಟು ಕಳಿಸುತ್ತಾರೆ. ಇನ್ನೇನಾದರೂ ನಿಮಗೆ ಬೇಕೆ ? ಆಡಳಿತ ಮಂಡಳಿಯವರು [illegible]ಗಳಲ್ಲಿ ಮುಂದುವರಿಸಬೇಕಾದ ಕರಾರನ್ನು ತಮಗೆ ಇಷ್ಟ ಬಂದಂತೆ ನಡೆದುಕೊಂಡು ತಮಗೆ ಬೇಕಾದಂಥ ಮೊಬಲಗಿಗೆ ಕಂಪನಿಗೆ ಕರಾರು ಮಾಡಿಕೊಡುವುದಾದಲ್ಲಿ ಈ ದೇಶದಲ್ಲಿ ಜನತಂತ್ರ ವ್ಯವಸ್ಥೆಯಲ್ಲಿ ಜನರು ಯಾವ ರೀತಿ ವಿಶ್ವಾಸವಿಡಲು ಸಾಧ್ಯವಾಗುತ್ತದೆ? ಇಂಥ ಪ್ರಕರಣಗಳನ್ನು ತಮ್ಮ ಗಮನಕ್ಕೆ ತಂದಾಗ, ಅದು ಯಾವುದೇ ಸರಕಾರ ಇರಬಹುದು, ಯಾವುದೇ ಸೂಕ್ತ ಕ್ರಮಗಳನ್ನು ಸಕಾಲದಲ್ಲಿ ತೆಗೆದುಕೊಳ್ಳದಿದ್ದರೆ, ಜನ ಪರವಾದ ಸರಕಾರ ಎಂದು ಹೆಸರು ಗಳಿಸಿಕೊಳ್ಳಲು ಸಾಧ್ಯವಿದೆಯೋ ? ಇದು ಯಾರ ಗಮನಕ್ಕೂ ಬಂದಿಲ್ಲವಾದ ವಿಚಾರವೆಂದೇನೂ ಅಲ್ಲ. ೧೯೮೮ರ ಜನವರಿ ೨೧ನೇ ತಾರೀಖು ನಾನು ಈ ವಿಷಯವನ್ನು ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದೆ. ಆಗ ಅವರು ಮುಖ್ಯ ಕಾರ್ಯದರ್ಶಿಯವರನ್ನು ಕರೆದು ಈ ವಿಚಾರದ ಬಗ್ಗೆ ಹೇಳಿದರು. ಅದಕ್ಕೆ ಅವರು ಒಂದು ಸಭೆಯನ್ನು ಕರೆದರು. ಆ ಸಭೆಗೆ ಎಲ್ಲರೂ ಬಂದಿದ್ದರು. ನಾನೂ ಇದ್ದೆ. ಚೀಫ್ ಸೆಕ್ರೆಟರಿಯೂ ಇದ್ದರು. ಮುಖ್ಯ ಮಂತ್ರಿಗಳ ಕಾರ್ಯದರ್ಶಿ ಅವರು ಇದ್ದರು,

ಸಹಕಾರ ಇಲಾಖೆಯ ಕಾರ್ಯದರ್ಶಿ ಮತ್ತು ಜಾಯಿಂಟ್ ರಿಜಿಸ್ಟ್ರಾರ್‌ರವರು ಇದ್ದರು, ಡೈರೆಕ್ಟರ್ ಆಫ್ ಶುಗರ್ಸ್ ಇದ್ದರು.

೩-೦೫ ಪಿ.ಎಂ.

ಇವರೆಲ್ಲರ ಎದುರಿಗೇ ಮಾತುಕತೆ ಆಯಿತು. ಟೆಂಡರ್ ಕರೆಯದೆಯೇ ೮ ಲಕ್ಷ ರೂಗಳ ಗುತ್ತಿಗೆಯನ್ನು ತಮಗಿಚ್ಛೆ ಬಂದವರಿಗೆ ಕೊಟ್ಟಿದ್ದು ಸರಿಯೇ ? ತಪ್ಪೇ ? ಕೊಡುವುದಾದರೆ ಟೆಂಡರ್ ಕರೆದು ಕೊಡಿ, ಇಲ್ಲವೇ ಮಾರಾಟ ಮಾಡಬೇಕಾದರೆ ೧೯೯೧ನೇ ಇಸವಿಯವರೆಗೆ ಕಾಯಿರಿ ಎಂದರೆ, ಅದು ಅವರಿಗೆ ಬೇಕಿಲ್ಲ. ಅದಕ್ಕೇ ಅವರು ಹೇಳುತ್ತಾರೆ ಕಾನೂನು ಸಲಹೆ ಪ್ರಕಾರ ಮಾಡಿದ್ದೇವೆಂದು ಕಾನೂನು ಸಲಹೆ ಪ್ರಕಾರ ಆಗಿನ ಆಡಳಿತ ಮಂಡಲಿಯೇ ಒಂದು ತೀರ್ಮಾನ ತೆಗೆದುಕೊಂಡಿದೆ. ಅವರದೇ ಆದ ಕಾರಣಗಳಿಗಾಗಿ ಆಗಿನ ಉಪನಿಬಂಧಕರು ಗುತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಅನಂತರವೂ ನಾನು ಇದನ್ನು ತಮ್ಮ ಗಮನಕ್ಕೆ ತಂದರೂ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಭ್ರಷ್ಟಾಚಾರ ಯಾರೇ ಮಾಡಿರಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಎಲ್ಲ ಮುಖ್ಯ ಮಂತ್ರಿಗಳೂ ಹೇಳುತ್ತಾರೆ, ಆದರೆ ಈ ಅವ್ಯವಹಾರಗಳನ್ನು ತಮ್ಮ ಗಮನಕ್ಕೆ ತಂದಾಗ ತಾವು ತೆಗೆದು ಕೊಂಡ ಕ್ರಮವೇನು? ಜಿಲ್ಲಾಧಿಕಾರಿಗಳು ಸಬ್‌ರಿಜಿಸ್ಟ್ರಾರ್‌ಗೆ ಪತ್ರ ಬರೆದು ರಿಜಿಸ್ಟರ್ ಮಾಡಬೇಡಿ ಎಂದರೂ ಸಬ್ ರಿಜಿಸ್ಟ್ರಾರ್ ರಿಜಿಸ್ಟರ್ ಮಾಡುತ್ತಾರೆ. ಅವರು ಏನು ಹೇಳುತ್ತಾರೆ ಗೊತ್ತೇ ? ಈ ಸರ್ಕಾರ ಏನು ಮಾಡುತ್ತದೆ ? ಶಾಸಕರು ಏನು ಮಾಡುತ್ತಾರೋ ನೋಡೋಣ ಎಂದು. ನನಗೆ ಗೊತ್ತಿದೆ ಹೇಗೆ ಮಾಡಿಸಿಕೊಳ್ಳುವುದು ಎಂದು ಅವರು ಹೇಳುತ್ತಾರೆಂದರೆ, ಈ ದೇಶದಲ್ಲಿ ಜನತಂತ್ರ ವ್ಯವಸ್ಥೆಯಲ್ಲಿ ಸರ್ಕಾರಕ್ಕೆ ಮತ್ತು ಶಾಸಕರಿಗೆ ಇರುವ ಗೌರವ ಏನೂ ನಾವು ಯಾರಾದರೂ ಹೋಗಿ ಪಾಲು ಕೇಳಿದ್ದೇವೆಯೇ ? ನೀವಾದರೂ ಪಾಲು ಕೇಳಿದ್ದೀರಾ ? ಯಾವುದಾದರೂ ಇರಬೇಕಲ್ಲ ? ರಿಜಿಸ್ಟರ್ ಮಾಡಬೇಡಿ ಎಂದು ಡಿ, ಸಿ. ಅವರು ಹೇಳಿದರೂ ಸಹ ೩೧-೫-೮೮ಕ್ಕೆ ರಿಜಿಸ್ಟರ್ ಮಾಡಿ ಎಂದು ಸಹಕಾರ ಇಲಾಖೆಯ ಅಧಿಕಾರಿಗಳು ಹೇಳುತ್ತಾರೆ. ಇದಕ್ಕೆ ಯಾರು ಒಪ್ಪಿಗೆ ಕೊಟ್ಟರು ? ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ಇದನ್ನು ತಂದರೇ ? ಇಲ್ಲ, ತಮ್ಮದೇ ಆದ ನಿಲುವು ತೆಗೆದು ಕೊಂಡರು. ನಾನು ಯಾವುದೇ ಅಧಿಕಾರಿಗಳ ಮೇಲೂ ದೂರು ಮಾಡುತ್ತಿಲ್ಲ. ದೂರು ಮಾಡು ವಂತಹ ಜಾಗದಲ್ಲಿ ಮಾಡುತ್ತೇನೆ. ಇಲ್ಲಿ ಆಗದಿದ್ದರೆ ಎಲ್ಲಿ ಏನು ಮಾಡಬೇಕೆಂದು ಎಂಬುದು ನಮಗೆ ನಿಮಗೆ ಗೊತ್ತಿದೆ. ಅದು ಕೊನೆಯ ಪ್ರಶ್ನೆ. ಇದೇನು ಒಂಟಿ ಪ್ರಕರಣವಲ್ಲ, ಈ ತರಹ ಬೇಕಾದಷ್ಟು ಈ ದೇಶದಲಿ ನಡೆಯುತ್ತಿವೆ. ಆದರೂ ಸಹ ನಾವೂ ನೀವು ಅನುಸರಿಸುವ ಕಾರ್ಯ ನೀತಿಯಿಂದಾಗಿ ಈ ದೇಶದಲ್ಲಿರುವ ರಾಜಕಾರಣಿಗಳಿಗೂ ಅಧಿಕಾರಿಗಳಿಗೂ ಕಾನೂನಿನ ಭಯವಿಲ್ಲದಂತಾಗಿದೆ ಆದ್ದರಿಂದ ಇಂತಹ ಅವ್ಯವಹಾರಗಳು ನಡೆಯುತ್ತಿವೆ. ಇದನ್ನು ಸರಿಪಡಿಸುವ ಮನಸ್ಸಿದ್ದರೆ ಸರಿಪಡಿಸಿ. ಈ ತರಹ ಇನ್ನೂ ಅನೇಕಅವ್ಯವಹಾರಗಳನ್ನು ಹೇಳಬಹುದು ಇನ್ನೂ ಒಂದುಮಾತ್ರ ಹೇಳುತ್ತೇನೆ ನಮ್ಮ ಗ್ರಾಹಕರ ಮಹಾ ಮಂಡಲಿ ಸುಮಾರು ೪.೧೭ ಕೋಟಿಗಳ ಒಂದು ಯೋಜನೆಯನ್ನು ಕಾರ್ಯಗತಮಾಡಲು ನಮ್ಮ ಸರ್ಕಾರ ಅದಕ್ಕೆ ಅವಕಾಶ ಮಾಡಿಕೊಟ್ಟಿತು. ಆ ಹಣದಲ್ಲಿ ಎಷ್ಟೋ ಉಪಕರಣಗಳನ್ನು ಕೊಂಡಿದ್ದಾರೆ. ನಾನು ಹೆಚ್ಚು ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಈಗಾಗಲೇ ಅದರ ವಿವರಗಳು ಎಲ್ಲರಿಗೂ ಗೊತ್ತಿದೆ. ಆದರೂ ಸಹ ಈ ಸಭೆಯಲ್ಲಿ ಮಾತಾಡುವಾಗ ಸ್ವಲ್ಪವಾದರೂ ಹೇಳದಿದ್ದರೆ ತಪ್ಪಾಗು ತ್ತದೆಂದು ಹೇಳುತ್ತಿದ್ದೇನೆ. ೪,೧೭ ಕೋಟಿ ರೂ,ಗಳ ಅವ್ಯವಹಾರ ಏನಿದೆ ಇದಕ್ಕೆ ಯಾರು ಕಾರಣ ಕರ್ತರೆಂದು ಮೇಲ್‌ನೋಟಕ್ಕೆ ನಿಮಗೆ ಗೊತ್ತಾಗಲಿಲ್ಲವೇ ? ಅವರು ಪೂರೈಕೆ ಮಾಡಿದ್ದಂತಹ ಪುಸ್ತಕ ಗಳಾಗಲಿ ಉಪಕರಣಗಳಾಗಲಿ ಅವು ಕಳಪೆದರ್ಜೆಯವು ಮತ್ತು ಅತ್ಯಂತ ದುಬಾರಿಯಾದವು ಎಂಬುದನ್ನು ಸಾರ್ವಜನಿಕವಾಗಿ ನೀವೂ ಒಪ್ಪಿಕೊಳ್ಳುತ್ತೀರೆಂದು ನಾನು ಭಾವಿಸಿದ್ದೇನೆ. ಇದರ ಬಗ್ಗೆ ನೀವು ವಿಚಾರಣೆ ಮಾಡಿ ಆದರೆ ಅದಕ್ಕೆ ಮೊದಲು ಸಂಬಂಧಿಸಿದ ಅಧಿಕಾರಿಗಳು ಯಾರಿದ್ದಾರೆ ಅವರು ಮೇಲ್ನೋಟಕ್ಕೆ ತಪ್ಪು ಮಾಡಿದ್ದಾರೆಂದು ಕಂಡುಬಂದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವ ಅಧಿಕಾರ ನಿಮಗಿಲ್ಲವೇ? ನಿಮಗೆ ಮನಸ್ಸು ಇಲ್ಲವೇ ? ಇಲ್ಲ, ಯಾರು ಬೇಕಾದರೂ ತಪ್ಪು ಮಾಡಿಕೊಳ್ಳಲಿ, ನಾವು ಕ್ರಮ ತೆಗೆದು ಕೊಳ್ಳುವುದಿಲ್ಲ, ಸಸ್ಪೆಂಡ್ ಮಾಡುವುದಿಲ್ಲ, ಅಧಿಕಾರಿಗಳಾಗಲಿ, ಅಧಿಕಾರೇತರು ಆಗಲಿ. ಈ ದೇಶದಲ್ಲಿ ಏನೇ ಅನ್ಯಾಯ ಮಾಡಿದರೂ ಸಹ ನಾವು ರಾಜಕೀಯ ಕಾರಣಗಳಿಗಾಗಿ ಅಥವಾ ಬೇರೆ ಬೇರೆ ಕಾರಣ ಗಳಿಂದಾಗಿ ನಾವು ಕ್ರಮ ತೆಗೆದುಕೊಳ್ಳುವುದಿಲ್ಲ ಎಂಬುದು ನಿಮ್ಮ ನೀತಿಯಾಗಿದ್ದರೆ ನನ್ನದೇನೂ ತಕರಾರು ಇಲ್ಲ. ಆದರೆ ಅದನ್ನು ಸಾರ್ವಜನಿಕವಾಗಿ ಹೇಳಬೇಕು. ಎಷ್ಟೋ ಸಲ ರಾಜಕಾರಣಿಗಳ ವಿರುದ್ಧವೇ ತಪ್ಪು ಕಂಡು ಬಂದಾಗ ಕ್ರಮ ತೆಗೆದುಕೊಳ್ಳಬೇಕೆಂದು ಮಾತಾಡಿಲ್ಲವೇ ನಾವು ? ಎಷ್ಟೋ ಸಮಿತಿಗಳನ್ನು ಮಾಡಿಲ್ಲವೇ ? ಇಂತಹ ಯಾವುದೇ ಹೊಣೆಗಾರಿಕೆ ಅಧಿಕಾರಿಗಳಿಗೆ ಇಲ್ಲದಿರುವುದರಿಂದ ಇಂತಹ ಪರಿಸ್ಥಿತಿ ಬರುತ್ತದೆ. ನಾನು ಈ ಹಿಂದೆ ಹೇಳಿದಂತೆ ನಮ್ಮ ದೇಶದಲ್ಲಿ ತಪ್ಪಿತಸ್ಥ ಅಧಿಕಾರಿ ಇಲ್ಲ

ಸಾಯಬೇಕು ಅಥವಾ ರಿಟೈರಾಗಬೇಕು. ಆಮೇಲೆ ನೀವು ಕ್ರಮ ತೆಗೆದುಕೊಳ್ಳುವುದು. ಅಷ್ಟೇ ಅಲ್ಲ ಇಂತಹ ರಾಜಕಾರಣಿ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಯಾವುದೇ ಸದನ ಸಮಿತಿ ಹೇಳಿದ್ದರೂ ಸಹ, ಆ ರಾಜಕಾರಣಿಗಳು ಸಾಯುವವರೆಗೂ ಇವರು ಕ್ರಮ ತೆಗದುಕೊಳ್ಳುವುದಿಲ್ಲ.

ಇದು ಕೇವಲ ಅಧಿಕಾರಿಗಳಿಗೆ ಮಾತ್ರ ಸೀಮಿತವಲ್ಲ. ಹಾಗಾದರೆ ನಾವು ವಿಚಾರಣಾ ಸಮಿತಿಗಳನ್ನು ಏತಕ್ಕೆ ಮಾಡಬೇಕು, ಅಥವಾ ಬೇರೆ ಬೇರೆ ಸಮಿತಿಗಳಿಂದ ವರದಿಗಳನ್ನು ನಾವು ಏತಕ್ಕೋಸ್ಕರ ತರಿಸಿಕೊಳ್ಳಬೇಕು ? ಈ ಮಾತನ್ನು ಹೇಳುವಂಥ ಉದ್ದೇಶವೇನೆಂದರೆ ಈ ರಾಜಕೀಯ ವ್ಯವಸ್ಥೆಯಲ್ಲಿ ಈಗ ಇರುವಂಥ ಅಧಿಕಾರ ಶಾಹಿ ಆಡಳಿತ ಪದ್ಧತಿಯಲ್ಲಿ ತಪ್ಪಾಗುತ್ತದೆ. ತಪ್ಪಾಗುವುದಿಲ್ಲ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತಿಲ್ಲ. ತಪ್ಪಾದರೆ ಆ ತಪ್ಪಿಗೆ ಕಾರಣರು ಯಾರು ಎಂಬುದನ್ನು ಕಂಡುಹಿಡಿಯಲಿಕ್ಕೆ ಪ್ರಯತ್ನವನ್ನು ಮಾಡದಿದ್ದರೆ, ಅದನ್ನು ಕಂಡು ಹಿಡಿದ ಮೇಲೂ ಸಹಾ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳದಿದ್ದರೆ ತಾವು ಮಾತ್ರ ಅಲ್ಲ, ಈ ದೇಶದಲ್ಲಿ ಯಾವುದೇ ಜನತಂತ್ರ ಸರ್ಕಾರ ಇರಬೇಕಾದಂಥ ಅವಶ್ಯಕತೆ ಇಲ್ಲ. ಆದುದರಿಂದ ನಾನು ತಮ್ಮನ್ನು ಕೇಳುವುದಿಷ್ಟೆ. ಅವರು ಯಾರೇ ಇರಲಿ, ನಮ್ಮ ಪಕ್ಷದವರೇ ಇರಬಹುದು, ನಮ್ಮ ಜಾತಿಯವರೇ ಇರಬಹುದು, ಅಥವಾ ನಿಮ್ಮ ಪಕ್ಷದವರೇ ಇರಬಹುದು ಅಥವಾ ನಿಮ್ಮ ಜಾತಿಯವರೇ ಇರಬಹುದು ಅವರು ಯಾವುದೇ ಜಾತಿಗೆ ಸೇರಿರಲಿ ಯಾವುದೇ ಪಕ್ಷಕ್ಕೆ ಸೇರಿರಲಿ. ಅವನು ನಿಜವಾಗಿಯೂ ಸಹ ತಪ್ಪು ಮಾಡಿದ್ದಾನೆ ಎಂದಾದರೆ ಆ ತಪ್ಪಿನ ಬಗ್ಗೆ ಕ್ರಮ ತೆಗೆದುಕೊಳ್ಳಲೇಬೇಕು. ನೀವು ವೈಯಕ್ತಿಕವಾಗಿ ದ್ವೇಷ ಮಾಡಿ ಎಂಬ ಮಾತನ್ನು ನಾನು ಹೇಳುತ್ತಿಲ್ಲ. ಅಥವಾ ನಿಮ್ಮ ಪಕ್ಷದ ಆಧಾರದ ಮೇಲೆ ದ್ವೇಷ ಮಾಡಿ ಎಂಬ ಮಾತನ್ನು ನಾನು ಹೇಳುತ್ತಿಲ್ಲ. ಯಾವುದೇ ವ್ಯಕ್ತಿಯ ಬಗ್ಗೆ ಈ ಮಾತನ್ನು ನಾನು ಹೇಳುತ್ತಿಲ್ಲ. ಅವನು ಅಧಿಕಾರಿ ಇರಬಹುದು, ಅಧಿಕಾರೇತರ ಇರಬಹುದು, ಆ ತಪ್ಪಿಗೆ ಸಂಬಂಧಪಟ್ಟಂತೆ ಸಮಭಾವದಿಂದ ನೋಡುವಂಥ ಸ್ಥೈರ್ಯವನ್ನು, ದೃಢವಾದಂಥ ನೀತಿಯನ್ನು ಅನುಸರಿಸದಿದ್ದರೆ ಈ ದೇಶದಲ್ಲಿ ಯಾವುದೇ ಕಾರ್ಯಕ್ರಮಗಳು ನಿಜವಾದಂಥ ರೀತಿಯಲ್ಲಿ ಜಾರಿಯಾಗಲಿಕ್ಕೆ ಸಾಧ್ಯವಿಲ್ಲ. ಈ ದೇಶದ ಬಡವರ ಬಗ್ಗೆ ಹೇಳುತ್ತೇವೆ. ಹಗಲೆಲ್ಲಾ ಬಡವರ ಮಾತನ್ನು ಹೇಳುತ್ತೇವೆ. ಬಡವರ ಬಗ್ಗೆ ಮಾತು ಬಂದಾಗ ಬಹಳ ಸಂತೋಷವಾಗುತ್ತದೆ. ಆ ಮಾತನ್ನು ಹೇಳಿ ಅಲ್ಲಿ ಓಟನ್ನು ಪಡೆದುಕೊಳ್ಳುವುದಕ್ಕೆ ಹೇಳುತ್ತೇವೆ. ಯಾವುದೇ ಪಕ್ಷದವರು ಇದಕ್ಕೆ ಹೊರತೇನೂ ಅಲ್ಲ. ಆದರೆ ನಮ್ಮ ಕಾರ್ಯ ನೀತಿಗಳನ್ನು ಜಾರಿ ಮಾಡುವಾಗ ಬಡವರ ಪರವಾಗಿ ಈ ದೇಶದಲ್ಲಿ ಕಾರ್ಯ ಕ್ರಮಗಳನ್ನು ಜಾರಿ ಮಾಡುವುದು ಆದರೆ ಅದರ ಫಲಮಾತ್ರ ಬಡವರಿಗೆ ಹೋಗುತ್ತಿಲ್ಲ. ಅದರ ವಿರುದ್ಧವಾಗಿ ಇವತ್ತಿನ ದಿವಸ ಈ ದೇಶದಲ್ಲಿ ಇರತಕ್ಕಂಥ ಶ್ರೀಮಂತರ ಪರವಾಗಿ ನಮ್ಮ ಕಾರ್ಯ ನೀತಿಯು ಜಾರಿಯಾಗುತ್ತಿದೆ. ಅಥವಾ ಇದಕ್ಕಿಂತ ಕೆಲವೇ ಜನ ಶ್ರೀಮಂತರು ಬೇಕಾದಂಥ ರೀತಿಯಲ್ಲಿ ಅನುಕೂಲ ಮಾಡುತ್ತಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ಈ ವಿಷಯಗಳನ್ನು ಹೇಳುವ ಹಿನ್ನೆಲೆ ಏನು ಎಂದರೆ ಕೇವಲ ಯಾವುದೇ ವ್ಯಕ್ತಿಗಳನ್ನು ನಾನು ದೂರುವುದಿಲ್ಲ, ಯಾವುದೇ ಅಧಿಕಾರಿಗಳನ್ನು ದೂರುವುದಿಲ್ಲ. ಎಲ್ಲಾ ಇಲಾಖೆಗಳಲ್ಲಿಯೂ ಎಲ್ಲಾ ಅಂಥ ಅಧಿಕಾರಿಗಳು ಇರಬಹುದು. ಒಳ್ಳೆಯವರು ಇದ್ದಾರೆ ಎಂಬ ಮಾತನ್ನು ನಾನು ಒಪ್ಪುತ್ತೇನೆ. ಇನ್ನು ಒಳ್ಳೆಯವರು ಬಹಳ ಜನರು ಇರುವುದರಿಂದ ಈ ವ್ಯವಸ್ಥೆ ಈ ದೇಶದಲ್ಲಿ ಇನ್ನು ಸ್ವಲ್ಪ ಮಟ್ಟಿಗಾದರೂ ಉಳಿದುಕೊಂಡಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೆ ಯಾರು ಕೆಟ್ಟದ್ದನ್ನು ಮಾಡಿದ್ದಾಗೆ, ಕೆಟ್ಟದ್ದನ್ನು ಮಾಡಿದ್ದರೂ ಅವರ ಮೇಲೆ ಕ್ರಮ ತೆಗೆದುಕೊಳ್ಳದಿದ್ದರೆ ಬಹಳ ಕಷ್ಟವಾಗುತ್ತದೆ ಅವರು ಒಳ್ಳೆಯವರು ಏತಕ್ಕೆ ಈ ರೀತಿ ಮಾಡುವುದಕ್ಕೆ ಹೋಗುತ್ತಾರೆ ? ಕೆಟ್ಟದ್ದು ಮಾಡಿದರೆ ಏನೂ ಮಾಡುವುದಿಲ್ಲ ಎಂದು ಕೆಟ್ಟದ್ದನ್ನು ಮಾಡುವುದಕ್ಕೆ ಪ್ರಯತ್ನ ಮಾಡಬಹುದು ಅಥವಾ ಅದನ್ನೇ ಮುಂದುವರಿಸಬಹುದು ಆದುದರಿಂದ ಇವತ್ತಿನ ದಿವಸ ಈ ಆಡಳಿತದ ಯಂತ್ರದ ಫಲ ನಿಜವಾಗಲೂ ಸಹಾ ಜನಸಾಮಾನ್ಯರಿಗೆ ಸಿಗಬೇಕಾದಂಥ ರೀತಿಯಲ್ಲಿ ದೃಢವಾದಂಥ ನೀತಿಯನ್ನು ನಾವು ಅನುಸರಿಸಬೇಕು. ಇನ್ನು ಆಡಳಿತ ಪದ್ಧತಿ ಬಗ್ಗೆ ಮುಂದೆ ಹೇಳಬೇಕೆಂದಿದ್ದೆ. ಮುಂದೆ ಅದಕ್ಕೆ ಮಾನ್ಯ ಅಧ್ಯಕ್ಷರು ಅವಕಾಶ ಕೊಡುತ್ತಾರೋ ಇಲ್ಲವೋ ಗೊತ್ತಿಲ್ಲ. ಆದ್ದರಿಂದ ಈಗಲೇ ಹೇಳುತ್ತೇನೆ. ಈ ವಿಧಾನಸೌಧದಲ್ಲಿಯಾಗಲಿ ಹೊರಗಡೆಯಲ್ಲಾಗಲಿ ಯಾವ ರೀತಿ ನಡೆಯುತ್ತಿದೆ ನಿಮ್ಮ ಆಡಳಿತ ನಿಮ್ಮ ಆಡಳಿತ ಎಂದು ಹೇಳಿದರೆ ನಿಮ್ಮ ಪಕ್ಷದ ಆಡಳಿತ ಎಂದು ತಿಳಿದುಕೊಳ್ಳಬಹುದು, ನಮ್ಮ ಸರ್ಕಾರದ ಆಡಳಿತ ಯಾವ ರೀತಿ ನಡೆಯುತ್ತಿದೆ ? ನಮ್ಮ ಈಗಿನ ಸರ್ಕಾರದ ಆಡಳಿತ ವ್ಯವಸ್ಥೆ ಬ್ಯುರೋಕ್ರಟಿಕ್ ಸೆಟ್ ಅಪ್ ಹೇಗಿದೆ ಎಂದರೆ ನಾನು ನಿಮ್ಮನ್ನು ನೇರವಾಗಿ ಕೇಳುತ್ತೇನೆ. ಸಂಬಂಧಪಟ್ಟಂಥ ಅಧಿಕಾರಿಗಳಿಗೆ ಗೊತ್ತಿದೆ. ಈ ಸಹಕಾರಿ ಇಲಾಖೆ ಮಾತ್ರವಲ್ಲ, ಈ ಸಚಿವಾಲಯ ಏನು ಇದೆ

ಈ ಸಚಿವಾಲಯದಲ್ಲಿ ಯಾವುದೇ ಒಂದು ಗೊತ್ತಾದ ದಿನಾಂಕದಂದು ಉದಾಹರಣೆಗೆ ೩೧ ನೇ ಮಾರ್ಚ್ ೧೯೯೦ ರಂದು ಎಷ್ಟು ಕಡತಗಳು ಎಷ್ಟು ಕಾಗದ ಪತ್ರಗಳು ವಿಲೇವಾರಿಯಾಗಿವೆ ? ಎಂಬ ಅಂಕಿ ಅಂಶಗಳನ್ನು ಕೊಟ್ಟರೆ ನಾನು ಖಂಡಿತವಾಗಿಯೂ ಕೃತಾರ್ಥನಾಗುತ್ತೇನೆ. ಕೊಡುತ್ತೀರಿ. ನಾವು ಇದ್ದಾಗಲೂ ಕೊಟ್ಟಿದ್ದರು. ನಿಮಗೂ ಅಂಕಿ ಅಂಶಗಳನ್ನು ಕೊಡುತ್ತಾರೆ. ಆದರೆ ಆ ಅಂಕಿ ಅಂಶಗಳು ಯಾವ ಆಧಾರದ ಮೇಲೆ ತಯಾರು ಮಾಡಿದ್ದಾರೆ ? ಈ ಸಚಿವಾಲಯಕ್ಕಿಂತ ತಾಲ್ಲೂಕು ಆಫೀಸ್ ಡೆಪ್ಯುಟಿ ಕಮಿಷನರ್ ಆಫೀಸ್‌ಗಳು ಬಹಳ ಉತ್ತಮವೆಂದು ಹೇಳಬಹುದು. ಈ ಸಚಿವಾಲಯದಲ್ಲಿ ಎಷ್ಟು ಕಡತಗಳು ಬಂತು ? ಯಾರಿಗೆ ಬಂತು ? ಯಾರ ಹತ್ತಿರ ಯಾವ ಕಡತ ಇದೆ ? ಖಂಡಿತವಾಗಿಯೂ ದಾಖಲೆ ಸಿಗುವುದಿಲ್ಲ, ಈ ಮಾತನ್ನು ಹೇಳಬೇಕಾದರೆ, ನಾನು ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ನಾನು ಸಹಕಾರಿ ಸಚಿವನಾಗಿದ್ದಾಗ ತಪ್ಪೋ ಸರಿಯೋ ಈ ಸಹಕಾರಿ ಇಲಾಖೆಯ ಒಂದು ಸಚಿವಾಲಯವನ್ನು ನಾನು ಪರಿವೀಕ್ಷಣೆ ಮಾಡಿದೆ. ಪರಿವೀಕ್ಷಣೆಯ ಮಾಡಿದ ಸಂದರ್ಭದಲ್ಲಿ ನನಗೆ ಗೊತ್ತಾಯಿತು, ಈ ದೇಶದಲ್ಲಿ ಯಾರು ಹೇಳುವವರು ಕೇಳುವವರು ಇಲ್ಲವೇನೋ ಎಂದು ಡಿ. ಪಿ. ಎ. ಆರ್. ನವರು ಅಗಲಗಲ ಬಾರಿ ಮಾತನಾಡುತ್ತಾರೆ. ಇದಕ್ಕೆ ಒಂದು ಸಂಹಿತೆ ಇದೆ, ಒಂದು ಕೋಡ್ ಇದೆ. ಎಷ್ಟು ಸಾರಿ ಈ ಆಡಳಿತ ಸುಧಾರಣೆ ಮತ್ತು ಸಿಬ್ಬಂದಿ ಇಲಾಖೆಯವರು ಹೋಗಿ ಅದು ಸಹಕಾರಿ ಇಲಾಖೆ ಇರಬಹುದು ಬೇರೆ ಯಾವುದೇ ಇರಬಹುದು, ಎಷ್ಟು ಸಾರಿ ಹೋಗಿ ತನಿಖೆ ಮಾಡಿದ್ದಾರೆ ? ಏನಾದರೂ ಅಲ್ಲಿಗೆ ಹೋಗಿ ಪರಿವೀಕ್ಷಣೆಯನ್ನು ಮಾಡಿದ್ದಾರಾ ? ಸಂಬಂಧಪಟ್ಟ ಕಾರ್ಯದರ್ಶಿಗಳು ಮತ್ತು ಉಪಕಾರ್ಯದರ್ಶಿಗಳ ಮೇಲೆ ತಾವು ಏನು ಒಂದು ಹೊಣೆಗಾರಿಕೆಯನ್ನು ನಿಗದಿ ಮಾಡಿದ್ದೀರಲ್ಲಾ ಈ ಸಚಿವಾಲಯದ ಒಂದು ಕಾನೂನಿನ ನಿಯಮಾವಳಿ ಪ್ರಕಾರ ಮಾಡಿದ್ದೀರಲ್ಲ ಅದನ್ನು ಯಾರಾದರೂ ಇಂದಿನವರೆಗೆ ಜಾರಿ ಮಾಡಿದ್ದಾರಾ ? ಈ ಸಚಿವಾಲಯದಲ್ಲಿ ಅಂತಹ ಯಾವುದೇ ನೌಕರ ಇರಬಹುದು, ಆ ನೌಕರ ಏನು ಕೆಲಸ ಮಾಡಬೇಕು ಎಂದು ತಿಳಿದುಕೊಂಡಿದ್ದಾನೆಯೋ ? ಅವನು ಮಾಡಿದ್ದಕ್ಕೆ ಏನಾದರೂ ದಾಖಲೆ ಇದೆಯೋ ? ಹೋಗಲಿ, ಅವರು ಕೆಲಸ ಮಾಡಿದ್ದಕ್ಕೆ ಫೈಲ್ ಏನಾದರೂ ಇದೆಯೋ ? ಆ ಫೈಲ್‌ಗಳ ಸಂಖ್ಯೆ ಏನಾದರೂ ನಿಖರವಾಗಿ ಹೇಳುವುದಕ್ಕೆ ಸಾಧ್ಯವೇ ? ಇದರ ಬಗ್ಗೆ ಒಂದು ಪೂರ್ಣವಾದ ವರದಿಯನ್ನು ನಾನು ಕೊಟ್ಟಿದ್ದೇನೆ. ತಾವು ಬೇಕಾದರೆ ತೆಗೆದು ನೋಡಿ. ನಾನು ಎಲ್ಲಾ ಮಾತುಗಳನ್ನು ಹೇಳುವುದಕ್ಕೆ ಇಷ್ಟ ಪಡುವುದಿಲ್ಲ. ನಿಜವಾಗಿಯೂ ಅತ್ಯಂತ ಹೊಣೆಗಾರಿಕೆ ಇಲ್ಲದಂಥ ರೀತಿಯಲ್ಲಿ ಈ ದೇಶದ ಆಡಳಿತ ವ್ಯವಸ್ಥೆ ನಡೆಯುತ್ತಿದೆ. ಅದು ಪ್ರಾರಂಭವಾಗಿರುವುದು ಈ ಸಚಿವಾಲಯದಲ್ಲಿ ಇಂಥ ಆಡಳಿತ ವ್ಯವಸ್ಥೆಯನ್ನು ಸರಿಪಡಿಸುವಂಥ ಕಾರ್ಯಕ್ರಮವನ್ನು ತಾವು ತೆಗೆದುಕೊಳ್ಳಬೇಕು. ಯಾರ ಮೇಲೂ ಆರೋಪವನ್ನು ನಾನು ಮಾಡುತ್ತಿಲ್ಲ. ಕೆಲವು ಒಳ್ಳೆಯ ಅಧಿಕಾರಿಗಳಿದ್ದಾರೆ, ಅವರು ಬರುತ್ತಾರೆ.

ಅವರು ಹೇಳುತ್ತಾರೆ, ಇನ್ನೂ ಅನೇಕ ವಿಚಾರಗಳನ್ನು ಬೇರೆ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತಿನ ದಿವಸ ಸಹಕಾರ ಇಲಾಖೆಗೆ ಸಂಬಂಧಪಟ್ಟಂತೆ ಹೇಳುವುದಾದರೆ ಇದು ಬೇರೆ ಇಲಾಖೆಗಳಿಂದ ಏನೂ ಹೊರತಾಗಿಲ್ಲ. ಆದುದರಿಂದ ಬೇರೆ ಇಲಾಖೆ ಮತ್ತು ಈ ಇಲಾಖೆಯೂ ಸೇರಿದಂತೆ ಈ ಸಚಿವಾಲಯದಲ್ಲಿ ಏನು ನಡೆಯುತ್ತಾ ಇದೆ ಇದು ಸರಿಯಾದಂಥ ರೀತಿಯಲ್ಲಿ ನಡೆಯುವಂಥ ಕ್ರಮವನ್ನು ಸರ್ಕಾರದವರು, ಮತ್ತು ಸಂಬಂಧಪಟ್ಟಂಥ ಮಂತ್ರಿಗಳು ತೆಗೆದುಕೊಳ್ಳದೇ ಇದ್ದರೆ ಇದರ ಉಪಯೋಗ ಜನಸಾಮಾನ್ಯರಿಗೆ ಆಗಲಿಕ್ಕೆ ಸಾಧ್ಯವಿಲ್ಲ. ನಿಮ್ಮಲ್ಲಿ ಎಷ್ಟು ಕೇಸ್ ಪೆಂಡಿಂಗ್ ಇದೆ ಎಂದು ಹೇಳಿ. ನನ್ನ ಕೈಯಲ್ಲಂತೂ ಹುಡುಕುವುದಕ್ಕೆ ಆಗಲಿಲ್ಲ, ನೀವು ಹುಡುಕುವುದಾದರೆ ಸಂತೋಷ. ೧೯೭೭-೭೮ ರಿಂದ ಸರ್ಕಾರಕ್ಕೆ ದಾವಾ ಅಥವಾ ಅರ್ಜಿಗಳನ್ನು ಹಾಕಿರುತ್ತಾರಲ್ಲ ಅವು ಇನ್ನೂ ವಿಲೇವಾರಿ ಆಗದೇ ಇದ್ದರೆ ಅದೇನು ಆಶ್ಚರ್ಯವಲ್ಲ. ಹೋಗಲಿ ಅವು ಎಷ್ಟು ಇವೆ ಎಂದು ನಾಳೆ ಅಲ್ಲ ಇನ್ನು ಮೂರು ತಿಂಗಳು ಸಮಯ ಕೊಟ್ಟರೂ ನೀವು ನಾವು ಹುಡುಕುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಅಂತಹ ಒಂದು ಪರಿಸ್ಥಿತಿಯಲ್ಲಿ ಆಡಳಿತ ವ್ಯವಸ್ಥೆ ನಡೆದುಕೊಂಡು ಬಂದಿದೆ. ಆದುದರಿಂದ ನಾನು ತಮಗೆ ಹೇಳುವುದೇನೆಂದರೆ, ನಿಜವಾಗಲೂ ನಾವು ಕೇವಲ ಘೋಷಣೆಗಳನ್ನು ಮಾಡುವುದರ ಮುಖಾಂತರ ಅಥವಾ ನೀತಿಗಳನ್ನು ನಿರ್ಧಾರ ಮಾಡುವುದರ ಮುಖಾಂತರ ಈ ದೇಶದಲ್ಲಿ ಹೊಸ ಒಂದು ಸಾಮಾಜಿಕ ವ್ಯವಸ್ಥೆ, ಹೊಸ ಆಡಳಿತ ವ್ಯವಸ್ಥೆಯನ್ನು ತರಲಿಕ್ಕೆ ಸಾಧ್ಯವಿಲ್ಲ. ಇದರಲ್ಲಿ ನಾವು ಯಾರನ್ನೇ ಆಗಲಿ ದೋಷ ಮಾಡುವಂಥ ಕಾರ್ಯಕ್ರಮವಿಲ್ಲ, ನಮ್ಮಲ್ಲಿ ಸಹಕಾರ ಸಂಘಗಳು ಏನಿವೆ ಈ ಸಹಕಾರ ಸಂಘಗಳ ಕಾರ್ಯ ವೈಖರಿ ಏನಾದರೂ ಉತ್ತಮಪಡಿಸಬೇಕು ಅಂದರೆ ಹೊಣೆಗಾರಿಕೆಯನ್ನು ನಿಗಧಿ ಮಾಡಬೇಕು. ಈ ಹೊಣೆಗಾರಿಕೆ ಕೇವಲ ಅಧಿಕಾರಿಗಳ ಮೇಲೆ ಅಲ್ಲ, ಅಧಿಕಾರೇತರರು ಏನಿದ್ದಾರೆ ಸಹಕಾರಿಗಳು ಎಂದು ಹೇಳಿಕೊಂಡು ಅವರು ಈ ದೇಶವನ್ನು ಲೂಟಿಮಾಡುವಂಥ ಜನರಿದ್ದಾರೆ. ಆದರೆ ಒಳ್ಳೆಯ ಸಹಕಾರಿಗಳೂ ಇದ್ದಾರೆ. ನಾನು

ಹೇಳುತ್ತೇನೆ, ಯಾರು ಒಳ್ಳೆಯ ಜನ ಇದ್ದಾರೆ, ಅವರಿಗೆ ಬೇಕಾದಂಥ ಪ್ರೋತ್ಸಾಹ ಕೊಡಿ, ಯಾರು ಕೆಟ್ಟ ಅಧಿಕಾರಿಗಳಿದ್ದಾರೆ, ಅಧಿಕಾರೇತರರು ಇದ್ದಾರೆ ಅವರ ಕೆಟ್ಟದ್ದನ್ನು ಗುರುತುಮಾಡಿ ಅವರಿಗೆ ಬೇಕಾದಂಥ ಶಿಕ್ಷೆ ಕೊಡುವಂಥಾದ್ದನ್ನು ಮಾಡಬೇಕು. ಕೇವಲ ಶಿಕ್ಷೆಯನ್ನು ಕೊಟ್ಟರೆ ಮಾತ್ರ ಸಾಧ್ಯವಿಲ್ಲ. ಆ ಶಿಕ್ಷೆ ಈ ದೇಶದ ಸಾಮಾನ್ಯ ಜನರಿಗೆ ಪ್ರಕಟವಾಗುವಂಥ ರೀತಿಯಲ್ಲಿ ಆಗಬೇಕು. ಆದರೆ ತಾವು ಏನು ಮಾಡಿದ್ದೀರಿ ? ನಾನು ತಮ್ಮನ್ನು ವೈಯಕ್ತಿಕವಾಗಿ ಕೇಳುತ್ತಾ ಇಲ್ಲ. ನಾನು ಕೇಳುತ್ತಾ ಇರುವುದು, ಈ ದೇಶದಲ್ಲಿ ತಪ್ಪು ಮಾಡಿದಂಥ ಅಧಿಕಾರಿ ಏನಿದ್ದಾನೆ, ಆ ಅಧಿಕಾರಿಯನ್ನು ತಮಗೆ ಬೇಕಾದಂಥ ರೀತಿಯಲ್ಲಿ ಉಪಯೋಗಿಸಿಕೊಳ್ಳುವಂಥ ರಾಜಕಾರಿಣಿಗಳ ಮಾತು ಕೇಳಿ ಇವತ್ತಿನದಿವಸ ಅವರ ಮೇಲೆನೀವು ಕ್ರಮ ತೆಗೆದುಕೊಳ್ಳದೇ ಇದ್ದರೆ ಅದು ಮಹಾಅಪರಾಧ ಎನ್ನುವ ಮಾತನ್ನು ಹೇಳುತ್ತೇನೆ. ಇನ್ನೂ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟವಿದ್ದರೂ ಸಹ ಕಾಲದ ಅಭಾವದಿಂದ ನಾನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತಿಲ್ಲ. ಸನ್ಮಾನ್ಯ ಅಧ್ಯಕ್ಷರೆ ಇವತ್ತಿನದಿವಸ ಸಹಕಾರ ಇಲಾಖೆ ನಿಜವಾಗಲೂ ಈ ದೇಶದ ಸಾಮಾನ್ಯ ಜನರ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಗೆ ಏನಾದರೂ ಒಳ್ಳೆಯದು ಮಾಡಬೇಕು ಎಂದು ಇದ್ದರೆ, ಈ ದೇಶದ ಸಾಮಾನ್ಯ ಜನರ ಹಣ ಏನಿದೆ ಅದು ದುರುಪಯೋಗವಾಗಬಾರದು ಎಂದು ಇದ್ದರೆ ಅದರಿಂದ ಈ ದೇಶದ ಅಭಿವೃದ್ಧಿಯಾಗಬೇಕು ಎಂದು ಇದ್ದರೆ ಖಂಡಿತವಾಗಲೂ ಸಹ ಸಂಬಂಧಪಟ್ಟವರ ಮೇಲೆ ದೃಢವಾದಂಥ, ಕಠಿಣವಾದಂಥ ಕ್ರಮಗಳನ್ನು ತಾವು ತೆಗೆದುಕೊಳ್ಳಬೇಕು ಎನ್ನುವ ಮಾತನ್ನು ನಾನು ಹೇಳುತ್ತೇನೆ. ಇದಕ್ಕೆ ಸಹಕಾರಿಯಾದಂಥ ರೀತಿಯಲ್ಲಿ ನಿಮ್ಮ ಒಂದು ಇಲಾಖೆ ಇದೆ. ಅದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಅದು ಲೆಕ್ಕ ಪರಿಶೋಧನೆ ಇಲಾಖೆ ಇದೆ. ಇವತ್ತು ಇದರ ಬಗ್ಗೆ ಹೊಸದಾಗಿ ಹೇಳಬೇಕಾಗಿಲ್ಲ. ನಾನು ಮಂತ್ರಿಯಾಗಿದ್ದಾಗಲೂ ಹೇಳುತ್ತಿದ್ದೆ, ಈಗಲೂ ಹೇಳುತ್ತಾ ಇದ್ದೇನೆ. ಅಲ್ಲಿ ಉತ್ತಮವಾದಂಥ ಅಧಿಕಾರಿಗಳಿದ್ದಾರೆ, ಇಲ್ಲ ಎನ್ನುವ ಮಾತನ್ನು ಹೇಳುತ್ತಾ ಇಲ್ಲ, ನಿಮ್ಮ ಇಲಾಖೆಯಲ್ಲಿ ಇದ್ದಂಥ ಅಧಿಕಾರಿಗಳು ನಾನು ಬಹುಜನ ಎಂದು ಹೇಳುತ್ತೇನೆ, ಉತ್ತಮವಾದ ದೊಡ್ಡ ದೊಡ್ಡ ಅಧಿಕಾರಿಗಳಿದ್ದರು, ಖಂಡಿತವಾಗಲೂ ಒಳ್ಳೆಯ ಅಧಿಕಾರಿಗಳಾಗಿದ್ದರು ಎನ್ನುವ ಮಾತನ್ನು ಹೇಳುತ್ತೇನೆ. ಯಾರ ಹೆಸರನ್ನೂ ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಇವತ್ತಿನದಿವಸ ಈ ಲೆಕ್ಕ ಪರಿಶೋಧನ ಇಲಾಖೆ ಏನಿದೆ ಇದರ ಪಾತ್ರ ಬಹಳ ಮುಖ್ಯವಾದುದು. ವರ್ಷಾನುಗಟ್ಟಲೆ ಆಡಿಟ್ ಮಾಡದೇ ಇದ್ದರೆ ಆಡಿಟ್ ಮಾಡಿದಮೇಲೂ ತಪ್ಪು ಅದಮೇಲೆ ಯಾವುದೇ ಕ್ರಮ ತೆಗೆದುಕೊಳ್ಳದೇ ಇದ್ದರೆ ಆಡಿಟ್ ಮಾಬೇಕಾದಂಥ ಅವಶ್ಯಕತೆನೇ ಇಲ್ಲ. ಅಕೌಂಟೆಂಟ್ ಜನರಲ್ ಅವರು ಆಡಿಟ್ ಮಾಡಿಸುತ್ತಾರೆ. ಆಡಿಟ್ ಮಾಡಿಸಿದ ಮೇಲೆ ಅದನ್ನು ಸಂಬಂಧಪಟ್ಟ ಇಲಾಖೆಗೆ ಕಳಿಸುತ್ತೇವೆ, ಇಲಾಖೆಗೆ ಕಳಿಸಿದ ಮೇಲೆ ಅವರು ಏನೂ ಕ್ರಮ ತೆಗೆದುಕೊಳ್ಳುವುದಿಲ್ಲ ಅಮೇಲೆ ಬೇರೆ ಬೇರೆ ಸದನದ ಸಮಿತಿಗಳಲ್ಲಿ ನಾವು ಚರ್ಚೆ ಮಾಡುತ್ತೇವೆ, ಚರ್ಚೆ ಮಾಡಿದ ಮೇಲೆ ತಪ್ಪನ್ನು ಕಂಡು ಹಿಡಿಯುತ್ತೇವೆ. ಆ ತಪ್ಪಿನ ಬಗೆ ಕೇಳಿದಾಗ ಅವರು ಏನೂ ಕ್ರಮ ತೆಗೆದುಕೊಳ್ಳುವುದಿಲ್ಲ. ಏಕೆ ಕ್ರಮ ತೆಗೆದುಕೊಳ್ಳುವುದಿಲ್ಲ ಎಂದು ಪುನಃ ಕೇಳುತ್ತೇವೆ. ಅವತ್ತು ಅವರು ಉತ್ತರವೇ ಕೊಡುವುದಿಲ್ಲ. ಇದು ನಮ್ಮ ದೇಶದಲ್ಲಿರುವಂಥ ಆಡಳಿತ ವ್ಯವಸ್ಥೆಯ ಲಕ್ಷಣ. ಇದನ್ನು ನೀವು ಏನಾದರೂ ಸರಿಪಡಿಸಬೇಕಾದರೆ ನೀವು ಒಂದ ನೀತಿಯನ್ನು ಅನುಸರಿಸಬೇಕಾಗುತ್ತದೆ. ಈ ಎಲ್ಲ ತಪ್ಪುಗಳು ಏನಿವೆ. ಆ ತಪ್ಪುಗಳು ತಮ್ಮ ಗಮನಕ್ಕೆ ಬಂದಮೇಲೆ ಒಂದು ಕಾಲಮಿತಿಯೊಳಗೆ ಅದನ್ನು ಸರಿಪಡಿಸುವಂಥ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಏನಾಗುತ್ತದೆಯೆಂದರೆ, ೧೦ ವರ್ಷಗಳಾದರೂ ಆಡಿಟ್ ಮಾಡದೇ ಇದ್ದರೆ ಅಥವಾ ಯಾವುದೇ ಒಂದು ಇಲಾಖೆಯ ಮೇಲೆ ನೀವು ಬರೆದ ಮೇಲೆ ಆ ಇಲಾಖೆಯವರು ಏನೂ ಕ್ರಮ ತೆಗೆದುಕೊಳ್ಳದೆ ಇದ್ದರೆ, ಕ್ರಮ ತೆಗೆದುಕೊಳ್ಳದೇ ಇದ್ದುದಕ್ಕಾಗಿ ನಾವು ಆ ಇಲಾಖೆಯನ್ನು ಕೇಳದಿದ್ದರೆ ಈ ದೇಶದಲ್ಲಿ ಸರ್ಕಾರ ಏಕೆ ಇರಬೇಕು ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಲೆಕ್ಕಪರಿಶೋಧನಾ ಇಲಾಖೆ ಉತ್ತಮವಾದಂಥ ಕೆಲಸ ಮಾಡಿದೆ ಎನ್ನುವಂಥ ಮಾತನ್ನು ಹೇಳುತ್ತೇನೆ, ಇಲ್ಲ ಎಂದಲ್ಲ. ಆದರೆ ಅದಕ್ಕೆ ತನ್ನದೇ ಆದಂಥ ಕೊರತೆ ಇದೆ. ಈಗ ಒಂದು ಸೊಸೈಟಿ ಆಡಿಟ ಮಾಡಿ ಎಂದು ಹೇಳುತ್ತೀರಿ, ಆಡಿಟ್ ಮಾಡಬೇಕು ಅಂದರೆ ಅದು ಪ್ರಿಂಟಾಗಿದೆ, ನಾವು ಇದ್ದಾಗಲೂ ಪ್ರಿಂಟಾಗುತ್ತಿತ್ತು. ಈಗ ಹೊಸದಾಗಿ ಏನಾಗಿಲ್ಲ, ಸಹಕಾರ ಸಂಘದ ಆಡಿಟ್ ಏಕೆ ಮಾಡಿಲ್ಲ ಅಂದರೆ ಅಡ್ರೆಸ್ಸೇ ಗೊತ್ತಿಲ್ಲ ಅಂದರು.

ಈಗ ಅಡ್ರೆಸ್‌ಅನ್ನು ನಾವು ನೀವು ಹುಡುಕಿಕೊಡಬೇಕಾಗಿದೆ. ರಿಜಿಸ್ಟರ್ ಮಾಡುವಾಗ ಅಡ್ರೆಸ್ ಇರುತ್ತದೆ. ರಿಜಿಸ್ಟರ್ ಆದ ಮೇಲೆ ಪ್ರತಿ ವರ್ಷ ಅವರ ಕೆಲಸಕಾರ್ಯಗಳನ್ನು ನೋಡಲು ಅವರಿಗೆ ಅಧಿಕಾರ ಇರುತ್ತದೆ. ಇದು ನಾನಿದ್ದಾಗಲೂ ನಡೆಯುತ್ತಿತ್ತು. ತಾವು ಇಲ್ಲಿ ಕೊಟ್ಟಿದ್ದೀರಿ, ೧೬೦೨ ಸಹಕಾರ ಸಂಘಗಳ ವಿಳಾಸ ತಿಳಿಯದೇ ಇರುವುದರಿಂದ ಲೆಕ್ಕಪರಿಶೋಧನೆ ಬಾಕಿ ಇದೆ ಎಂದು ಹೇಳಿದ್ದೀರಿ ; ಸಾಕೇನು ಸ್ವಾಮಿ, ಇದು ತಪ್ಪು ಎಂದು ಹೇಳುವುದಿಲ್ಲ. ಏಕೆಂದರೆ, ಅಲ್ಲಿರತಕ್ಕ ಒಬ್ಬ

ಅಧಿಕಾರಿ ಅಡ್ರೆಸ್ ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡಿದರೂ ಅದು ಸಿಗುವುದಿರುವ ಸಂದರ್ಭವೇ ಹೆಚ್ಚು. ಬೆಂಗಳೂರಿನಲ್ಲಿ ಯಾವುದೋ ಒಂದು ರಸ್ತೆ ವಿಳಾಸ ಕೊಟ್ಟು ; ಗೃಹ ನಿರ್ಮಾಣ ಸಹಕಾರ ಸಂಘ ಎಂದು ಬೋರ್ಡ್ ಹಾಕಿರುತ್ತಾರೆ. ನಾನು ಈ ಸಂದರ್ಭದಲ್ಲಿ ಹೇಳುವುದಾದರೆ. ಈ ಇಲಾಖೆಯು ಅಧಿಕಾರಿಗಳು ಬೇರೆ ಇಲಾಖೆಯ ಅಧಿಕಾರಿಗಳಿಗಿಂತ ಹೊರತಾಗಿ ಇಲ್ಲ. ಒಂದು ಸಹಕಾರ ಸಂಘ ಕಾನೂನಿಗೆ ವಿರದ್ಧವಾಗಿ ಕೋಟಿಗಟ್ಟಲೆ ಹಣವನ್ನು ಮುಂಗಡವಾಗಿ ಕೊಟ್ಟರೂ ಸಹ ಆ ಸಹಕಾರ ಸಂಘ ಎ ಬಿ.ಸಿ. ಎಂದು ಕಾಣುತ್ತದೆ. 'ಡಿ' ಇದ್ದರೆ ಕೊಡಬಹುದಾಗಿತ್ತು. ಆದರೆ 'ಡಿ' ಇಲ್ಲ. ಆದರೆ, ಲೆಕ್ಕಪರಿಶೋಧನೆ ಇಲಾಖೆಯವರು ಅದಕ್ಕೆ ಕೊಟ್ಟಿರುವ ಪ್ರೊವೋಷನ್ ಎಂದರೆ 'ಎ' ಎಂದು ; ಕೋಟಿಗಟ್ಟಲೆ ಹಣವನ್ನು ಬೇರೆಯವರಿಗೆ ಅಕ್ರಮವಾಗಿ ಕೊಟ್ಟರೂ ಸಹ ಲೆಕ್ಕಪರಿಶೋಧನ ಇಲಾಖೆಯವರಿಗೆ ಅದು ಅಕ್ರಮ ಎಂದು ಅನ್ನಿಸಲಿಲ್ಲ. ಅಲ್ಲಿಯೂ ಒಳ್ಳೆಯವರೂ ಇದ್ದಾರೆ. ಆದರೆ ಬಹಳಷ್ಟು ಜನ ಆ ರೀತಿ ಇಲ್ಲ. ಇಂತಹ ಲೆಕ್ಕಪರಿಶೋಧನೆ ಇಲಾಖೆಯ ಅಧಿಕಾರಿಗಳ ಮೇಲೆ ಸಂಬಂಧಪಟ್ಟ ಮಂತ್ರಿಗಳು ಕ್ರಮ ತೆಗೆದುಕೊಳ್ಳದೇ ಇರುವುದರಿಂದ ಇಂಥ ಅವ್ಯವಹಾರಗಳು ನಡೆಯುತ್ತಿವೆ. ಈ ಬಗ್ಗೆ ತಾವು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಈ ಇಲಾಖೆಗೆ ಹೆಚ್ಚಿನ ಸಹಾಯ ಮಾಡುವ ಅವಶ್ಯಕತೆಯೂ ಇದೆ. ನಾನಿದ್ದಾಗಲೂ ಬೇಡಿಕೆ ಇತ್ತು ; ಆದರೆ ಮಾಡುವುದಕ್ಕಾಗಲಿಲ್ಲ. ಅಲ್ಲಿ ಸಿಬ್ಬಂದಿಯ ಕೊರತೆ ಇರುವುದರಿಂದ ಅನೇಕ ಸಂದರ್ಭದಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಹಣಕಾಸಿನ ತೊಂದರೆ ಏನೇ ಇರಲ್ಲಿ, ಇದನ್ನು ನೀಗಿಸಬೇಕು. ಇನ್ನು ಮೇಲೆ ಸಹಕಾರ ಸಂಘಗಳನ್ನು ರಿಜಿಸ್ಟರ್ ಮಾಡಬೇಡಿ. ಆದರೆ ನೀವು ಒಂದು ಸಲ ರಿಜಿಸ್ಟರ್ ಮಾಡಿದರೆ, ಅವು ತಮ್ಮ ಕಾರ್ಯಕ್ರಮಗಳನ್ನು ಮಾಡುವುದರ ಜೊತೆಗೆ ಕೋಟಿಗಟ್ಟಲೆ ವ್ಯವಹಾರ ನಡೆಸುತ್ತಿವೆ. ಇದನ್ನು ಲೆಕ್ಕಪರಿಶೋಧನೆ ಮಾಡಲಿಕ್ಕೆ ಜನ ಇಲ್ಲ ಅಂದರೆ, ಆ ಸಹಕಾರ ಸಂಘಗಳು ಸರಿಯಾಗಿ ನಡೆಯುವುದಿಲ್ಲ. ಲೆಕ್ಕಪರಿಶೋಧನೆ ಸರಿಯಾದ ಸಮಯದಲ್ಲಿ ಆಗಬೇಕು, ೧೦–೨೦ ವರ್ಷಕ್ಕೊಮ್ಮೆ ಆದರೆ, ಅದರಿಂದ ಯಾವ ಉಪಯೋಗವೂ ಇಲ್ಲ. ಪ್ರತಿ ವರ್ಷವೂ ಆಡಿಟ್ ಆಗುವಂತೆ ತಾವು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಆಗ ಮಾತ್ರ ಇವುಗಳನ್ನು ಹತೋಟಿಯಲ್ಲಿಡುವುದಕ್ಕೆ ಸಾಧ್ಯವಾಗುತ್ತವೆ. ಇನ್ನು ಸರ್ಕಾರದ ನೀತಿ ಬಗ್ಗೆ ಹೇಳುವುದಾದರೆ, ಮೂಲಭೂತವಾಗಿ ಕೆಲವು ವಿಚಾರಗಳಲ್ಲಿ ನಿಮ್ಮದೇ ಆದಂಥ ನೀತಿಯನ್ನು ಹೊಂದಲಿಕ್ಕೆ ಸ್ವತಂತ್ರರಿದ್ದೀರಿ. ಈ ಸಹಕಾರ ಸಂಘಗಳಿಗೆ ನಾಮಕರಣಮಾಡುವುದು ತಪ್ಪು ಎಂದು ನಾನು ಮಂತ್ರಿಯಾಗಿದ್ದಾಗಲೂ ಹೇಳಿದ್ದೇನೆ. ಈಗಲೂ ಹೇಳುತ್ತಿದ್ದೇನೆ. ಇಲ್ಲಿ ಕೆ. ಹೆಚ್. ಪಾಟೀಲರು ಇದ್ದಾರೆ. ನಮಗೆ ಇಷ್ಟ ಬಂದ ಕಾರಣಕ್ಕೋಸ್ಕರ ನಮಗೆ ಇಷ್ಟ ಬಂದವರನ್ನು ನಾಮಕರಣ ಮಾಡಬಹುದು ; ಅದಕ್ಕೆ ನನ್ನ ಅಭ್ಯಂತರವಿಲ್ಲ. ಆದರೆ ಸಹಕಾರ ಕ್ಷೇತ್ರದಲ್ಲಿ ಆತಂಕಕಾರಿಯಾದ ಬೆಳೆವಣಿಗೆ ಆದಾಗ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವಾಗ ತಾವು ಆಲೋಚನೆ ಮಾಡಬೇಕು. ಮೊನ್ನೆ ತಾವು ಒಂದು ಕಾನೂನು ಮಾಡಿದ್ದೀರಿ. ಇವತ್ತು ಅದು ಜಾರಿಯಲ್ಲಿ ಇಲ್ಲ. ಆದರೆ ಇದು ತಾತ್ವಿಕ ದೃಷ್ಟಿಯಿಂದ ಸರಿಯೆ ಎಂದು ಆಲೋಚನೆ ಮಾಡಿ. ಈ ದೇಶದಲ್ಲಿ ಸುಸ್ತಿದಾರರು ಯಾರಿದ್ದಾರೆ. ಆ ಸುಸ್ತಿದಾರರಿಗೆ ಮತದಾನದ ನೀಡುವಂಥ ನೋಟಿಫಿಕೇಷನ್ ಹೊರಡಿಸಿದ್ದೀರಿ. ಈ ದೇಶದಲ್ಲಿರುವ ಸಹಕಾರ ಕ್ಷೇತ್ರದಲ್ಲಿ ಆರೋಗ್ಯಕರವಾದಂಥ ಬೆಳವಣಿಗೆಗೆ ಇದು ಮಾರಕವಾಗುತ್ತದೆಯೆ ಅಥವಾ ಪೂರಕವಾಗುತ್ತದೆಯೋ ಎನ್ನುವುದನ್ನು ಯೋಚನೆ ಮಾಡಬೇಕು. ಮೊದಲು ನನಗೆ ನೀವು ಕೇಳುತ್ತಿದ್ದಿರಿ, ಈಗ ನಾನು ನಿಮ್ಮನ್ನು ಕೇಳುತ್ತಿದ್ದೇನೆ.

ಪ್ರೊ॥ ಎಂ. ಡಿ. ನಂಜುಂಡಸ್ವಾಮಿ.—ಸನ್ಮಾನ್ಯ ಅಧ್ಯಕ್ಷರೆ, ಸುಸ್ತಿದಾರರಿಗೆ ಮತದಾನದ ಹಕ್ಕು ಕೊಡುವಂಥ ಒಂದು ತಿದ್ದುಪಡಿ ಮಾಡಿದ್ದನ್ನು ಮಾನ್ಯ ಏಕಾಂತಯ್ಯನವರು ವಿರೋಧ ಮಾಡುತ್ತಿದ್ದಾರೆ. ಬೇರೆ ಕ್ಷೇತ್ರಗಳಲ್ಲಿ ಬಾಕಿದಾರರಾಗಿದ್ದು, ಶಾಸನ ಸಭೆಗೆ ಬಂದು ಮಂತ್ರಿಗಳಾಗಿದ್ದಾರೆ, ಇದರ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಹೆಚ್. ಏಕಾಂತಯ್ಯ.—ಇದು ರಿಲೆವೆಂಟ್ ಪ್ರಶ್ನೆ. ೧೯೭೬ರಲ್ಲೇ ಇಸವಿಯಲ್ಲಿ ನಾವು ಕಾನೂನು ತಿದ್ದುಪಡಿ ಮಾಡಲಾಗಿದೆ. ಕಾನೂನು ತಿದ್ದುಪಡಿ ಮಾಡಿದಂಥ ಉದ್ದೇಶ ಈ ದೇಶದಲ್ಲಿರುವಂಥ ಸುಸ್ತಿದಾರರಿಗೆ ಮತದಾನ ಮಾಡುವಂಥ ಹಕ್ಕು ಮತ್ತು ಅವರು ಕೂಡ ಆಡಳಿತ ಮಂಡಲಿಗೆ ಬರುವುದಕ್ಕೆ ಅಡಚಣೆ ಉಂಟು ಮಾಡಿದಕ್ಕೆ ಕಾರಣ ಏನೆಂದರೆ, ಇವತ್ತು ನಂಜುಂಡಸ್ವಾಮಿಯವರಿಗೆ ಗೊತ್ತಿರುವಂತೆ ಇಲ್ಲಿ 'ಓಪನ್‌ಮೆಂಬರ್ ಷಿಪ್' ಇಲ್ಲ. ಯಾರು ಬೇಕಾದರೂ ಸದಸ್ಯರಾಗುವುದಕ್ಕೆ ಆಗುವುದಿಲ್ಲ, ಒಂದೊಂದು ಸಾರಿ ಜೇಬಿನಲ್ಲಿಯೇ ಎಲ್ಲಾ ಪುಸ್ತಕಗಳು ಇರುತ್ತವೆ. ಸಹಕಾರಸಂಘವೆಂದರೆ ಏಕಾಂತಯ್ಯನವರ ಸಹಕಾರ ಸಂಘ ಆಗಬಹುದು ಇಲ್ಲವೇ ಕೆ. ಹೆಚ್. ಪಾಟೀಲರ ಸಹಕಾರ ಸಂಘ ಆಗಿರಬಹುದು ; ಅನೇಕ ಸಂದರ್ಭದಲ್ಲಿ ಅದು ತಾಲ್ಲೂಕು ಸಹಕಾರ ಸಂಘ ಆಗಿರಲಿಲ್ಲ. ಇದು ಒಂದು ; ಎರಡನೆಯ ಕಾರಣ ಏನೆಂದರೆ, ನಾವು ಕೃಷಿ ಸಾಲವನ್ನು ಇವೊತ್ತು ವಿತರಣೆ ಮಾಡಬೇಕು. ಆಗ ನಾನು ೫ ಸಾವಿರ

ರೂಪಾಯಿ ತೆಗೆದುಕೊಳ್ಳುತ್ತೇನೆ. ನನ್ನ ತಮ್ಮನ ಹೆಸರಿಗೆ ೫ ಸಾವಿರ ರೂಪಾಯಿ ತೆಗೆದುಕೊಳ್ಳುತ್ತೇನೆ. ನನಗೆ ಬೇಕಾದಂಥ ಜನರಿಗೆ ಎಂದು ೫—೧೦ ಸಾವಿರ ರೂಪಾಯಿ ತೆಗೆದುಕೊಳ್ಳುತ್ತೇನೆ; ಮತ್ತೆ ನಾವು ಋಣ ಕಟ್ಟುವುದಿಲ್ಲ; ನನ್ನ ಮೇಲೆ ಕ್ರಮ ತೆಗೆದುಕೊಳ್ಳಬೇಕು. ನಾನೇ ಆಡಳಿತ ಮಂಡಳಿಯ ಸದಸ್ಯನಾಗಿರುತ್ತೇನೆ. ನಾನೇ ಕ್ರಮ ತೆಗೆದುಕೊಳ್ಳುವುದಿಲ್ಲ ಆಗ ನೀವು ಏನು ಮಾಡುತ್ತೀರಿ ? ಅಂದರೆ ನಾನು ಇದರ ಉದ್ದೇಶ ಹೇಳುತ್ತಿದ್ದೇನೆ.

ಪ್ರೊ|| ಎಂ. ಡಿ. ನಂಜುಂಡಸ್ವಾಮಿ.—ತಾವು ಎತ್ತಿರುವ ಪ್ರಶ್ನೆ, ಬಹಳ ಒಳ್ಳೆಯ ಪ್ರಶ್ನೆ, ಏಕೆಂದರೆ ಇಲ್ಲಿಯೂ ಅದೇ ಆಗುತ್ತಿರುವುದು. ಬಾಕಿದಾರರೇ ಬಂದು ಇಲ್ಲಿ ಮಂತ್ರಿಗಳು ಆದಾಗ, ವಸೂಲಿನೇ ಆಗುವುದಿಲ್ಲ. ಅದನ್ನೇ ನಾನು ಹೇಳಲಿಕ್ಕೆ ಹೊರಟಿದ್ದುದು.

ಶ್ರೀ ಹೆಚ್. ಏಕಾಂತಯ್ಯ.—ನಾನು ಹೇಳುವುದು ಅದನ್ನೇ; ಆದ್ದರಿಂದ, ನಮ್ಮಿಬ್ಬರ ಅಭಿಪ್ರಾಯದಲ್ಲಿ, ಅಭಿಪ್ರಾಯ ಬೇಡ ಇಲ್ಲ, ನಾವು ಏನು ಹೇಳುತ್ತಿದ್ದೇವೆ, ಇದು ಸರಿಯೋ ತಪ್ಪೋ ಎಂದು ಹೇಳಬೇಕಾದರೆ, ಈ ಸಹಕಾರ ಸಂಘಗಳಲ್ಲಿ ಸುಸ್ತಿದಾರನಿಗೆ ಮತದಾನ ಮಾಡುವಂಥ ಹಕ್ಕು ಆಗಲಿ, ಆಡಳಿತ ಮಂಡಲಿಯಲ್ಲಿರುವಂಥ ಹಕ್ಕು ಆಗಲಿ. ಇರಬಾರದು ಎಂದು ನನ್ನ ಅಭಿಪ್ರಾಯ ಏಕೆಂದರೆ, ಒಂದು ಪಕ್ಷ ಅಂತಹ ಅಧಿಕಾರವನ್ನು ಕೊಟ್ಟಿದ್ದೇ ಆದರೆ, ಯಾರು ಸುಸ್ತಿದಾರರು ಇದ್ದಾರೆ ಯಾರು ಬಾಕಿದಾರರ ಇದ್ದಾರೆ. ಅವರು ಆಡಳಿತ ಮಂಡಳಿಯ ಸದಸ್ಯರಾಗಿ ಅಧಿಕಾರಕ್ಕೆ ಬಂದು ಬೇರೆಯವರಿಗೆ ಸಹಕಾರಸಂಘದಿಂದ ಸಹಾಯ ಸೌಲಭ್ಯ ಸಿಕ್ಕದಂಥ ಪರಿಸ್ಥಿತಿ ಉಂಟಾಗುತ್ತದೆ. ಆ ರೀತಿ ಆಗಬಾರದೆಂದು ಈ ಮಾತನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಯಾವುದೇ ಸಹಕಾರಿ ಆದರೂ ಬಹಳ ದುಃಖದಿಂದ ಇದನ್ನು ಸ್ವೀಕಾರಮಾಡಬೇಕು. ಮಾನ್ಯ ನಂಜುಂಡಸ್ವಾಮಿಯವರು ಥಿಯರಿ ಪ್ರಕಾರ ಸಾಲವೇ ಇಲ್ಲ; ರೈತರು ಸಾಲಗಾರರೇ ಅಲ್ಲ ಎಂದು ಹೇಳಿದರು. ಅಂದು ಕಂಡೆ ಇರಲಿ; ಸಾಲ ಕೊಟ್ಟು, ಬಾಕಿ ವಸೂಲು ಮಾಡುವಾಗ ಅವರು ಹಣ ಕೊಡದಿದ್ದರೆ ಡಿಫಾಲ್ಟರ್ ಆಗುತ್ತಾರೆ, ಹಣವನ್ನು ಕೊಡದೇ ಇರುವುದಕ್ಕೆ ಯಾರು ಕಾರಣ ಎಂದು ನಾನೇ ಹುಡುಕಬೇಕು. ಇದಕ್ಕೆ ರಾಜಕೀಯ ಧುರೀಣರೇ ಕಾರಣ. ಕೇಂದ್ರಸರಕಾರ ಇರಲಿ ರಾಜ್ಯಸರ್ಕಾರ ಇರಲಿ, ಕೇಂದ್ರಸರ್ಕಾರದವರು ರೆಮಿಷನ್ ಕೊಡುತ್ತೇವೆಂದು ಅನೌನ್ಸ್ ಮಾಡಿದರು, ರೆಮಿಷನ್ ಕೊಡಲಿಲ್ಲ, ರಾಜ್ಯಸರ್ಕಾರದವರು ನಾವು ರೆಕಮೆಂಡ್ ಮಾಡುತ್ತೇವೆಂದು ಹೇಳಿ ಮಾಡಿದರು, ಆದರೆ ಅವರಿಗೆ ಇನ್ನೂ ಸಿಕ್ಕಲಿಲ್ಲ. ಇವರಿಬ್ಬರ ಮಧ್ಯದಲ್ಲಿ ರೈತತನ್ನ ಸಾಲ ಕೊಡಲಿಕ್ಕೆ ವಿಳಂಬ ಆಯಿತು, ಯಾರೇನಾದರೂ ನಾವು ಸೂಟ್ ಬಿಡುತ್ತೇವೆ ಅಂದರೆ, ಸೂಟ್ ಬಿಡುವುದಿಲ್ಲ. ನಮ್ಮ ಸಾಲ ತೆಗೆದುಕೊಳ್ಳಿ ನಾವು ಋಣ ತೀರಿಸುತ್ತೇವೆ ಎಂದು ಹೇಳುವವರು ಬಹಳವಿರಳ, ಇಲ್ಲ ಎಂದು ಹೇಳಿದರೂ ಅಡ್ಡಿಯಿಲ್ಲ. ಇಲ್ಲಿ ರೈತರದ್ದು ಯಾವುದೂ ತಪ್ಪಿಲ್ಲದೆ ರೈತರಿಗೆ ನಾವು ಇವೊತ್ತಿನ ದಿವಸ ಅಲ್ಲೋಲಕಲ್ಲೋಲ ಸ್ಥಿತಿಗೆ ತಂದಿಟ್ಟಿದ್ದೇವೆ, ಆ ದೃಷ್ಟಿಯಿಂದ ಅವರಿಗೆ ಇರತಕ್ಕಂಥ ಮೆಂಬರ್ ರೈಟ್‌ಅನ್ನು ಕರಟೈಲ್ ಮಾಡಿದರೆ ಈ ಡಿಫಾಲ್ಟರ್ಸ್ ಮುಂದೆ ಬಂದು ಅಥವಾ ದೊಡ್ಡವರು ದುಡ್ಡು ಇದ್ದವರೂ ಎಲ್ಲಾದರೂ ತಂದು ರೊಕ್ಕ ತುಂಬಿ ತಾವೇ ಡೈರೆಕ್ಟರ್ ಆಗಿ ಉಳಿದುಬಿಡುತ್ತಾರೆ ಎನ್ನುವ ದೃಷ್ಟಿಯಿಂದ ಸರ್ಕಾರದವರು ಇದನ್ನು ಮಾಡಲಿಕ್ಕೆ ಅಪೇಕ್ಷೆಪಟ್ಟರೆ ವಿನಹ ಉಳಿದಿದ್ದು ಅಲ್ಲ. ಅದಕ್ಕೆ ತಮ್ಮಿಂದ ನಾನು ನಿರೀಕ್ಷೆಮಾಡುತ್ತೇನೆ. ಕೇಂದ್ರಸರ್ಕಾರದವರು ಕೊಡಮಾಡಿರುವ ಹಣವನ್ನು ಬಿಡುಗಡೆಮಾಡಿದರೆ, ರಾಜ್ಯಸರ್ಕಾರ ಈಗಾಗಲೇ ರಿಮ್ಯಾಂಡ್ ಮಾಡಿದೆ, ಅದರ ಪ್ರಕಾರ ಒಂದು ಸುತ್ತೋಲೆ ಮಾಡೋಣ. ತಪ್ಪೋ ಒಪ್ಪೋ. ನಾನು ಮೊನ್ನೆ ಸಹಿತ ಹೇಳಿದ್ದೇನೆ, ಹಣ ಸೂಟಿ ಬಿಡುವುದರಿಂದ, ರೈತರಿಗೆ ಕಲ್ಯಾಣವಾಗುತ್ತದೆಂದು ನನ್ನ ಅಭಿಪ್ರಾಯದಲ್ಲಿ ಸರಿಯಿಲ್ಲ ಮಾನ್ಯ ನಂಜುಂಡಸ್ವಾಮಿ ಅವರು ಒಪ್ಪುತ್ತಾರೋ ಇಲ್ಲವೋಗೊತ್ತಿಲ್ಲ. ರೈತರಿಗೆ ಉತ್ಪಾದನೆ ಹೆಚ್ಚಾಗುವಂಥ ಆಗ್ರೋ ಬೇಸ್ಡ್ ಇಂಡಸ್ಟ್ರೀಸ್‌ಅನ್ನು ಪ್ರತಿಯೊಂದು ತಾಲ್ಲೂಕಿಗೂ ಮಾಡಿ ಸರ್ಕಾರದವರು ಎಷ್ಟೇ ಹಣ ಖರ್ಚು ಮಾಡಿದರೂ, ಅದರ ಉತ್ಪಾದನೆ ಹೆಚ್ಚಾಗಿ, ದೇಶದ ಸಂಪತ್ತು ಹೆಚ್ಚಾಗುತ್ತದೆ. ಆಗ ನಿಮ್ಮ ಸಾಲ ನೀವು ತೆಗೆದುಕೊಳ್ಳಿ ಎಂದು ಹೇಳುವ ಸ್ಥಿತಿಗೆ ರೈತರು ಬರುತ್ತಾರೆ. ಆ ಕಡೆಗೆ ನಮ್ಮ ಲಕ್ಷ್ಯವಿರಬೇಕೆ ವಿನಃ ಸಾಲ ಸೂಟಿ ಬಿಡುವುದು ಬೇಡ ಎಂದು ನನ್ನ ವೈಯಕ್ತಿಕ ಅಭಿಪ್ರಾಯ ಆದರೆ, ನಾನು ಸರ್ಕಾರದಲ್ಲಿರುವುದರಿಂದ ನಾನು ಒಪ್ಪುತ್ತೇನೆ. ನೀವು ಸಹಿತ ಕೇಂದ್ರಸರ್ಕಾರ ಒಪ್ಪಿದ ಮಾತನ್ನು ಒಪ್ಪುತ್ತೀರಿ. ಆ ದೃಷ್ಟಿಯಲ್ಲಿ ಮಾಡಿದ್ದೇವೆ ಹೊರತು ಬೇರೆ ಇಲ್ಲ.

ಪ್ರೊ|| ಎಂ. ಡಿ. ನಂಜುಂಡಸ್ವಾಮಿ.—ಈಗ ಮಾಡಿರುವ ತಿದ್ದುಪಡಿ ಮೂಲಕ ಸಹಕಾರಿ ಕ್ಷೇತ್ರದಲ್ಲಿ ಸುಸ್ತಿದಾರರಿಗೆ ಮತದಾನ ಹಕ್ಕು ಕೊಟ್ಟಿರತಕ್ಕದ್ದು ಅದು ಕೇವಲ ತಾತ್ಕಾಲಿಕ ಆದರೆ ಅದರ ಬಗ್ಗೆ ನನ್ನದು ಅಭ್ಯಂತರ ಇಲ್ಲ, ಏಕೆಂದರೆ, ಸಹಕಾರಿ ಕ್ಷೇತ್ರದಲ್ಲಿ ಶಿಸ್ತು ಇರಬೇಕು. ಎಲ್ಲ ಕ್ಷೇತ್ರದಲ್ಲೂ ಶಿಸ್ತು ಇರಬೇಕು. What I was trying to drive home was that similar

prohibition should be introduced into the People's Representation Act. ಅದನ್ನು ಸಂಪುಟನ ತಮ್ಮ ಗಮನ ಸೆಳೆಯುವುದಕ್ಕೆ ಹೇಳಿದೆ ಅಷ್ಟೆ ;

ಶ್ರೀ ಟಿ. ಎಂ. ಮಂಜುನಾಥ.—ನಮ್ಮ ಹಿರಿಯ ಸದಸ್ಯರಾದ ಏಕಾಂತಯ್ಯನವರು ಹಾಗೂ ಮಾಜಿ ಮಂತ್ರಿಗಳು ಒಳ್ಳೆಯದನ್ನೇ ಹೇಳಿದ್ದಾರೆ.

ಅದಕ್ಕೆ ನಮ್ಮ ಮಂತ್ರಿಯಾಗಿರತಕ್ಕ ಮಾನ್ಯ ಕೆ. ಹೆಚ್. ಪಾಟೀಲರು ಉತ್ತರ ಕೊಟ್ಟಿದ್ದಾರೆ. ನನಗೆ ಅನುಭವ ಬಂದಿರುವ ಹಾಗೆ ಸಹಕಾರ ತಪ್ಪು ಬೇರೆ ಇದೆ. ಅದನ್ನು ಯಾವ ರೀತಿ ಬೆಳೆಸಿಕೊಂಡು ಹೋಗಬೇಕೆಂದು ಹಿರಿಯರು ಮೊದಲಿನಿಂದಲೂ ಅನುಸರಿಸಿಕೊಂಡು ಬಂದಿದ್ದಾರೆ. ಅನೇಕ ಡೀಫಂಕ್ಟ್ ಸೊಸೈಟಿಗಳು ನಮ್ಮಲ್ಲಿವೆ ಏತಕ್ಕೆಂದರೆ ಅಲ್ಲಿರತಕ್ಕವರು ಹಣ ತುಂಬದೇ ಇರುವುದರಿಂದ ಮತ್ತು ಸ್ವಾರ್ಥಕ್ಕೋಸ್ಕರ ಉಪಯೋಗಿಸಿಕೊಂಡಿರುವ ದೃಷ್ಟಿಯಿಂದ ಇವತ್ತು ಡೀಫಂಕ್ಟ್ ಸೊಸೈಟಿಗಳು ಇವೆ. ಅಂತಹ ಡಿಫಾಲ್ಟರ್ ಆಗಿರತಕ್ಕವರಿಗೆ ಮತವನ್ನು ಕೊಡುವ ಹಕ್ಕನ್ನು ತಾವು ಕೊಟ್ಟರೆ ಈ ಸಹಕಾರ ಸಂಘವನ್ನು ನೆಲಸಮ ಮಾಡುವುದಕ್ಕೆ ಅವಕಾಶವಾಗುತ್ತದೆ ಆದಕ್ಕೋಸ್ಕರ ಹಿಂದಿನವರು ಡಿಫಾಲ್ಟರ್ ಆದವರಿಗೆ ಮತ ಕೊಡುವ ಹಕ್ಕಿಲ್ಲ, ಅದು ಒಳ್ಳೆಯವರ ಕೈಯಲ್ಲಿ ಇರಬೇಕು ಯಾರಿಗೆ ಬೆಳೆಸಿಕೊಂಡು ಹೋಗುವ ಶಕ್ತಿ ಇದೆ ಮತ್ತು ಉಳಿದಿರುವ ರೈತರಿಗೆ ಸಹಕಾರ ಮಾಡಿಕೊಂಡು ಹೋದರೆ ಮಾತ್ರ ಇವತ್ತು ಆ ಸೊಸೈಟಿಗಳು ಉಳಿಯುತ್ತವೆ ವಿನಾಹ ಡಿಫಾಲ್ಟರ್ ಆಗುವವರಿಗೆ ಮತದ ಹಕ್ಕನ್ನು ಕೊಟ್ಟರೆ ಡಿಫಾಲ್ಟರ್ ಜಾಸ್ತಿಯಾಗುತ್ತಾರೆ. ಮತ್ತೊಮ್ಮೆ ನಮ್ಮ ದೇಶದಲ್ಲಿ ಸಹಕಾರ ತತ್ವದ ಮೂಲಕ ನಾವೇನು ರೈತಪಿ ಜನಗಳಿಗೆ ಉಪಕಾರ ಮಾಡಂತ್ತೇವೆಂದು ಹೋಗುತ್ತೇವೆ, ಅದಕ್ಕೆ ಕೊಡಲಿ ಪೆಟ್ಟು ಬೀಳುತ್ತವೆ ಎಂದು ನಾನು ನನ್ನ ವೈಯಕ್ತಿಕ ವಿಚಾರವನ್ನು ಹೇಳಿ ಈಗ ಅವರು ಏನು ಎತ್ತಿದ್ದಾರೆ ಅದು ಸರಿಯೆಂದು ಸಭೆಯ ಮುಂದೆ ಹೇಳುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ.—ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚಿಗೆ ವೇಳೆಯನ್ನು ತೆಗೆದು ಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಮಾನ್ಯ ನಂಜುಂಡಸ್ವಾಮಿಯವರು ಹೇಳಿದಂಥ ಮಾತು ಏನಿದೆ, ಇದು ತಾತ್ಕಾಲಿಕವಾಗಿರುವ ಆಜ್ಞೆ ಇದು ೩೦-೬-೧೯೯೦ಕ್ಕೆ ಕೊನೆಯಾಗುತ್ತದೆ ಆದರೆ ಇದು ತಾತ್ವಿಕವಾಗಿ ಸರಿಯಲ್ಲವೆಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ಈ ಮಾತನ್ನು ಕೆ. ಹೆಚ್. ಪಾಟೀಲರು ಒಪ್ಪಿಕೊಳ್ಳುತ್ತಾರೆಂದು ತಿಳಿದುಕೊಂಡಿದ್ದೇನೆ. ಅವರು ಸರ್ಕಾರದಲ್ಲಿದ್ದಾರೆ. ಆದ್ದರಿಂದ ಅದು ಸರಿಯಾಗಿದೆ ಎಂಬ ಕಾರಣಕ್ಕೋಸ್ಕರ ಹೇಳುವುದಾದರೆ ನನ್ನ ಅಭ್ಯಂತರವೇನಿಲ್ಲ ಆದರೂ ಸಹ ಇವತ್ತಿನ ದಿವಸ ಆರೋಗ್ಯಕರವಾದ ಸಹಕಾರ ಚಳುವಳಿ ನಮ್ಮ ದೇಶದಲ್ಲಿ ಬೆಳೆಯಬೇಕಾದರೆ ಸುಸ್ತಿದಾರರಿಗೆ ಮತದಾನವನ್ನು ಕೊಡುವ ಮಾತಾಗಲಿ, ಅಥವಾ ಅವರನ್ನು ಆಡಳಿತ ಮಂಡಳಿಗೆ ತರುವಂತಹ ಕಾರಣವಾಗಲಿ ಸರಿಯಲ್ಲ. ಇದರಲ್ಲಿ ಒಂದು ಗುಜುಗುಜು ಇದೆ, ಒಂದು ವದಂತಿ ಇದೆ. ಅದನ್ನು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ಈಗಿರುವಂತಹ ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದ ಸಹಕಾರ ಸಂಸ್ಥೆಗಳ ಆಡಳಿತ ಮಂಡಲಿಯನ್ನು ರದ್ದು ಮಾಡಿ ಹೊಸ ಆಡಳಿತಾಧಿಕಾರಿಯನ್ನು ನೇಮಿಸುವಂತಹ ಆಲೋಚನೆ ಸರ್ಕಾರಕ್ಕೆ ಇದೆ ಎಂಬ ಮಾತನ್ನು ಕೇಳಿದ್ದೇವೆ. ಇದರ ಬಗ್ಗೆ ಕೆಲವರ ಒತ್ತಾಯ ಇದೆ ಎಂಬ ಮಾತನ್ನು ಕೇಳಿದ್ದೇನೆ. ಇದು ಸರಿಯೋ ತಪ್ಪೋ ಗೊತ್ತಿಲ್ಲ. ಯಾವುದೇ ಕಾರಣದಿಂದ ಈ ದೇಶದಲ್ಲಿ ಅಂತಹ ಒಂದು ಪಾಪದ ಕೆಲಸವನ್ನು ಮಾಡಲಿಕ್ಕೆ ಹೋಗಬೇಡಿ ಯಾವುದೇ ಪಕ್ಷದವರಿರಲಿ, ಈ ಚುನಾವಣೆ ಮುಂದಕ್ಕೆ ಹೋಗಿದೆ ಎಂಬ ನೆಪ ಮಾಡಿಕೊಂಡು ಈ ದೇಶದಲ್ಲಿರುವ ಎಲ್ಲಾ ತಾಲ್ಲೂಕು, ಜಿಲ್ಲಾ ರಾಜ್ಯ ಮಟ್ಟಗಳ ಸರಕಾರ ಆಡಳಿತ ಮಂಡಲಿಯನ್ನು ವಜಾ ಮಾಡಿ ಬೇರೆಯವರನ್ನು ತಾವು ಆಡಳಿತಾಧಿಕಾರಿಯನ್ನಾಗಿ ಅಥವಾ ವಿಶೇಷಾಧಿಕಾರಿಯನ್ನಾಗಿ ತರಬೇಕೆಂದು ಮನಸ್ಸು ಮಾಡಿದ್ದರೆ ಆದಕ್ಕಿಂತ ದೊಡ್ಡ ಪಾಪವನ್ನು ನಿಮ್ಮ ಜೀವಮಾನದಲ್ಲಿ ಮಾಡಿರಲಿಕ್ಕಿಲ್ಲ ಮುಂದೆಯೂ ಮಾಡಲಿಕ್ಕೆ ಸಾಧ್ಯವಿಲ್ಲವೆಂಬ ಮಾತನ್ನು ಹೇಳುತ್ತೇನೆ. ಇದರ ಬಗ್ಗೆ ತಾವು ನಿಖರವಾದ ಅಭಿಪ್ರಾಯವನ್ನು ಹೇಳಬೇಕು, ಇವತ್ತಿನ ದಿವಸ ಕೆಲವು ಸೂಚನೆಗಳನ್ನು ಸಹಕಾರಿ ಸಂಘಗಳ ಕಾಯಿದೆ ೩೦ (ಬಿ) ಪ್ರಕಾರ ಕೊಟ್ಟಿದ್ದೀರಿ ಯಾವುದೇ ಸರ್ಕಾರ ಇದ್ದರೂ ಇದನ್ನು ಕೊಡುತ್ತಾರೆ ಎನ್ನುವ ಮಾತನ್ನು ಹೇಳುತ್ತೇನೆ. ಆದರೆ ಕೊಡುವಂತಹ ಕಾಲದಲ್ಲಿ ತಾವು ಗಮನಿಸಬೇಕಾದ ವಿಚಾರವನ್ನು ತಾವು ಪರಿಶೀಲನೆ ಮಾಡಬೇಕು. ಮೊನ್ನೆ ಒಂದು ಆದೇಶವನ್ನು ಹೊರಡಿಸಿದ್ದಾರೆ, ಈ ಕರ್ನಾಟಕ ಹಾಲು ಉತ್ಪಾದಕರ ಮಹಾ ಮಂಡಲಿ ಏನಿದೆ ಆದರ ನೌಕರರನ್ನು ನೇಮಕಪಡಿಸುವುದಕ್ಕೆ ಒಂದು ಆದೇಶವನ್ನು ಹೊರಡಿಸಿದ್ದೀರಿ. ಇದು ಸರಿಯೋ ? ಇದನ್ನು ತಮಗೇ ಬಿಡುತ್ತೇನೆ ನಿಮ್ಮ ಒಂದು ನೀತಿಯ ಆಧಾರದ ಮೇಲೆ ಮಾಡಿದ್ದು, ಸರಿ ಎಂದು ಹೇಳುವುದಾದರೆ ಅದು ನಿಮಗೇ ಬಿಟ್ಟಿದ್ದು ಆದರೆ ಸಹಕಾರ ಸಂಘಕ್ಕೆ ಒಂದು ಕಾನೂನು ಇದೆ, ಒಂದು ಬೈಲಾ ಇದೆ ಆದರ ಪ್ರಕಾರ ನೌಕರರನ್ನು ನೇಮಕಮಾಡಿಕೊಳ್ಳುವುದಕ್ಕೆ ಆದರ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳಲಿಕ್ಕೆ ಅವರ ಸೇವಾ ನಿಯಮಗಳನ್ನು ರೂಪಿಸುವುದಕ್ಕೆ

ಸಂಬಂಧಪಟ್ಟ ಮಹಾಮಂಡಲಿಗೆ ಅಧಿಕಾರ ಇದೆ. ಆದರೆ ತಾವು ಏನು ಮಾಡಿದ್ದೀರಿ ಅದನ್ನು ಚಲಾಯಿಸುವುದಕ್ಕೆ ಅವರಿಗೆ ಅವಕಾಶ ಕೊಡದೆ ತಪ್ಪೋ, ಸರಿಯೋ, ಈ ನೌಕರರನ್ನು ನೇಮಕಮಾಡಿ ಕೊಳ್ಳಬೇಕು. ಈ ನೌಕರರ ಬೇಡಿಕೆಯನ್ನು ನೀವು ಒಪ್ಪಿಕೊಳ್ಳಬೇಕೆಂಬ ಮಾತನ್ನು ನೀವು ಸಹಕಾರ ಸಂಘಗಳ ಕಾಯಿದೆ ೩೦ (ಬಿ) ಪ್ರಕಾರ ಹೇಳಿದ್ದೀರಿ ಇದು ಸರಿಯೇ ? ಅದರ ಅರ್ಥ ಆ ಸಹಕಾರ ಸಂಘಗಳ ನೌಕರರು ಏನಿದ್ದಾರೆ, ಅವರ ಬೇಡಿಕೆಗಳಿಗೆ ನಾನು ವಿರೋಧ ಎನ್ನುವ ಮಾತನ್ನು ಹೇಳುತ್ತಿಲ್ಲ, ಅದು ಸರಿಯೋ ತಪ್ಪೋ ಶಿಫಾರ್ಸು ಮಾಡಿ ಸಹಕಾರ ಸಂಘದ ಆರ್ಥಿಕ ಹಿತದ ದೃಷ್ಟಿಯಿಂದ ತಾವು ಆ ಕೆಲಸವನ್ನು ಮಾಡುವುದಾದರೆ ಅದು ತಮಗೆ ಬಿಟ್ಟ ವಿಚಾರ ಆ ಒಂದು ನೀತಿಯಿಂದ ತಾವು ಏನಾದರೂ ಈ ಸಹಕಾರಿ ಕ್ಷೇತ್ರದ ಮಹಾ ಮಂಡಲಕ್ಕೆ ಒಳ್ಳೆಯದಾಗುತ್ತದೆ ಎಂಬ ಭಾವನೆ ಇದ್ದರೆ ತಾವು ಮಾಡಿ. ಆದರೆ ನನ್ನ ಅಭಿಪ್ರಾಯವನ್ನು ಹೇಳುತ್ತೇನೆ. ನಿಜವಾಗಿಯೂ ನೌಕರರ ಸೇವಾ ನಿಯಮಗಳ ಅಡಿಯಲ್ಲಿ ಕಾನೂನು ಪ್ರಕಾರ ಅವರಿಗೆ ಅವಕಾಶ ಇದ್ದರೂ ಸಹ ಅವರಿಗೆ ಅವಕಾಶವನ್ನು ಕೊಡುವಂಥ ರೀತಿಯಲ್ಲಿ ತಮ್ಮದೆ ಆದಂತಹ ಕಾರಣದಿಂದ ತಮ್ಮದೇ ಆದಂಥ ಮಂತ್ರಿಯೊಬ್ಬರ ಭಾವನೆಗೆ ಅನುಗುಣವಾಗಿ ಇವತ್ತಿನ ದಿವಸ ಈ ಕಾನೂನನ್ನು ಉಪಯೋಗಿಸುವುದಕ್ಕೆ ಪ್ರಯತ್ನ ಮಾಡಿದರೆ ಅದಕ್ಕೆ ಕೊನೆಯಿಲ್ಲ. ನಿಜವಾಗಿಯೂ ಸಹ ಈ ಎಲ್ಲಾ ದೃಷ್ಟಿಯಿಂದ ಸಹಕಾರಿ ಕ್ಷೇತ್ರದ ಬೆಳವಣಿಗೆ ಏನಿದೆ, ಇದು ಒಳ್ಳೆಯ ಬೆಳವಣಿಗೆ ಅಲ್ಲವೆನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

೩-೩೫ ಪಿ. ಎಂ.

ಆದಾದ ಮೇಲೆ ಈ ಮಹಾ ಮಂಡಲದ ನೌಕರರ ಬಗ್ಗೆ ಒಂದು ಹೊಸ ಆದೇಶವನ್ನು ಹೊರಡಿಸಿದ್ದಾರೆ ಅವರನ್ನು ವರ್ಗ ಮಾಡುವಂತಹ ಅಧಿಕಾರವನ್ನು ನೀವೇ ಇಟ್ಟುಕೊಳ್ಳಬೇಕೆಂದು ಇದ್ದೀರಿ. ಇದು ನಿಮಗೆ ಏಕೆ ಬೇಕು ? ಸಹಕಾರ ಸಂಘದ ಕಾರ್ಯದರ್ಶಿಗಳನ್ನು ವರ್ಗ ಮಾಡುವುದಕ್ಕೆ ಸರಕಾರ ಅಧಿಕಾರ ತೆಗೆದುಕೊಳ್ಳಬೇಕೆನ್ನುವ ಕೆಟ್ಟ ಪರಿಸ್ಥಿತಿ ಏಕೆ ಬಂತು ? ಅವರು ಕೆಲಸ ಮಾಡಲಿಲ್ಲವೆಂದರೆ ನಿಯಮಾವಳಿ ಪ್ರಕಾರ ಕ್ರಮ ತೆಗೆದುಕೊಳ್ಳಿ ಇದಕ್ಕೆ ಬದಲಾಗಿ ಸಹಕಾರ ಸಂಘಗಳ ಕಾರ್ಯದರ್ಶಿಗಳವರನ್ನು ವರ್ಗ ಮಾಡುವಂತಹ ಅಧಿಕಾರ ತನಗೆ ಬೇಕೆಂದು ಆ ಅಧಿಕಾರವನ್ನು ತೆಗೆದು ಕೊಳ್ಳತಕ್ಕಂತಹ ಪ್ರಯತ್ನ ಏನು ಮಾಡಿದ್ದೀರಿ ಇದು ನಿಜವಾಗಿಯೂ ಜನತಂತ್ರೀಕರಣಕ್ಕೆ ವಿರುದ್ಧವಾದುದ್ದು. ನಾವುಮಾತನಾಡುವಾಗಲೆಲ್ಲಾ ಪ್ರೊಫೆಷನಲ್‌ಸೇಷನ್ ಡೆಮಾಕ್ರೆಟೈಸೇಷನ್ ಎಂದು ಹೇಳುತ್ತೇವೆ. ಈಮಾತನ್ನು ಹೇಳುವಾಗ ಎಷ್ಟರಮಟ್ಟಿಗೆ ತಮ್ಮ ಕಾರ್ಯಾಚರಣೆಯಲ್ಲಿ ಕಾರ್ಯ ನೀತಿಯಲ್ಲಿ ಅದನ್ನು ಜಾರಿ ಮಾಡುವಾಗ ಈ ಮಾತನ್ನು ಅನುಸರಿಸುತ್ತೀರಿ ಎಂಬುದನ್ನು ಆಲೋಚನೆ ಮಾಡಬೇಕು. ನಿಜವಾಗಿ ಇದು ಸರಿಯಾದಂತಹ ಪರಂಪರೆ ಅಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ಒಂದು ನೀತಿಗನುಸಾರವಾಗಿ ಕ್ರಮ ತೆಗೆದುಕೊಳ್ಳುವುದಾದರೆ ಅದು ನಿಮಗೆ ಬಿಟ್ಟಂತಹ ವಿಚಾರ ಈ ಹಿಂದೆ ಸರಕಾರ ವೆಂಕಟಪ್ಪಯ್ಯ ಸಮಿತಿ ಹಾಗೂ ಕೆ. ಹೆಚ್. ಪಾಟೀಲರು ಕೂಡ ಒಂದು ವರದಿಯನ್ನು ಕೊಟ್ಟಿದ್ದರು. ಈಗಿರುವಂತಹ ಸಹಕಾರಿ ಕಾಯಿದೆಯಲ್ಲಿನ ಅನೇಕ ವಿಚಾರಗಳನ್ನು ಪರಿಶೀಲಿಸಿ ವರದಿ ಕೊಡುವಂತೆ ಈ ಸಮಿತಿಗಳನ್ನು ನೇಮಿಸಿದ್ದರು. ಅಂತರ ರಾಜ್ಯ ಸಹಕಾರ ಕಾಯಿದೆ ಆಗಿರಬಹುದು ಅಥವಾ ಬೇರೆ ವಿಷಯಗಳು ಆಗಿರಬಹುದು. ಅದರಲ್ಲಿ ಅಳವಡಿಸಿರುವಂತಹ ಅನೇಕ ವಿಚಾರಗಳನ್ನು ಗಮನಿಸಬೇಕಾಗುತ್ತದೆ. ತನ್ನ ವರದಿಯಲ್ಲಿ ಜನತಂತ್ರೀಕರಣವನ್ನು ಮತ್ತು ವೃತ್ತಿ ಪರತೆಯನ್ನು ಗಮನದಲ್ಲಿಟ್ಟುಕೊಂಡು ಕಾನೂನನ್ನು ತಿದ್ದುಪಡಿ ಮಾಡುವುದಕ್ಕೆ ಯೋಗ್ಯವಾದಂತಹ ಸಲಹೆಯನ್ನು ಕೊಡಲಿಕ್ಕೆಂದು ಈ ಸಮಿತಿಗಳನ್ನು ಮಾಡಿದ್ದರು. ಆ ಸಮಿತಿ ತನ್ನ ವರದಿಯನ್ನು ಕೊಟ್ಟಿದೆ ಅದರ ಬಗ್ಗೆ ನಾನು ಏನೂ ಹೇಳುತ್ತಿಲ್ಲ. ಅದಕ್ಕಿಂತ ಪೂರ್ವಭಾವಿಯಾಗಿ ಇಲಾಖೆಯ ಹಿರಿಯ ಅಧಿಕಾರಿಗಳ ನೆರವಿನಿಂದ ಈಗಿರುವಂತಹ ಸಹಕಾರಿ ಕಾಯಿದೆಗೆ ತಿದ್ದುಪಡಿ ಮಾಡುವುದಕ್ಕೆ ಒಂದು ಪ್ರಕ್ರಿಯೆ ಪ್ರಾರಂಭವಾಯಿತು. ಅದರಲ್ಲಿ ಬಹಳ ಒಳ್ಳೆಯ ಕೆಲಸವನ್ನು ಅಂದು ಇದ್ದಂತಹ ಅಧಿಕಾರಿಗಳು ಮಾಡಿದ್ದಾರೆಂಬ ಮಾತನ್ನು ನಾನೇ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಈ ರಾಜ್ಯದಲ್ಲಿ ಮಾತ್ರವಲ್ಲ, ಈ ದೇಶದಲ್ಲಿರುವಂತಹ ಅನೇಕ ಸಹಕಾರ ಕಾಯಿದೆಗಳನ್ನು ವಿಚಾರಮಾಡಿ ಅಂತರರಾಜ್ಯ ಸಹಕಾರ ಕಾಯಿದೆ ಏನು ಇದೆ, ಅದನ್ನು ಗಮನದಲ್ಲಿಟ್ಟುಕೊಂಡು ಮತ್ತು ಮಾನ್ಯ ಕೆ. ಹೆಚ್. ಪಾಟೀಲರ ವರದಿ ಹಾಗೂ ಇನ್ನೂ ಅನೇಕ ಸಮಿತಿಗಳು ಕೊಟ್ಟಿದ್ದಂತಹ ವರದಿಗಳನ್ನು ವೆಂಕಟಪ್ಪಯ್ಯನವರ ಸಮಿತಿಯ ವರದಿಯನ್ನು ಗಮನದಲ್ಲಿಟ್ಟುಕೊಂಡು ಈಗಿರುವಂತಹ ಕಾಯಿದೆಗೆ ಸಮಗ್ರವಾದಂಥ ತಿದ್ದುಪಡಿ ತರಬೇಕೆಂಬ ಬಗ್ಗೆ ಮತ್ತು ಅದಕ್ಕೆ ಬೇಕಾದಂತಹ ಸೂಚನೆಗಳನ್ನು ಅಥವಾ ಪ್ರಸ್ತಾವನೆಗಳನ್ನು ಮಾಡಲಿಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ ಇದರ ಬಗ್ಗೆ ಇಲ್ಲಿಯವರೆಗೆ ಏನು ಮಾಡಿದ್ದಾರೆಂಬುದನ್ನು ತೆಗೆದು ನೋಡಬೇಕು. ಈ ಒಂದು ಪ್ರಕ್ರಿಯೆ ಏನು ಪ್ರಾರಂಭವಾಗಿತ್ತು ಅದನ್ನು ತಾವು ಒಪ್ಪುತ್ತೀರೋ ಅಥವಾ ಬಿಡುತ್ತೀರೋ ಅದು ಗೊತ್ತಿಲ್ಲ. ಆದರೆ ಇತ್ತೀಚಿಗೆ ಏನೋ ಜನತಂತ್ರೀಕರಣ ಮಾಡಬೇಕು

ಅಧಿಕಾರ ವಿಕೇಂದ್ರೀಕರಣ ಮಾಡಬೇಕು, ಸರ್ಕಾರದ ಹಸ್ತಕ್ಷೇಪ ಇರಬಾರದೆಂದು ಹೇಳುತ್ತೇವೆ, ಚುನಾವಣೆಗಳು ಸರಿಯಾದ ಕಾಲದಲ್ಲಿ ಆಗಬೇಕೆಂದು ಹೇಳುತ್ತೇವೆ ಮತ್ತು ಸಂಬಂಧಪಟ್ಟಂತಹವರಿಗೆ ಅಂದರೆ ಅಧಿಕಾರಿಗಳಿಗೆ ಬದಲು ಅಧಿಕಾರೇತರರಿಗೆ ಹೊಣೆಗಾರಿಕೆಯನ್ನು ನಿರ್ಧಾರಗೊಳಿಸಬೇಕು. ಈ ರೀತಿಯಾದಂಥ ಅನೇಕ ನಮ್ಮ ಭಾವನೆಗಳಿಗೆ ಉತ್ತರವಾಗಿ ಅವರು ಆಲೋಚನೆ ಮಾಡಿದ್ದರು ಇವೊತ್ತಿನ ದಿವಸ ಏನು ಸಹಕಾರ ಕಾಯಿದೆಯನ್ನು ಸಮಗ್ರವಾಗಿ ಪುನರ್ ಪರಿಶೀಲಿಸಿ ಹೊಸ ಕಾಯಿದೆಯನ್ನು ರೂಪು ಮಾಡಬೇಕು, ಇಲ್ಲದಿದ್ದರೆ ಈಗಿರುವಂತ ಕಾಯಿದೆಗೆ ತಿದ್ದುಪಡಿ ತರಬೇಕೆಂಬ ಭಾವನೆ ಏನು ಇತ್ತು ಅದನ್ನು ಪರಿಗಣಿಸಿ ಅವನ್ನು ಪರಿಶೀಲಿಸಿ ಒಂದು ಸಮಗ್ರವಾದ ಕಾಯಿದೆಯನ್ನು ತಾವು ತರಬೇಕು. ಈ ಸಹಕಾರಿ ಕ್ಷೇತ್ರದಲ್ಲಿ ಒಂದು ಹೊಸ ಕಾಯಿದೆ ಬರದಿದ್ದರೆ ಈಗಿರುವಂತಹ ಕಾಯಿದೆಯಲ್ಲಿರುವ ಲೋಪ ದೋಶಗಳಿಂದಾಗಿ ನಾವು ಯಾರ ಮೇಲೂ ಹೊಣೆಗಾರಿಕೆಯನ್ನು ನಿಧಾರ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಸಹಕಾರಕ್ಷೇತ್ರದಲ್ಲಿ ಚಳುವಳಿ ಏನು ಇದೆ ಅದು ಸರಿಯಾಗಿ ನಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಒಂದು ಕಾನೂನನ್ನು ತರಬೇಕೆಂದು ಹೇಳುತ್ತೇನೆ.

ಇನ್ನು ಕೊನೆಯದಾಗಿ ಈ ಸಹಕಾರ ಇಲಾಖೆ ಮತ್ತು ಲೆಕ್ಕ ಪರಿಶೋಧನಾ ಇಲಾಖೆಯ ಬಗ್ಗೆ ನಾನು ಕೆಲವು ಮಾತುಗಳನ್ನು ನಾನು ಹೇಳಿದ್ದೇನೆ, ಇದು ಯಾರನ್ನೂ ಕೂಡ ನಾನು ಉದ್ದೇಶಿಸಿ ಹೇಳಿರತಕ್ಕ ಮಾತಲ್ಲ. ಆಗಿರತಕ್ಕ ತಪ್ಪುಗಳೇನಿವೆ ಆ ತಪ್ಪುಗಳಿಗೆ ಸಂಬಂಧಪಟ್ಟಂತೆ ನಾನು ಹೇಳಿದ್ದೇನೆ. ಆ ತಪ್ಪುಗಳನ್ನು ಸರಿಪಡಿಸುವಂಥ ಕೆಲಸ ನಡೆಯಬೇಕು. ಇದರಲ್ಲಿ ವೈಯುಕ್ತಿಕ ವಿಚಾರಗಳಿಗೆ ಆಸ್ಪದ ಕೊಡದೆ ಸಂಬಂಧಪಟ್ಟವರ ಮೇಲೆ ತಾವು ಕಠಿಣ ಕ್ರಮವನ್ನು ತೆಗೆದುಕೊಳ್ಳಬೇಕು. ಇನ್ನು ಮಾನ್ಯ ಜಾರ್ಜ್‌ರವರ ಬಗ್ಗೆ ಹೇಳದಿದ್ದರೆ ತಪ್ಪಾಗುತ್ತದೆ. ಆದರೆ ನಾನು ಹೇಳಬೇಕಾದ್ದನ್ನು ನನ್ನ ಮಿತ್ರರಾದ ಮಾನ್ಯ ಸಿಂಧ್ಯಾರವರು ಹೇಳುತ್ತಾರೆ. ಆದರೂ ಒಂದು ಮಾತನ್ನು ಹೇಳಲೇಬೇಕಾದ್ದು ಏನೆಂದರೆ, ಸರ್ಕಾರದ ನೀತಿ ಕೂಡ ಖಾಸಗೀಕರಣ ಆಗಬಾರದು. ಖಾಸಗೀಕರಣಕ್ಕೆ ತಾವು ಯಾವುದೇ ರೀತಿಯಿಂದಲೂ ಬೆಂಬಲವನ್ನು ನೀಡಬಾರದೆಂದು ಹೇಳಬಯಸುತ್ತೇನೆ. ಅದಕ್ಕಿಂತ ಹೆಚ್ಚಿಗೆ ಈ ಸಾರಿಗೆ ಇಲಾಖೆಯಲ್ಲಿ ಗ್ರಾಮೀಣ ಮಾರ್ಗಗಳನ್ನು ತಾವು ನಿಲ್ಲಿಸಿದ್ದೀರಿ. ಇದಕ್ಕೆ ಕಾರಣ ಏನೋ ಗೊತ್ತಿಲ್ಲ. ನಾವು ಊರಿಗೆ ಹೋದರೆ ಸುತ್ತಮುತ್ತಲ ಹಳ್ಳಿಯ ಜನರೆಲ್ಲರೂ ನಮ್ಮ ಮನೆಗೆ ಬಂದು ಸ್ವಾಮಿ, ಬಸ್ಸುಗಳನ್ನು ನಿಲ್ಲಿಸಿದ್ದಾರೆ, ಬಸ್ಸುಗಳನ್ನು ನಿಲ್ಲಿಸಿದ್ದಾರೆ ಎಂದು ಹೇಳುತ್ತಾರೆ. ಇವತ್ತು ತಾವು ಈ ಬೆಂಗಳೂರಿನಲ್ಲಿ ಏನು ಸಾರಿಗೆ ಸೌಲಭ್ಯವನ್ನು ಕೊಟ್ಟಿದ್ದೀರಿ ಇದಕ್ಕೆ ನನ್ನ ಆಕ್ಷೇಪ ಏನೂ ಇಲ್ಲ, ಆದರೆ ಗ್ರಾಮೀಣ ಜನರ ಅವಶ್ಯಕತೆಗೆ ಅನುಗುಣವಾಗಿ ಸಹ ಹೊಸ ಹೊಸ ಮಾರ್ಗಗಳನ್ನು ಗ್ರಾಮಾಂತರ ಪ್ರದೇಶದಲ್ಲಿ ತೆಗೆಯಬೇಕು. ಇದು ಅತ್ಯಂತ ಅವಶ್ಯಕ. ಯಾವುದೋ ಒಂದು ಸಣ್ಣ ಪುಟ್ಟ ಕಾರಣಕ್ಕಾಗಿ ಆ ಮಾರ್ಗಗಳನ್ನು ನಿಲ್ಲಿಸಬೇಡಿ ಎಂದು ಹೇಳಬಯಸುತ್ತೇನೆ. ಇದರ ಬಗ್ಗೆ ಹೆಚ್ಚಿನ ವಿಚಾರಗಳನ್ನು ಮಾನ್ಯ ಮಿತ್ರರಾದ ಸಿಂಧ್ಯರವರು ಮಾತನಾಡುವುದರಿಂದ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ.

ಇನ್ನು ಅದೇ ರೀತಿಯಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಏನಿದೆ, ಇದರ ಬಗ್ಗೆಯೂ ಕೂಡ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಕಾರಣ, ಕಾಲಾವಕಾಶ ಇಲ್ಲ, ಆದ್ದರಿಂದ ಒಂದೇ ಒಂದು ಮಾತನ್ನು ಹೇಳಲಿಕ್ಕೆ ಇಚ್ಚೆಪಡುತ್ತೇನೆ. ಸ್ವಾಮಿ, ತಮ್ಮ ಇಲಾಖೆಯ ಅಡಿಯಲ್ಲಿ ಗೋಡೌನ್‌ಗಳ ಮೇಲೆ ದಾಳಿ (ರೈಡ್ಸ್) ಏನು ಮಾಡುತ್ತೀರಿ, ಈ ದಾಳಿಗಳನ್ನು ಯಾವ ಉದ್ದೇಶದಿಂದ ಮಾಡುತ್ತೀರಿ ಎಂಬುದನ್ನು ಒಮ್ಮೆ ಪರಿಶೀಲಿಸಿದರೆ ಸಾಕು. ನಾನು ತಮಗೆ ಒಂದೇ ಒಂದು ಉದಾಹರಣೆಯನ್ನು ಕೊಡುತ್ತೇನೆ. ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಹಾಗೂ ಜಿಲ್ಲಾಧಿಕಾರಿಗಳು ಅಗತ್ಯ ವಸ್ತುಗಳ ಕಾಯಿದೆಯನ್ವಯ ಕೆಲವು ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ. ಈ ರೀತಿಯ ಕ್ರಮಗಳನ್ನು ಏತಕ್ಕೆ ತೆಗೆದುಕೊಳ್ಳುತ್ತಾರೆಂದರೆ, ಅದು ಎಣ್ಣೆ ಆಗಿರಬಹುದು, ಅಕ್ಕಿ ಆಗಿರಬಹುದು ಅಥವಾ ಇನ್ನಾವುದೇ ಅಗತ್ಯ ವಸ್ತುಗಳು ಇರಬಹುದು, ಅವುಗಳನ್ನು ಸ್ಟೋರೇಜ್ ಮಾಡುವುದರ ಮುಖಾಂತರ ಕಳ್ಳಖದೀಮರು ಹೆಚ್ಚು ಲಾಭ ಮಾಡಿಕೊಳ್ಳುತ್ತಾರೆ, ಲೆಕ್ಕವೇ ಇಲ್ಲದಂತೆ ಮಾಡುತ್ತಾರೆ, ಅಥವಾ ಎಲ್ಲಾ ವಸ್ತುಗಳನ್ನೂ ಕೂಡಿಟ್ಟು ಮಾರುಕಟ್ಟೆಯಲ್ಲಿ ಅದರ ಅಭಾವವನ್ನು ತೋರಿಸಿ ಹೆಚ್ಚು ಬೆಲೆ ಆಗುವಂತೆ ಮಾಡುವ ಸಲುವಾಗಿ ಮಾಡುತ್ತಾರೆ. ಇಂಥ ಅನೇಕ ಸಂದರ್ಭಗಳಲ್ಲಿ ರೆವಿನ್ಯೂ ಇಲಾಖೆಯವರೂ ಮತ್ತು ಬೇರೆ ಇಲಾಖೆಯವರೂ ಸೇರಿ ಈ ದಾಳಿಯನ್ನು ಮಾಡುತ್ತಾರೆ. ತಮಗೂ ಗೊತ್ತಿದೆ, ಈ ರೀತಿಯ ದಾಳಿಯನ್ನು ಮಾಡಿದ ಮೇಲೆ ಅವರು ಏನು ಮಾಡಬೇಕು ? ತಮಗೆ ಒಂದು ಉದಾಹರಣೆಯನ್ನು ಹೇಳುವುದಾದರೆ ಒಮ್ಮೆ ಚಿತ್ರದುರ್ಗ ಜಿಲ್ಲೆಯಲ್ಲಿ ಒಂದು ದಾಳಿಯನ್ನು ಮಾಡಿದರು. ನಾನು ಈ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡದಿದ್ದರೆ ನನ್ನ ಕರ್ತವ್ಯ ಲೋಪ ಮಾಡಿದಂತಾಗುತ್ತದೆ. ಚಿತ್ರದುರ್ಗ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಅಂದರೆ

ಚಿತ್ರದುರ್ಗ, ಹಿರಿಯೂರು, ಚಳ್ಳಕೆರೆ ಮುಂತಾದ ಕಡೆಗಳಲ್ಲಿ ಎಣ್ಣೆ ಮಿಲ್ಲುಗಳ ಮೇಲೆ ದಾಳಿಯನ್ನು ಮಾಡಿಸಿದಿರಿ. ಆದರೆ ಆ ದಾಳಿಯನ್ನು ಮಾಡಿದಾಗ ಅವರಲ್ಲಿದ್ದಂಥ ರೆಕಾರ್ಡ್ಸನ್ನು ಏನು ಸೀಜ್ ಮಾಡಬೇಕಾಗಿತ್ತೋ ಅದನ್ನು ಮಾಡಲಿಲ್ಲ. ಸ್ಟಾಕ್ ಬುಕ್‌ನ್ನೂ ಸೀಜ್ ಮಾಡಲಿಲ್ಲ. ಅದನ್ನೆಲ್ಲಾ ಅಲ್ಲೇ ಬಿಟ್ಟು ಬಂದರು. ಅವರಲ್ಲಿ ಏನೇನು ಇತ್ತು ಎಂಬುದನ್ನು ಇವರು ಬರೆದುಕೊಂಡು ಬಂದರು. ಇವರು ಅಲ್ಲಿ ಪುಸ್ತಕಗಳನ್ನು ಬಿಟ್ಟು ಬಂದಿದ್ದರಿಂದ ಅವರು ಏನು ಮಾಡಿದರು ಎಂದರೆ ಇವರು ಏನು ಬರೆದುಕೊಂಡು ಬಂದಿದ್ದರೋ ಅದಕ್ಕೆ ೫-೧೦-೧೫-೨೦ ಕೆ.ಜಿ. ವ್ಯತ್ಯಾಸ ಎಂದು ಲೆಕ್ಕವನ್ನು ತೋರಿಸಿದರು. ಸೀಜ್ ಮಾಡುವುದು ಹೋಗಲಿ, ಅದಕ್ಕೆ ಸಂಬಂಧಪಟ್ಟ ಪೋಲೀಸ್ ಸ್ಟೇಷನ್‌ಗಾಗಲಿ, ಬೇರೆಯವರಿಗಾಗಲಿ ತಿಳಿಸಿದರೇ ಎಂದರೆ ಅದನ್ನೂ ಮಾಡಲಿಲ್ಲ. ತಿಂಗಳುಗಟ್ಟಲೆ ಆದರೂ ಕೂಡ ಸಂಬಂಧಪಟ್ಟ ಜಿಲ್ಲಾಮಟ್ಟದ ಅಧಿಕಾರಿಗಳು ದಾಳಿ ಮಾಡಿದ ಮೇಲೆ ಅವರನ್ನು ಕೋರ್ಟಿಗೆ ಕಳುಹಿಸಲಿಲ್ಲ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಈ ದಾಳಿಯ ಉದ್ದೇಶ ಏನಿದೆ, ಸರ್ಕಾರದ ಉದ್ದೇಶ ಏನಿದೆ ಆ ಉದ್ದೇಶದಿಂದ ಈ ದಾಳಿಯನ್ನು ಮಾಡಿದ್ದಲ್ಲ. ಕೇವಲ ವೈಯುಕ್ತಿಕವಾಗಿ ತೊಂದರೆ ಕೊಡಲಿಕ್ಕೆ ಅಥವಾ ಲಾಭವನ್ನು ಮಾಡಿಕೊಳ್ಳಲಿಕ್ಕೋಸ್ಕರ ಮಾಡಿದಂಥ ದಾಳಿಯೇ ಹೊರತು ಬೇರೆ ಅಲ್ಲ. ಆದ್ದರಿಂದ ಇಂಥ ದಾಳಿಗಳ ಬಗ್ಗೆ ತಾವು ಗಮನಹರಿಸಬೇಕು. ಯಾವ ಉದ್ದೇಶದಿಂದ ದಾಳಿ ಮಾಡುತ್ತಾರೆ ಆ ಉದ್ದೇಶ ಸಾಧನೆ ಆಗಿದೆಯೋ ಇಲ್ಲವೇ ಎಂಬುದನ್ನು ನೋಡಬೇಕು. ಇದಕ್ಕೆ ಬದಲಾಗಿ ದಾಳಿ ಮಾಡಿದವರು ಲಾಭವನ್ನು ಮಾಡಿಕೊಳ್ಳುವುದಕ್ಕೋಸ್ಕರ ಮಾಡುವುದಾದರೆ ಖಂಡಿತವಾಗಿ ಅಂಥ ದಾಳಿಗಳನ್ನು ಮಾಡಿಸಬೇಡಿ. ಏಕೆಂದರೆ ಅವರ ದುಡ್ಡು ಅವರ ಹತ್ತಿರವೇ ಆದರೂ ಇರಲಿ.

ಶ್ರೀ ಅಜೀಜ್ ಸೇಠ್.—ನಿಮ್ಮ ಹತ್ತಿರ ಏನೇನು ದಾಖಲೆಗಳಿವೆ ಅವನ್ನೆಲ್ಲಾ ನನಗೆ ಕಳುಹಿಸಿಕೊಡಿ.

ಶ್ರೀ ಹೆಚ್. ಏಕಾಂತಯ್ಯ.—ನಾನು ವಾಸ್ತವ ವಿಚಾರವನ್ನು ತಮಗೆ ಹೇಳಿದ್ದೇನೆ, ಇದು ಆಗಿಲ್ಲ ಎಂದು ಹೇಳುವುದಾದರೆ, ಆಗ ತಮಗೆ ನಾನು ಈ ದಾಖಲೆಗಳನ್ನು ಕಳುಹಿಸಿಕೊಡುತ್ತೇನೆ.

ಇನ್ನೊಂದು ವಿಚಾರ ಎಂದರೆ ಈ ಸಹಕಾರ ಸಂಘಗಳು ಮತ್ತು ನ್ಯಾಯಬೆಲೆ ಅಂಗಡಿಗಳ ಏನಿವೆ, ಅವುಗಳ ಮುಖಾಂತರ ಆಹಾರ ಪದಾರ್ಥಗಳನ್ನು ವಿತರಣೆ ಮಾಡತಕ್ಕ ವ್ಯವಸ್ಥೆ ಏನಿದೆ ಇದನ್ನು ನಾನು ಮಂತ್ರಿಯಾಗಿ ನೋಡಿದ್ದೇನೆ, ಶಾಸಕನಾಗಿ ನೋಡಿದ್ದೇನೆ. ನೀವು ಕೊಟ್ಟಂಥ ಮಾಲುಗಳು ಸರಿಯಾದ ರೀತಿಯಲ್ಲಿ ಬಳಕೆದಾರರಿಗೆ ತಲುಪುತ್ತಿಲ್ಲ,

ಪೂರ್ಣ ಪ್ರಮಾಣದಲ್ಲಿ ಹಂಚುವಂತಹ ನ್ಯಾಯಬೆಲೆ ಅಂಗಡಿಗಳಾಗಲಿ, ಸಹಕಾರ ಸಂಘಗಳಾಗಲಿ ಈ ದೇಶದಲ್ಲಿ ಬಹಳ ಕಡಿಮೆ. ಇದು ಬಹಳ ದುರ್ದೈವ. ನಾನು ಮಂತ್ರಿಯಾಗಿದ್ದಾಗ ಕೂಡ ಈ ಮಾತನ್ನು ಹೇಳಿದ್ದೆ. ಸಹಕಾರ ಸಂಘಗಳಲ್ಲಿ ಅಥವಾ ನ್ಯಾಯಬೆಲೆ ಅಂಗಡಿಗಳಲ್ಲಿ ಏನು ವಿತರಣೆ ಮಾಡಿದ್ದಾರೆಂಬುದನ್ನು ಕಾರ್ಡುಗಳಲ್ಲಿ ಬರೆಯುವುದಿಲ್ಲ. ಬರೆದಿದ್ದಾರೆಯೋ ಇಲ್ಲವೇ ಎಂಬುದನ್ನು ವಿಚಾರಣೆ ಮಾಡುವುದಕ್ಕೆ ಆಹಾರ ಇಲಾಖೆಯ ಅಧಿಕಾರಿಗಳು ಹೋಗಿದ್ದಾರೆಯೇ ಅಂದರೆ, ಇಲ್ಲ. ನೀವು ಯಾವ ನ್ಯಾಯ ಬೆಲೆ ಅಂಗಡಿಗಳಿಗೆ ಹೋಗಿ ನೋಡಿ; ಅಲ್ಲಿ ಕಾಂಗ್ರೆಸ್ಸಿನವರು ಇರಬಹುದು ಅಥವಾ ಜನತಾದವರು ಇರಬಹುದು, ಎಲ್ಲಾ ನ್ಯಾಯಬೆಲೆ ಅಂಗಡಿಗಳವರು ಮಾಡುವಂತಹ ವ್ಯವಹಾರ ಎಲ್ಲರಿಗೂ ಒಂದೇ ರೀತಿಯಾಗಿದೆ. ಇವತ್ತಿನ ದಿವಸ ಅದರಿಂದ ಲಾಭ ಮಾಡುವವರಿದ್ದಾರೆಯೋ ಹೊರತು, ರಿಯಾಯಿತಿ ದರದಲ್ಲಿ ಕೊಡಬೇಕೆಂಬುದಿಲ್ಲ. ರಿಯಾಯಿತಿ ದರದಲ್ಲಿ ಕೊಡುವ ಸಲುವಾಗಿ ೩೮-೪೦ ಕೋಟಿ ರೂಪಾಯಿಗಳನ್ನು ಏನು ಕೊಡುತ್ತಿದ್ದೇವೆ, ಅದರ ಲಾಭ ಯಾರಿಗೆ ಹೋಗುತ್ತಿದೆ ಎಂಬುದನ್ನು ವಿಚಾರ ಮಾಡಬೇಕು. ಈ ದೇಶದ ಬಡವರಿಗೆ ೨ ರೂಪಾಯಿಗೆ ಅಕ್ಕಿ ಒದಗಿಸುತ್ತೇವೆಂದು ನಾವು ಹೇಳುತ್ತೇವೆ. ಆದರೆ ಅದು ಅವರಿಗೆ ಸರಿಯಾಗಿ ಮುಟ್ಟುತ್ತಿಲ್ಲ. ಆಹಾರ ಇಲಾಖೆಯ ನೌಕರರಿಗೆ, ರಾಜಕೀಯ ಪುಢಾರಿಗಳಿಗೆ, ಮತ್ತು ಸಣ್ಣ ಪುಟ್ಟ ಅಧಿಕಾರಿಗಳಿಗೆ ಇದನ್ನು ಹಂಚುವ ವ್ಯವಸ್ಥೆ ಇದೆ. ಇದನ್ನು ಸುಧಾರಣೆ ಮಾಡಬೇಕೆಂದರೆ ಈ ಯೋಜನೆ ಫಲಪ್ರದವಾಗಿ ಕಾರ್ಯಗತವಾಗುತ್ತಿದೆಯೋ ಎಂಬುದನ್ನು ನೋಡಬೇಕು. ನಿಜವಾಗಿ ಬಹಳಷ್ಟು ನ್ಯಾಯಬೆಲೆ ಅಂಗಡಿಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಹಂಚಿಕೆಯಾಗುತ್ತಿಲ್ಲವೆಂದು ನಾನು ಹೇಳುತ್ತೇನೆ. ಆ ಹಂಚಿಕೆಯಾಗಬೇಕಾದರೆ ನೀವು ಹೊಣೆಗಾರಿಕೆಯನ್ನು ನಿರ್ಧಾರ ಮಾಡಬೇಕು. ಫುಡ್ ಇನ್‌ಸ್ಪೆಕ್ಟರ್ ಇರಬಹುದು, ಸಹಕಾರ ಇಲಾಖೆಯ ಇನ್ಸ್‌ಪೆಕ್ಟರ್ ಇರಬಹುದು ಅವರು ನ್ಯಾಯಬೆಲೆ ಅಂಗಡಿಗಳ ಲೆಕ್ಕ ನೋಡಿದ್ದಾರೆಯೇ ಅಂದರೆ ಇಲ್ಲ. ನಿಮಗೆ ಅನುಮಾನ ಇದ್ದರೆ ನನ್ನ ಹತ್ತಿರ ಕೇಳಿ, ತೋರಿಸುತ್ತೇನೆ.

ಶ್ರೀ ಕೆ. ಶಿವಮೂರ್ತಿ.— ನ್ಯಾಯಬೆಲೆ ಅಂಗಡಿಗಳನ್ನು ಸೃಷ್ಟಿ ಮಾಡಿದರು ಇವರೇ. ಅದರಲ್ಲಿ ಜನತಾ ಕಾರ್ಯಕರ್ತರೇ ಹೆಚ್ಚಾಗಿದ್ದಾರೆ.

ಶ್ರೀ ಹೆಚ್. ಏಕಾಂತಯ್ಯ.— ನಾನು ಭಾಷಣ ಮಾಡಬೇಕಾದರೆ ನೀವು ಇದಿದ್ದರೆ ಈ ಮಾತು ಹೇಳುತ್ತಿರಲಿಲ್ಲ. ಯಾವುದೇ ಸರ್ಕಾರ ತನ್ನ ನೀತಿ ನಿರ್ಧಾರ ಮಾಡಬೇಕಾದರೆ ತಾನು ನಂಬಿದ ತತ್ವಗಳ ರೀತಿಯಲ್ಲಿ ಮಾಡುತ್ತದೆ. ನಾನು ಹೇಳುವುದು ನೀತಿ ತಪ್ಪು ಎಂದು ಅಲ್ಲ. ಈ ದೇಶದ ಬಡಜನರಿಗೆ ರಿಯಾಯಿತಿ ದರದಲ್ಲಿ ಆಹಾರ ಧಾನ್ಯ ಕೊಡಬೇಕಾದ ಅಗತ್ಯ ಇದೆ. ಆದುದರಿಂದ ಅದು ಸರಿಯೆಂದು ಹೇಳುತ್ತೇನೆ. ಅದು ತಪ್ಪಿದ್ದರೆ ತಪ್ಪು ಎಂದು ಹೇಳಿ. ಯಾವ ನೀತಿ ಆಧಾರದ ಮೇಲೆ ನಾವು ಈ ಕಾರ್ಯಕ್ರಮವನ್ನು ಜಾರಿ ಮಾಡುತ್ತಿದ್ದೇವೆ ಅದನ್ನು ಜಾರಿ ಮಾಡುವಾಗ ಲೋಪದೋಷಗಳು ಇಲ್ಲದಂತೆ ನೋಡಿಕೊಳ್ಳಬೇಕು. ಯಾವ ಉದ್ದೇಶಕ್ಕೋಸ್ಕರ ನೀತಿ ನಿರ್ಧಾರ ಮಾಡಿದೆವು ಎಂದರೆ ಬಡಜನರಿಗೆ ಉಪಯೋಗವಾಗುವಂತೆ ಕಾರ್ಯಗತ ಮಾಡಿ ಎಂದು ಹೇಳಿದೆನೇ ಹೊರತು ಮತ್ತೆ ಏನೂ ಅಲ್ಲವೆಂದು ಹೇಳುತ್ತೇನೆ. ಮಾನ್ಯ ಶಿವಮೂರ್ತಿಯವರಿಗೆ ಗೊತ್ತು. ಅವರು ನನ್ನ ಜೊತೆಯಲ್ಲಿ ಮೀಟಿಂಗ್‌ನಲ್ಲಿರುತ್ತಾರೆ. ನನಗೆ ಗೊತ್ತಿರುವ ವಿಚಾರ ಅವರಿಗೆ ಗೊತ್ತಿದೆ, ಅವರಿಗೆ ಗೊತ್ತಿರುವುದು ನನಗೆ ಗೊತ್ತಿದೆ. ಅದರಲ್ಲೇನು ಎರಡು ಮಾತು ಇಲ್ಲ. ಕೊನೆಯದಾಗಿ ನಾನು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಸಚಿವರನ್ನು ಕೇಳುವುದು ಇಷ್ಟೇ. ನೀವು ಯಾವ ಯೋಜನೆಯನ್ನೇ ತೆಗೆದುಕೊಳ್ಳಿ, ಆ ಯೋಜನೆಯ ಲಾಭ ಈ ದೇಶದ ಸಾಮಾನ್ಯ ಜನರಿಗೆ ಮುಟ್ಟುವಂತೆ ಆಗಬೇಕು. ಮೊನ್ನೆ ಬೆಲೆ ಏರಿಸಿದಿರಿ. ಒಂದಕ್ಕೆ ೪೦ ಪೈಸೆ, ಮತ್ತೊಂದಕ್ಕೆ ೮೦ ಪೈಸೆ ಏರಿದೆ. ಅಕ್ಕಿ ಬೆಲೆ ೨.೭೦ ಇದ್ದದ್ದು ೩.೫೦ ಆಗಿದೆ ಎಂದು ಪತ್ರಿಕೆಯಲ್ಲಿ ಬಂದಿದೆ.

ಶ್ರೀ ಅಜೀಜ್‌ಸೇಟ್.— ೩.೬೫ ಇದ್ದುದು ೪.೧೦ ಆಗಿದೆ. ಕೇಂದ್ರ ಸರ್ಕಾರದವರು ಮಾಡಿದ್ದಕ್ಕೆ ನಾವು ದರ ಹೆಚ್ಚು ಮಾಡುವುದಕ್ಕೆ ಅವಕಾಶವಾಯಿತು.

ಶ್ರೀ ಹೆಚ್. ಏಕಾಂತಯ್ಯ — ಆ ವಿಚಾರ ಹೇಳುತ್ತಿಲ್ಲ. ೨.೭೦ರ ಅಕ್ಕಿ ಬೆಲೆಯನ್ನು ೩.೫೦ ಎಂದು ನಿಗದಿ ಮಾಡಿರುವುದು ಪತ್ರಿಕೆಯಲ್ಲಿ ಬಂದಿದೆ. ಕೇಂದ್ರ ಸರ್ಕಾರ ಈ ಹಿಂದೆ ಅಕ್ಕಿ ಬೆಲೆಯನ್ನು ಜಾಸ್ತಿ ಮಾಡಿದಾಗ ಹಸಿರು ಕಾರ್ಡುದಾರರಿಗೆ ಕೊಡುವ ಅಕ್ಕಿಯ ಬೆಲೆಯನ್ನು ನಮ್ಮ ಸರ್ಕಾರ ಹೆಚ್ಚು ಮಾಡಿರಲಿಲ್ಲ ಇವತ್ತು ಹಸಿರುಕಾರ್ಡುದಾರರಿಗೆ ಕೊಡುವ ಅಕ್ಕಿಯ ಬೆಲೆಯನ್ನು ೨ ರೂಪಾಯಿನಿಂದ ೨.೫೦ಕ್ಕೆ ಏರಿಸಿರುವುದು ತಮ್ಮ ಹೇಳಿಕೆಯಿಂದ ನನ್ನ ಗಮನಕ್ಕೆ ಬಂದಿದೆ.

ಶ್ರೀ ಅಜೀಜ್ ಸೇಟ್.— ೩.೬೫ ಪೈಸೆ ಇದ್ದದ್ದು ೪.೧೦ ಪೈಸೆ; ೨.೭೦ ಪೈಸೆ ಇದ್ದದ್ದು ೩.೧೫ ಪೈಸೆ ಆಗಿದೆ. ಪತ್ರಿಕೆಯಲ್ಲಿ ಪ್ರಿಂಟ್ ಆಗಿರುವುದು ತಪ್ಪು ಇರಬಹುದು. ಎರಡು ರೂಪಾಯಿ ಇದ್ದದ್ದು ೨.೧೫ ಆಗಿದೆ.

ಶ್ರೀ ಹೆಚ್. ಏಕಾಂತಯ್ಯ.—ಪತ್ರಿಕೆಯಲ್ಲಿ ತಪ್ಪು ಅಚ್ಚಾಗಿರಬಹುದು. ಹಸಿರುಕಾರ್ಡುದಾರರಿಗೆ ಕೊಡುತ್ತಿರುವ ಅಕ್ಕಿ ಬೆಲೆ ೨.೧೫ರೂ. ಎಂದು ಹೇಳಿದರು. ಒಪ್ಪುತ್ತೇನೆ. ಆದರೂ ಕೂಡ ಎರಡು ರೂಪಾಯಿ ದರದಲ್ಲಿ ಹಸಿರು ಕಾರ್ಡಿನವರಿಗೆ ಕೊಡುತ್ತಾ ಇದ್ದ ಅಕ್ಕಿಯನ್ನು ೨ ರೂಪಾಯಿ ೫೦ ಪೈಸೆ ಎಂದು ಮಾಡಿದ್ದೀರಿ. ಇದಕ್ಕೆ ಕಾರಣ ತಾವು ಹೇಳುವುದು ಕೇಂದ್ರ ಸರ್ಕಾರದವರು ಅಕ್ಕಿ ಬೆಲೆಯನ್ನು ಹೆಚ್ಚು ಮಾಡಿದ್ದಾರೆ ಎಂದು, ಆದರೆ ನಿಮ್ಮ ಸರ್ಕಾರ ಕೇಂದ್ರದಲ್ಲಿದ್ದು ಆಗ ಅಕ್ಕಿ ಬೆಲೆಯನ್ನು ಅವರು ಜಾಸ್ತಿ ಮಾಡಿದಾಗ ನಮ್ಮ ಸರ್ಕಾರ ರಾಜ್ಯದಲ್ಲಿದ್ದು ನಾವು ಹಸಿರು ಕಾರ್ಡಿನವರಿಗೆ ಅಕ್ಕಿ ಬೆಲೆಯನ್ನು ಜಾಸ್ತಿ ಮಾಡಲಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ, ಬೇಕಾದರೆ ಬೇರೆ ಅಕ್ಕಿ ಹೆಚ್ಚು ಮಾಡಿ. ಆದರೆ ಬಡವರಿಗೆ ೨ ರೂಪಾಯಿಗೆ ಅಕ್ಕಿ ಕೊಡಬೇಕೆಂದು ಏನು ನೀತಿ ಇತ್ತು, ಅದನ್ನು ದಯವಿಟ್ಟು ಮುಂದುವರೆಸಿಕೊಂಡು ಹೋಗಿ. ಇದರ ಬಗ್ಗೆ ಪುನರ್‌ವಿಮರ್ಶೆ ಮಾಡಬೇಕು. ಕನಿಷ್ಠಪಕ್ಷ ಹಸಿರು ಕಾರ್ಡ್‌ನವರಿಗೆ ಕೊಡುವ ಅಕ್ಕಿಯ ಬೆಲೆಯನ್ನಾದರೂ ಕಡಿಮೆ ಮಾಡಬೇಕು. ಮತ್ತು ಅಗತ್ಯ ವಸ್ತುಗಳು ನ್ಯಾಯ ಬೆಲೆ ಅಂಗಡಿಗಳ ಮೂಲಕ ಸರಿಯಾಗಿ ವಿತರಣೆ ಆಗಬೇಕು ಎಂದು ಹೇಳಿ ಏನು ಬೇಡಿಕೆಗಳನ್ನು ಸಭೆಯ ಮುಂದೆ ಇಟ್ಟಿದ್ದೀರಿ ಇದನ್ನು ಪೂರ್ಣವಾಗಿ ವಿರೋಧಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್.— ಈಗ ಸಿಂಧ್ಯ ಅವರು ಟ್ರಾನ್ಸ್‌ಪೋರ್ಟ್ ಮೇಲೆ ಇನಿಷಿಯೇಟ್ ಮಾಡಿ.

ಶ್ರೀ ಪಿ. ಜಿ. ಆರ್. ಸಿಂಧ್ಯಾ — ಸನ್ಮಾನ್ಯ ಅಧ್ಯಕ್ಷರೆ,...

ಶ್ರೀ ಗೋಪಿನಾಥ್ ಆರ್ ಸಾಂಧ್ರಾ.— ಒಂದು ಸಾರಿ ಆ ಕಡೆಯವರಿಗೆ ಒಂದು ಸಾರಿ ಈ ಕಡೆಯವರಿಗೆ ಅವಕಾಶ ಮಾಡಿಕೊಡಬೇಕು. ಇದು ಮೊದಲಿನಿಂದ ನಡೆದು ಬಂದಿರುವ ಸಂಪ್ರದಾಯ.

ಶ್ರೀ ಪಿ.ಜಿ.ಆರ್. ಸಿಂಧ್ಯಾ.— ನಾನು ಎಲ್ಲೋ ಹೋಗಬೇಕಾಗಿದೆ. ಆದ್ದರಿಂದ ಮಾತನಾಡ ಬೇಕೆಂದು ನಿಂತಿದ್ದೇನೆ.

ಶ್ರೀ ಎಂ. ಎಸ್. ಪಾಟೀಲ್.— ನಮ್ಮ ಶಾಸಕರೂ ಕೂಡ ಹಾಗೆಯೇ ಕುಳಿತುಕೊಳ್ಳ ಬೇಕಾಗುತ್ತದೆ. ನಮ್ಮ ಕಡೆಯಿಂದ ಒಬ್ಬರು ಮಾತನಾಡಿದರೆ ಅವರ ಕಡೆಯಿಂದ ಒಬ್ಬರು ಮಾತನಾಡ ಬೇಕು. ಅವರ ಕಡೆಯಿಂದ ಒಬ್ಬರು ಮಾತನಾಡಿದರೆ ನಮ್ಮ ಕಡೆಯಿಂದ ಒಬ್ಬರು ಮಾತನಾಡಬೇಕು. ಇದು ಮೊದಲಿನಿಂದ ನಡೆದುಕೊಂಡು ಬಂದಿದೆ.

ಶ್ರೀ ಎಂ.ಪಿ. ವೆಂಕಟೇಶ್.— ಎಲ್ಲರಿಗೂ ಅವಕಾಶ ಕೊಡಿ.

ಛೇರ್ಮನ್.— ಶ್ರೀಮಾನ್ ಏಕಾಂತಯ್ಯನವರು ಕೋ–ಆಪರೇಷನ್ ಮೇಲೆ ಇನಿಷಿಯೇಟ್ ಮಾಡಿದರು. ಟ್ರಾನ್ಸ್‌ಪೋರ್ಟ್ ಮೇಲೆ ಸಿಂಧ್ಯಾ ಅವರು ಮಾತನಾಡುತ್ತಾರೆ ಆಮೇಲೆ ಸಾಂದ್ರಾ ಅವರಿಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಎಂ. ಎಸ್. ಪಾಟೀಲ್.—ಅವರಿಗೇನಾದರೂ ತೊಂದರೆ ಇದ್ದರೆ ನಾನೇನೂ ಹೇಳುವುದಿಲ್ಲ. ಆದರೆ ಈ ಸದನದಲ್ಲಿ ನಡೆದು ಬಂದ ದಾರಿ ಎಂದರೆ, ನಾನೂ ಸಹ ಆ ಕಡೆ ಆರೂವರೆ ವರ್ಷಗಳಿಂದ ಆ ಕಡೆ ಕುಳಿತು ಸಚೇತಕನಾಗಿ ಕೆಲಸ ಮಾಡಿದ್ದೇನೆ. ವಿರೋಧ ಪಕ್ಷದವರು ಮಾತನಾಡಿದ ಮೇಲೆ ಆಡಳಿತ ಪಕ್ಷದವರು ಒಬ್ಬರು ಮಾತನಾಡುತ್ತಾರೆ. ಆಮೇಲೆ ಮತ್ತೆ ವಿರೋಧ ಪಕ್ಷದವರು ಮಾತ ನಾಡಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನನಗೆ ಮಾತನಾಡಲೇಬೇಕು ಎಂದು ಇಲ್ಲ. ಸರ್ಕಾರ ಬೇಕು ಎಂದರೆ ಸಲಹೆ ಕೊಡುತ್ತೇನೆ. ಮಾತನಾಡಲೇಬೇಕು ಎಂಬ ಹಠ ಇಲ್ಲ.

ಶ್ರೀ ಎಂ. ಎಸ್. ಪಾಟೀಲ್.—ನೀವು ಮಾತನಾಡಲೇಬೇಕು. ಅದರ ಬಗ್ಗೆ ವಿರೋಧ ಇಲ್ಲ. ನಮ್ಮ ಸದಸ್ಯರೂ ಮುಂಜಾನೆಯಿಂದ ಕುಳಿತಿದ್ದಾರೆ. ಇವರಿಗೆ ಕೂಡ ತಾವು ಅವಕಾಶ ಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೆ, ಈ ಕಡೆ ಸಂಖ್ಯೆ ಜಾಸ್ತಿ ಇದೆ. ಆ ಕಡೆ ಒಬ್ಬರು ಮಾತನಾಡಿದರೆ ಈ ಕಡೆ ಇಬ್ಬರು ಮಾತನಾಡಬೇಕು. ಹಿಂದೆ ವಿರೋಧ ಪಕ್ಷದಲ್ಲಿ ಸದಸ್ಯರು ಕಡಿಮೆ ಇದ್ದಾಗ ಈ ಪದ್ಧತಿ ಇತ್ತು. ಈಗ ಅವರು ಒಬ್ಬರು ಮಾತನಾಡಿದ ಮೇಲೆ ನಾವು ಒಬ್ಬರು ಮಾತನಾಡಿ ದರೆ ಪ್ರೊಪೋರ್ಷನ್ ಎಷ್ಟು ಜನರಿಗೆ ಡಿಸ್ಟ್ರಿಬ್ಯೂಟ್ ಆಗುತ್ತದೆ? ಆದ್ದರಿಂದ ವಿರೋಧ ಪಕ್ಷದಿಂದ ಒಬ್ಬರು ಮಾತನಾಡಿದರೆ ಈ ಕಡೆಯಿಂದ ಇಬ್ಬರು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಇಲ್ಲದಿದ್ದರೆ ಹೊಸಬರಿಗೆ ಅನೇಕರಿಗೆ ಮಾತನಾಡುವುದಕ್ಕೆ ಅವಕಾಶವಾಗುವುದಿಲ್ಲ.

ಛೇರ್ಮನ್.—ಇಲ್ಲಿ ವೇಳೆ ನಿಗದಿಪಡಿಸಿದ್ದಾರೆ. ಅದರ ಪ್ರಕಾರ ನಾವು ನಡೆದುಕೊಳ್ಳಬೇಕಾಗಿದೆ.

SRI AZEEZ SAIT.—Sir, the proceedure has been brought to your notice. The procedure followed in the past is, one Member from that side and then one Member from this side should speak. However, the Hon. Deputy Leader of the Opposition says that he wants to go for some urgent work. his request for giving him a chance to speak right now may please be conceded. His suggestions on Transport Department are very essential since he was earlier Minister for this Department.

ಶ್ರೀ ಎಂ. ಎಸ್. ಪಾಟೀಲ್.—ತಾವು ಎಲ್ಲರಿಗೂ ಸಮಯ ನೀಗದಿ ಮಾಡಿ.

ಶ್ರೀ ಅಜೀಜ್ ಸೇಟ್.—ಈ ಬಗ್ಗೆ ನನ್ನ ಸಬ್‌ಮಿಷನ್ ಏನೆಂದರೆ, ಈ ಬೇಡಿಕೆಗಳು ಜುಲೈ ೧೩ನೇ ತಾರೀಖಿನೊಳಗೆ ಮುಗಿಯಬೇಕು. The speed with which we are going, I think, we will not able to finish.

ಎಲ್ಲಿ ಗಿಲಿಟಿನ್ ಆಗುತ್ತದೆ. ಗಿಲಿಟಿನ್ ಆಗಬಾರದು, ಟೈಮು ನಿಗದಿ ಮಾಡಬೇಕಾಗುತ್ತದೆ. Our friend has taken 3 hours. At this rate, how are we complete ?

ಶ್ರೀ ಕೆ. ಶಿವಮೂರ್ತಿ.—ಮೊದಲು ಮಾತನಾಡಿದವರು ಒಂದೂವರೆ ಗಂಟೆ, ೨ ಗಂಟೆ ಮಾತ ನಾಡುತ್ತಾರೆ. ಕೊನೆ ಕೊನೆಗೆ ಮಾತನಾಡುವವರು ೫ ನಿಮಿಷ ಕೂಡ ಮಾತನಾಡುವುದಕ್ಕೆ ಅವಕಾಶ ವಾಗುವುದಿಲ್ಲ.

ಶ್ರೀ ಎಸ್. ಎಂ. ಲಿಂಗಪ್ಪ.—ಕಡೆಯಲ್ಲಿ ಮಾತನಾಡುವವರಿಗೆ ೫ ನಿಮಿಷ ೧೦ ನಿಮಿಷಕ್ಕೆ ರಿಸ್ಟ್ರಿಕ್ಷನ್ ಮಾಡುತ್ತೀರಿ. ಅದಕ್ಕೆ ನಾವೇ ಬಲಿ ಆಗುವುದು.

ಛೇರ್‌ಮನ್.—ತಾವು ಈಗ ಪ್ರಾರಂಭ ಮಾಡಿ.

† ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಸನಾನ್ಯ ಅಧ್ಯಕ್ಷರೇ, ಈ ದಿವಸ ಮಾನ್ಯ ಮಂತ್ರಿಗಳು ತಮ್ಮ ಇಲಾಖೆ ಬೇಡಿಕೆಗಳನ್ನು ಸಭೆಯ ಮುಂದೆ ಮಂಡಿಸುತ್ತಾ ನಮ್ಮ ಒಪ್ಪಿಗೆಯನ್ನು ಕೇಳುವುದಕ್ಕೆ ಬಂದಿದ್ದಾರೆ. ಈ ಸಾರಿಗೆ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ನನ್ನ ಅನುಭವದ ಆಧಾರದ ಮೇಲೆ ಈ ಸಂದರ್ಭದಲ್ಲಿ ಮೊದಲು ಹೇಳುವುದಕ್ಕೆ ಬಯಸುತ್ತೇನೆ. ಮೊದಲು ಈ ನಮ್ಮ ದೇಶ ಏನು ಇದೆ, ಶೇಕಡ ೭೦ರಷ್ಟು ಜನ ಗ್ರಾಮೀಣ ಪ್ರದೇಶದಲ್ಲಿರತಕ್ಕ ದೇಶ ಇದು. ಆದರೆ ನಾವು ರಾಷ್ಟ್ರಮಟ್ಟದಲ್ಲಿ, ರಾಜ್ಯಮಟ್ಟದಲ್ಲಿ ಅಥವಾ ಜಿಲ್ಲಾ ಮಟ್ಟದಲ್ಲಿ ಇದುವರೆವಿಗೂ ಸಹ ಏನೊಂದು ಸಾರಿಗೆ ನೀತಿಯನ್ನು ಅನುಸರಿಸಿಕೊಂಡು ಬಂದಿದ್ದೇವೆ, ಆ ಸಾರಿಗೆ ನೀತಿ ಪೂರಕವಾಗಿದೆ ಎಂದು ನನಗಾದರೂ ಅನ್ನಿಸುವುದಿಲ್ಲ. ಇದು ಕೇವಲ ಒಂದು ರಾಜ್ಯ ಸರ್ಕಾರ ಅಥವಾ ಹಲವು ರಾಜ್ಯ ಸರ್ಕಾರಗಳು ಮಾಡತಕ್ಕ ಕೆಲಸವಲ್ಲ. ಇದು ದುರ್ದೈವ. ಸ್ವಾತಂತ್ರ್ಯ ಬಂದ ನಂತರ ಈ ದಿಕ್ಕಿನಲ್ಲಿ ನಾವು ವಿಚಾರ ಮಾಡಿ, ಅದರಲ್ಲೂ ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿರತಕ್ಕ ಜನ ಯಾರು ಇದ್ದಾರೆ, ಅವರಿಗೆ ಒಳ್ಳೆಯ ಸಾರಿಗೆ ವ್ಯವಸ್ಥೆಯನ್ನು ಮಾಡಿಕೊಡಬೇಕು ಎನ್ನುವುದನ್ನು ವಿಚಾರ ಮಾಡಿ, ಒಂದು ಸ್ಪಷ್ಟವಾದ ನೀತಿಯನ್ನು ಹಾಕಿಕೊಂಡು ಆ ನೀತಿಯ ಮೇಲೆ ಕೆಲಸ ಮಾಡಿದ್ದಿದ್ದರೆ ಇವತ್ತು ಇಷ್ಟೊಂದು ಗೊಂದಲ ಏನು ಇದೆ, ಅದು ಇರಲಿಲ್ಲವೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಈಗ ನಾವು ಮಾಡಿರತಕ್ಕ ಸಾರಿಗೆ ನೀತಿ ಯಾವುದು ಇದೆ ಎಂದರೆ ಇದು ಪ್ರಯಾಣಿಕರಿಗೆ ಅನುಕೂಲವಾಗಿರತಕ್ಕ ನೀತಿಯಾಗಿದೆ ಎಂದು ನನಗಾದರೂ ಅನ್ನಿಸುವುದಿಲ್ಲ. ಏನೋ ರಾಷ್ಟ್ರೀಕರಣ ಮಾಡಿ, ಈ ಸಾರಿಗೆ ಸಂಸ್ಥೆ ಏನು ಇದೆ, ಅದು ಲಾಸ್ಸಿನಲ್ಲಿ ನಡೆಯುತ್ತಿದೆ, ಲಾಭ ಮಾಡಬೇಕು, ಅಥವಾ ಅಲ್ಲಿ ಒಂದಷ್ಟು ಜನ ಕಾರ್ಮಿಕರು ಇದ್ದಾರೆ, ಅವರಿಗೆ ಅನುಕೂಲ ಮಾಡಬೇಕು. ಅವರು ಚೆನ್ನಾಗಿರಬೇಕು. ಇಲ್ಲದಿದ್ದರೆ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆಂದೂ. ಈ ರೀತಿ ಒಂದು ಹ್ಯಾಚ್-ಪಾಚಡ್ ಎಂದು ಏನು ಹೇಳುತ್ತೇವೆ, ಆ ರೀತಿ ಇದು ನಡೆದುಕೊಂಡು ಬಂದಿದೆಯೇ ವಿನಹ ಒಂದು ನಿರ್ದಿಷ್ಟವಾದ ನೀತಿಯನ್ನು ನಾವು ಕಳೆದ ೪೦ ವರ್ಷಗಳ ಕಾಲ ಪಾಲಿಸಿಕೊಂಡು ಬರಲಿಲ್ಲವೆಂದು ನನಗೆ ಅನ್ನಿಸುತ್ತದೆ. ನಾವು ಕಳೆದ ೪೦ ವರ್ಷಗಳ ಕಾಲದಲ್ಲಿ ಇದೇ ನೀತಿಯನ್ನು ಇಟ್ಟುಕೊಂಡು ಬಂದಾಗ ಗ್ರಾಮಾಂತರ ಪ್ರದೇಶದಲ್ಲಿ ವಿಶೇಷವಾಗಿ ನಮ್ಮ ರಾಜ್ಯ ಸಾರಿಗೆ ದೃಷ್ಟಿಯಿಂದ ಮೇಲು. ಅದೇ ಬೇರೆ ರಾಜ್ಯಗಳಾದ ಉತ್ತರಪ್ರದೇಶ, ಬಿಹಾರ ಹಾಗೂ ಮಧ್ಯಪ್ರದೇಶ ಇಂತಹ ರಾಜ್ಯಗಳನ್ನು ಹೋಲಿಕೆ ಮಾಡಿ ನೋಡಿದರೆ ನಮ್ಮ ಸಾರಿಗೆ ವ್ಯವಸ್ಥೆ, ನಮ್ಮ ಸಾರಿಗೆ ಇಲಾಖೆ ಉತ್ತಮವಾಗಿದೆ ಎಂದು ಹೇಳಬೇಕಾಗುತ್ತದೆ, ಟೀಕೆ ಮಾಡೋಣ. ಅಲ್ಲಿರತಕ್ಕ ಹುಳುಕುಗಳನ್ನು ತೆಗೆದು ಅದನ್ನು ಸರಿಮಾಡುವುದಕ್ಕೆ ನಾವೂ ನೀವೂ ಎಲ್ಲರೂ ಸೇರಿ ಪ್ರಯತ್ನ ಮಾಡೋಣ. ಆದರೆ ಆ ರಾಜ್ಯಗಳಿಗೆ ಹೋಲಿಕೆ ಮಾಡಿ ನೋಡಿದಾಗ ಬಹಳ ಉತ್ತಮವಾಗಿದೆ, ಇದನ್ನು ಇನ್ನೂ ಉತ್ತಮಪಡಿಸಬಹುದು.

ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ಶೇಕಡಾ ೭೦ರಷ್ಟು ಜನ ಪ್ರಯಾಣಿಸುತ್ತಿದ್ದು ಅವರಿಗೆ ಕೂಡಾ ಅನುಕೂಲ ಆಗುವ ಸಾರಿಗೆ ನೀತಿಯನ್ನು ನಾವು ಅನುಸರಿಸಿಕೊಂಡು ಬರುವುದಕ್ಕೆ ಆಗಿಲ್ಲ. ಈಗ ಉದಾಹರಣೆಗೆ ಹೇಳುತ್ತೇನೆ. ಬಹಳ ಜನರು ರಾಷ್ಟ್ರೀಕರಣ ಮಾಡಬಾರದು ಎಂದು ಹೇಳುತ್ತಿದ್ದಾರೆ. ಇವತ್ತು ಇದು ಒಂದು ವಿಚಾರ ಹೊರಟಿದೆ. ರಾಷ್ಟ್ರೀಕರಣ ಮಾಡತಕ್ಕದ್ದು ತಪ್ಪು. ಖಾಸಗಿಯವರಿಗೆ ಇದನ್ನು ಕೊಡಬೇಕೆಂದು ಎಲ್ಲಾ ಸರ್ಕಾರಗಳು ಯೋಚನೆ ಮಾಡುತ್ತಿವೆ ಗಾರ್ಬಚೇವ್ ಅವರು ರಷ್ಯಾದಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದು ಅವರ ರಾಜಕೀಯ ಸ್ಥಾನಮಾನಗಳನ್ನು ಹೆಚ್ಚು ಮಾಡಿ ಕೊಳ್ಳುವುದಕ್ಕೆ ಎಂದು ನನಗನ್ನಿಸುತ್ತದ. ಅದರ ಒಳ್ಳೆಯ ಉಪಯೋಗವನ್ನು ನಮ್ಮ ಅರ್ಥ ಮಂತ್ರಿಗಳೂ ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಇದನ್ನೇ ಎಲ್ಲರೂ ಹೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೂ ಸಹಾ ಇದನ್ನು ವಿಚಾರ ಮಾಡಬೇಕಾಗಿದೆ. ರಾಷ್ಟ್ರೀಕರಣ ಮಾಡಬೇಕೋ, ಅಥವಾ ನಿಲ್ಲಿಸಬೇಕೋ?, ಖಾಸಗೀಕರಣ ಮಾಡತಕ್ಕದ್ದರಿಂದ ಒಂದು ಅನುಕೂಲ ಎನ್ನುವ ಮಾತು ಕೂಡಾ ಇವತ್ತು ಬರುತ್ತಿಲ್ಲ. ಬಹಳ ಜನರು ಇದು ಸರಿ ಎನ್ನುವ ಯೋಚನೆಗೆ ಬಂದಿದ್ದಾರೆ. ಕೆಎಸ್‌ಆರ್‌ಟಿಸಿನಲ್ಲಿ ವರ್ಷಕ್ಕೆ ೧೦೦ಕೋಟಿ ಹಣ ನಷ್ಟವಾಗುತ್ತಿದೆ, ಅಲ್ಲಿರುವ ಕಂಡಕ್ಟರ್, ಡ್ರೈವರ್ ಎಲ್ಲಾ ಹಂಚಿಕೊಳ್ಳುತ್ತಾರಂತೆ. ಅವರು ಬಹಳ ದುರಹಂಕಾರದಿಂದ ವರ್ತನೆ ಮಾಡುತ್ತಾರೆ, ಆದ್ದರಿಂದ ಈ ರಾಷ್ಟ್ರೀಕರಣ ಮಾಡುವುದು ಸರಿಯಲ್ಲ ಎನ್ನುವ ವಿಚಾರಧಾರೆ ಎಲ್ಲಾ ಕಡೆ ಹೊರಟಿದೆ, ಆದ್ದರಿಂದ ನಾನಾದರೂ ಕೂಡ ಯೋಚನೆ ಮಾಡಿರುವುದು, ಈಗ ನಮ್ಮ ಸಾರಿಗೆ ಸಂಸ್ಥೆಯಲ್ಲಿ ನನಗೆ ಗೊತ್ತಿರುವ ಹಾಗೆ ಒಂದು ದಿವಸಕ್ಕೆ ೪೦ ರಿಂದ ೪೫ ಲಕ್ಷ ಜನರು ಪ್ರಯಾಣ ಮಾಡುತ್ತಾರೆ. ಅದರಲ್ಲಿ ೧೫ ಲಕ್ಷ ಜನರು ಬೆಂಗಳೂರು ನಗರ ಒಂದರಲ್ಲೇ

ಪ್ರಯಾಣ ಮಾಡುತ್ತಾರೆ. ೧ ಕೋಟಿ ರೂಪಾಯಿಗೂ ಹೆಚ್ಚು ಆದಾಯ ಕೇವಲ ಸಾರಿಗೆ ಸಂಸ್ಥೆಯಿಂದ ಒಂದು ದಿವಸಕ್ಕೆ ಈ ಸಂಸ್ಥೆಗೆ ಬರುತ್ತದೆ. ಆದರೆ ಇವತ್ತು ರಾಷ್ಟ್ರೀಕರಣ ಆಗದೇ ಇರತಕ್ಕ ಮಂಡ್ಯಾ ಜಿಲ್ಲೆಗೆ ಹೋಗಿ ನೋಡಿ. ಕೋಲಾರಕ್ಕೆ ಹೋಗಿ ನೋಡಿ. ಅಷ್ಟೇ ಏಕೆ ಪಕ್ಕದ ಮಾಗಡಿಗೆ ಹೋಗಿ ನೋಡಿ. ಕನಕಪುರ ಮತ್ತು ರಾಮನಗರದ ಮಧ್ಯೆಯಿರುವ ಬಸ್‌ರೂಟ್‌ಗಳಲ್ಲಿ ೧೮೦-೨೦೦-೨೫೦ ಜನ ಒಂದು ಬಸ್‌ನಲ್ಲಿ ಪ್ರಯಾಣ ಮಾಡುತ್ತಿರುತ್ತಾರೆ. ನಾನು ಇದನ್ನು ಸರಿ ಮಾಡುವುದಕ್ಕೆ ಪ್ರಯತ್ನಪಟ್ಟೆ. ನಾನು ಇದನ್ನು ಸರಿಮಾಡುವುದಕ್ಕೆ ಆಗಲಿಲ್ಲ. ರಾಷ್ಟ್ರೀಕರಣ ಮಾಡಿದರೆ ಬಹಳ ಅನ್ಯಾಯವಾಗುತ್ತದೆ, ಖಾಸಗೀಯವರಿಗೆ ಕೊಟ್ಟರೆ ಒಳ್ಳೆಯ ಸೌಕರ್ಯ ಕೊಡುತ್ತಾರೆನ್ನುವ ಸಿಹಿ ಗುಳಿಗೆ ಏನು ಇದೆ, ಇದರ ಒಂದು ಕಲ್ಪನೆ ತಪ್ಪು ಕಲ್ಪನೆ ಎಂದು ನಾನು ಹೇಳು ತ್ತೇನೆ, ನಾನು ಸಾರಿಗೆ ಮಂತ್ರಿಯಾಗಿದ್ದಾಗ ಹಳ್ಳಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಸರ್ವ ಪ್ರಯತ್ನವನ್ನು ಪಟ್ಟೆ. ಆದರ ಫಲವಾಗಿ ಸುಮಾರು ೮ ಸಾವಿರ ಹಳ್ಳಿಗಳಿಗೆ ನನ್ನ ಮೂರು ವರ್ಷದ ಅಧಿಕಾರಾವಧಿಯಲ್ಲಿ ಬಸ್‌ಗಳನ್ನು ಹಾಕಿಸಿದ್ದೇನೆ. ಯಾವ ಹಳ್ಳಿಗಳು ಬಸ್‌ಗಳನ್ನೇ ಕಂಡಿರಲಿಲ್ಲವೋ, ಯಾವ ಜನ ಬಸ್‌ಗಾಗಿ ೫-೬ ಮೈಲಿ ದೂರದಿಂದ ನಡೆದುಕೊಂಡು ಬರುತ್ತಿದ್ದರೋ ಅಂತಹ ಹಳ್ಳಿಗಳಿಗೆ ಬಸ್ ವ್ಯವಸ್ಥೆ ಕಲ್ಪಿಸಿಕೊಟ್ಟಿದ್ದೇನೆ. ಇವತ್ತು ರಾಷ್ಟ್ರೀಕರಣದ ಬಗ್ಗೆ ಡಿಬೇಟ್ ಆಗಬೇಕು. ಏಕೆಂದರೆ ಎಲ್ಲಾ ಕಡೆ ಖಾಸಗೀಯವರಿಗೆ ಕೊಡಬೇಕೆಂದು ಹೊರಟ್ಟಿದ್ದಾರೆ. ಇದು ನೋಡುವುದಕ್ಕೆ ಬಹಳ ಚೆನ್ನಾಗಿ ಇರುತ್ತದೆ. ಇವತ್ತು ಖಾಸಗೀಕರಣದಲ್ಲಿ ಇರುವ ಮಂಡ್ಯ ಜಿಲ್ಲೆ ಕೋಲಾರ ಜಿಲ್ಲೆ ಅಥವಾ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳನ್ನು ಬಿಜಾಪುರ, ಬೆಳಗಾಂ ಕಾರವಾರ ಜಿಲ್ಲೆಗಳ ಜೊತೆ ಹೋಲಿಕೆ ಮಾಡಿನೋಡಿ. ಅಲ್ಲಿ ಎಷ್ಟು ಜನ ಪ್ರಯಾಣಿಕರಿಗೆ ಅನುಕೂಲವಾಗುತ್ತಿದೆಂದು ನೋಡಿ. ರಾಷ್ಟ್ರೀಕರಣದ ಹೆಸರಿನಲ್ಲಿ ಆಗತಕ್ಕ ಅನ್ಯಾಯವನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡೋಣ. ಆದರೆ ನಮ್ಮ ಸಮಾಜವಾದಿ ಸಿದ್ಧಾಂತಕ್ಕೆ ಕೊಡಲಿ ಪೆಟ್ಟು ಹಾಕುವುದು ಬೇಡ. ಅಧಿಕಾರಕ್ಕೆ ಬಂದ ಪಕ್ಷದ ಸುತ್ತ ಖಾಸಗಿಯವರು ಬಂದು ಸೇರಿಕೊಳ್ಳುತ್ತಾರೆ. ಎಲ್ಲ ರೀತಿಯ ವಿಷಯಗಳನ್ನು ಕಿವಿಗೆ ಹಾಕಿ ಇದು ಆಗುತ್ತದೆ ಅದು ಆಗುತ್ತದೆ ಎಂದು ಹೇಳುತ್ತಾರೆ. ನಾನಾದರೂ ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಹೇಳುವುದೇನೆಂದರೆ, ದಯವಿಟ್ಟು ತಾವು ಕಳೆದ ೩೦ ವರ್ಷಗಳಲ್ಲಿ ಪಾಲನೆ ಮಾಡಿಕೊಂಡು ಬಂದಿರತಕ್ಕ ರಾಷ್ಟ್ರೀಕರಣ ಏನಿದೆ. ಈ ನೀತಿಗೆ ಕೊಡಲಿಪೆಟ್ಟನ್ನು ಹಾಕಬೇಡಿ. ಹಾಗೆ ಮಾಡಿದರೆ ಖಾಸಗೀಕರಣದ ಹೆಸರಿನಲ್ಲಿ ೧೦-೧೫ ವರ್ಷಗಳ ನಂತರ ಶೋಷಣೆಯಾಗುತ್ತದೆ. ಅಲ್ಲಿರತಕ್ಕ ಕಾರ್ಮಿಕರ ಸ್ಥಿತಿ ಚಿಂತಾಜನಕವಾಗುತ್ತದೆ. ಇವತ್ತು ಅಪಘಾತಕ್ಕೆ ಈಡಾದ ಎಲ್ಲಾ ಬಸ್‌ಗಳ ವಿವರವನ್ನು ತೆಗೆದುನೋಡಿ. ಅವುಗಳ ಕಂಡೀಷನ್, ಓವರ್ ಲೋಡ್ ನೋಡಲು ಅಸಾಧ್ಯ. ಅವುಗಳ ಫಿಟ್‌ನೆಸ್‌ಬಗ್ಗೆ ಫಿಟ್‌ನೆಸ್ ಸರ್ಟಿಫಿಕೇಟ್‌ನ್ನು ಹೇಗೆ ತೆಗೆದುಕೊಳ್ಳುತ್ತಾರೋಗೊತ್ತಾಗುವುದಿಲ್ಲ. ದಯವಿಟ್ಟು ಈ ಕೆಲಸವನ್ನು ಮಾಡಬಾರದು ಎಂದು ಮಾನ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ. ಇವತ್ತು ಕೇಂದ್ರದಲ್ಲಿ ಯಾವುದೇ ಪಕ್ಷದ ಸರ್ಕಾರ ಇರಬಹುದು. ಅಲ್ಲೂ ಕೂಡಾ ಸಾರಿಗೆ ಬಗ್ಗೆ ನಿರ್ದಿಷ್ಟ ನೀತಿ ಇಲ್ಲ. ರಾಷ್ಟ್ರದಿಂದ ರಾಜ್ಯಕ್ಕೆ, ರಾಜ್ಯದಿಂದ ಜಿಲ್ಲೆಗೆ, ಜಿಲ್ಲೆಯಿಂದ ತಾಲ್ಲೂಕು ಕೇಂದ್ರಕ್ಕೆ ಯಾವರೀತಿಯಲ್ಲಿ ಇರಬೇಕೆಂದು ಒಂದು ನಿರ್ದಿಷ್ಟವಾದ ನೀತಿ ಇಲ್ಲ.

೪-೧೫ ಪಿ. ಎಂ.

ಇವತ್ತು ನಾವು ಡೀಸೆಲ್ ಉಳಿತಾಯ ಮಾಡಬೇಕೆಂದು ಹೇಳುತ್ತಿದ್ದೇವೆ ಪೆಟ್ರೋಲ್ ಉಳಿತಾಯ ಮಾಡಬೇಕೆಂದು ಹೇಳುತ್ತಿದ್ದೇವೆ. ಅದರ ಜೊತೆಗೆ ಕೇಂದ್ರದ ಅರ್ಥ ಮಂತ್ರಿಗಳು ನಮ್ಮ ಅರ್ಥ ಮಂತ್ರಿಗಳು ಸಹ ಉಳಿತಾಯ ಮಾಡಬೇಕೆಂದು ಹೇಳುತ್ತಿದ್ದಾರೆ. ಫೈನಾನ್ಸಿಯಲ್ ಡೆತ್ ಟ್ರ್ಯಾಪ್ ಹತ್ತಿರ ನಮ್ಮ ದೇಶ ಹೋಗುತ್ತಿದೆ. ನಾವು ಹೊರದೇಶಗಳಿಗೆ ಕೊಡತಕ್ಕ ಹಣವನ್ನು ಕಡಿಮೆ ಮಾಡಬೇಕೆನ್ನುವ ವಾದವನ್ನು ಸಹ ಮುಂದಿಡುತ್ತಿದ್ದೇವೆ. ಆದರೆ ಏನಾಗುತ್ತಿದೆ ? ಇವೊತ್ತು ನಮ್ಮ ರಾಜ್ಯದಮಟ್ಟಿಗೆ ಹೇಳುವುದಾದರೆ, ರೈಲ್ವೆ ಪ್ರಯಾಣ ಮತ್ತು ಬಸ್ಸಿನ ಪ್ರಯಾಣ ಎರಡೂ ಪ್ಯಾರಲಲ್ ಆಗಿ ಹೋಗಬೇಕು. ಬಹಳ ದುಃಖದಿಂದ ಈ ಮಾತನ್ನು ಹೇಳುತ್ತಿದ್ದೇನೆ, ಬೇರೆ ರಾಜ್ಯಗಳಿಗೆ ನಮ್ಮ ರಾಜ್ಯವನ್ನು ಹೋಲಿಕೆ ಮಾಡಿಕೊಂಡು ನೋಡಿದಾಗ ನಮ್ಮ ರಾಜ್ಯದಿಂದ ಮಾನ್ಯ ಹೆಚ್. ಸಿ ದಾಸಪ್ಪನವರು, ಕೆಂಗಲ್ ಹನುಮಂತಯ್ಯ ರೈಲ್ವೆ ಮಂತ್ರಿಗಳಾಗಿದ್ದರು. ಈಗ ಮಾನ್ಯ ಜಾರ್ಜ್‌ಫರ್ನಾಂಡಿಸ್ ಅವರು ಕೇಂದ್ರದಲ್ಲಿ ರೈಲ್ವೆ ಮಂತ್ರಿಗಳಾಗಿದ್ದಾರೆ. ಈಗಿನ ನಮ್ಮ ಮುಖ್ಯ ಮಂತ್ರಿಗಳು ಸಾರಿಗೆ ಮಂತ್ರಿಗಳಾಗಿದ್ದರು, ಅವರು ರೈಲ್ವೆ ಮಂತ್ರಿಗಳಾಗಿರಲಿಲ್ಲ. ನಮಗೆ ಬಹಳ ಅನ್ಯಾಯವಾಗಿದೆ. ಇವತ್ತು ಉತ್ತರ ಪ್ರದೇಶ, ಬಿಹಾರ, ಮಧ್ಯಪ್ರದೇಶಗಳನ್ನು ನೋಡಿದಾಗ, ಬಹಳ ಕಡಿಮೆ ವೆಚ್ಚದಲ್ಲಿ ಬಹಳ ಸುವ್ಯವಸ್ಥಿತವಾದ ಒಂದು ಪ್ರಯಾಣವನ್ನು ಮಾಡಬಹುದು. ನಮ್ಮರಾಜ್ಯದಲ್ಲಿ ಈ ವ್ಯವಸ್ಥೆಯಾಗಬೇಕೆಂದು ರಾಜ್ಯಸರ್ಕಾರ ಕೇಂದ್ರದ ಮೇಲೆ ಬಹಳ ಒತ್ತಡವನ್ನು

ತರಬೇಕಾಗಿದೆ. ಬೇರೆ ವಿಚಾರದಲ್ಲಿ ನಾವು ಹೇಗೆ ಒತ್ತಾಯವನ್ನು ತರುತ್ತೇವೆ. ಅದೇರೀತಿಯಲ್ಲಿ ಈ ರೈಲ್ವೆ ವಿಚಾರದಲ್ಲಿ ನಮ್ಮ ರಾಜ್ಯಕ್ಕೆ ಆಗಿರತಕ್ಕ ಅನ್ಯಾಯ ಏನಿದೆ ಅದನ್ನು ಸರಿಪಡಿಸಲಿಕ್ಕೆ ನಾವು ಒತ್ತಾಯ ಮಾಡಬೇಕಾಗುತ್ತದೆ, ಬಹಳ ಮುಖ್ಯವಾಗಿ ನಗರ ಸಾರಿಗೆ ಮೇಲೆ ಬಹಳ ಒತ್ತಡ ಬರುತ್ತಿರುವುದು. ಅದರಿಂದ ಹೆಚ್ಚು ಲುಕ್ಸಾನು ಆಗಿದೆ. ಬೆಂಗಳೂರಿನ ಜನಸಂಖ್ಯೆ ನನಗೆ ಗೊತ್ತಿರುವಹಾಗೆ ಸುಮಾರು ೪೫ ಲಕ್ಷ ಇದೆ. ಇದು ಯಾವ ವೇಗದಲ್ಲಿ ಬೆಂಗಳೂರು ನಗರದಲ್ಲಿ ಬೆಳೆಯುತ್ತಿದೆ ಎನ್ನುವುದು ನಮಗೆಲ್ಲಾ ಗೊತ್ತಿದೆ. ಆದಷ್ಟು ಬೇಗ ಬೆಂಗಳೂರಿನಿಂದ ಮೈಸೂರಿಗೆ, ಬೆಂಗಳೂರಿನಿಂದ ಕೋಲಾರಕ್ಕೆ, ಬೆಂಗಳೂರಿನಿಂದ ತುಮಕೂರಿಗೆ ಈ ಮೂರು ಜಿಲ್ಲೆಗಳಿಗಾದರೂ ಕೊನೆಯ ಪಕ್ಷ ನಾವು ಎಲೆಕ್ಟ್ರಿಕ್ ಟ್ರೈನ್ ಸರ್ವೀಸ್ ತರದಿದ್ದರೆ ಇನ್ನು ೧೫-೨೦ ವರ್ಷದೊಳಗಾಗಿ ಬೆಂಗಳೂರಿನಲ್ಲಿ ಟ್ರಾಫಿಕ್ ಜಾಮ್ ಆಗುತ್ತದೆ. ಈಗ ಕಲ್ಕತ್ತ ಏನು ಡೆಡ್ ಸಿಟಿ ಎಂದು ಹೇಳುತ್ತೇವೆಯಲ್ಲ, ಅದಕ್ಕಿಂತ ವರ್ಸ್ಟ್ ಸಿಟಿ ಬೆಂಗಳೂರು ಆಗುವುದರಲ್ಲಿ ನನಗೆ ಯಾವುದೇ ಸಂಶಯವಿಲ್ಲ. ಇದು ರೈಲ್ವೆ ವಿಚಾರದಲ್ಲಿ ರಾಜ್ಯಕ್ಕೆ ಅನ್ಯಾಯವಾಗಿರುವುದು ಅಷ್ಟೇ ಅಲ್ಲ ನ್ಯಾಷನಲ್ ಹೈವೇ ವಿಚಾರದಲ್ಲೂ ನಮ್ಮ ರಾಜ್ಯಕ್ಕೆ ಅನ್ಯಾಯವಾಗಿದೆ. ನಮ್ಮ ರಾಜ್ಯದಲ್ಲಿ ಎಷ್ಟು ಉದ್ದ ರಾಷ್ಟ್ರೀಯ ಹೆದ್ದಾರಿ ಇದೆ ಎಂಬುದನ್ನು ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿ ನೋಡಿದಾಗ ನಮಗೆ ಬಹಳ ಅನ್ಯಾಯವಾಗಿದೆ. ಇತ್ತೀಚಿನ ೮-೧೦ ವರ್ಷಗಳಲ್ಲಿ ನಮಗೆ ಸ್ವಲ್ಪ ನ್ಯಾಯ ಸಿಕ್ಕಿರಬಹುದು ಆದರೆ ಕಳೆದ ೪೦ ವರ್ಷಗಳಿಂದ ಆ ಅಂಕಿಸಂಖ್ಯೆಗಳನ್ನು ನಾನು ತಂದಿದ್ದೇನೆ, ಅವನ್ನು ಈಗ ಹೇಳುವುದಕ್ಕೆ ಹೋಗುವುದಿಲ್ಲ, ಸಮಯದ ಅಭಾವವಿದೆ. ನಮಗೆ ದೊಡ್ಡ ಅನ್ಯಾಯವಾಗಿದೆ. ನಾನಾದರೂ ಈ ಸಂದರ್ಭದಲ್ಲಿ ಹೇಳುವುದು ಏನೆಂದರೆ ನಮ್ಮ ಸಾರಿಗೆ ವ್ಯವಸ್ಥೆ ಏನಿದೆ ಅದು ರಾಷ್ಟ್ರಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಸಮಾನಾಂತರವಾಗಿ ಅಭಿವೃದ್ಧಿ ಆಗಬೇಕಾಗುತ್ತದೆ. ಕೇವಲ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ಡೆವಲಪ್‌ಮೆಂಟ್ ಮಾಡುತ್ತೇವೆಂದರೆ ಅದು ಆಗುವುದಿಲ್ಲ. ಅದರ ಜೊತೆಯಲ್ಲಿ ರೈಲ್ವೆ ಅನ್ನು ಮತ್ತು ರಾಷ್ಟ್ರೀಯ ಹೆದ್ದಾರಿ ಇವುಗಳನ್ನು ಡೆವಲಪ್‌ಮೆಂಟ್ ಮಾಡಬೇಕಾಗುತ್ತದೆ. ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಒತ್ತಾಯವನ್ನು ತರಲೇಬೇಕೆಂಬನ್ನತಕ್ಕ ವಿಚಾರವನ್ನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಸಲಹೆ ರೂಪದಲ್ಲಿ ಕೊಡಲಿಕ್ಕೆ ಬಯಸುತ್ತೇನೆ. ಇನ್ನು ಬಹಳ ದೊಡ್ಡ ಸಮಸ್ಯೆ ಅಂದರೆ ಪೊಲ್ಯೂಷನ್. ಮೋಟಾರು ವೆಹಿಕಲ್‌ಗಳಿಂದ ಆಗತಕ್ಕ ಒಂದು ಪೊಲ್ಯೂಷನ್ ಏನಿದೆ ಅದು ನನಗನ್ನಿಸುತ್ತದೆ ಇನ್ನು ೧೫-೨೦ ವರ್ಷಗಳಲ್ಲಿ ಬೆಂಗಳೂರಿನಲ್ಲಿ ರೋಗವಿಲ್ಲದೇ ಇರತಕ್ಕವರು ಒಬ್ಬರೂ ಸಿಗುವುದಿಲ್ಲ, ಆಗ ಪ್ರತಿಯೊಬ್ಬರಿಗೂ ಒಂದೊಂದು ರೋಗ ಬರುತ್ತದೆ. ಈಗ ಅಸ್ತಮಾ ರೋಗಿಗಳು ಬೆಂಗಳೂರಿನಲ್ಲಿ ಒಂದು ವರ್ಷದಲ್ಲಿ ಸತ್ತುಹೋಗುತ್ತಾರೆಂದು ಹೇಳುತ್ತಾರೆ, ಈ ಮೋಟಾರು ವೆಹಿಕಲ್ಸ್ ಹೊರ ಬಿಡತಕ್ಕ ಹೊಗೆ ಏನಿದೆ, ಆದರಿಂದ ದೊಡ್ಡ ಅನ್ಯಾಯವಾಗುತ್ತಿದೆ. ಇದು ಕೇವಲ ನಗರ ಮತ್ತು ರಾಜ್ಯಕ್ಕೆ ಸೀಮಿತವಾಗಿರತಕ್ಕ ವಿಷಯವಲ್ಲ. ರಾಷ್ಟ್ರಪತಿ ಆಡಳಿತ ಕಾಲದಲ್ಲಿ ನಮ್ಮ ಸಾರಿಗೆ ಇಲಾಖೆಯವರು ಒಂದು ಪ್ರಯತ್ನವನ್ನು ಮಾಡಿದಂತಹ ಸಂದರ್ಭದಲ್ಲಿ ಬಹಳ ವಿರೋಧ ಬಂತು. ಆಗ ಕೇಂದ್ರದಲ್ಲಿರುವಂತಹ ಸರ್ಕಾರದ ಮೇಲೆ ಬಹಳ ದೂಷಣೆ ಮಾಡಿದರು. ಆದರೆ ಬಹಳ ಆಶ್ಚರ್ಯಕರವಾದುದು, ನಾನು ಯಾವುದೋ ಒಂದು ಪತ್ರಿಕೆಯನ್ನು ಓದಿದೆ, ಅವರಲ್ಲಿ ದಕ್ಷಿಣ ಧ್ರುವ ಮತ್ತು ಉತ್ತರ ಧ್ರುವ ದಲ್ಲಿರತಕ್ಕ ಓಜೋನ್‌ನಲ್ಲಿರತಕ್ಕ ಲೇಯರ್ ಏನಿದೆ, ಆಕ್ಸಿಜನ್ ಅಷ್ಟೇ ಮುಖ್ಯವಾಗಿರುವ ಓಜೋನ್ ಏನಿದೆ, ಅದರ

ಲೇಯರ್ ಸಹ ಕಡಿಮೆಯಾಗುತ್ತಿದೆ ಎಂದು ಅದರಲ್ಲಿದೆ ಅಂದರೆ ನಾವು ಅರ್ಥ ಮಾಡಿಕೊಳ್ಳಬಹುದು, ಯಾವ ಮಟ್ಟದಲ್ಲಿ ಪಲ್ಯೂಶನ್ ಅದರಲ್ಲೂ ಮೋಟಾರು ವೆಹಿಕಲ್ ಪಲ್ಯೂಷನ್ ಜಾಸ್ತಿಯಾಗುತ್ತಿದೆ ಎಂದು. ಇವತ್ತು ಬೆಂಗಳೂರು ನಗರವನ್ನು ತೆಗೆದುಕೊಂಡರೆ, ಶಿವಾಜಿ ನಗರ, ಮೆಜೆಸ್ಟಿಕ್ ಮತ್ತು ಕಲಾಸಿಪಾಳ್ಯ, ಇಲ್ಲಿ ಪೀಕ್ ಅವರ್ಸ್‌ನಲ್ಲಿ ಉಸಿರಾಡಲಿಕ್ಕೂ ಕೂಡ ಕಷ್ಟವಾಗಿದೆ. ವಾಹನಗಳು ಹೋಗುವುದು ಇರಲಿ, ಒಂದು ವಾಹನಕ್ಕೂ ಮತ್ತೊಂದು ವಾಹನಕ್ಕೂ ನಡುವೆ ಆರು ಇಂಚು ಸಹ ಜಾಗ ಇರುವುದಿಲ್ಲ. ಉಸಿರಾಡುವುದಕ್ಕೆ ಸಹ ಬಹಳ ಕಷ್ಟ ಇದೆ. ಇಂತಹ ಒಂದು ಪರಿಸ್ಥಿತಿಯಲ್ಲಿ ನಮ್ಮ ಒಂದು ನೀತಿ ಯಾವ ರೀತಿ ಇರಬೇಕು? ಈಗ ಬಿ.ಹೆಚ್.ಇ.ಎಲ್.ನವರು ಒಂದು ರೀಸರ್ಚ್ ಕೆಲಸ ಮಾಡುತ್ತಿದ್ದಾರೆ ಏಕೆ ಇದನ್ನು ನಾನು ಹೇಳುತ್ತಿದ್ದೇನೆ ಎಂದರೆ, ಮೋಟಾರ್ ವೆಹಿಕಲ್ಸ್ ಡಿಪಾರ್ಟ್‌ಮೆಂಟ್‌ನವರು ಇದನ್ನು ಕೋ ಆರ್ಡಿನೇಟ್ ಮಾಡಬೇಕಾಗುತ್ತದೆ. ಬಿ.ಎಚ್.ಇ.ಎಲ್.ನವರು ಪೆಟ್ರೋಲ್ ಆಗಲಿ, ಡೀಸಲ್ ಆಗಲಿ ಉಪಯೋಗಿಸದೆ ಬ್ಯಾಟರಿ ಮೂಲಕ ರನ್ ಮಾಡತಕ್ಕಂಥ ಬಸ್‌ಗಳ ಬಗ್ಗೆ ರೀಸರ್ಚ್ ಮಾಡುತ್ತಿದ್ದಾರೆ ನಾನು ಮಾನ್ಯ ಪ್ರಧಾನಮಂತ್ರಿಗಳನ್ನು ಭೇಟಿ ಮಾಡತಕ್ಕಂಥ ಕಾಲದಲ್ಲಿ ಈ ವಿಷಯದ ಬಗ್ಗೆ ಒತ್ತಾಯ ಮಾಡಿದ್ದೇನೆ. ಇದು ಆಗಬೇಕು. ಇಲ್ಲದಿದ್ದರೆ ಇನ್ನು ೧೦-೧೫ ವರ್ಷಗಳಲ್ಲಿ ಮಾನವ ಕುಲಕ್ಕೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ

ಇದು ಆಗಬೇಕು ಇಲ್ಲದಿದ್ದರೆ ಇದರಿಂದ ನಮಗೆ ಬಹಳ ತೊಂದರೆಯಾಗುತ್ತದೆ. ಬಿ.ಎಚ್.ಇ.ಎಲ್.ನಲ್ಲಿ ಒಂದು ರೀಸರ್ಚ್ ನಡೆಯುತ್ತಿದೆ. ಏನೆಂದರೆ ಬ್ಯಾಟರಿ ಆಪರೇಟೆಡ್ ವೆಹಿಕಲ್ಸ್ ಎಂದು. ಡೆಲ್ಲಿ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್‌ನವರು ಸಹ ಈ ಪ್ರಯೋಗವನ್ನು ಮಾಡುತ್ತಿದ್ದಾರೆ. ಇದನ್ನು ನಾಳೆಯೇ ಇಲ್ಲಿಯೂ ತೆಗೆದುಕೊಂಡು ಬನ್ನಿ ಎಂದು ನಾನು ಹೇಳುತ್ತಿಲ್ಲ. ಆದರೆ ೧೦-೧೫ ವರ್ಷಗಳ ನಂತರ ಆ ಕೀರ್ತಿ ನಿಮಗೆ ಬರುತ್ತದೆ. ಈ ಸರ್ಕಾರಕ್ಕೆ ಬರುತ್ತದೆ. ಈ ದಿಕ್ಕಿನಲ್ಲಿ ಸಹಿತ ನೀವು ವಿಚಾರ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆದರೆ ಇವತ್ತು ಬಹಳ ಮುಖ್ಯವಾದದ್ದು ನಮ್ಮ ರಾಷ್ಟ್ರಮಟ್ಟದ ಒಂದು ಸಾರಿಗೆ ನೀತಿ ಈ ಮೋಟಾರ್ ವೆಹಿಕಲ್ಸ್ ಆ್ಯಕ್ಟನ್ನು ತಿದ್ದುಪಡಿ ಮಾಡಲು ಅವರು ಪ್ರಯತ್ನ ಮಾಡಿದರು. ಈಗ ಅವರು ಕೆಲವು ತಿದ್ದುಪಡಿಗಳನ್ನು ತರುತ್ತಿದ್ದಾರೆ. ಅವರ ನೀತಿ ನಮ್ಮ ರಾಜ್ಯದ ನೀತಿ ಸರಿಹೋಗತಕ್ಕಂಥ ದಿಕ್ಕಿನಲ್ಲಿ ಇರಬೇಕು. ಆದರೆ ಅದು ಏತಕ್ಕೆ ಆಗುತ್ತಿಲ್ಲ ಎಂಬ ಬಗ್ಗೆ ನಾನು ನಂತರ ಬರುತ್ತೇನೆ; ಈಗ ಆಕ್ಸಿಡೆಂಟ್ಸ್ ಬಗ್ಗೆ ನಿಮಗೆ ಹೇಳುತ್ತೇನೆ. ಮದ್ರಾಸಿನಲ್ಲಿ ಈ ನ್ಯಾಷನಲ್ ಪ್ರಿವೆನ್ಶನ್ ಅಫ್ ಲಾಸಸ್ ಸೊಸೈಟಿ ಅಂತ ಕೇಂದ್ರ ಸರ್ಕಾರದ ಒಂದು ಸಂಸ್ಥೆ ಇದೆ. ಅವರು ಕೊಟ್ಟಿರತಕ್ಕಂಥ ಒಂದು ವರದಿ ಪ್ರಕಾರ ಒಂದು ವರ್ಷಕ್ಕೆ ನಮ್ಮ ರಾಷ್ಟ್ರದಲ್ಲಿ ಒಂದು ಸಾವಿರ ಕೋಟಿ ರೂಪಾಯಿನಷ್ಟು ಪ್ರಾಪರ್ಟಿ ಲಾಸ್ ಆಗುತ್ತಿದೆ ಎಂದು. ರೈಲ್ವೆ ಆಕ್ಸಿಡೆಂಟ್ಸ್ ಬಗ್ಗೆ ನಾನು ಹೇಳುತ್ತಿಲ್ಲ. ಕೇವಲ ಮೋಟಾರ್ ವೆಹಿಕಲ್ಸ್ ಆಕ್ಸಿಡೆಂಟ್ಸ್‌ನಿಂದಾಗಿ ವರ್ಷಕ್ಕೆ ಒಂದು ಸಾವಿರ ಕೋಟಿಯಷ್ಟು ಇಡೀ ರಾಷ್ಟ್ರದಲ್ಲಿ ಲಾಸು ಆಗುತ್ತಿದೆ. ಈ ರಿಪೋರ್ಟನ್ನು ನಾನು ತೆಗೆದುಕೊಂಡು ಓದಿ ನೋಡಿದೆ. ಅಲ್ಲಿ ಅಧಿಕಾರಿ ಮಿತ್ರರು ಲಾಸಸ್‌ನಿಂದ ಎಷ್ಟು ಕಾಂಪನ್‌ಸೇಷನ್ ಕೊಟ್ಟಿದ್ದಾರೆ, ಎಷ್ಟು ವೆಹಿಕಲ್ಸ್‌ಗಳಿಗೆ ಏನು ಡ್ಯಾಮೇಜ್ ಆಗುತ್ತದೆ ಎಂಬ ಬಗ್ಗೆ ಹೇಳಿಲ್ಲ ಇದನ್ನು ನೀವು ತಿಳಿದುಕೊಳ್ಳಿ ಇದನ್ನು ನಾವು ಇವತ್ತು ತಪ್ಪಿಸಬೇಕಾಗುತ್ತದೆ ಇದನ್ನು ತಪ್ಪಿಸದೇ ಹೋದರೆ ನಾವು ಪ್ರಯಾಣಿಕರಿಗೆ ಅನುಕೂಲವಾಗತಕ್ಕಂಥ ಒಂದು ವ್ಯವಸ್ಥೆ ಮಾಡಲಿಕ್ಕೆ ಸಾಧ್ಯವಿಲ್ಲ ನಿಮ್ಮ ಜವಾಬ್ದಾರಿ ಕೇವಲ ಸಾರಿಗೆ ಇಲಾಖೆಯ ೧೫ ಸಾವಿರ ಡ್ರೈವರುಗಳ ಮೇಲಷ್ಟೇ ಇದೆಯೆಂದು ನಾನು ತಿಳಿದುಕೊಂಡಿಲ್ಲ. ಇಡೀ ವ್ಯವಸ್ಥೆಯನ್ನು ಸರಿಪಡಿಸಬೇಕಾದರೆ ದ್ವಿಚಕ್ರ ವಾಹನ ಚಾಲಕರು, ಟ್ರಕ್ ಚಾಲಕರು, ಪಬ್ಲಿಕ್ ಸೆಕ್ಟರ್ ಅಂಡರ್‌ಟೇಕಿಂಗ್‌ಗಳಲ್ಲಿ ಚಾಲಕರು ಯಾರಿದ್ದಾರೆ, ಗವರ್ನಮೆಂಟ್ ಅಂಡರ್‌ಟೇಕಿಂಗ್‌ಗಳಲ್ಲಿ ಚಾಲಕರು ಯಾರಿದ್ದಾರೆ, ಇವರಿಗೆಲ್ಲ ಲೈಸನಿಂಗ್ ಸಿಸ್ಟಮ್ ಸರಿ ಇರಬೇಕು — ಎಂಬ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಇದು ತಮಗೆ ಗೊತ್ತಿದೆ. ಇಲಾಖೆಯ ಮೇಲ್ಮಟ್ಟದ ಅಧಿಕಾರಿಗಳಿಗೂ ಸಹಿತ ಏನು ಮಾಡಬೇಕೆಂದು ಚೆನ್ನಾಗಿ ಗೊತ್ತಿದೆ, ಆದರೆ ಡ್ರೈವಿಂಗ್ ಪದ್ಧತಿಯಲ್ಲಿ ಏನಿದೆ, ಕೇವಲ ಆಕ್ಸಿಡೆಂಟ್‌ಗಳನ್ನು ಪ್ರಿವೆಂಟ್ ಮಾಡುವುದು ಒಂದೇ ಅಲ್ಲ. ಅದರ ಜೊತೆಗೆ ಇಂಧನ ಉಪಯೋಗದಲ್ಲಿ ಉಳಿತಾಯ ಮಾಡುವುದು ಈ ರಾಷ್ಟ್ರದಲ್ಲಿ ಮೂಲಭೂತವಾಗಿ ಬೇಕಾಗಿರತಕ್ಕಂಥಾದ್ದು. ಇದನ್ನು ಮಾಡತಕ್ಕಂಥ ದೃಷ್ಟಿಯಿಂದ ಚಾಲಕರಿಗೆ ತರಬೇತಿ ಕೊಡತಕ್ಕ ಅವಶ್ಯಕತೆ ಇದೆ. ಈಗ ಇರತಕ್ಕಂಥ ಡ್ರೈವರ್ಸ್ ಟ್ರೈನಿಂಗ್ ಸ್ಕೂಲ್‌ಗಳಲ್ಲಿ ಡ್ರೈವರ್ಸ್‌ಗೆ ಟ್ರೈನಿಂಗ್ ಕೊಡಬೇಕೆಂದು ಮಾಡುವುದಿಲ್ಲ, ಹಣ ಮಾಡಬೇಕೆಂಬ ದೃಷ್ಟಿಯಿಂದ ಈ ಡ್ರೈವಿಂಗ್ ಸ್ಕೂಲ್‌ಗಳನ್ನು ಇಟ್ಟುಕೊಂಡಿದ್ದಾರೆ, ಅನೇಕ ಜನ ಈ ಮೋಟಾರ್ ವೆಹಿಕಲ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಇದ್ದಂಥ ಮಾಜಿ ಅಧಿಕಾರಿಗಳು ಇವುಗಳನ್ನು ನಡೆಸುತ್ತಿದ್ದಾರೆ. ನಿವೃತ್ತ ಅಧಿಕಾರಿಗಳು. ಡಿಸ್‌ಮಿಸ್ ಆದ ಅಧಿಕಾರಿಗಳು ಅಲ್ಲಿ ಇರುತ್ತಾರೆ. ಆದ್ದರಿಂದ ಇವರು ಯಾವ ರೀತಿ ಶಿಕ್ಷಣ ಕೊಡಲಿಕ್ಕೆ ಸಾಧ್ಯ?

ನೀವು ಸರ್‌ಪ್ರೈಸ್ ಚೆಕ್ ಮಾಡಿ, ಇಲ್ಲವೇ ನಿಮ್ಮ ಟ್ರಾನ್ಸ್‌ಪೋರ್ಟ್ ಕಮೀಷನರ್ ಅವರನ್ನು ಕಳುಹಿಸಿ. ಅವರು ಇರುವುದರಲ್ಲಿ ದಕ್ಷತೆಯುಳ್ಳ ಆಫೀಸರ್. ಆಗ ಗೊತ್ತಾಗುತ್ತದೆ. ಡ್ರೈವಿಂಗ್ ಸ್ಕೂಲ್‌ನಲ್ಲಿ ಯಾವ ರೀತಿಯಾಗಿ ಸರ್ಟಿಫಿಕೇಟ್ ಕೊಡುತ್ತಾರೆ, ಎಷ್ಟು ದಿವಸದ ಕೋರ್ಸ್ ಇಟ್ಟುಕೊಂಡಿದ್ದಾರೆ ಎಂದು. ಫಸ್ಟ್ ಏಡ್ ಸರ್ಟಿಫಿಕೇಟ್ ಕೊಡುತ್ತಾರೆ. ಈ ಫಸ್ಟ್ ಏಡ್ ಪೂರ್ಣವಾಗಿದೆ ಎನ್ನುವುದಕ್ಕೆ. ಹಾಗೂ ಸರ್ಟಿಫಿಕೇಟ್ ತೆಗೆದುಕೊಳ್ಳುವುದಕ್ಕೆ ಈ ಕೋರ್ಸ್‌ಗೆ ಹೋಗತಕ್ಕಂಥ ಅಗತ್ಯ ಇಲ್ಲ. ಇಲ್ಲಿ ಕುಳಿತುಕೊಂಡಿದ್ದರೇ. ಅದನ್ನು ಇಲ್ಲಿಗೆ ತರಿಸಿಕೊಳ್ಳಬಹುದು. ಇಂತಹ ಕೆಲಸವನ್ನು ಡ್ರೈವಿಂಗ್ ಸ್ಕೂಲ್‌ಗಳಲ್ಲಿ ಮಾಡಿಕೊಳ್ಳಬಹುದು. ಇದರಿಂದಾಗಿ ಇವತ್ತು ನಮ್ಮ ದೇಶದಲ್ಲಿ ಮತ್ತು ನಮ್ಮ ರಾಜ್ಯದಲ್ಲಿ ವಿಶೇಷವಾಗಿ ಡ್ರೈವರ್ಸ್‌ಗೆ, ತರಬೇತಿ ಕೊಡುವ ದೃಷ್ಟಿಯಿಂದ ನಾನು ಪ್ರಾಜೆಕ್ಟ್ ಪ್ರಿಪೇರ್ ಮಾಡಿಸಿದ್ದೆ. ವರ್ಲ್ಡ್ ಬ್ಯಾಂಕ್‌ನವರು ನಿಮಗೆ ಸಹಾಯ ಕೊಡುತ್ತಾರೆಂದು ಹೇಳಿದ್ದಾರೆ. ನೀವು ಸಾಲ ತೆಗೆದುಕೊಂಡು ಬನ್ನಿ, ಏಕೆಂದರೆ ನಿಮಗೆ ದುಡ್ಡು ಸಿಗುವುದಿಲ್ಲ ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟ್ ಕೇವಲ ಒಂದು ಮಿಲ್ಕಿಂಗ್, ಪ್ರತಿವರ್ಷ ಜನವರಿ ತಿಂಗಳೊಳಗೆ ಮುಖ್ಯಮಂತ್ರಿಯು, ಹಣಕಾಸಿನ ಮಂತ್ರಿಗಳು ಏಜೆ ಇನ್ನೂ ಕಲೆಕ್ಷನ್ ಆಗಿಲ್ಲ, ೧೫೦-೧೭೦ ಕೋಟಿ ಬರಬೇಕೆಂದು ಕೇಳುತ್ತಾರೆಯೇ ವಿನಹ ನಿಮಗೆ ದುಡ್ಡನ್ನು ಕೊಡುವುದಿಲ್ಲ. ಇದು ನನಗೆ ಗೊತ್ತಿದೆ, ನಾನೂ

ಅನುಭವಿಸಿದ್ದೇನೆ. ಆದ್ದರಿಂದ ಈ ಬಗ್ಗೆ ಒಂದು ದೊಡ್ಡ ಪ್ರಾಜೆಕ್ಟ್ ಆಗಿ ತೆಗೆದುಕೊಳ್ಳಬೇಕು. ಪ್ರತಿ ಜಿಲ್ಲೆಯಲ್ಲಿರತಕ್ಕ ಪ್ರತಿಯೊಬ್ಬ ಡ್ರೈವರಿಗೂ ಕಡ್ಡಾಯವಾಗಿ ಇದನ್ನು ಮಾಡಿದರೆ, ಲಾಸ್ ಆಗುತ್ತಿರುವ ನ್ಯಾಷನಲ್ ಪ್ರಾಪರ್ಟಿಯನ್ನು ಪ್ರಿವೆಂಟ್ ಮಾಡುವುದರ ಜೊತೆಗೆ, ಮುಂದೆ ಕೊಂಡುಕೊಳ್ಳುವುದಕ್ಕೆ ಸಾಧ್ಯವಾಗದೇ ಇಂತಹ ಮಾನವ ಜೀವವನ್ನು ಉಳಿಸಬಹುದು. ಇದರ ಬಗ್ಗೆ ತಾವು ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನೀವು ಗೊತ್ತಿದ್ದು ಮಾಡುತ್ತಿರೋ, ಅಥವಾ ಗೊತ್ತಿಲ್ಲದೇ ಮಾಡುತ್ತಿರೋ ನನಗೆ ಅರ್ಥವಾಗುತ್ತಿಲ್ಲ, ನ್ಯಾಷನಲೈಸೇಷನ್ ಪಾಲಿಸಿಗೆ, ಇಂಡೈರೆಕ್ಟಾಗಿ ಡೀನ್ಯಾಷನಲೈಸ್ ಮಾಡುವುದಕ್ಕೆ ಹೊರಟಿದ್ದೀರಿ ಇನ್ನು ೧೩ ಪ್ಲಸ್ ೧ ಮೆಟಡಾರ್ ವ್ಯಾನ್‌ಗಳಿಗೆ ಕೊಡತಕ್ಕ ಪರ್ಮಿಟನ್ನು ಸಂಪೂರ್ಣವಾಗಿ ನಿಲ್ಲಿಸಬೇಕು. ಇದನ್ನು ರಾಷ್ಟ್ರೀಕರಣ ಮಾಡದೇ ಇರತಕ್ಕ ಜಿಲ್ಲೆಗಳಿಗೆ ಕೊಡಿ. ಕೊಡಗು, ದಕ್ಷಿಣ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಮಂಡ್ಯ ಈ ಜಿಲ್ಲೆಗಳಲ್ಲಿ ಕೊಡಿ. ಆದರೆ ರಾಷ್ಟ್ರೀಕರಣ ಆದ ಜಿಲ್ಲೆಗಳಲ್ಲಿ ಕೊಡುವುದಕ್ಕೆ ತಾವು ಹೊರಟಿದ್ದೀರಿ, ೯೪ ಕೆ.ಎಸ್.ಆರ್ ಟಿ.ಸಿ. ಡಿಪೋಗಳು ಇವೆ, ಮಾನ್ಯ ಅಧ್ಯಕ್ಷರೇ, ತಮಗೂ ಗೊತ್ತಿದೆ. ಎಲ್ಲೆಲ್ಲಿ ಕೆ.ಎಸ್.ಆರ್.ಟಿ.ಸಿ. ಡಿಪೋ ಇದೆ, ಅಲ್ಲೆಲ್ಲಾ ೧೦೦–೧೫೦ ಮೆಟಡಾರ್ ವ್ಯಾನ್‌ಗಳಿವೆ. ಅಲ್ಲಿಗೆ ಅವರು ಪರ್ಮಿಟ್ ತೆಗೆದುಕೊಳ್ಳುವುದು ಬೇರೆ ಎಲ್ಲೂ ತೆಗೆದುಕೊಳ್ಳುವುದಿಲ್ಲ. ಅವರಿಗೂ ಕೆ.ಎಸ್.ಆರ್.ಟಿ.ಸಿ. ಸಿಬ್ಬಂದಿ ವರ್ಗದಲ್ಲಿ ಒಂದು ಅಂಡರ್‌ಸ್ಟಾಂಡಿಂಗ್ ಇದೆ, ನಮ್ಮ ಬಸ್ ಮುಂದೆ ಒಂದು ಮೆಟಡಾರ್ ಹೋಗುತ್ತದೆ, ನಮ್ಮ ಬಸ್ ಹಿಂದೆ ಒಂದು ಹೋಗುತ್ತಿರುತ್ತದೆ, ಹೀಗಾದರೆ ನಮಗೆ ಯಾರು ಪ್ಯಾಸೆಂಜರ್ ಬರುತ್ತಾರೆ ? ಕೆ.ಎಸ್.ಆರ್.ಟಿ.ಸಿ.ಯಲ್ಲಿರತಕ್ಕ ೮ ಸಾವಿರ ಬಸ್‌ಗೆ ಪ್ಯಾಸೆಂಜರ್ ಇಲ್ಲವೆಂದು ಮುಚ್ಚುವ ಕೆಲಸವನ್ನು ನೀವು ಮಾಡುವುದಕ್ಕಾಗುವುದಿಲ್ಲ. ಎರಡೂ ಮಾಡುವುದಕ್ಕೆ ಹೋಗುತ್ತೇವೆಂದು ಹೇಳಿದರೆ, ಇದರ ಅರ್ಥ ಏನು? ಒಂದು ವರ್ಷಕ್ಕೆ ೫,೦೦೦ ಮೆಟಡಾರ್‌ಗಳಿಗೆ ಪರ್ಮಿಷನ್ ಕೊಟ್ಟರೆ, ಕೊನೆಯ ಪಕ್ಷ ೫೦ ಕೋಟಿ ಕೆ.ಎಸ್.ಆರ್.ಟಿ.ಸಿ ಗೆ ಬರುತ್ತಿದ್ದ ರೆವಿನ್ಯೂ ಕಡಿಮೆಯಾಗುತ್ತದೆ, ನಾನು ಹೇಳುತ್ತೇನೆ, ಮೋಟಾರು ವೆಹಿಕಲ್ ಡಿಪಾರ್ಟ್‌ಮೆಂಟ್‌ಗೂ ಮತ್ತು ಪೋಲೀಸ್ ಡಿಪಾರ್ಟ್‌ಮೆಂಟ್‌ಗೂ ಎಲ್ಲ ಕೋ–ಆರ್ಡಿನೇಷನ್ ಇರಬೇಕೆಂದರೆ ಇಲ್ಲೇ. ಕೆಲವು ರಾಷ್ಟ್ರೀಕರಣ ಆದ ಕಡೆಯಲ್ಲೂ ಪರ್ಮಿಟ್ ಇಲ್ಲದೇ ಇರತಕ್ಕ, ಈ ಪೋಲೀಸಿನವರು, ಮಿಲಿಟರಿಯವರು ಹರಾಜು ಮಾಡತಕ್ಕ ಕಳ್ಳ ವ್ಯಾನುಗಳು ಏನಿವೆ, ಇವುಗಳನ್ನು ಮಾಮೂಲಿ ತೆಗೆದುಕೊಂಡು ಬಿಟ್ಟಿರುತ್ತಾರೆ. ಇವು ಆಯಾ ಪೋಲೀಸ್ ಸ್ಟೇಷನ್‌ಗೆ ಅಟ್ಯಾಚ್ ಆಗಿರುತ್ತವೆ, ಇದನ್ನು ತಪ್ಪಿಸುವುದು ಸುಲಭ ಅಲ್ಲ. ಪೋಲೀಸ್ ಡಿಪಾರ್ಟ್‌ಮೆಂಟ್ ಮೋಟಾರು ವೆಹಿಕಲ್ ಡಿಪಾರ್ಟ್‌ಮೆಂಟ್ ಮತ್ತು ಕೆ.ಎಸ್.ಆರ್.ಟಿ.ಸಿ. ನಡುವೆ ಕೋಆರ್ಡಿನೇಟ್ ಆದರೆ ನಿಮ್ಮ ರೆವಿನ್ಯೂ ಹೆಚ್ಚಾಗುತ್ತದೆ. ಈ ನೀತಿಯಿಂದ ರಾಷ್ಟ್ರೀಕರಣ ಮಾಡುವಂತಹ ಸಿಸ್ಟಂನ್ನು ಡೀನ್ಯಾಷನಲೈಸೇಷನ್ ಮಾಡುವುದಕ್ಕೆ ತಾವು ಹೊರಟಿದ್ದೀರಿ. ಇನ್ನು ಕಾಂಟ್ರಾಕ್ಟ್ ಕ್ಯಾರೇಜ್ ಬಗ್ಗೆ ಒಂದು ಅಡ್‌ಹಾಕ್ ಪಾಲಿಸಿಯನ್ನು ನಾವು ಇಟ್ಟುಕೊಂಡಿದ್ದೇವೆ, ಇವೊತ್ತು ಜೆನ್ಯೈನ್ ಪ್ಯಾಸೆಂಜರ್ ಯಾರಿದ್ದಾರೆ, ಅವರು ಹೋಗುವುದಕ್ಕೆ ಪರ್ಮಿಟ್ ಕೊಡಿ, ನಾವು ಬೇಡ ಎಂದು ಹೇಳುವುದಿಲ್ಲ, ಆದರೆ ಜೆನ್ಯೈನ್ ಎಂದು ಹೇಳಿಕೊಂಡು, ಒಂದು ಪರ್ಮಿಟ್ ತೆಗೆದುಕೊಂಡು, ೧೦–೧೫ ಟ್ರಿಪ್ ಹೊಡೆಯುವವರೇ ಬಹಳ ಜನ. ನಿಮಗೆ ಇರತಕ್ಕ ಇನ್‌ಫ್ರಾಸ್ಟ್ರಕ್ಚರ್ ಏನಿದೆ, ಇದನ್ನು ಮೋಟಾರು ವೆಹಿಕಲ್ ಡಿಪಾರ್ಟ್‌ಮೆಂಟ್‌ನಲ್ಲಿ ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಿಲ್ಲ. ನೀವು ಎಷ್ಟು ಎನ್‌ಫೋರ್ಸ್‌ಮೆಂಟ್ ಜಾಸ್ತಿ ಮಾಡುತ್ತೀರಿ ಅಷ್ಟು ಕರಪ್ಷನ್ ಜಾಸ್ತಿಯಾಗುತ್ತದೆ. ನಾನು ಆ ಕಡೆಯಿಂದಲೂ ಈ ಮಾತನ್ನು ಹೇಳಿದ್ದೇನೆ. ಈ ಕಡೆಯಿಂದಲೂ ಈ ಮಾತನ್ನು ಹೇಳುತ್ತಿದ್ದೇನೆ. ಇವುಗಳನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಿದರೆ, ನಿಮ್ಮ ರೆವಿನ್ಯೂ ಜಾಸ್ತಿಯಾಗುತ್ತದೆ. ಆದರಲ್ಲೇನೂ ಸಂಶಯ ಇಟ್ಟುಕೊಳ್ಳಬೇಡಿ.

ಆದ್ದರಿಂದ ನಾನು ತಮ್ಮಲ್ಲಿ ಎರಡನೆಯದಾಗಿ ಒತ್ತಾಯ ಮಾಡುವುದೇನೆಂದರೆ, ಈ ರೂಟ್ಸ್‌ಗಳನ್ನು ಆಪ್ಟಿಮೈಸ್ ಮಾಡಬೇಕಾಗಿದೆ. ನಮ್ಮಲ್ಲಿ ಬಹಳ ಅನ್‌ಹೆಲ್ತಿ ಕಾಂಪಿಟಿಷನ್ ಇದೆ. ವೇಸ್ಟೇಜ್ ಆಫ್ ಪ್ಯಾರಲಲ್ ಆಪರೇಷನ್ ಬಹಳ ಇದೆ. ತುಮಕೂರು ಡಿಪೋನಿಂದ ತಿರುಪತಿಗೆ ಬಸ್ ಹಾಕುತ್ತಾರೆ, ಕುಣಿಗಲ್ ಡಿಪೋನಿಂದಲೂ ತಿರುಪತಿಗೆ ಒಂದು ಬಸ್ ಹಾಕುತ್ತಾರೆ. ಅವರವರಲ್ಲೇ ಕಾಂಪಿಟಿಷನ್ ಇದೆ. ಕೆ.ಎಸ್.ಆರ್.ಟಿ.ಸಿ. ಯಲ್ಲೇ ಒಂದು ಕಾಂಪಿಟಿಷನ್ ಇದೆ. ಖಾಸಗಿಯವರಿಗೆ ಪರ್ಮಿಟ್‌ಗಳನ್ನು ಕೊಟ್ಟಿದ್ದೀರಲ್ಲ ಅವರು ನ್ಯಾಷನಲ್ ಪರ್ಮಿಟ್ಸ್ ಇಟ್ಟುಕೊಂಡು ರೆಗ್ಯುಲರ್ ಆಗಿ ಓಡಿಸುತ್ತಾರಲ್ಲ, ಅವರು ಏನು ಮಾಡುತ್ತಾರೆ ಎಂದರೆ ಎಲ್ಲಿ ನಮಗೆ ಸ್ವಲ್ಪ ರೆವಿನ್ಯೂ ಬರುತ್ತದೆ ಅಲ್ಲೇ ಓಡಿಸುತ್ತಾರೆ. ಇದರಿಂದಾಗಿ ಇವೊತ್ತು ಅನ್‌ಹೆಲ್ತಿ ಕಾಂಪಿಟಿಷನ್ ಮತ್ತು ಪ್ಯಾರಲಲ್ ಆಪರೇಷನ್ ಇದೆ. ಒಂದು ಬಸ್‌ನಲ್ಲಿ ೩೦ ಜನ ಹಾಕುವ ಕಡೆ ೧೫ ಜನ ಹೋದರೂ ಕೂಡಾ ಅದು

ಕೆ.ಎಸ್.ಆರ್.ಟಿ.ಸಿ. ಗೆ ಮಾತ್ರ ಲಾಸ್ ಅಲ್ಲ, ನ್ಯಾಷನಲ್ ವೇಸ್ಟ್ ಕೂಡಾ ಆಗುತ್ತದೆ. ೧೫ ಜನ ಹೋಗತಕ್ಕಂಥಾದ್ದು ನ್ಯಾಷನಲ್ ವೇಸ್ಟ್. ಆದರಿಂದಾಗಿ ರೂಟ್ಸನ್ನು ಆಪ್ಟಿಮೈಸ್ ಮಾಡಬೇಕು. ಇದಕ್ಕೆ ಮೋಟಾರ್ ವೆಹಿಕಲ್ಸ್ ರೂಲ್ಸ್‌ಗೆ ಲೋಕಲ್ ಅಮೆಂಡ್‌ಮೆಂಟ್ ತರಬೇಕಾಗುತ್ತದೆ. ಅದನ್ನು ಯೋಚನೆ ಮಾಡಿ ಲಾ ಡಿಪಾರ್ಟ್‌ಮೆಂಟ್ ಜೊತೆ, ನಿಮ್ಮ ಇಲಾಖೆ ಅಧಿಕಾರಿಗಳ ಜೊತೆ ಆಲೋಚನೆ ಮಾಡಿ ಒಂದು ಅಮೇಂಡ್‌ಮೇಂಟ್ ತೆಗೆದುಕೊಂಡು ಬನ್ನಿ. ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನ ಮಾಡುತ್ತೇನೆ. ಏತಕ್ಕೆಂದರೆ ಅವರು ಈ ಸದನದಲ್ಲಿ ಹೇಳಿದ್ದಾರೆ. ಏನೆಂದರೆ ಒಂದು ಕಾಲ ಬಂದಿದೆ, ನಾವು ರಾಷ್ಟ್ರೀಕರಣವನ್ನು ಬಿಟ್ಟು ಸ್ವಲ್ಪ ಖಾಸಗಿಯವರಿಗೂ ಕೊಡತಕ್ಕ ವಿಚಾರವನ್ನು ಪ್ರಾಕ್ಟಿಕಲ್ ಆಗಿ ಮಾಡಬಹುದೇನೋ ಎಂದು, ನಾನು ಅದನ್ನು ಸಂಪೂರ್ಣವಾಗಿ ವಿರೋಧ ಮಾಡುವುದಿಲ್ಲ. ಕೆಲವು ರೂಟ್ಸ್‌ಗಳಲ್ಲಿ ಕೆ.ಎಸ್.ಆರ್.ಟಿ.ಸಿ. ಯವರು ಮಾತ್ರ ನಡೆಸಬೇಕೇ ಹೊರತು ಖಾಸಗಿಯವರಿಗೆ ಕೊಡುವುದಕ್ಕೆ ಆಗುವುದಿಲ್ಲ. ಖಾಸಗಿಯವರು ಹಳ್ಳಿಗಳಿಗೆ ಹೋಗುವುದಕ್ಕೆ ತಯಾರಾಗಿಲ್ಲ. ಅವರು ಹಳ್ಳಿಗಳಿಗೆ ಏನು ಮಾಡಿದರೂ ಹೋಗುವುದಿಲ್ಲ. ಅವರಿಗೆ ಕೊಳ್ಳೆಗಾಲ, ಕನಕಪುರ, ಬೆಂಗಳೂರು, ಬೆಂಗಳೂರು-ರಾಮನಗರ, ಮಂಡ್ಯ, ಕೊಳ್ಳೇಗಾಲ ರೂಟ್ ಬೇಕೇ ವಿನಹ ಇಂಟೀರಿಯರ್ ರೂಟ್‌ಗಳಿಗೆ ಅವರು ಹೋಗುವುದಿಲ್ಲ. ಆದುದರಿಂದ ಎಲ್ಲಿ ಅರ್ಧ ನ್ಯಾಷನಲೈಸ್ ಆಗಿದೆ ಎಲ್ಲಿ ನ್ಯಾಷನಲೈಸ್ ಆಗಿಲ್ಲ, ಅಲ್ಲಿ ರೂಟ್ಸನ್ನು ಆಪ್ಟಿಮೈಸ್ ಮಾಡಬೇಕಾಗಿದೆ. ಏಳು ಜಿಲ್ಲೆಗಳಲ್ಲಿ ಸಂಪೂರ್ಣವಾಗಿ ರಾಷ್ಟ್ರೀಕರಣವಾಗಿದೆ. ಅದನ್ನು ಬಿಟ್ಟು ಬಿಡಿ. ಉಳಿದಿರತಕ್ಕಂಥ ಜಿಲ್ಲೆಗಳಲ್ಲಿ ರೂಟ್ಸನ್ನು ಪ್ರತಿವರ್ಷ ಪಬ್ಲಿಕ್ ಆಕ್ಷನ್ ಮಾಡಿ. ಖಾಸಗೀಯವರಿಗೆ ಕೊಡಬೇಡಿ ಎಂದು ಹೇಳುವುದಿಲ್ಲ. ಎಕ್ಸೈಸ್ ಡಿಪಾರ್ಟ್‌ಮೇಂಟ್‌ನಲ್ಲಿ ಯಾವರೀತಿ ಆಕ್ಷನ್ ಮಾಡುತ್ತೀರಿ ಹಾಗೆ ಈ ರೂಟ್ಸ್‌ಗಳನ್ನು ಆಕ್ಷನ್ ಮಾಡಿದಾಗ ಕಾಂಪಿಟಿಷನ್ ಬರುತ್ತದೆ. ಕೆ.ಎಸ್.ಆರ್.ಟಿ.ಸಿ ಯವರು ನಡೆಸುವುದು ಬೇಡ, ಇದರಿಂದ ಸರ್ಕಾರಕ್ಕೆ ಲಾಭ ಬರುತ್ತದೆ. ನಾನು ಇದನ್ನು ಮಾಡಬೇಕೆಂದು ಪ್ರಯತ್ನಮಾಡಿದೆ. ಆದರೆ ಅದನ್ನು ಮಾಡುವುದಕ್ಕೆ ಆಗಲಿಲ್ಲ. ಎ. ಗ್ರೇಡ್, ಬಿ. ಗ್ರೇಡ್, ಸಿ. ಗ್ರೇಡ್ ಆಪರೇಟರ್ಸ್ ಎಂದು ಹೇಳಿ ಇಟ್ಟುಕೊಂಡು ಅದಕ್ಕೋಸ್ಕರ ಒಂದು ಪಾಲಿಸಿ ಮಾಡಿ. ಇದರಿಂದ ಸರ್ಕಾರಕ್ಕೆ ಏನಿಲ್ಲ ಎಂದರೂ ಐದರಿಂದ ಹತ್ತು ಕೋಟಿ ರೂಪಾಯಿ ಪ್ರತಿವರ್ಷ ಆದಾಯ ಬರುತ್ತದೆ. ತಕ್ಷಣ ಎಲ್ಲವನ್ನೂ ರಾಷ್ಟ್ರೀಕರಣಮಾಡಿ ಎಂದು ಎಷ್ಟೇ ಒತ್ತಾಯ ಮಾಡಿದರೂ ನೀವು ಮಾಡುವುದಕ್ಕೆ ಆಗುವುದಿಲ್ಲ. ಈಗ ಇರತಕ್ಕಂಥಾದ್ದನ್ನು ಸ್ಟ್ರೆಂಥೆನ್ ಮಾಡಬೇಕಾಗಿದೆ. ನಾನು ಸಲಹೆಗಳನ್ನು ಕೊಡುತ್ತೇನೆ. ಅದರ ಪ್ರಕಾರ ಹೋದರೆ ಸ್ಟ್ರೆಂಥೆನ್ ಮಾಡಬಹುದು. ಒಂದು ವರ್ಷದಲ್ಲಿ ನೀವು ಈಗ ಏರಿಸಿರತಕ್ಕಂಥ ಬೆಲೆಗಳಲ್ಲಿ ಅರ್ಧ ಕಡಿಮೆ ಮಾಡಿ, ನೋ ಪ್ರಾಫಿಟ್, ನೋ ಲಾಸ್ ರೀತಿ ಕೆ.ಎಸ್ ಆರ್.ಟಿ.ಸಿ ಯನ್ನು ನಡೆಸಬಹುದು. ಇದನ್ನು ಮಾಡುವುದಕ್ಕೆ ಸಾಧ್ಯ ಇದೆ. ಆದರೆ ಅದು ಆಗುವುದಿಲ್ಲ. ನನಗೆ ಗೊತ್ತಿದೆ. ಕೊನೆಯ ಪಕ್ಷ ರೂಟ್ಸ್‌ಗಳನ್ನು ಆಕ್ಷನ್ ಮಾಡತಕ್ಕಂಥ ಕೆಲಸ ಆದರೂ ಮಾಡಿದರೆ ಸರ್ಕಾರಕ್ಕೆ ಸ್ವಲ್ಪ ಉಪಯೋಗವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಕಾರ್ಪೊರೇಷನ್ ಲೆವೆಲ್ ಆಪರೇಷನ್‌ಗೆ ನಾನು ಬರುತ್ತೇನೆ. ಬಹಳಷ್ಟು ಜನ ಮಾತನಾಡುವವರು ಇರುತ್ತಾರೆ, ಆದುದರಿಂದ ಬೇರೆ ವಿಚಾರಗಳನ್ನು ಮೊಟಕು ಮಾಡಿ ಇದಕ್ಕೆ ಬರುತ್ತೇನೆ. ಕೆ.ಎಸ್.ಆರ್.ಟಿ.ಸಿ. ಯನ್ನು ಡಿವೈಡ್ ಮಾಡಬೇಕೆಂದು ನಮ್ಮ ಸರ್ಕಾರ ನಿರ್ಧಾರ ಮಾಡಿತ್ತು. ಅದಕ್ಕೋಸ್ಕರ ಒಂದು ಸಮಿತಿ ಮಾಡಿದ್ದೆವು. ಆದರೆ ಆ ಸಮಿತಿಯು ಒಂದು ವರದಿಯನ್ನು ಜಾರಿಗೆ ತರಬೇಕೆನ್ನುವ ಸಂದರ್ಭದಲ್ಲಿ ನನ್ನ ಖಾತೆ ಬದಲಾವಣೆ ಆಯಿತು ಏತಕ್ಕೆ ಆಯಿತು ಎಂದು ಹೇಳುವುದಕ್ಕೆ ಹೋಗುವುದಿಲ್ಲ, ಅದು ತೀರಾ ವೈಯಕ್ತಿಕವಾಗುತ್ತದೆ.ಸಾರಿಗೆ ಮಂತ್ರಿಯಾಗಿ ಕೆಲಸ ಮಾಡುವುದು ಬಹಳ ಕಷ್ಟ. ಕಾಲು ಎಳೆಯುವವರು ಬಹಳ ಜನ ಇರುತ್ತಾರೆ. ಕಂಡಕ್ಟರ್ ಸಸ್ಪೆನ್‌ಷನ್ ಮಾಡಿದ ತಕ್ಷಣ ಬಂದು ಆ ಕಂಡಕ್ಟರ್ ನಮಗೆ ಬಹಳ ಕೆಲಸ ಮಾಡಿದ್ದಾನೆ, ಅವನನ್ನು ರೀ ಇನ್‌ಸ್ಟೇಟ್ ಮಾಡಿ ಎಂದು ಬರುತ್ತಾರೆ. ನಾನು ಮಂತ್ರಿಯಾಗಿದ್ದಾಗ ೮ ಅಡಿಯ ಒಂದು ದೊಡ್ಡ ಬೋರ್ಡ್ ಹಾಕಿಸಿದ್ದೆ. ಡಿಸಿಪ್ಲಿನರಿ ಮ್ಯಾಟರ್ಸ್ ವಿಚಾರದಲ್ಲಿ ಯಾರೂ ಬರಬಾರದು ಎಂದು ಹಾಕಿಸಿದ್ದೆ. ಆದರೂ ಬರುವವರು ಬಹಳ ಜನ ಇರುತ್ತಾರೆ. ನಾವು ರಾಜಕಾರಣಿಗಳು, ಒತ್ತಡಕ್ಕೆ ಒಳಗಾಗುತ್ತೇವೆ ಇದನ್ನು ಮಾಡಬೇಕೆಂದು ಹೋದರೆ ನನಗನ್ನಿಸುತ್ತದೆ ಇದು ಸಾಧ್ಯವಿಲ್ಲ. ನಾವು ಸಮಿತಿ ಮಾಡಿದ್ದೆವು. ಆ ಸಮಿತಿಯವರು ಸಂಪೂರ್ಣವಾಗಿ ಸರಿಯಾದ ವರದಿ ಕೊಟ್ಟಿದ್ದಾರೆ ಎಂದು ಹೇಳುವುದಿಲ್ಲ. ದೊರೈರಾಜ್ ಅವರ ಅಧ್ಯಕ್ಷತೆಯಲ್ಲಿ ನಾವು ಸಮಿತಿ ಮಾಡಿದ್ದೆವು.

ಆ ವರದಿಯಲ್ಲಿ ಗೌರ್ನಮೆಂಟ್ ವ್ಯೂ ಏನು ಇದೆ? ಕಮ್ಯೂಟರ್ಸ್ ವ್ಯೂ ಏನು ಇದೆ? ಕಾರ್ಪೊರೇಷನ್ ಅಧಿಕಾರಿಗಳ ವ್ಯೂ ಏನು ಇದೆ ಮತ್ತು ಅಲ್ಲಿರತಕ್ಕಂಥ ಎಂಪ್ಲಾಯೀಸ್ ವ್ಯೂ ಏನಿದೆ ಎಂದು ನೋಡಿದಾಗ ಇದನ್ನು ಎಂಪ್ಲಾಯೀಸ್ ಸ್ವಲ್ಪ ವಿರೋಧ ಮಾಡುತ್ತಾರೆ. ಮಾನ್ಯ ಕೃಷ್ಣನ್ ರವರು ಏನಾದರೂ ಈ ಸಭೆಯಲ್ಲಿ ಇವತ್ತು ಇದ್ದಿದ್ದರೆ ದೊಡ್ಡ ಗಲಾಟೆ ಮಾಡಿಬಿಡುತ್ತಿದ್ದರು. ನಾವು

ಅದನ್ನು ಮಾಡುವುದಕ್ಕೆ ಬಿಡುವುದಿಲ್ಲ ಎಂದು. ಇಲ್ಲಿ ಭಾಷಣ ಮಾಡಿದೆ ಆದರೆ, ನಾಳೆ ಪತ್ರಿಕೆಗಳಲ್ಲಿ ಇದು ಬಂದರೆ ನನ್ನ ಮೇಲೆ ಅವರು ಗಲಾಟೆ ಮಾಡುತ್ತಾರೆ. ಆದರೆ ನಾವು ಪ್ರಯಾಣಿಕರ ಹಿತದೃಷ್ಟಿಯನ್ನು ನೋಡಿಕೊಳ್ಳಬೇಕಾಗುತ್ತದೆ. ಇವತ್ತು ಸುಮಾರು ೩೬೦ ಕೋಟಿ ರೂಪಾಯಿಗಳ ಪ್ಯಾರಲಲ್ ಗೌರ್ನಮೆಂಟ್ ಅಂದರೆ, ಮಿನಿ ಗೌರ್ನಮೆಂಟ್ ವ್ಯವಹಾರ ಮಾಡತಕ್ಕಂಥ ಒಂದು ಸಂಸ್ಥೆಗೆ ೬೦ ಸಾವಿರ ಜನರು ಕಾರ್ಮಿಕರು ಇರುವ ಒಂದು ಸಂಸ್ಥೆಯಲ್ಲಿ ಒಬ್ಬರು ಅಧ್ಯಕ್ಷರು ಇಲ್ಲಿ ಕುಳಿತುಕೊಂಡು ಅಥಣಿ ಡಿಪೋದಲ್ಲಿ ಏನಾಗುತ್ತಿದೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಒಂದು ತಿಂಗಳು ಬೇಕಾಗುತ್ತದೆ. ನೀವು ಎರಡು ವರ್ಷ ಏನಾದರೂ ಸಾರಿಗೆ ಮಂತ್ರಿಗಳಾಗಿದ್ದರೆ ಈ ೯೪ ಡಿಪೋಗಳಿಗೆ ಒಂದು ಸಾರಿ ಹೋಗಿ ನೋಡಿಕೊಂಡು ಬರಲು ಕಷ್ಟವಾಗುತ್ತದೆ. ಆ ಪರಿಸ್ಥಿತಿ ನನಗೆ ಗೊತ್ತಿದೆ. ಆದ್ದರಿಂದ ನಾನಾದರೂ ಹೇಳುವುದು ಇಷ್ಟೇ ನಮ್ಮ ಕೈಯಲ್ಲಿ ಅದನ್ನು ಮಾಡಲಿಕ್ಕೆ ಆಗಲಿಲ್ಲ. ನೀವು ಮಾಡಿ, ಆದರಿಂದ ಸರ್ಕಾರಕ್ಕೆ ಉಪಯೋಗವಾಗುತ್ತದೆ. ಇನ್ನು ಅನೇಕ ಜನರು ಹೇಳಿದರು. ಬಿ.ಟಿ.ಎಸ್. ನಲ್ಲಿ ಆಗುವ ಲಾಸಸ್ ಯಾರು ಕಾಂಪೆನ್‌ಸೇಟ್ ಮಾಡುತ್ತಾರೆ ಎಂದು. ಈಗ ಡಿ.ಟಿ.ಸಿ. ಇದೆ. ಅದಕ್ಕೆ ಕೇಂದ್ರ ಸರ್ಕಾರದವರು ಸ್ವಲ್ಪ ಹಣ ಕೊಡುತ್ತಾರೆ, ಅದೇ ರೀತಿ ಬಿ.ಟಿ.ಎಸ್ ಗೆ ಅಥವಾ ಬೇರೆ ಬೇರೆ ನಗರಗಳಲ್ಲಿರುವ ನಗರಸಾರಿಗೆಗಳಿಗೆ ಪಲ್ಲವನ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ ಮದ್ರಾಸ್‌ನಲ್ಲಿ ಯಾವ ರೀತಿ ಮಾಡಿದ್ದಾರ, ಅದೇ ರೀತಿಯಲ್ಲಿ ಒಂದು ೯–೧೦ ಕೋಟಿ ರೂಪಾಯಿಗಳ ಹಣ ಕೊಡಿ ಎಂದು ನಾನು ಹೇಳುತ್ತೇನೆ. ಇದರಲ್ಲಿ ತಾವು ಸಹ ಹೇಳಿದ್ದೀರಿ. ತಮ್ಮ ವಾರ್ಷಿಕ ವರದಿಯಲ್ಲಿ ಒಂದು ವರ್ಷಕ್ಕೆ ೬೦ ಕೋಟಿ ರೂಪಾಯಿಗಳು ಸರ್ಕಾರಕ್ಕೆ ಸಾರಿಗೆ ಸಂಸ್ಥೆಯಿಂದ ತೆರಿಗೆ ರೂಪದಲ್ಲಿ ಬರುತ್ತದೆ ಎಂದು, ಅದರ ಜೊತೆಗೆ ಸುಮಾರು ೨೫–೩೦ ಕೋಟಿ ರೂಪಾಯಿಗಳ ಹಣ ವಿದ್ಯಾರ್ಥಿಗಳಿಗೆ ಕೊಟ್ಟಿರತಕ್ಕಂಥ ಪಾಸ್‌ಗಳು ಕುರುಡರಿಗೆ ಕೊಟ್ಟಿರತಕ್ಕಂಥ ಪಾಸ್‌ಗಳು ವಯಸ್ಸಾದವರಿಗೆ ಕೊಟ್ಟಿರತಕ್ಕಂಥ ಪಾಸ್‌ಗಳಿಂದ ಸುಮಾರು ೧೦೦ ಕೋಟಿ ರೂಪಾಯಿಗಳು ಆದಾಯ ಸರ್ಕಾರಕ್ಕೆ ಇದೆ. ಇದನ್ನು ನೀವು ನೀವು ತಿಳಿದುಕೊಳ್ಳಬೇಕಾಗುತ್ತದೆ. ಸುಮ್ಮನೆ ನೀವು ಟೀಕೆ ಮಾಡುವುದರಲ್ಲಿ ಅರ್ಥವಿಲ್ಲ. ಆದ್ದರಿಂದ ನಾನು ಏನು ಹೇಳುತ್ತೇನೆಂದರೆ ಈ ಫೈನಾನ್‌ಷಿಯಲ್ ಆಸ್‌ಪೆಕ್ಟ್‌ನ್ನು ಸ್ವಲ್ಪ ಸ್ವಲ್ಪ ಮಾಡಿ. ಅದನ್ನು ದಯಮಾಡಿ ಈ ಕಾರ್ಪೊರೇಷನ್ ಅನ್ನು ಒಂದು ಅಥವಾ ಎರಡು ವರ್ಷಗಳಲ್ಲಿ ಡಿವೈಡ್ ಮಾಡಲೇ ಬೇಕೆಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಮತ್ತೆ ಕೆ.ಎಸ್.ಆರ್.ಟಿ.ಸಿ.ಯಲ್ಲಿ ರಿಕ್ರೂಟ್‌ಮೆಂಟ್ಸ್ ಆಗುತ್ತದೆ. ಆ ರಿಕ್ರೂಟ್‌ಮೆಂಟ್ಸ್ ನಿಮ್ಮ ಗಮನಕ್ಕೂ ಬರುವುದಿಲ್ಲ, ಅಲ್ಲಿರತಕ್ಕಂಥ ಯಾರ ಗಮನಕ್ಕೂ ಬರುವುದಿಲ್ಲ. ಅಲ್ಲಿರತಕ್ಕಂಥ ರೂಲ್ಸ್ ಪ್ರಕಾರವಾಗಿ ನಿಮ್ಮ ಗಮನಕ್ಕೆ ಮತ್ತು ಎಂ. ಡಿ. ಗಮನಕ್ಕೆ ಅವರು ಕೆಲರಕ್ಕೆ ಹೋಗಿ ಸೇರಿಕೊಂಡ ಮೇಲೆ ಒಂದು ಕಾಗದ ಬರೆಯುತ್ತಾರೆ. ಇಂತಹವರನ್ನು ನಾವು ರಿಕ್ರೂಟ್‌ಮೆಂಟ್ ಮಾಡಿಕೊಂಡಿದ್ದೇವೆ ಎಂದು.

ಶ್ರೀ ಕೆ. ಜೆ. ಜಾರ್ಜ್ .—ಈಗ ಸ್ಟಾಫ್ ಮಾಡಿದ್ದೇವೆ.

ಶ್ರೀ ಪಿ. ಜಿ. ಆರ್. ಸಿಂಧ್ಯ .—ಒಳ್ಳೆಯದು. ಈಗ ನಮಗೆಲ್ಲಾ ಹೊಸ ಬಸ್ಸ್ ರೂಟ್ಸ್ ಕೊಡಬೇಕಾಗುತ್ತದೆ. ಆಗಲಾದರೂ ಅದನ್ನು ನೀವು ರಿವೋಕ್ ಮಾಡಬೇಕಾಗುತ್ತದೆ. ಈ ರಿಕ್ರೂಟ್‌ಮೆಂಟ್ ಬೋರ್ಡ್ ಒಂದು ಈ ಬ್ಯಾಂಕಿಂಗ್ ಸರ್ವೀಸ್ ಕಮಿಷನ್ ಯಾವ ರೀತಿ ಇರುತ್ತದೆಯೋ ಆ ರೀತಿಯಲ್ಲಿ ಒಂದು ರಿಕ್ರೂಟ್‌ಮೆಂಟ್ ಬೋರ್ಡ್‌ನ್ನು ಮಾಡಿ ಅದರಲ್ಲಿ ಒಂದು ನಾಲ್ಕು ಜನ ನಾನ್ ಅಫಿಷಿಯಲ್ಸ್‌ನ್ನು ನಿಮ್ಮ ಪಕ್ಷದವರನ್ನೇ ಹಾಕಿ. ಏನೂ ತೊಂದರೆ ಇಲ್ಲ, ಆದರೆ ಅಧಿಕಾರಿಗಳ ಮೇಲೆ ಒಂದು ಚೆಕ್ ಇರುತ್ತದೆ. ಈಗ ಬೆಳಗಾಂನಲ್ಲಿ ಒಂದು ರಿಕ್ರೂಟ್‌ಮೆಂಟ್ ಆಗಬೇಕಾಗಿರುತ್ತದೆ. ಅವನ ಒಬ್ಬ ಏಜೆಂಟ್ ಆಗಲೇ ಕನಕಪುರದಲ್ಲಿ ಇರುತ್ತಾನೆ. ಈ ಕೆ.ಎಸ್.ಆರ್.ಟಿ.ಸಿ. ಯಲ್ಲಿ ಎಷ್ಟು ಎಫಿಷಿಯೆಂಟ್ ವೈರ್‌ಲೆಸ್ ಸಿಸ್ಟಂ ಇದೆ ಎಂದು ಹೇಳಿದರೆ, ನಿಮ್ಮ ಟೆಲಿಫೋನ್ ಇಲ್ಲ, ಟೇಪ್ ಇಲ್ಲ, ಯಾವುದೂ ಇಲ್ಲ, ಅಷ್ಟು ಎಫಿಷಿಯೆಂಟ್ ಆಗಿ ಬಹಳ ಎಚ್ಚರಿಕೆಯಿಂದ ಅವರು ಕೆಲಸ ಮಾಡುತ್ತಾರೆ. ಇದನ್ನು ತಾವು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೆ ನಾನು ಒಂದು ಸಲಹೆಯನ್ನು ಕೊಡಲಿಚ್ಛಿಸುತ್ತೇನೆ. ಈಗ ತಾವು ಟ್ರಾನ್ಸ್‌ಫರ್ಸ್ ಮಾಡಿದ್ದೀರಿ. ಟ್ರಾನ್ಸ್‌ಫರ್ ಮಾಡತಕ್ಕಂಥಾದ್ದು ತಮ್ಮ ಹಕ್ಕು. ನಾನೇನು ಇಂತಹವರನ್ನು ಇಲ್ಲಿಗೆ ಟ್ರಾನ್ಸ್‌ಫರ್ ಮಾಡಿ ಎಂದು ಹೇಳಿದವನು ಅಲ್ಲ. ಆದರೆ ಟ್ರಾನ್ಸ್‌ಫರ್ ಮಾಡುವಾಗ ಈ ಕಾರ್ಪೊರೇಷನ್‌ನಲ್ಲಿ ಕೊನೆಯ ಪಕ್ಷ ಇದೊಂದು ಪಬ್ಲಿಕ್ ಸೆಕ್ಟರ್ ಅಂಡರ್‌ಟೇಕಿಂಗ್. ಈ ಇಲಾಖೆಯಲ್ಲಿ ರಾಜಕೀಯ ಇಂಟರ್‌ಫಿಯರೆನ್ಸ್ ಇರಬಾರದು. ಅವರಲ್ಲಿ ಯಾವುದಾದರೊಂದು ಪರ್‌ಫಾರ್ಮೆನ್ಸ್ ಅಥವಾ ಅವರ ಒಂದು ಗ್ರೌಂಡ್‌ಲೆವೆಲ್ ವರ್ಕ್ ಅಥವಾ ಅವರಿಗೆ ಯಾವುದಾದರೂ ಒಂದು ಬ್ಯಾಕ್‌ಗ್ರೌಂಡ್ ಏನಾದರೂ ಇರಲೇಬೇಕಲ್ಲ. ನಾನು ಒಂದು ಉದಾಹರಣೆ ಹೇಳುತ್ತೇನೆ. ಈಗ ಬೆಂಗಳೂರು ಡಿವಿಜನ್‌ನಲ್ಲಿ ೮೦೦ ವೆಹಿಕಲ್ಸ್ ಇರುವಂತಹ ಒಂದು ದೊಡ್ಡ ಡಿವಿಜನ್. ನನಗನಿಸುತ್ತದೆ. ಇಲ್ಲಿ

ಸುಮಾರು ೨-೩ ಕೋಟಿ ರೂಪಾಯಿಗಳ ಲಾಭ ಬರತಕ್ಕಂಥ ಡಿವಿಜನ್‌ಗೆ ಎಲ್ಲೂ ಕೆಲಸ ಮಾಡದೆ ಇರತಕ್ಕಂಥ ಒಬ್ಬ ಅಧಿಕಾರಿಯನ್ನು ಡಿವಿಜನಲ್ ಕಂಟ್ರೋಲರ್ ಆಗಿ ಅಪಾಯಿಂಟ್ ಮಾಡಿದ್ದೀರಿ. ಅವರ ಹೆಸರನ್ನು ನಾನು ಇಲ್ಲಿ ತೆಗೆದುಕೊಳ್ಳುವುದಿಲ್ಲ. ಅವರ ಮೇಲೆ ಬಹಳ ಸೀರಿಯಸ್ ಚಾರ್ಜಸ್ ಇವೆ. ಅಂತಹವರನ್ನು ನೀವು ಅಲ್ಲಿಗೆ ಹಾಕಿದ್ದೀರಿ. ಬಾರ್ ಕೌನ್ಸಿಲ್‌ನವರು ಒಂದು ಟ್ರಿಪ್ ಅರೇಂಜ್ ಮಾಡಿದ್ದರು. ಅದರಲ್ಲಿ ಸುಮಾರು ಎರಡು ಮೂರು ಲಕ್ಷ ರೂಪಾಯಿಗಳ ಮಿಸ್ ಅಪ್ರೊಪ್ರಿಯೇಶನ್ ಮಾಡಿದ ಚಾರ್ಜಸ್ ಇದೆ. ತಾವು ಬೇಕಾದರೆ ಫೈಲ್ ತರಿಸಿ ನೋಡಿ. ಈಗ ಆ ಫೈಲ್ ಇದೆಯೋ ಅಥವಾ ನಾಪತ್ತೆಯಾಗಿದೆಯೋ ಗೊತ್ತಿಲ್ಲ. ಇದು ನಿಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ನೋಡಿ. ಇಂತಹವರನ್ನು ನೀವು ತೆಗೆದುಕೊಂಡು ಬಂದು ಇಲ್ಲಿ ಹಾಕಿದ್ದೀರಿ. ಇನ್ನು ಗುಲ್ಬರ್ಗಕ್ಕೆ ಒಬ್ಬ ಅಧಿಕಾರಿಯನ್ನು ಹಾಕಿದ್ದೀರಿ. ಗುಲ್ಬರ್ಗ ಮಾನ್ಯ ಮುಖ್ಯಮಂತ್ರಿಗಳ ಊರು, ನೇರವಾಗಿ ಅದು ಸರ್ಕಾರದ ಮೇಲೆ ರಿಫ್ಲೆಕ್ಟ್ ಮಾಡತಕ್ಕಂಥ ಒಂದು ಜಿಲ್ಲೆ. ಎಫಿಷಿಯೆನ್ಸಿ ಆಫ್ ದಿ ಗೌರ್ನಮೆಂಟ್. ಅಲ್ಲಿ ಒಂದು ದಿನ ಸಹ ಡಿವಿಜನಲ್ ಕಂಟ್ರೋಲರ್ ಆಗಿ ಕೆಲಸ ಮಾಡಿಲ್ಲ, ಅಂತಹವರನ್ನು ತೆಗೆದುಕೊಂಡುಹೋಗಿ ಪೋಸ್ಟ್ ಮಾಡಿದ್ದೀರಿ.

ಮತ್ತೆ ಇನ್ನೊಂದು ಹೇಳುತ್ತೇನೆ. ನೀವು ಹೆಡ್ಸ್ ಆಫ್ ದಿ ಡಿಪಾರ್ಟ್‌ಮೆಂಟ' ಹೇಗೆ ದೂಡಿದ್ದೀ ರೆಂದರೆ, ಫೆಬ್ರುವರಿ ೧೯೭೮ರಲ್ಲಿ ನಡೆದ ಒಂದು ಫೈಲ್‌ನ್ನು ನಿಮಗೆ ಕಳುಹಿಸಿಕೊಡುತ್ತೇನೆ. ಕೆಲವು ಆಫೀಸರ್‌ಗಳಿಗೆ ಪ್ರಮೋಷನ್ ಕೊಡಬೇಕೆಂದು ನನ್ನ ಹತ್ತಿರ ಫೈಲ್ ಬಂತು. ಆಗ ನಾನು ಈ ಪ್ರಮೋಷನ್‌ಗೆ ನಾನು ಒಪ್ಪುವುದಿಲ್ಲ ಎಂದು ಹೇಳಿದೆ. It is a Public Sector Undertaking......... ನೀವೇನೂ ಡಿ.ಸಿ.ಗಳಲ್ಲ, ನಿಮಗೆ ಕೊಟ್ಟಿರತಕ್ಕಂಥ ಸಂಬಳ ಸಾರಿಗೆಗಳೇ ಸಾಕಾಗಿದೆಯೆಂದು ಆ ಫೈಲನ್ನು ವಾಪಸ್ ಕಳುಹಿಸಿ ಅದರ ಜೊತೆಗೆ ಒಂದು ಗೌರ್ನಮೆಂಟ್ ಆರ್ಡರ್‌ನ್ನು ಹೊರಡಿಸಿದೆ. ಯಾವುದೇ ಪ್ರಮೋಷನ್ ಆಗಬೇಕಾದರೂ ಗೌರ್ನಮೆಂಟಿನ ಪರ್ಮಿಷನ್ ತೆಗೆದುಕೊಂಡು ಮಾಡಬೇಕೆಂದು ಆದೇಶ ಕೊಟ್ಟಿದ್ದೆ. ಈಗ ಒಬ್ಬರನ್ನು ಚೀಫ್ ಲಾ ಆಫೀಸರ್ ಎಂದು ಮಾಡಿದ್ದೀರಿ. ಕೆ.ಎಸ್.ಆರ್.ಟಿ.ಸಿ.ನಲ್ಲಿ Law Officer.........ಅಷ್ಟೊಂದು ಮುಖ್ಯವೆಂದು ನಿಮಗೂ ಗೊತ್ತು. ಈ ಚೀಫ್ ಲಾ ಆಫೀಸರ್ ಮೊದಲು ಏನು ಮಾಡುತ್ತಿದ್ದ ಎಂದರೆ, ಒಂದು ಸಾರಿ ಬೀದರ್, ಗುಲ್ಬರ್ಗಾ ಜಿಲ್ಲೆಯ ಬಸ್ ಮಾರ್ಗಗಳ ರಾಷ್ಟ್ರೀಕರಣ ಮಾಡುವಂಥ ಸಂದರ್ಭದಲ್ಲಿ ಬಸ್ ಮಾಲೀಕರುಗಳು ಹೈಕೋರ್ಟ್‌ನಲ್ಲಿ ರಿಟ್ ಹಾಕಿದರು. ಹೈಕೋರ್ಟ್‌ನಲ್ಲಿ ಕೇಸ್ ಇದ್ದಾಗ ಬೆಳಿಗ್ಗೆಯಿಂದ ಈ ಲಾ ಆಫೀಸರ್ ಅಲ್ಲಿ ಇರುತ್ತಿದ್ದ ಕೇಸ್ ಕೂಗಿದ ತಕ್ಷಣ ಕೋರ್ಟಿನ ಹಿಂದುಗಡೆ ಎಲ್ಲೋ ಹೋಗಿ ಅವಿತುಕೊಂಡು ಕುಳಿತುಕೊಂಡುಬಿಡುತ್ತಾರೆ. ಆಗ ಜಡ್ಜ್‌ಮೆಂಟ್ ಒನ್ ಸೈಡೆಡ್ ಕೊಡಬೇಕಾಗಿ ಬರುತ್ತಿತ್ತು. ನಾನು ಅವನನ್ನು ಸಸ್ಪೆಂಡ್ ಮಾಡಿ ಮನೆಗೆ ಕಳುಹಿಸಬೇಕೆಂದು ಇದ್ದೆ ಗೌರ್ನರ್ ಆಡಳಿತ ಇದ್ದಾಗ ಅವನು ಹೇಗೋ ನುಸುಳಿಕೊಂಡು ಬಂದುಬಿಟ್ಟಿದ್ದಾನೆ.

ಶ್ರೀ ಆರ್. ಎನ್. ನಾಯಕ್.—ನೀವು ಇದ್ದಾಗ ಸಸ್ಪೆಂಡ್ ಆರ್ಡರ್ ಹೊರಡಿಸಿದ್ದೀರಾ ?

ಶ್ರೀ ಪಿ.ಜಿ.ಆರ್. ಸಿಂಧ್ಯ.—ಸಸ್ಪೆಂಡ್ ಮಾಡಿ ಮನೆಗೆ ಕಳುಹಿಸಿದ್ದೆ. ಅದರ ಬಗ್ಗೆ ಫೈಲ್ ಅವರ ಹತ್ತಿರವೇ ಇದೆ ನೋಡಿ.

ಶ್ರೀ ಕೆ. ಜೆ. ಜಾರ್ಜ್.—ನಮ್ಮ ಸರ್ಕಾರ ಬಂದ ಮೇಲೆ ಯಾವುದೇ ಸಸ್ಪೆಂಡ್ ಆದ ಆಫೀಸರ್‌ಗಳನ್ನು ರೀ ಇನ್‌ಸ್ಟೇಟ್ ಮಾಡಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ನಿಮ್ಮ ಸರ್ಕಾರದ ಮೇಲೆ ಗೂಬೆ ಕೂರಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತಿಲ್ಲ. I am discussing about corporation activities. How it is functioning the public should know it. ಆ ದೃಷ್ಟಿಯಿಂದ ಹೇಳುತ್ತಿದ್ದೇನೆಯೋ ಹೊರತು ನೀವು ಹಣ ತೆಗೆದುಕೊಂಡು ಮಾಡಿದ್ದೀರೆಂದು ಹೇಳುತ್ತಿಲ್ಲ. ನಿಮಗೆ ಯಾವ ರೀತಿ ಅಲ್ಲಿರುವ ಆಫೀಸರ್‌ಗಳು ಗೈಡ್ ಮಾಡುತ್ತಾರೆಂದು ನನಗೆ ಚೆನ್ನಾಗಿ ಗೊತ್ತಿದೆ. ನಾನು ಜವಾಬ್ದಾರಿಯಿಂದ ಮಾತನಾಡುತ್ತಿದ್ದೇನೆ. ಅಲ್ಲಿ ಲಾ ಆಫೀಸರ್ ಆಗಿದ್ದವನಿಗೆ ಚೀಫ್ ಲಾ ಆಫೀಸರ್ ಎಂದು ಪ್ರಮೋಷನ್ ಕೊಟ್ಟಿದ್ದಾರೆ. ಇನ್ನೊಬ್ಬರನ್ನು ಪ್ಲಾನಿಂಗ್ ಅಂಡ್ ಸ್ಟ್ಯಾಟಿಸ್ಟಿಕಲ್ ಆಫೀಸರ್ ಎಂದು ಮಾಡಿದ್ದೀರಿ. ಬಹುಶಃ ಕ್ಲಾಸ್ ಒನ್ ಸೀನಿಯರ್ ಐ.ಎ.ಎಸ್. ಆಫೀಸರ್‌ಗೂ ಅವರಿಗೆ ಬರುವ ಸಂಬಳ ಬರುತ್ತದೋ ಇಲ್ಲವೋ ಗೊತ್ತಿಲ್ಲ, ಈ ಪುಣ್ಯಾತ್ಮನೇ ನಿಮಗೆ ಮಿಸ್‌ಗೈಡ್ ಮಾಡುತ್ತಿರುವುದು. ಕೆ.ಎಸ್.ಆರ್.ಟಿ.ಸಿ. ಬಗ್ಗೆ ಏನಾದರೂ ಸ್ಟ್ಯಾಟಿಸ್ಟಿಕ್ಸ್‌ನ್ನು ಇವನಿಗೆ ಕೇಳಿದರೆ ಗೊತ್ತಿಲ್ಲ ಎನ್ನುತ್ತಾನೆ. ಏನೇ ಕೇಳಿ, ಅದನ್ನು ನಾಳೆ ಹೇಳುತ್ತೇನೆಂದು ಹೇಳಿ ಅವನ ಜೂನಿಯರ್‌ಗಳ ಹತ್ತಿರ ತಿಳಿದುಕೊಂಡು

ಬಂದು ನಾಳೆ ಬಂದು ಹೇಳುತ್ತಾನೆ. ನೀವು ಬೇಕಾದರೆ ಇದನ್ನು ಪರೀಕ್ಷೆ ಮಾಡಿನೋಡಿ. ಇಂಥಾ ಮನುಷ್ಯರಿಗೆ ದೊಡ್ಡ ಪ್ರಮೋಷನ್ ಕೊಟ್ಟಿದ್ದೀರಿ. ಇನ್ನೊಬ್ಬನಿಗೆ ಸಿಸ್ಟಮ್ ಮ್ಯಾನೇಜರ್ ಎಂದು ಪ್ರಮೋಷನ್ ಕೊಟ್ಟಿದ್ದೀರಿ ಒಬ್ಬ ಪ್ರೈವೇಟ್ ಸೆಕ್ರೆಟರಿ ಪಿ. ಎ.ಗೆ ಸೀನಿಯರ್ ಪರ್ಸನಲ್ ಸೆಕ್ರೆಟರಿ ಎಂದು ಪ್ರಮೋಷನ್ ಕೊಟ್ಟಿದ್ದೀರಿ. ಬಹುಶಃ ಮುಖ್ಯ ಮಂತ್ರಿಗಳ ಪ್ರೈವೇಟ್ ಸೆಕ್ರೆಟರಿಗೂ ಪ್ರಮೋಷನ್ ಕೊಟ್ಟಿಲ್ಲವೆಂದು ಕಾಣುತ್ತದೆ. ಈ ರೀತಿ ಹುಚ್ಚಾಟಿಕೆ ಅಲ್ಲಿ ನಡೆದಿದೆ. ಇದೆಲ್ಲಾ ಗೌರ್ನರ್ ಆಡಳಿತದಲ್ಲಿ ನಡೆದು ಮನಸ್ಸಿಗೆ ಬಂದ ಹಾಗೆ ಪ್ರಮೋಷನ್ ಕೊಡಲಾಗಿದೆ. ಈ ರೀತಿ ಪ್ರಮೋಷನ್ ಕೊಟ್ಟಿರುವುದರಿಂದ ಹೆಗ್ಗಣಗಳು ಒಳ್ಳೊಳ್ಳೆಯ ಜಾಗದಲ್ಲಿ ಮೇಯುವುದಕ್ಕೆ ಅವಕಾಶ ಮಾಡಿ ಕೊಟ್ಟಂತಾಗಿದೆ. ಆಮೇಲೆ ಇನ್ನೊಬ್ಬ ಆಫೀಸರ್ ಇದ್ದಾರೆ, ಟ್ರಾಫಿಕ್ ಗೈಡ್ ಮಾಡತಕ್ಕಂಥ ಆಫೀಸರ್ ಅವರು. ಟ್ರಾಫಿಕ್ ಬಗ್ಗೆ ಏನೂ ಗೊತ್ತಿಲ್ಲದೇ ಇರುವವರಲ್ಲಿ ಇವನು ಮೊದಲನೆಯವನು. ಬೇಕಾದರೆ ನೀವೇ ಅವನನ್ನು ಇಂಟರ್‌ವ್ಯೂ ಮಾಡಿನೋಡಿ. ಟ್ರಾಫಿಕ್ ಬಗ್ಗೆ ನನಗೆ ಏನೂ ಗೊತ್ತಿಲ್ಲವೆಂದು ಹೇಳುತ್ತಾನೆ. ಇವತ್ತು ನೀವು ಪ್ರಶ್ನೆ ಕೇಳಿದರೆ ಅದಕ್ಕೆ ಅವರ ಸೀನಿಯರ್ ಹತ್ತಿರ ಹೋಗಿ ಉತ್ತರ ಪಡೆದು ನಾಳೆ ಉತ್ತರ ಹೇಳುತ್ತಾನೆ. ನಮಗೂ ಆ ರೀತಿ ಮಾಡಿದ್ದಾರೆ. ಅದಕ್ಕೇ ನಿಮಗೆ ಹೇಳುತ್ತಿದ್ದೇನೆ.

ಶ್ರೀ ಆರ್. ಎನ್. ನಾಯಕ್.— ಅವರೆಲ್ಲಾ ನಿಮಗೆ ತಪ್ಪು ದಾರಿಗೆ ಎಳೆಯುತ್ತಾರೆಂದು ಮಂತ್ರಿಯವರಿಗೆ ಹೇಳುತ್ತಿದ್ದೀರಿ. ನೀವು ಮಂತ್ರಿಯಾಗಿದ್ದಾಗ ಇವೆಲ್ಲಾ ಗೊತ್ತಾಗುತ್ತಿರಲಿಲ್ಲವೇ ? ಅಂದರೆ ತಮಗೆ ಏನೂ ಗೊತ್ತಿರಲಿಲ್ಲವೆಂದಾಯಿತು. ಅವರು ಹೇಳುತ್ತಿದ್ದನ್ನೇ ನೀವು ನಂಬುತ್ತಿದ್ದಿರಾ ?

ಶ್ರೀ ಪಿ.ಜಿ.ಆರ್. ಸಿಂಧ್ಯ.— ಈಗ ನಾವು ಇನ್‌ಸೆಂಟೀವ್ ಸಿಸ್ಟಮ್ ಅನ್ನು ನಾವು ಇದ್ದಾಗ ಇಂಟ್ರಡ್ಯೂಸ್ ಮಾಡಿದ್ದೆವು. ಏಕೆಂದರೆ ನೀವು ಇಂಥಾ ರೂಟ್‌ನಲ್ಲಿ ಇಷ್ಟು ದುಡ್ಡನ್ನು ತೆಗೆದುಕೊಂಡು ಬಂದರೆ ನಿಮಗೆ ಇಷ್ಟು ಕಮಿಷನ್ ಕೊಡುತ್ತೇವೆಂದು ಮಾಡಿದ್ದೆವು. ಆದರೆ ಗೌರ್ನರ್ ಆಡಳಿತ ಇದ್ದಾಗ ಅವರ ಜೊತೆಯಲ್ಲಿ ಒಂದು ಅಗ್ರಿಮೆಂಟ್ ಆಯಿತು. ಆಗ ಪ್ರೊಡಕ್ಟಿವಿಟಿ ಜೊತೆಗೆ ಇನ್‌ಸೆಂಟೀವ್ ಸಿಸ್ಟಂ ಅನ್ನು ಲಿಂಕ್ ಮಾಡಿದ್ದಾರೆ. ಈ ಪ್ರೊಡಕ್ಟಿವಿಟಿಗೂ ಮತ್ತು ಇನ್‌ಸೆಂಟೀವ್‌ಗೂ ಲಿಂಕ್ ಮಾಡಿದರೆ ಅದು ಬಹಳ ಉಪಯೋಗವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ಕೆ.ಎಸ್.ಆರ್‌ಟಿ.ಸಿ.ಯಲ್ಲಿ ಲಾಸಸ್ ಏಕೆ ಆಗುತ್ತಿದೆ ?

೪.೩೫ ಪಿ.ಎಂ.

ಈ ಸಾರಿಗೆ ಸಂಸ್ಥೆಯಲ್ಲಿ ನಷ್ಟವಾಗುತ್ತಿರುವುದು ಕೇವಲ ಕಂಡಕ್ಟರ್ ಮತ್ತು ಡ್ರೈವರ್‌ಗಳಿಂದ ಎಂದು ಬಹಳಷ್ಟು ಜನರು ತಿಳಿದುಕೊಂಡಿದ್ದಾರೆ. ಯಾರೋ ಒಬ್ಬರು ಮಾನ್ಯ ಸದಸ್ಯರು ಈ ದುಡ್ಡು ತಿನ್ನುವ ಕಂಡಕ್ಟರ್ ಡ್ರೈವರ್‌ಗಳ ಆಸ್ತಿಪಾಸ್ತಿಯನ್ನು ಜಪ್ತಿ ಮಾಡಿ ಎಂದು ಹೇಳುತ್ತಿದ್ದರು. ಆ ಮೂಲಕ ನಷ್ಟವನ್ನು ತುಂಬಿಕೊಳ್ಳಬಹುದು ಎಂದು ಹೇಳುತ್ತಿದ್ದಾರೆ. ಇದು ಎಷ್ಟರಮಟ್ಟಿಗೆ ಸಾಧ್ಯ ಮತ್ತು ಎಷ್ಟು ನಿಜಾಂಶಗಳಿಂದ ತುಂಬಿದೆ ? ಉದಾಹರಣೆಗೆ ಹಿರೇಕೆರೂರಿನ ಒಂದು ಡೆಪೋದ ವಿಚಾರವನ್ನು ಹೇಳಬಯಸುತ್ತೇನೆ. ಮಾನ್ಯ ಬಣಕಾರ್‌ರವರು ಈ ಸಭೆಯ ಅಧ್ಯಕ್ಷರಾಗಿದ್ದಂಥವರ ಕ್ಷೇತ್ರವದು. ಅವರು ಆ ಬಗ್ಗೆ ಬಹಳಷ್ಟು ಆಸಕ್ತಿಯನ್ನು ಕೂಡ ವಹಿಸಿಕೊಂಡಿದ್ದರು. ಅದು ಬಹಳ ಒಳ್ಳೆಯ ಡಿಪೋ. ಒಂದು ವರ್ಷದಲ್ಲಿ ೪೦ ಲಕ್ಷ ರೂಪಾಯಿಗಳ ಲಾಭವನ್ನು ಆ ಡಿಪೋ ಮಾಡಿ ಕೊಟ್ಟಿತ್ತು. ಅದೇ ಡಿಪೋ ಈ ವರ್ಷ ೨೦ ಲಕ್ಷ ರೂಪಾಯಿಗಳ ನಷ್ಟವನ್ನು ತೋರಿಸುತ್ತದೆ ಎಂದರೆ ಅದಕ್ಕೆ ಕಾರಣಗಳೇನು ಇರಬಹುದು ? ಆ ಡಿಪೋದಲ್ಲಿ ಡಿಪೋ ಮೇನೇಜರ್‌ರಿಂದ ಹಿಡಿದು ಕ್ಲೀನರ್ ವರೆಗೂ ಎಷ್ಟೊಂದು ಚೆನ್ನಾದ ಭಾಂಧವ್ಯ ಇತ್ತು ಅಂದರೆ ಎಲ್ಲರೂ ಒಟ್ಟಾಗಿ ತಮ್ಮ ಕೆಲಸಗಳನ್ನು ಮಾಡುತ್ತಿದ್ದರು. ಅದೊಂದು ಕುಟುಂಬದಂತೆ ಇತ್ತು. ಯಾವುದಾದರೂ ಹಳ್ಳಿಗೆ ಬಸ್ ಹೋಗ ಬೇಕೆಂದಿದ್ದರೆ ಅದರಲ್ಲಿ ಹೋಗುವ ಡ್ರೈವರ್‌ಬುತ್ತಿ ಕಟ್ಟಿಕೊಂಡು ಹೋಗುತ್ತಿದ್ದ. ಅಂಥ ಡಿಪೋಗೆ ಇವೊತ್ತು ಏನಾಗಿದೆ ಎಂದು ತಾವುಗಳು ತಿಳಿದುಕೊಳ್ಳಬೇಕು. ನಾನು ಕಂಡಕ್ಟರ್, ಡ್ರೈವರ್ಸ್ ಎಲ್ಲರೂ ಆನೆಸ್ಟ್ ಎಂದು ಹೇಳುತ್ತಾ ಇಲ್ಲ. ಒಂದು ರೀತಿಯಲ್ಲಿ ಕರಪ್ಷನ್ ಉದ್ಭವವಾಗುವುದೇ ಅಲ್ಲಿ, ಆದರೆ ನಮ್ಮ ಡಿಪೋಗಳಲ್ಲಿ ಇವೊತ್ತು ಯಾವ ಪರಿಸ್ಥಿತಿಗಳು ಇವೆ ಎಂಬುದು ತಮ್ಮ ಗಮನಕ್ಕೆ ಈಗಾಗಲೇ ಬಂದಿರಬಹುದು. ಈ ಸಾರಿಗೆ ಸಂಸ್ಥೆಯಲ್ಲಿ ಇವೊತ್ತು ಒಂದು ರೂಟ್‌ಗೆ ಹೋಗಬೇಕು ಅಂದರೆ ಮತ್ತು ಹೊಸ ಬಸ್ ಬೇಕೆಂದರೆ ಅದಕ್ಕೆ ೫೦ ರೂ. ಕೊಡಬೇಕು. ಬಸ್ ಕ್ಲೀನ್ ಮಾಡಿಸಲು ಅಲ್ಲಿ ೫-೧೦ ರೂಪಾಯಿಗಳನ್ನು ಕೊಡಬೇಕು. ಇಷ್ಟೆಲ್ಲಾ ಕಡೆಗಳಲ್ಲಿ ಮಾಮೂಲು ಕೊಡಬೇಕಾಗುತ್ತದೆ. ಇದು ಬಹುತೇಕ ಎಲ್ಲಾ ಡಿಪೋಗಳಲ್ಲಿ ಆಗತಕ್ಕಂಥ ಒಂದು ಅವ್ಯವಹಾರ. ಅದಕ್ಕೋಸ್ಕರವಾಗಿ ಈ ರೂಟ್ಸ್‌ನನ್ನು ಕಂಡಕ್ಟರ ಗೆ ಬದಲಾವಣೆ ಮಾಡಬೇಕೆಂಬುದನ್ನು ನಾನು ಮಾಡಿದ್ದೆ. ಆದರೆ ಅದು

ಆಗುತ್ತಾ ಇಲ್ಲ. ಏಕೆಂದರೆ ಅದಕ್ಕೆ ಬಹಳ ರೆಸಿಸ್ಟೆನ್ಸ್ ಬರುತ್ತದೆ. ಆದರೆ ಅವರು ಸ್ಟ್ರೈಕ್ ಮಾಡಿದರೂ ಪರವಾಗಿಲ್ಲ, ತಾವುಗಳು ಅದನ್ನು ಬದಲಾವಣೆ ಮಾಡಬೇಕು. ಅದು ಮ್ಯಾನೇಜ್‌ಮೆಂಟ್‌ನ ಹಕ್ಕು. ಅದನ್ನು ತಾವುಗಳು ಮಾಡಬೇಕು. ಇನ್ನು ಕ್ಯಾನ್ಸಲೇಶನ್ ವಿಚಾರದಲ್ಲಿ ಹೇಳುವುದೇ ಬೇಡ. ಇವೊತ್ತು ಎಷ್ಟೊಂದು ಪ್ರಮಾಣದಲ್ಲಿ ಕ್ಯಾನ್ಸಲೇಶನ್ ಆಗುತ್ತದೆ ಎಂಬುದು ತಮಗೆಲ್ಲರಿಗೂ ಗೊತ್ತಿದೆ. ಇದರಿಂದಾಗಿ ಜನರು ಬಹಳಷ್ಟು ಬೇಸತ್ತು ಹೋಗಿದ್ದಾರೆ, ನಷ್ಟವಾಗುತ್ತಿರುವುದಕ್ಕೆ ಇದೂ ಕೂಡ ಒಂದು ಮುಖ್ಯ ಕಾರಣವಾಗಿದೆ. ಸ್ಕೂಲ್‌ಗಳಿಗೆ ಹೋಗುವವರು, ಮದುವೆ ಮುಂಜಿಗಳಿಗೆ ಹೋಗುವವರು, ಯಾವುದೇ ಕಾರಣಗಳಿಗಾಗಿ ಬೇರೆ ಕಡೆಗೆ ಹೋಗುವವರು ಬಸ್‌ಗಳಿಗಾಗಿ ಕಾದು ನಿಂತಿರುತ್ತಾರೆ. ಆದರೆ ಬಸ್‌ಗಳೇ ಬರುವುದಿಲ್ಲ. ಅದು ಹಳ್ಳಿಗಳಲ್ಲಿಯೋ ಆಗಲಿ ಪಟ್ಟಣಗಳಲ್ಲಿಯೋ ಆಗಿರಲಿ, ಇದು ಸಾಮಾನ್ಯವಾಗಿ ಬಿಟ್ಟಿದೆ. ಈ ಹಿಂದೆ ಕ್ಯಾನ್ಸಲೇಶನ್ ಪರ್ಸೆಂಟೇಜ್ ಳರಷ್ಟು ಇದ್ದುದು ಈಗ ಶೇಕಡಾ ೮ರಷ್ಟು ಆಗಿದೆ. ಇನ್ನು ವಹಿಕಲ್ ಯುಟಿಲಿಟಿ ಬಗ್ಗೆ ಹೇಳುವುದಾದರೆ ಒಂದು ಬಸ್ ಎಷ್ಟು ಕಿ.ಮೀ. ಓಡಬೇಕೆಂಬ ಬಗ್ಗೆ ಇದೆ. ಅದರಲ್ಲಿ ಹೆಡ್‌ಮೈಲೇಜ್ ಬೇರೆ ಇದೆ, ವಹಿಕಲ್ ಯುಟಿಲಿಟಿ ಬಗ್ಗೆ ತಮಿಳುನಾಡು, ಗುಜರಾತ್ ರಾಜ್ಯಗಳಲ್ಲಿ ಹೋಗಿ ನೋಡಬೇಕು. ನಿಮಗೆ ವಹಿಕಲ್ ಯುಟಿಲಿಟಿ ಹೆಚ್ಚಿಗೆ ಮಾಡಬೇಕೆಂದಿದ್ದರೆ, ಕ್ಯಾನ್ಸಲೇಶನ್ಸ್ ಕಡಿಮೆ ಮಾಡಬೇಕಾಗಿದ್ದರೆ, ಬ್ರೇಕ್‌ಡೌನ್ಸ್ ಕಡಿಮೆ ಮಾಡಬೇಕೆಂದಿದ್ದರೆ, ಅಥವಾ ಮತ್ತಿತರ ಯಾವುದೇ ಕುಂದುಕೊರತೆಗಳನ್ನು ಈ ದಿಕ್ಕಿನಲ್ಲಿ ಸರಿಪಡಿಸಬೇಕೆಂಬ ಮನಸ್ಸು ಇದ್ದರೆ ತಾವುಗಳು ಮೊದಲು ಡಿಪೋಗಳಲ್ಲಿರತಕ್ಕಂಥ ಪರಿಸ್ಥಿತಿಯನ್ನು ಉತ್ತಮಪಡಿಸಬೇಕು. ಅಲ್ಲಿ ನೀರೇ ಇಲ್ಲ ಅಂದರೆ ತೊಳೆಯುವುದಾದರೂ ಹೇಗೆ ? ಜನರೇಟರ್ ಇಲ್ಲ ಅಂದರೆ ಟೈರ್‌ಗಳನ್ನು ಹೇಗೆ ಸರಿ ಮಾಡುತ್ತಾರೆ. ಆದರೂ ಇತ್ತೀಚೆಗೆ ಡಿಪೋಗಳಲ್ಲಿನ ಇನ್‌ಫ್ರಾಸ್ಟ್ರಕ್ಚರ್ಸ್ ಡೆವಲಪ್‌ಮೆಂಟ್ ಆಗಲು ಪ್ರಾರಂಭವಾಗಿದೆ. ಅವುಗಳು ಸ್ವಲ್ಪಮಟ್ಟಿಗೆ ಉತ್ತಮವಾಗುವಂಥ ಸಂದರ್ಭಕ್ಕೆ ಬಂದಿವೆ. ಆದರೆ ಅಲ್ಲಿರತಕ್ಕಂಥ ಜನರು ಯಾರಿದ್ದಾರೆ ಅವರ ಮೇಲೆ ಆದರಲ್ಲೂ ಟ್ರಾಫಿಕ್ ಸೆಕ್ಷನ್‌ನವರ ಮೇಲೆ ಬಿಗಿಯಾದ ನಿಗಾ ಇಡಬೇಕು. ಈಗ ಕೆ. ಎಂ. ಪಿ. ಎಲ್, ನಿಮ್ಮ ರಿಪೋರ್ಟ್ ಪ್ರಕಾರ ೪.೪೧ ಪರ್ಸೆಂಟ್ ಇದ್ದುದು ೪.೧೩ಕ್ಕೆ ನಿಂತಿದೆ.

(ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಒಂದು ಲೀಟರ್ ಡೀಸೆಲ್‌ಗೆ ಎಷ್ಟು ಕಿ. ಮೀ. ನಮ್ಮ ಬಸ್‌ಗಳು ಓಡುತ್ತವೆ ? ಇದರಲ್ಲಿ ಪಾಯಿಂಟ್ ಒಂದು ಇಂಪ್ರೂವ್‌ಮೆಂಟ್ ಆದರೆ ಡಿಸೆಲ್ ಕನ್‌ಜಂಪ್ಷನ್ ವಿಚಾರದಲ್ಲಿ ಆಗ ನಮ್ಮ ಕಾರ್ಪೋರೇಷನ್‌ಗೆ ಒಂದೂಕಾಲು ಕೋಟಿ ರೂಪಾಯಿಗಳ ಉಳಿತಾಯವಾಗುತ್ತದೆ.

ಶ್ರೀ ಟಿ. ಎಂ. ಮಂಜುನಾಥ್.—ಅಧ್ಯಕ್ಷರೇ. ನಮ್ಮ ಕಷ್ಟ ಏನಾಗಿದೆ ಎಂದರೆ ಆ ಕಡೆಯಿಂದ ಮಾತನಾಡುತ್ತಿರುವವರಿಗೆ ಎರಡು ಮೂರು ಗಂಟೆ ಕೊಟ್ಟರೆ ನಮ್ಮ ಕಡೆ ಇರುವ ಹೊಸಬರಿಗೆ ಮಾತನಾಡುವುದು ಕಷ್ಟವಾಗುತ್ತದೆ. ಸಮಯವೂ ನಮಗೆ ಸಿಗುತ್ತಿಲ್ಲ. ಅವರು ಮಾತನಾಡಿದ ಮೇಲೆ ತಾವು ವೋಟಿಗೆ ಹಾಕಿದರೆ ನಮ್ಮ ಅಭ್ಯಂತರವಿಲ್ಲ. ಒಂದು ವೇಳೆ ಚರ್ಚೆಯಲ್ಲಿ ನಾವೂ ಪಾರ್ಟಿಸಿಪೇಟ್ ಮಾಡಬೇಕಾದರೆ ನಮಗೂ ಅವಕಾಶ ಕೊಡಬೇಕೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇವೆ.

ಶ್ರೀ ಆರ್. ಎನ್. ನಾಯಕ್.—ನಾವು ೧೮೦ ಜನ ಇದ್ದೇವೆ. ಅವರು ೨೫ ಜನ ಇದ್ದಾರೆ. ಅವರಿಗೆ ಸ್ವಲ್ಪ ಜಾಸ್ತೀನೆ ಕೊಡಬೇಕು, ಏಕೆಂದರೆ ನಾವು ಸಹ ವಿರೋಧ ಪಕ್ಷದಲ್ಲಿದ್ದಾಗ ಜಾಸ್ತಿ ಮಾತನಾಡುತ್ತಿದ್ದೆವು. ಅಲ್ಲದೆ ನಮ್ಮ ಕಡೆ ಹೊಸಬರಿರುವುದರಿಂದ ಇನ್ನೂ ಕಲಿಯಬೇಕಾಗಿರುವುದರಿಂದ ನಮ್ಮ ಕಡೆ ಸ್ವಲ್ಪ ಲಕ್ಷ್ಯ ಕೊಡಿ. ಇಲ್ಲದಿದ್ದರೆ ಡಿಮಾಂಡ್ ಮುಗಿಸುವುದಿದ್ದರೆ ಅವರೇ ಮಾತನಾಡಿಕೊಳ್ಳಲಿ. ನಾವು ಮಾತನಾಡುವುದೇ ಇಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಅಧ್ಯಕ್ಷರೇ, ನಾನು ಆದಷ್ಟು ಬೇಗ ಮುಗಿಸುತ್ತೇನೆ. ಈ ಕ್ಯಾನ್ಸಲೇಷನ್ ಬ್ರೇಕ್‌ಡೌನ್ ಮತ್ತು ಪಂಕ್ಚುಯಾಲಿಟಿಗಳ ಬಗ್ಗೆ ೧೦೦ ಪರ್ಸೆಂಟ್ ಇದೆಯೆಂದು ಹೇಳುತ್ತಿರುತ್ತಾರೆ. ಆದರೆ ನೀವು ಯಾವುದಾದರೂ ಬಸ್‌ಸ್ಟ್ಯಾಂಡಿಗೆ ಹೋಗಿ ನೋಡಿ, ಅಲ್ಲಿ ೫೦ ಪರ್ಸೆಂಟ್ ಕೂಡ ಕರೆಕ್ಟಾಗಿ ಇರುವುದಿಲ್ಲ. ಅದೇ ತಮಿಳ್ನಾಡಿಗೆ ಹೋಗಿ ನೋಡಿ, ಇದನ್ನು ಮಾಡಬೇಕಾದರೆ ಡಿವಿಜನ್ ಮತ್ತು ಡಿಪೋ ವೈಸ್ ರಿವ್ಯೂ ಮಾಡಬೇಕಾಗುತ್ತದೆ. ಈ ಪ್ಯಾರಾಮೀಟರ್ಸ್ ಇಟ್ಟುಕೊಂಡು ಕೆಎಂಪಿಎಲ್, ಬ್ರೇಕ್ ಡೌನ್, ಮೈಲೇಜ್ ಎಷ್ಟು ಬ್ರೇಕ್‌ಡೌನ್ ಎಷ್ಟು ಕ್ಯಾನ್ಲೇಷನ್ ಎಷ್ಟು, ಡೆಡ್ ಮೈಲೇಜ್ ಎಷ್ಟು ಎಂದು ನೀವೇ ರಿವ್ಯೂ ಮಾಡ ತೊಡಗಿದರೆ ಅವರಿಗೆ ಭಯ ಇರುತ್ತದೆ. ಮಂತ್ರಿಗಳಿಗೆ ಎಲ್ಲ ಗೊತ್ತಿದೆಯಪ್ಪ ನಾವು ಸುಳ್ಳು ಹೇಳುವುದಕ್ಕೆ ಆಗುವುದಿಲ್ಲ ಎಂಬ ಭಯ ಅವರಲ್ಲಿ ಬರುತ್ತದೆ. ಮತ್ತು ಡಿ.ಟಿ.ಓ.ಗಳು ಮತ್ತು ಡಿ.ಎಲ್.ಓಗಳು ಏನಿದ್ದಾರೆ ಅವರಿಗೆ ಅಕೌಂಟಬಿಲಿಟಿ ಇಲ್ಲ, ರೆಸ್ಪಾನ್ಸಿಬಿಲಿಟಿ ಎಂದು ಪೇಪರಲ್ಲಿ ಹಾಕಿದ್ದೇವೆ ಅಷ್ಟೆ. ಆರ್‌ಟಿಓನವರು

ಪ್ರೈವೇಟ್‌ನವರನ್ನು ಮತ್ತು ನಮ್ಮನ್ನು ಮೀಟಿಂಗ್ ಕರೆಯುತ್ತಾರೆ ಟೈಮ್ ಫಿಕ್ಸ್ ಮಾಡುವುದಕ್ಕೆ. ಅವರು ಯಾವರೀತಿ ಸಮಯ ನಿಗದಿ ಮಾಡುತ್ತಾರೆಂದರೆ ಪೀಕ್ ಅವರ್‌ನೆಲ್ಲ ಖಾಸಗಿಯವರಿಗೆ ಕೊಟ್ಟು ಅನಂತರದ ಟೈಮ್‌ಗಳನ್ನು ನಮಗೆ ಕೊಡುತ್ತಾರೆ. ಮುಖ್ಯವಾಗಿ ಡಿ.ಟಿ.ಓ. ಮತ್ತು ಡಿ.ಎಂ.ಗಳ ಮೇಲೆ ನೀವು ನಿಗಾ ಇಡಬೇಕು. ಇವರು ಏನು ಮಾಡುತ್ತಾರೆಂದರೆ ಖಾಸಗಿಯವರಿಗೆ ಅನುಕೂಲವಾದ ರೂಟ್‌ಗಳನ್ನು ಅವರಿಗೆ ಕೊಟ್ಟು ಬಿಡುತ್ತಾರೆ. ೧೦–೩೦ರ ಮೇಲೆ ನಮ್ಮ ಬಸ್‌ಗಳು ಹೊರಟರೆ ಯಾವ ಪ್ರಯಾಣಿಕರು ಬರುತ್ತಾರೆ ? ನಷ್ಟವಾಗದೆ ಇನ್ನೇನಾಗುತ್ತದೆ ? ಇದು ಏನು ತೋರುತ್ತದೆ ಎಂದರೆ ಆರ್‌ಟಿಸಿ, ಡಿವಿಜನಲ್ ಕಂಟ್ರೋಲರ್, ಡಿ.ಟಿ.ಓ.ಗಳ ಮಧ್ಯೆ ಕೋ ಆರ್ಡಿನೇಷನ್ ಇಲ್ಲ ಎಂಬುದನ್ನು ಇನ್ನು ಲಾ ಡಿಪಾರ್ಟ್‌ಮೆಂಟಿನ ಆಫೀಸರ್ಸ್ ಬಗ್ಗೆ ಹೇಳಬೇಕೆಂದರೆ ಕೆಎಸ್‌ಆರ್‌ಟಿಸಿಯಲ್ಲಿ ೫೨ ಸಾವಿರ ಕೇಸ್ ಲೇಬರ್ ಕೋರ್ಟ್‌ನಲ್ಲಿದೆ ಎಂದು ಹೇಳಿದಿರಿ. ಇದರಲ್ಲಿ ಬಹಳಷ್ಟು ಕೇಸ್ ವಿಫಲವಾಗುತ್ತವೆ, ಏಕೆಂದರೆ ನಮ್ಮ ಕಡೆಯಿಂದ ಹೋಗುವ ಲಾ ಆಫೀಸರ್‌ಗಳು ಆರೋಪಿ ಎಂಪ್ಲಾಯಿ ಜತೆ ಹೊಂದಾಣಿಕೆ ಮಾಡಿಕೊಂಡು ಕೇಸ್ ನಡೆಯುವ ಜಾಗಕ್ಕೆ ಹೋಗುವುದೇ ಇಲ್ಲ. ಇಂಥದನ್ನು ಸರಿ ಮಾಡಬೇಕಾದರೆ ಲಾ ಆಫೀಸರ್ ಆಯಾ ಡಿವಿಜನ್‌ಗಳಲ್ಲಿ ಯಾರಿರುತ್ತಾರೆ ಅವರ ಬಳಿ ಎಷ್ಟು ಕೇಸ್‌ಗಳಲ್ಲಿ ಅಟೆಂಡ್ ಮಾಡಿದ್ದಾರೆ, ಅದರಲ್ಲಿ ಎಷ್ಟು ಗೆದ್ದಿದ್ದಾರೆ ಎಷ್ಟು ನೋಡಿದರೆ ನಿಮಗೇ ಗೊತ್ತಾಗುತ್ತದೆ. ಈ ಕಂಪ್ಯೂಟರೈಜೇಷನ್‌ನಿಂದ ಬಹಳ ಅನುಕೂಲವಾಗಿದೆ. ಆಂಧ್ರ ಬಿಟ್ಟರೆ ಇನ್ನೆಲ್ಲೂ ಆಗಿಲ್ಲ. ಇದನ್ನು ಬೆಂಗಳೂರಿನ ಜಯನಗರ, ಮಲ್ಲೇಶ್ವರ, ಶಿವಾಜಿನಗರ ಬಸ್ ಸ್ಟಾಂಡ್‌ಗಳಿಗೆ ನೀವು ಎಕ್ಸ್‌ಟೆಂಡ್ ಮಾಡಬೇಕು ಹಾಗೆ ಹೊರಗಡೆ ಹುಬ್ಬಳ್ಳಿ ಮತ್ತು ಮೈಸೂರುಗಳಲ್ಲಿ, ಮಾಡಿ ಇದರಿಂದ ಪ್ರಯಾಣಿಕರಿಗೆ ಬಹಳ ಅನುಕೂಲವಾಗುತ್ತದೆ. ಇನ್ನು ಕೆಎಸ್‌ಆರ್‌ಟಿಸಿ ಡ್ರೈವರ್‌ಗಳಿಂದ ಆಕ್ಸಿಡೆಂಟ್ ಕಡಿಮೆ ಮಾಡುವ ಸಲುವಾಗಿ ಡ್ರೈವಿಂಗ್ ಟ್ರೈನಿಂಗ್ ಸ್ಕೂಲನ್ನು ನಡೆಸುತ್ತಿದ್ದೇವೆ. ಆ ಕಡೆ ಹುಮ್ನಾಬಾದ್‌ನಲ್ಲಿ ಒಂದು ಹಡಗಲಿಯಲ್ಲಿ ಒಂದು ಡ್ರೈವಿಂಗ್ ಸ್ಕೂಲ್ ಮಾಡಿದ್ದೇವೆ ಬಹುಶಃ ಅಲ್ಲಿ ಒಬ್ಬ ಡಿವಿಜನಲ್ ಕಂಟ್ರೋಲರ್ ಅನ್ನೇ ಇಟ್ಟಿದ್ದೇವೆ. ನಾನು ಬಂದು ಅದನ್ನು ಅಬಾಲಿಷ್ ಮಾಡಿದೆ ಆದರೆ ಅದಕ್ಕೆ ಬಹಳ ವಿರೋಧ ಬಂತು ಅಷ್ಟರಲ್ಲಿ ನಾನು ಬೇರೆ ಇಲಾಖೆಗೆ ಹೊರಟುಹೋದೆ. ಆ ಪೋಸ್ಟ್ ಅಲ್ಲಿಗೆ ಬೇಕಾಗಿಲ್ಲ. ಒಬ್ಬ ಡಿ.ಟಿ.ಓ. ಇಲ್ಲವೇ ಒಬ್ಬ ಡಿಪೋ ಮೆನೇಜರ್ ಅಲ್ಲಿದ್ದರೆ ಸಾಕು. ಇಲ್ಲದಿದ್ದರೆ ಸಾರಿಗೆ ಇಲಾಖೆ ಮೇಲೆ ಲಕ್ಷಾಂತರ ರೂಪಾಯಿಗಳ ಹೊರೆಬೀಳುತ್ತದೆ. ಮುಖ್ಯವಾಗಿ ಡ್ರೈವಿಂಗ್ ಸ್ಕೂಲ್‌ಗಳು ಬಹಳ ಸರಿಯಾಗಿ ಕೆಲಸವನ್ನು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು ಎಂದು ಸಲಹೆ ಮಾಡುತ್ತೇನೆ. ಮತ್ತೆ ಕೆಂಗೇರಿ ಹತ್ತಿರ ಇರತಕ್ಕಂಥ ಪ್ರಾಪರ್ಟಿ ಬಗ್ಗೆ ನಿಮ್ಮ ಜೊತೆಯಲ್ಲಿ ನಾನು ಚರ್ಚೆ ಮಾಡಿದ್ದೆ. ಅದರಿಂದ ಸರ್ಕಾರಕ್ಕೆ ಅಂದರೆ ಸಾರಿಗೆ ಸಂಸ್ಥೆಗೆ ಸುಮಾರು ೨–೩ ಕೋಟಿ ರೂಪಾಯಿಯಷ್ಟು ಲಾಭವಾಗಿದೆ. ಆ ಆಸ್ತಿಯನ್ನು ನಾವು ಉಳಿಸಿಕೊಂಡಿರುವುದರಿಂದ ಆ ರೀತಿ ಲಾಭವಾಗಿದೆ. ಅದು ೮೩ನೇ ಇಸವಿಯಲ್ಲಿ ಬೇರೆಯವರಿಗೆ ಹೊರಟು ಹೋಗುತ್ತಿತ್ತು. ನಾನು ಮತ್ತೆ ಅವೊತ್ತಿನ ದಿನ ಇದ್ದಂಥ ಎಂ.ಡಿ.ಯವರು ಪ್ರಯತ್ನವನ್ನು ಮಾಡಿ ಇದನ್ನು ಸರ್ಕಾರಕ್ಕೆ ಉಳಿಸಿಕೊಳ್ಳುವಂಥ ಪ್ರಯತ್ನವನ್ನು ಮಾಡಿದೆವು. ಆ ರೀತಿ ಅದನ್ನು ಏತಕ್ಕೆ ಮಾಡಿದೆವು, ಬೆಂಗಳೂರು ನಗರದ ನಾಗರೀಕರಿಗೆ ಪ್ರಯಾಣಿಕರಿಗೆ ಬಿ.ಟಿ.ಎಸ್. ಇನ್‌ಫ್ರಾಸ್ಟ್ರಕ್ಚರನ್ನು ಜಾಸ್ತಿ ಮಾಡಲಿಕ್ಕೆ

ರೀಜನಲ್ ವರ್ಕ್‌ಷಾಪ್ ಅನ್ನು ಅಲ್ಲಿಗೆ ಷಿಫ್ಟ್ ಮಾಡಲಿ ಎಂದು. ಆದರೆ ಕಳೆದ ೫ ವರ್ಷಗಳಿಂದ ಸುಮಾರು ೨೫ ಎಕರೆ ಜಮೀನು ಹಾಗೆಯೇ ಬಿದ್ದಿದೆ. ಅಲ್ಲಿ ಯಥೇಚ್ಛವಾಗಿ ನೀರು ಸಿಗುತ್ತದೆ, ವರ್ಕ್‌ಷಾಪ್ ಷೆಡ್ಡ್‌ಗಳು ಇವೆ, ಅದು ಹಾಗೆಯೇ ಬಿದ್ದಿದೆ. ವರ್ಷಕ್ಕೆ ಒಬ್ಬರು ಎಂ.ಡಿ. ಬದಲಾವಣೆ ಆಗುತ್ತಾರೆ ಮಂತ್ರಿಗಳು ಕೂಡಾ ಬದಲಾವಣೆ ಆಗುತ್ತಲೇ ಹೋಗುತ್ತಾರೆ. ಅಧಿಕಾರಿಗಳು ಹಾಗೆಯೇ ಇದ್ದಾರೆ. ಬಹುಶಃ ನನಗನ್ನಿಸುತ್ತದೆ. ಒಬ್ಬ ರೀಜನಲ್ ಮ್ಯಾನೇಜರನ್ನು ಅಲ್ಲಿ ಇನ್‌ಛಾರ್ಜ್ ಎಂದು ಮಾಡಿದ್ದೇವೆ. ತಾವು ಕೊನೆಯ ಪಕ್ಷ ಈ ವರ್ಷದಲ್ಲಿ ಅದನ್ನು ಸರಿ ಮಾಡುತ್ತೀರಾ? ಅಲ್ಲಿ ವರ್ಕ್‌ಷಾಪ್‌ನ್ನು ಷಿಫ್ಟ್ ಮಾಡುತ್ತೀರಾ ಎಂದು ಕೇಳುತ್ತೇನೆ. ಈ ಬಿ.ಟಿ.ಎಸ್. ಬಗ್ಗೆ ನಗರದ ಅನೇಕ ಜನ ಸದಸ್ಯರು ಮಾತನಾಡುವವರಿದ್ದಾರೆ. ನಾನು ಒಂದೇ ಒತ್ತಾಯ ಮಾಡುತ್ತೇನೆ. ಈ ಬಿ.ಟಿ.ಎಸ್.ನ್ನು ೨೫ ಕಿಲೋಮೀಟರ್ ಒಳಗಡೆ ನಡೆಸಬೇಕು ಎನ್ನತಕ್ಕಂಥ ಒಂದು ೧೫–೨೦ ವರ್ಷಗಳ ಹಿಂದೆ ಮಾಡಿರತಕ್ಕಂಥ ಕಾನೂನು ಅದು ಬದಲಾವಣೆಯಾಗಬೇಕು. ಬೆಂಗಳೂರು ನಗರ ಎಷ್ಟೊಂದು ಬೆಳೆದಿದೆ. ಅದನ್ನು ನಾನು ಅನ್–ಅಫಿಶಿಯಲ್ ಆಗಿ ೨೮–೩೦–೩೨ ಕಿಲೋಮೀಟರ್‌ರವರೆಗೂ ಓಡಿಸಿಬಿಡುತ್ತಿದ್ದೆ, ಅದನ್ನು ನಾನು ಬೋರ್ಡ್‌ನಲ್ಲಿಯೂ ತಂದಿದ್ದೆ. ಅದು ಹಾಗೆಯೇ ಉಳಿದಿದೆ. ಅದನ್ನು ಕೊನೆಯ ಪಕ್ಷ ೩೫ ಕಿಲೋ ಮೀಟರ್‌ರವರೆಗೂ ಸಹಿತ ತಾವು ಅದನ್ನು ಎಕ್ಸ್‌ಟೆಂಡ್ ಮಾಡಬೇಕು ಎಂದು ಹೇಳಿ ತಮ್ಮಲ್ಲಿ ಒತ್ತಾಯ ಮಾಡುತ್ತೇನೆ. ನೀವು ಫೇರ್ ಮಾತ್ರ ಕಡಿಮೆ ಮಾಡುವುದಿಲ್ಲ ಎಂದು ಹೇಳಿದ್ದೀರಿ ಮತ್ತೆ ಹೇಳಿದರೆ ಅದು ನಮ್ಮದು ಅರಣ್ಯರೋಧನ ಆಗುತ್ತದೆ. ಸುಮ್ಮನೆ ಎಲ್ಲಾ ಮಾಡಿದ್ದೀರಿ

ಅದನ್ನು ಸ್ಟೇಜ್ ರಿವಿಷನನ್ನು ಆದರೂ ಮಾಡಿ. ಅದನ್ನು ನಾನೇ ಮಾಡಬೇಕು ಎಂದು ಇದ್ದೆ. ಅನೌನ್ಸ್ ಕೂಡಾ ಮಾಡಿದ್ದೆ. ಪ್ರಯತ್ನವನ್ನು ಮಾಡಿದೆ. ಆದರೆ ಅಧಿಕಾರಿಗಳಿಂದ ಬಹಳ ವಿರೋಧ ಬರುತ್ತದೆ. ಈ ಸ್ಟೇಜ್ ರಿವೈಜ್ ಮಾಡುವುದಕ್ಕೆ ಏಕೆಂದರೆ ಕಷ್ಟಪಟ್ಟು ಕೆಲಸ ಮಾಡಬೇಕಾಗುತ್ತದೆ, ಅವರಿಗೆ ಗೊತ್ತಿರುವುದಿಲ್ಲ. ಯಾವ ಸ್ಟೇಜು ಎಷ್ಟು ಕಿಲೋಮೀಟರ್ ಇದೆ ಎನ್ನತಕ್ಕಂಥ ಒಂದು ರೂಟ್ ಕೂಡಾ ಅವರಿಗೆ ಗೊತ್ತಿರುವುದಿಲ್ಲ. ನಾವೇನಾದರೂ ಹೇಳುವುದಕ್ಕೆ ಹೋದರೆ ಬಹಳ ಕಷ್ಟ ಇದೆ ಸಾರ್. ಇದನ್ನು ಮಾಡುವುದಕ್ಕೆ ಐದು ವರ್ಷ ಬೇಕು ಎಂದು ಹೇಳುತ್ತಾರೆ. ಆದರೆ ಐದು ತಿಂಗಳಲ್ಲಿ ಮಾಡಿಸಬಹುದು. ಟ್ರಾಫಿಕ್ ಡಿಪಾರ್ಟ್‌ಮೆಂಟಿನ ಕೈಯಲ್ಲಿ ಅದನ್ನು ತಾವು ಮಾಡಿಸಬೇಕು ಎಂದು ಹೇಳುತ್ತೇನೆ. ಈಗಾಗಲೇ ನಾನು ಸಲಹೆಗಳನ್ನು ಕೊಟ್ಟಿದ್ದೇನೆ. ಈ ಒಂದು ನ್ಯಾಷನಲೈಸ್ಡ್ ಮಾಡುವುದನ್ನು, ಮಾಡಿರತಕ್ಕಂಥದ್ದನ್ನು ಸ್ಟೆಬಿಲೈಸ್ ಮಾಡಿ, ಡೀ-ನ್ಯಾಷನಲೈಸ್ಡ್ ಮಾಡುವುದಕ್ಕೆ ತಾವು ಹೋಗಬೇಡಿ. ಈ ರೆಕ್ರೂಟ್‌ಮೆಂಟ್ ಬೋರ್ಡನ್ನು ತಾವು ಮಾಡಿ, ಈ ಕಾರ್ಪೊರೇಷನ್‌ನ್ನು ಡಿವೈಡ್ ಮಾಡಿ. ನೀವು ಬೆಲೆಗಳನ್ನು ನಿಮ್ಮ ಕಾಲದಲ್ಲಿ ಏರಿಸುವುದಿಲ್ಲ ಎಂದು ನಾನು ತಿಳಿದಿದ್ದೇನೆ, ಬ್ಯೂರೋ ಆಫ್ ಕಾಸ್ಟಿಂಗ್ ಮಾಡಿ, ಕಾಸ್ಟ್ ಎಷ್ಟು ಖರ್ಚಾಗುತ್ತದೆ ಎನ್ನುವುದನ್ನು ನಾವು ಲೆಕ್ಕಾಚಾರ ಮಾಡೋಣ, ಇಬ್ಬರು ಎಂ.ಎಲ್.ಎ.ಗಳನ್ನು ತಂದು ಹಾಕಿ, ಏನೂ ತಪ್ಪಿಲ್ಲ. ನಿಮ್ಮ ಸರ್ಕಾರಕ್ಕೆ ಒಳ್ಳೆಯದಾಗುತ್ತದೆ, ಅದನ್ನು ಬಿಟ್ಟು ಜನ ಟೀಕೆ ಮಾಡುತ್ತಾರೆ, ನಾವು ಮಾಡುವುದನ್ನೇ ಮಾಡಿಕೊಂಡು ಹೋಗುತ್ತೇವೆ ಎಂದು ಹೇಳಿದರೆ ಏನು ಅರ್ಥ ಇದೆ. ಅದನ್ನು ತಾವು ಮಾಡಬೇಕು. ನಮ್ಮ ಕಾಲದಲ್ಲಿ ಬೀದರ್, ಗುಲ್ಬರ್ಗ, ರಾಯಚೂರು ಈ ಮೂರು ಜಿಲ್ಲೆಗಳಲ್ಲಿ ರಾಷ್ಟ್ರೀಕರಣವನ್ನು ಮಾಡಿದೆವು. ಆದರೆ ರಾಷ್ಟ್ರೀಕರಣವನ್ನು ಮಾಡಿದಮೇಲೆ ಅಲ್ಲಿ ಏನಾಗಿದೆ ಅಂದರೆ ಸರ್ವೀಸಸ್ ಹಳ್ಳಿಗಳಲ್ಲಿ ಹೋಗಿದ್ದರೂ ಸಹಿತ ಸರಿಯಾಗಿ ಸರ್ವೀಸಸ್‌ನ್ನು ಕೊಡುವುದಕ್ಕೆ ಆಗಲಿಲ್ಲ. ರಸ್ತೆಗಳಂತೂ ಬಹಳ ಕಷ್ಟದಲ್ಲಿದೆ, ಅದನ್ನು ನೋಡುವುದಕ್ಕಾಗುವುದಿಲ್ಲ. ಈ ರಸ್ತೆಗಳ ಪರಿಸ್ಥಿತಿ ಹಿಂದೆ ನೋಡಿರಲಿಲ್ಲ. ರಾಷ್ಟ್ರೀಕರಣವನ್ನು ಮಾಡಿದ್ದೇವೆ. ಈಗ ಅದನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಏನೋ ಹೈದರಾಬಾದ್-ಕರ್ನಾಟಕ ಏರಿಯಾ ಬೋರ್ಡ್ ಮಾಡಿದ್ದಾರೆ, ದುಡ್ಡು ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಆ ಕಡೆಯವರೇ ಇದ್ದಾರೆ. ನಾನು ಅಂದುಕೊಂಡಿದ್ದೇನೆ, ಸ್ವಲ್ಪ ರಸ್ತೆಗಳು ಇಂಪ್ರೂವ್ ಆಗುತ್ತವೆ ಎಂದು. ದಯವಿಟ್ಟು ತಾವು ಒಬ್ಬ ರೀಜನಲ್ ಮ್ಯಾನೇಜರ್ ಲೆವೆಲ್‌ನ ಆಫೀಸರ್‌ಗೂ ಹೆಚ್ಚಿನ ಒಬ್ಬ ಯೂನಿಟ್ ಹೆಡ್‌ನ್ನು ೧೫ ದಿವಸ ಅಲ್ಲಿ ಇರಲಿಕ್ಕೆ ಹೇಳಿ. ಆ ಮೂರು ಡಿವಿಜನ್‌ಗಳಲ್ಲಿಯೂ ಪರಿಸ್ಥಿತಿ ಬಹಳ ಕೆಟ್ಟದ್ದಾಗಿದೆ. ಜನರು ಶಾಪ ಹಾಕುತ್ತಿದ್ದಾರೆ, ನನಗೆ ಒಂದಿಷ್ಟು ಹಾಕುತ್ತಿದ್ದರು. ಈಗ ನಿಮಗೆ ಹಾಕಬಹುದು ಆದ್ದರಿಂದ ದಯವಿಟ್ಟು ಇದರ ಬಗ್ಗೆ ಗಮನವನ್ನು ಕೊಡಬೇಕು ಎಂದು ಕೇಳಿಕೊಂಡು ಈ ಪಿಲ ಫರೇಜ್‌ಗಳ ಬಗ್ಗೆ ತಾವು ಹೇಳಿದಿರಿ, ೫೨ ಸಾವಿರ ಜನರ ಮೇಲೆ ಕೇಸ್‌ಗಳು ಇದೆ ಎನ್ನತಕ್ಕಂಥದ್ದನ್ನು ಹೇಳಿದಿರಿ. ತಾವು ದಯವಿಟ್ಟು ಇದಕ್ಕೆ ಮಾತ್ರ ರಾಜಕೀಯ ಒತ್ತಡಗಳಿಗೆ ಒಳಗಾಗಬೇಡಿ. ಇದಕ್ಕೆ ಏನಾದರೂ ರಾಜಕೀಯ ಒತ್ತಡಗಳಿಗೆ ಅಥವಾ ಇತರೇ ರೀತಿಯ ಒತ್ತಡಗಳಿಗೆ ಒಳಗಾದರೆ ಮತ್ತೆ ಕೆ.ಎಸ್.ಆರ್.ಟಿ.ಸಿ ಗೆ ಲಾಸ್ ಆಗುತ್ತದೆ. ಇದನ್ನು ಸರಿ ಮಾಡುವುದಕ್ಕಾಗುವುದಿಲ್ಲ. ತಾವು ಇದಕ್ಕೆ ಯೀಲ್ಡ್ ಆಗಬಾರದು ಎಂದು ಹೇಳಿ ಈ ಸಂದರ್ಭದಲ್ಲಿ ಕೇಳಿಕೊಂಡು ಕೆ.ಎಸ್.ಆರ್.ಟಿ.ಸಿ.ಯಲ್ಲಿ ನಮ್ಮ ಪೊಲಿಟಿಕಲ್ ಪಾರ್ಟೀಸ್‌ನಲ್ಲಿರುವುದಕ್ಕಿಂತಲೂ ಹೆಚ್ಚಿನ ರಾಜಕೀಯ ಇದೆ. ಬಹಳ ರಾಜಕೀಯ ಇದೆ ಕೆಲವು ಅಸಿಸ್ಟೆಂಟ್ ಕಮಿಷನರ್‌ಗಳನ್ನು ಡೆಪ್ಯೂಟೇಷನ್ ಮೇಲೆ ತೆಗೆದುಕೊಳ್ಳಬೇಕು. ಅವರುಗಳನ್ನು ಡಿಪೋ ಮ್ಯಾನೇಜರ್ ಎಂದು ಮಾಡಿ. ಒಂದು ಟ್ರೈಯಲ್ ಬೇಸಿಸ್ ಎಂದು ಆರು ತಿಂಗಳು ಮಾಡಿ ನೋಡಿ. ಇವರು ದಾರಿಗೆ ಬರುತ್ತಾರೆ.

ರೆವಿನ್ಯೂ ಡಿಪಾರ್ಟ್‌ಮೆಂಟ್‌ನಿಂದ ೨೫–೪೦ ಜನ ಅಸಿಸ್ಟೆಂಟ್ ಕಮಿಷನರುಗಳನ್ನು ತೆಗೆದುಕೊಂಡು ಪ್ರೊಬೇಷನರಿ ಆಫೀಸರ್ಸ್‌ನ್ನು ತೆಗೆದುಕೊಂಡು ಡಿಪೊ ಮ್ಯಾನೇಜರ್ ಮಾಡಿ ನೋಡಿ. ನಿಮ್ಮ ಉತ್ಪತ್ತಿ ಒಂದು ದಿವಸಕ್ಕೆ ೨೫ ಲಕ್ಷ ರೂಪಾಯಿ ಹೆಚ್ಚಾಗುತ್ತದೆ ಇದರಲ್ಲಿ ಯಾವುದೇ ರೀತಿಯ ಸಂಶಯವಿಲ್ಲ. ಎಲ್ಲ ಆಟೊಮ್ಯಾಟಿಕಲಿ ಎಫಿಷಿಯನ್ಸಿ ಜಾಸ್ತಿಯಾಗುತ್ತದೆ. ಈ ೧೦–೧೫ ವರ್ಷಗಳಲ್ಲಿ ಈ ಆಫೀಸರ್ಸ್ ಎಲ್ಲ ಮಾಮೂಲ್ ತೆಗೆದುಕೊಳ್ಳುವುದಕ್ಕೆ ಕೆಳಮಟ್ಟದಲ್ಲಿ ಯೂನಿಯನ್ ಜೊತೆಯಲ್ಲಿ ಅಟ್ಯಾಚ್ ಆಗಿಬಿಟ್ಟಿದ್ದಾರೆ. ಈ ಮಾಮೂಲಿ ಬರುತ್ತಾ ಇರುವುದರಿಂದ ಅವರು ಶಿಸ್ತಿನ ಕ್ರಮವನ್ನೇ ತೆಗೆದುಕೊಳ್ಳುವುದಿಲ್ಲ. ಅದಕ್ಕೆ ನಾನು ಹೇಳಿದ್ದು, ಇವರು ಕೇಸ್ ಬುಕ್ ಮಾಡುತ್ತಾರೆ, ದುಡ್ಡು ಬಂದತಕ್ಷಣ ಕೇಸನ್ನು ವಾಪಸ್ ತೆಗೆದುಕೊಳ್ಳುತ್ತಾರೆಂದು. ಇದರ ಕಡೆ ತಾವು ಗಮನಕೊಡಬೇಕು, ಆಮೇಲೆ ಟೈಂ ಟೇಬಲ್ ಪಬ್ಲಿಷ್ ಮಾಡಿಲ್ಲ. ಇದು ಇಲ್ಲಿ ಹೆಡ್‌ಕ್ವಾರ್ಟರ್ಸ್‌ನಲ್ಲೂ ಆಗಬೇಕು, ಬೆಂಗಳೂರಿನಲ್ಲೂ ಆಗಬೇಕು. ಯಾವ ಡಿವಿಜನ್ ಕಂಟ್ರೋಲರ್ ಅನ್ನು ಕೇಳಿದರೂ ೩ ತಿಂಗಳಲ್ಲಿ ಮಾಡುತ್ತೇವೆ, ೬ ತಿಂಗಳಲ್ಲಿ ಮಾಡುತ್ತೇವೆಂದು ಟೈಂ ತೆಗೆದುಕೊಳ್ಳುತ್ತಾರೆ. ಅವರು ಕಾಯುತ್ತಾ

ಇರುತ್ತಾರೆ, ನಿಮ್ಮನ್ನು ಇದೇ ಇಲಾಖೆಯಲ್ಲಿ ಹಾಕುತ್ತಾರೋ ಅಥವಾ ಬೇರೆ ಇಲಾಖೆಗೆ ಹಾಕುತ್ತಾರೋ ಅಥವಾ ಮತ್ತೆ ಏನಾದರೂ ಆಗುತ್ತದೋ ಎಂದು ಕಾಯುತ್ತಾ ಇರುತ್ತಾರೆ, ಇದನ್ನು ತಾವು ದಯವಿಟ್ಟು ಗಮನದಲ್ಲಿಟ್ಟುಕೊಂಡು ಈ ಟೈಂಟೇಬಲನ್ನು ಪಬ್ಲಿಷ್ ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ಒಟ್ಟಿನಲ್ಲಿ ಹೇಳಬೇಕು ಅಂದರೆ, ಈ ಕೆ. ಎಸ್. ಆರ್. ಟಿ. ಸಿ ಯನ್ನು ಸರಿ ಮಾಡಬೇಕಾದರೆ ಬಹಳ ಧೈರ್ಯವಾಗಿ ನೀವು ಮುಂದೆ ಹೋಗಬೇಕು. ಯಾವುದೇ ರೀತಿಯ ರಾಜಕೀಯ ಒತ್ತಡಗಳಿಗೆ ಒಳಗಾಗಬಾರದು. ಪರ್ಟಿಕ್ಯುಲರಾಗಿ ಡಿಸಿಪ್ಲಿನರಿ ಮ್ಯಾಟರ್ ಬಗ್ಗೆ ಒಳಗಾಗಬಾರದು. ಕಳೆದ ೧೦-೨೦ ವರ್ಷಗಳಿಂದ ನ್ಯಾಷನಲೈಸ್ ಮಾಡಿಕೊಂಡು ಬಂದಿದ್ದೇವೆ. ಇದಕ್ಕೆ ಯಾವುದೇ ರೀತಿಯ ಅಡ್ಡಿ ಬರದೇ ಹೋದರೆ. ನನಗನ್ನಿಸುತ್ತದೆ. ಒಂದು ವರ್ಷದಲ್ಲಿ ನೀವು ಇದನ್ನು ಸರಿ ಮಾಡಬಹುದು, ಅದನ್ನು ಮಾಡಬೇಕು ಎಂದು ಬಯಸುತ್ತೇನೆ. ಇನ್ನು ಎರಡು ಮಾತುಗಳನ್ನು ಮೋಟಾರ್ ವೆಹಿಕಲ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳಲಿಕ್ಕೆ ಬಯಸುತ್ತೇನೆ. ಇದರ ಮಧ್ಯದಲ್ಲಿ ಡ್ರೈವಿಂಗ್ ಸ್ಕೂಲ್ಸ್ ಬಗ್ಗೆ ಹೇಳಬೇಕಾಗಿದೆ. ಈ ಡ್ರೈವಿಂಗ್ ಸ್ಕೂಲ್ಸ್ ಬಹಳ ಕೆಟ್ಟು ಹೋಗಿವೆ. ಇವೆಲ್ಲ ಬರೀ ಒಂದು ರೀತಿಯಲ್ಲಿ...

ಶ್ರೀ ಕೆ. ಶಿವಮೂರ್ತಿ.—ಮಾನ್ಯ ಸಿಂಧ್ಯರವರು ಪದೇ ಪದೇ ರಾಜಕೀಯ ಒತ್ತಡಕ್ಕೆ ಬಲಿಯಾಗಬೇಡಿ ಎಂದೇ ಹೇಳುತ್ತಿದ್ದಾರೆ.

ಶ್ರೀ ಪಿ ಜಿ ಆರ್. ಸಿಂಧ್ಯ.—ನಾನು ಈಲ್ಡಾಗಿಲ್ಲ, ಈ ಡ್ರೈವಿಂಗ್ ಸ್ಕೂಲ್ಸ್‌ನಲ್ಲಿ ಬರೀ ಹಣ ಮಾಡುವುದೇ ಆಗಿದೆ. ಟ್ರೈನಿಂಗ್ ಕೊಡತಕ್ಕಂಥಾದ್ದು, ಮಾಡತಕ್ಕಂಥಾದ್ದು ಏನಿಲ್ಲ. ಅವನ್ನು ತಾವು ಇನ್ಸ್‌ಪೆಕ್ಷನ್ ಮಾಡಬೇಕು, ಎಷ್ಟು ಜನರಿಗೆ ಲೈಸನ್ಸ್ ಕೊಡುತ್ತಾರೆ ಎನ್ನುವುದನ್ನು ತಾವು ಚೆಕ್ ಮಾಡಬೇಕು. ನಾನು ರಾಷ್ಟ್ರಮಟ್ಟದಲ್ಲಿ ಅಂದರೆ ಟ್ರಾನ್ಸ್‌ಪೋರ್ಟ್ ಡೆವಲಪ್‌ಮೆಂಟ್ ಕೌನ್ಸಿಲ್‌ನಲ್ಲೂ ಸಹ ಈ ಮಾತನ್ನು ಹೇಳಿದ್ದೇನೆ, ಅದೇರೀತಿ ಫಸ್ಟ್ ಏಯ್ಡ್ ಸರ್ಟಿಫಿಕೇಟ್ ಬಗ್ಗೆ ಸಹಿತ ಇದನ್ನು ಮಾಡಬೇಕು. ಅಮೇಲೆ ಟ್ರಕ್ ಟರ್ಮಿನಲ್ಸ್‌ನ್ನು ಮಾಡಲಿಕ್ಕೆ ನಾವು ಬಹಳ ಪ್ರಯತ್ನ ಮಾಡಿದ್ದೇವೆ, ದುರದೃಷ್ಟವಶಾತ್ ಅದು ಆಗಲಿಲ್ಲ, ನಾವು ಪ್ರಯತ್ನ ಮಾಡಿದೆವು, ಈ ಟ್ರಕ್ ಟರ್ಮಿನಲ್ಸ್ ಅಂತು ಬೆಂಗಳೂರಿನಲ್ಲಿ ಕೊನೇಪಕ್ಷ ನೀವು ಒಂದು ವರ್ಷದಲ್ಲಿ ಮಾಡಬಹುದು, 60—70 ಎಕರೆ ಜಾಗ ಇದೆ, ಅದೇ ರಿತೀ ಕೊನೇಪಕ್ಷ ಬೆಂಗಳೂರು ಮಂಗಳೂರು ಮೈಸೂರು ಹುಬ್ಬಳ್ಳಿಧಾರವಾಡ, ಬೆಳಗಾಂ, ಗುಲ್ಬರ್ಗಗಳಲ್ಲಿ ನಿಮ್ಮ ಕಾಲದಲ್ಲಿ ಲ್ಯಾಂಡಿನ್ನಾದರೂ ಅಕ್ವೈರ್ ಮಾಡಿ ಸಾಕು 20—25 ಎಕರೆ ಜಮೀನನ್ನು ಡೆಪ್ಯುಟಿ ಕಮಿಷನರಿಗೆ ಹೇಳಿ, ಮಾನ್ಯ ಮುಖ್ಯ ಮಂತ್ರಿಗಳ ಸಹಾಯ ಪಡೆದು ಟ್ರಕ್ ಟರ್ಮಿನಲ್ಸ್‌ಗೆ ನೀವು ಲ್ಯಾಂಡನ್ನಾದರೂ ಅಕ್ವೈರ್ ಮಾಡಿ. ಇದು ಬಿಲ್ಟ್ ಅಪ್ ಅದರೆ 15 ವರ್ಷಗಳ ನಂತರವಾದರೂ ಇದು ಉಪಯೋಗವಾಗುತ್ತದೆ. ಅದೇ ರೀತಿಯಲ್ಲಿ ನ್ಯಾಷನಲ್ ಹೈವೇಸ್‌ಗೆ ಅಮಿನಿಟೀಸ್ ಇರತಕ್ಕಂಥ ಸ್ಟೇಟ್ ಹೈವೇಸ್‌ಗೆ ಸಂಬಂಧಪಟ್ಟಂತೆ ಒಂದು ಗವರ್ನಮೆಂಟ್ ಆಫ್ ಇಂಡಿಯ ಸ್ಕೀಂ ಇದೆ, ಇದರ ಬಗ್ಗೆ ತಾವು ವರದಿಯಲ್ಲಿ ಹೇಳಿದ್ದೀರಿ, ಇದೇನೂ ದುಡ್ಡು ತೆಗೆದುಕೊಂಡು ಬರುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆಂದು ಹೇಳಿದ್ದೀರಿ, ಈ ಪ್ರಯತ್ನವನ್ನು ತಾವು ಮಾಡಬೇಕು ಎಂದು ಹೇಳುತ್ತೇನೆ. ಅಮೇಲೆ ಇಂಟರ್‌ಸ್ಟೇಟ್ ಅಗ್ರಿಮೆಂಟ್ ಏನಿದೆ ಇದರ ಬಗ್ಗೆ ೧೯೮೫ರಲ್ಲಿ ಮೀಟಿಂಗ್ ಆಗಿದೆ. ಅದು ಆದ ಮೇಲೆ ಈ ಸದರ್ನ್ ಸ್ಟೇಟ್ಸ್ ಮಿನಿಸ್ಟರ್ಸ್ ಸೇರಿಲ್ಲ. ಆಫೀಸರ್ಸ್ ಒಂದೆರಡು ಸಾರಿ ಸೇರಿರಬಹುದು, ಆದರೆ ಅದರಿಂದ ಹೆಚ್ಚಿನ ಉಪಯೋಗವಾಗಿದೆ ಎಂದು ನಾನು ತಿಳಿದಿಲ್ಲ, ಇದು ಏಕೆ ಆಗಬೇಕು ಅಂದರೆ, ಬಾರ್ಡರ್ ಡಿಸ್ಟ್ರಿಕ್ಟ್ಸ್ ಆದ ಬೀದರ್, ಗುಲ್ಬರ್ಗ, ರಾಯಚೂರು, ಕೋಲಾರ, ಮೈಸೂರು ಮತ್ತು ಈ ಕಡೆ ಕೇರಳದಿಂದ ಬರತಕ್ಕದ್ದು, ದಕ್ಷಿಣ ಕನ್ನಡ ಜಿಲ್ಲೆ, ಮಹಾರಾಷ್ಟ್ರದ ಪಕ್ಕದಲ್ಲಿರತಕ್ಕಂಥಾದ್ದು ಏನಿದೆ ಅಲ್ಲಿಗೆ ಹೋಗತಕ್ಕಂಥ ಮತ್ತು ಬಾರ್ಡರ್ ಜಿಲ್ಲೆಗಳಿಂದ ಬರತಕ್ಕಂಥ ಜನಗಳಿಗೆ ಪ್ರಯಾಣಿಕರಿಗೆ ಇದರಿಂದ ಬಹಳ ಅನುಕೂಲವಾಗುತ್ತದೆ. ಅದು ಫಾಲೋ ಅಪ್ ಆಗಿಲ್ಲ, ರೆಸೊಲ್ಯೂಷನ್ ಆಗಿದೆ. ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕಾಗಿಲ್ಲ, ಏಕೆಂದರೆ ರಿವ್ಯು ನಡೆದಿಲ್ಲ. ಆ ಟ್ರಾಫಿಕ್ ಡಿಪಾರ್ಟ್‌ಮೆಂಟ್‌ನವರು ಮೂರು ತಿಂಗಳಿಗೋ ಆರು ತಿಂಗಳಿಗೋ ಯಾವಾಗಲೋ ಒಂದು ಸಾರಿ ಸಬ್ಜೆಕ್ಟ್ ಫೈಲ್ಸನ್ನು ಡಿಸ್ಪೋಸ್ ಮಾಡುವುದಕ್ಕೆ ತರುತ್ತಾರೆ. ಅಮೇಲೆ ಹಾಗೇ ಇಟ್ಟುಬಿಡುತ್ತಾರೆ. ಅದ್ದರಿಂದ ದಯವಿಟ್ಟು ಆ ಕಡೆ ತಾವು ಗಮನವನ್ನು ಕೊಡಬೇಕು. ಒಟ್ಟಿನಲ್ಲಿ ನಾನು ನಿಮಗೆ ಯಶಸನ್ನು ಕೋರುತ್ತೇನೆ. ಏಕೆಂದರೆ ನಾನು ಈ ಸಾರಿಗೆ ಇಲಾಖೆಯ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಬಹಳ ಅನ್‌ಪಾಪ್ಯುಲರ್ ಆದೆ. ಏಕೆ ಅನ್‌ಪಾಪ್ಯುಲರ್ ಆದೆ ಎಂದರೆ ನಾನು ಯಾವ ಪ್ರೆಷರ್‌ಗೆ ಈಲ್ಡ್ ಆಗಲಿಲ್ಲ. ನನ್ನ ಕಾಲನ್ನು ಎಳೆಯಲಿಕ್ಕೆ ಬಹಳಷ್ಟು ಜನ ಆಪರೇಟರ್ಸ್ ಎಲ್ಲ ಪ್ರಯತ್ನ ಮಾಡಿದರು, ಪತ್ರಿಕೆಗಳಲ್ಲೆಲ್ಲ ಬರೆಸಿದರು. ಇಲ್ಲಿ ಕುಳಿತುಕೊಂಡು ಯಾರೋ ಒಬ್ಬರು ಹೇಳಿದರು, ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಅಂದರೆ ಭಾಸಿಗಳನ್ನು ನುಂಗಿಬಿಟ್ಟಿದ್ದಾರೆ

ಎಂದು. ಆ ಥಾಸಿಗೂ ಈ ಮಂತ್ರಿಗೂ ಸಂಬಂಧವೇ ಇಲ್ಲ ಎನ್ನುವುದು ಕೊನೇಪಕ್ಷ ಈಗಲಾದರೂ ನಿಮಗೆ ಗೊತ್ತಾಗುತ್ತದೆ ಎಂದು ತಿಳಿದುಕೊಂಡಿದ್ದೇನೆ, ನಿಮಗೆ ಯಶಸ್ಸನ್ನು ಕೋರುತ್ತೇನೆ. ಆಹಾರ ಇಲಾಖೆ ಮೇಲೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಮಂತ್ರಿಗಳು ಬಡವರ ಪರ ಇರುವವರು ಬಡವರ ಬಗ್ಗೆ ಕಳಕಳಿ ಇರುವವರು ಮಂತ್ರಿಗಳಿದ್ದಾರೆ. ಶ್ರೀಮಂತರ ಜೊತೆ ನೀವು ಇರುವುದಿಲ್ಲ. ಬಡವರಿಗೆ ಕೊಡತಕ್ಕ ಎರಡೂ ರೂಪಾಯಿ ಅಕ್ಕಿಯನ್ನು ಕೇಂದ್ರ ಸರ್ಕಾರ ಹೆಚ್ಚು ಮಾಡಿದೆಯೆಂದು ತಾವು ಜಾಸ್ತಿ ಮಾಡಿದ್ದೀರಿ. ಏತಕ್ಕೆ ಹೀಗೆ ಮಾಡಿದಿರಿ. ಹಸಿರು ಕಾರ್ಡ್‌ನಲ್ಲಿ ಎರಡು ರೂಪಾಯಿ ಅಕ್ಕಿಯನ್ನು ಬಡವರಿಗೆ ಕೊಡುತ್ತಿದ್ದರು. ರಾಮಕೃಷ್ಣ ಹೆಗಡೆಯವರು ಮಾಡಿದ್ದು ಇರಬಹುದು. ನಾನು ಅದರ ಬಗ್ಗೆ ಹೇಳುವುದಿಲ್ಲ. ನಿಮ್ಮ ಹೆಸರು ಇಟ್ಟುಕೊಳ್ಳಿ ಮಾನ್ಯ ವೀರೇಂದ್ರ ಪಾಟೀಲರ ಹೆಸರು ಇಟ್ಟುಕೊಳ್ಳಿ, ನಾನು ಅದಕ್ಕೆ ವಿರೋಧ ಮಾಡುವುದಿಲ್ಲ. ದಯವಿಟ್ಟು ಬಡವರಿಗೆ ಕೊಡತಕ್ಕ ಅಕ್ಕಿಯ ಬೆಲೆಯನ್ನು ಜಾಸ್ತಿ ಮಾಡಲಿಕ್ಕೆ ಹೋಗಬೇಡಿ.

ಶ್ರೀ ಅಜೀಜ್ ಸೇಟ್.—ಗ್ರೀನ್ ಕಾರ್ಡ್ ತಮ್ಮ ಕಾಲದಲ್ಲಿ ಇಷ್ಟು ಆಯಿತು. ಟೋಟಲ್ ಪಾವರ್ಟಿ ಲೈನ್ ಕೆಳಗಿರುವವರು ಶೇಕಡಾ ೨೫ರಷ್ಟು ಆದರೆ ೫೪.೧೭ ಪರ್ಸೆಂಟ್ ಜನರಿಗೆ ಈ ಕಾರ್ಡ್ ಇಷ್ಯೂ ಆಗಿದೆ. ಜನತಾ ಸರ್ಕಾರದಲ್ಲಿ ಟ್ರಾಕ್ಟರ್ ಓನರ್‌ಗಳಿಗೆ ಕಾರ್ಡು ಕೊಡಲಾಗಿದೆ. ಆದರೆ ಟ್ರಾಕ್ಟರ್ ಡ್ರೈವರ್‌ಗಳಿಗೆ ಕಾರ್ಡ್ ಕೊಟ್ಟಿಲ್ಲ. ಅಷ್ಟೇ ಸಾಕು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾನು ಇದನ್ನೇ ಹೇಳುತ್ತಿದ್ದೇನೆ. ಎತ್ತು ಕರ ಹಾಕಿತು ಅಂದರೆ ಕಟ್ಟು ಕೊಟ್ಟಿಗೆಗೆ ಅಂತ ನಾನು ಹೇಳುವುದಿಲ್ಲ. ಟ್ರಾಕ್ಟರ್ ಮಾಲೀಕರುಗಳಿಗೆ ಹಸಿರು ಕಾರ್ಡು ಕೊಟ್ಟಿರಬಹುದು. ನಾನು ಇಲ್ಲ ಎಂದು ಹೇಳಲಿಲ್ಲ. ಹಸಿರು ಕಾರ್ಡುಗಳ ಬಗ್ಗೆ ಐ. ಆರ್. ಡಿ. ಪಿ. ಲೋನ್ ಬಗ್ಗೆ ಅನ್ಯಾಯವಾಗಿದೆ ಎಂದು ಈ ಸದನದ ಸದಸ್ಯರು ಅನೇಕ ಸಾರಿ ಹೇಳಿದ್ದಾರೆ. ಇದರ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ. ಇದನ್ನು ಸರಿಪಡಿಸಿ. ನಾನು ಒತ್ತಾಯ ಮಾಡುತ್ತಿರುವುದು, ಬಡವರ ಹೊಟ್ಟೆ ಮೇಲೆ ಕಲ್ಲು ಹಾಕುವುದಕ್ಕೆ ಹೋಗಬೇಡಿ. ಅವರಿಗೆ ಎರಡು ರೂಪಾಯಿಗೆ ಅಕ್ಕಿ ಏನು ಕೊಡುತ್ತಿದ್ದರು, ಅದನ್ನು ಸಭಾನಾಯಕರು ಮುಂದುವರಿಸಿಕೊಂಡು ಹೋಗಬೇಕೆಂದು ಹೇಳುತ್ತೇನೆ. ಇದರಲ್ಲಿ ಲಾಭ ಮಾಡುವುದೇನೂ ಇಲ್ಲ, ಈ ಒಂದು ಕೆಲಸಕ್ಕೆ ಬೇರೆ ಇಲಾಖೆಯಿಂದ ೫–೬ ಕೋಟಿ ರೂಪಾಯಿ ಕೊಡಿ. ನನಗೆ ಸಾಕಷ್ಟು ಸಮಯವನ್ನು ಕೊಟ್ಟಿದ್ದಕ್ಕಾಗಿ ತಮಗೂ ತಮ್ಮ ಸ್ಥಾನಕ್ಕೂ ಚಿರಋಣಿಯಾಗಿದ್ದೇನೆ. ಮಾನ್ಯ ಮಂತ್ರಿಗಳಿಗೆ ಯಶಸ್ಸನ್ನು ಕೋರಿ ಈ ವರ್ಷ ಒಳ್ಳೆಯ ಕೆಲಸಗಳನ್ನು ಮಾಡಲಿ ಎಂದು ಹೇಳಿ ಈ ಬೇಡಿಕೆಗಳನ್ನು ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಅಜೀಜ್ ಸೇಟ್.—ಸ್ವಾಮಿ, ಇದುವರೆಗೂ ಎರಡು ಜನ ಮಾತ್ರ ಮಾತನಾಡಿದ್ದಾರೆ.

ಶ್ರೀ ಎಂ. ಮಹದೇವ್.—ಸ್ವಾಮಿ, ನಮಗೂ ಮಾತನಾಡಲು ಅವಕಾಶ ಕೊಡಿ. ವಿರೋಧ ಪಕ್ಷದವರಿಗೆ ೨–೨ ಗಂಟೆ ಸಮಯ ಕೊಟ್ಟಿದ್ದೀರಿ. ನಮಗೂ ಅವಕಾಶ ಸಿಗುತ್ತದೆನ್ನುವ ದೃಷ್ಟಿಯಿಂದ ಬೆಳಿಗ್ಗೆಯಿಂದ ಕಾದುಕೊಂಡು ಕೂತಿದ್ದೇವೆ. ನಮಗೆ ಸಾಕಷ್ಟು ಅವಕಾಶ ಸಿಗದಿದ್ದರೆ ಈ ಮೂರು ಡಿಮ್ಯಾಂಡ್‌ಗಳನ್ನು ಪಾಸ್ ಮಾಡಿಕೊಳ್ಳುವುದಕ್ಕೆ ನಾವು ಸಹಕರಿಸುತ್ತೇವೆ.

†ಶ್ರೀ ಗೋಪಿನಾಥ ಆರ್. ಸಾಂಡ್ರಾ (ಹುಬ್ಬಳ್ಳಿ ಗ್ರಾಮಾಂತರ)—ಮಾನ್ಯ ಅಧ್ಯಕ್ಷರೆ, ಈ ದಿನ ಸಾರಿಗೆ ಸಚಿವರೂ, ಯುವಕ ಶಕ್ತಿಯ ಪ್ರತಿನಿಧಿಗಳೂ ಆದ ಶ್ರೀಮಾನ್ ಜಾರ್ಜ್‌ರವರು ಹಾಗೂ ಅನುಭವಿಗಳೂ, ಬಡವರ ಬಂಧುಗಳೂ ಆದ ಶ್ರೀಮಾನ್ ಅಜೀಜ್ ಸೇಟ್‌ರವರು ಮತ್ತು ಇದೀಗ ಹೊಸದಾಗಿ ಬಂದು' ಸಹಕಾರ ಕ್ಷೇತ್ರದಲ್ಲಿ ಅಭ್ಯಾಸ ಮಾಡಿ ಸಹಕಾರ ಕ್ಷೇತ್ರಕ್ಕೆ ಹೊಸ ರೂಪ ಕೊಡಬೇಕೆಂದು ಪ್ರಯತ್ನಿಸುತ್ತಿರುವ ಡಾ|| ರಾಜೂರವರು ಇಟ್ಟಿರುವಂತಹ ಬೇಡಿಕೆಗಳನ್ನು ಸ್ವಾಗತಿಸುತ್ತಾ ಒಂದೆರಡು ಮಾತನ್ನು ಹೇಳುತ್ತೇನೆ. ಮಾನ್ಯ ಜಾರ್ಜ್‌ರವರು ಬಹಳ ಹುರುಪಿನಿಂದ ಮತ್ತು ಹುಮ್ಮಸ್ಸಿನಿಂದ ಈ ಕೆ. ಎಸ್. ಆರ್. ಟಿ. ಸಿ. ಸಂಸ್ಥೆಯನ್ನು ಆಪರೇಷನ್ ಮಾಡಿ, ಅಲ್ಲಿ ಆಗುವಂಥ ಹಾನಿ ತಪ್ಪಿಸಲು ಅನೇಕ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಅದಕ್ಕಾಗಿ ಪ್ರಪ್ರಥಮವಾಗಿ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇದರ ಜೊತೆಗೆ ನಾನು ಕೆಲವು ಸಲಹೆ ಸೂಚನೆಗಳನ್ನು ಕೊಡಬಯಸುತ್ತೇನೆ. ಪ್ರಪ್ರಥಮವಾಗಿ ಕೆ.ಎಸ್.ಆರ್.ಟಿ.ಸಿ. ಸಂಸ್ಥೆ ಒಂದು ಬೃಹತ್ ಸಂಸ್ಥೆ. ಅದರಲ್ಲಿ ಸುಮಾರು ಐವತ್ತು ಸಾವಿರ ಜನ ಕೆಲಸ ಮಾಡುತ್ತಿದ್ದಾರೆ, ಒಂಬತ್ತು ಸಾವಿರ ಬಸ್ಸುಗಳು ಓಡುತ್ತಿವೆ, ಇಷ್ಟು ಬಸ್ಸುಗಳು ಓಡಿದರೂ ಕೂಡ ಹಾನಿ ಬಹಳಷ್ಟು ಆಗುತ್ತಿದೆ. ಕೆ.ಎಸ್.ಆರ್.ಟಿ.ಸಿ. ಹುಟ್ಟಿದಂದಿನಿಂದ ಇವತ್ತಿನವರೆಗೂ ಕೇವಲ ಒಂದೆರಡು ವರ್ಷ ಬಿಟ್ಟರೆ. ಹಾನಿಯಲ್ಲಿಯೇ ಮುಂದುವರಿಯುತ್ತಿದೆ. ಈ ಹಾನಿಯನ್ನು ಹೇಗೆ ತಪ್ಪಿಸಬೇಕು. ಅದರ ಬಗ್ಗೆ ನಾವು ವಿಚಾರ ಮಾಡಿ ಕೆಲವು ಸಲಹೆ ಸೂಚನೆಗಳನ್ನು ಕೊಟ್ಟರೆ, ಈ ಹಾನಿಯನ್ನು ಕಡಿಮೆ ಮಾಡಬಹುದೆಂದು ಎಂಬ ಬಗ್ಗೆ ಈ

ಸಂದರ್ಭದಲ್ಲಿ ನಾವು ಕೆಲವು ಸಲಹೆ ಸೂಚನೆಗಳನ್ನು ಕೊಡಲಿಕ್ಕೆ ಇಷ್ಟಪಡುತ್ತೇನೆ. ಪ್ರಪ್ರಥಮವಾಗಿ ಹೋದ ವರ್ಷ ಹದಿನಾರು ಕೋಟಿ ಮೂವತ್ತೊಂಬತ್ತು ಲಕ್ಷ ರೂಪಾಯಿ ಹಾನಿಯಾಗಿದೆ. ಇನ್ನೂ ಮುಂದೆ ಇದೇ ರೀತಿ ಹಾನಿಯಾಗುವುದನ್ನು ತಪ್ಪಿಸಲಿಕ್ಕೆ ವಿಶೇಷವಾಗಿ ಮಂತ್ರಿಗಳು, ಅಧಿಕಾರಿಗಳು ಪ್ರಯತ್ನ ಮಾಡಬೇಕೆಂದು ನಾನು ಅವರಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮೊಟ್ಟ ಮೊದಲನೆಯದಾಗಿ ನಾನು ಭಾಷಣ ಮಾಡಲಿಕ್ಕೆ ಹೋಗುವುದಿಲ್ಲ. ಒಂದೊಂದೇ ಪಾಯಿಂಟ್ ಮೂಲಕ ನಾನು ಸಲಹೆ ಸೂಚನೆಗಳನ್ನು ಕೊಟ್ಟು ನನ್ನ ಮಾತನ್ನು ಮುಗಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ. ಮೊದಲನೆಯ ಸೂಚನೆ ಅಂದರೆ, ಪ್ರತಿಯೊಂದು ಬಸ್ಸು ೨೫೦ ರಿಂದ ೩೦೦ ಕಿಲೋಮೀಟರ್ ಪ್ರತಿದಿವಸ ಓಡುತ್ತಿವೆ, ಪ್ರತಿಯೊಂದು ಬಸ್ಸು ಪ್ರತಿದಿವಸ ೩೫೦ ಕಿಲೋಮೀಟರ್ ಓಡಿಸಲಿಕ್ಕೆ ಸಾಧ್ಯವಿದೆ. ಅದನ್ನು ಮಾಡಿದರೆ ಹಾನಿಯನ್ನು ಕಡಿಮೆ ಮಾಡಲಿಕ್ಕೆ ಸಾಧ್ಯ ಇದೆ. ಇನ್ನು ಎರಡನೆಯ ಸಲಹೆ ಅಂದರೆ, ಇಂಧನ ಪೆಟ್ರೋಲ್. ಆಯಿಲ್ ಬ್ಯಾಟರಿ ಮತ್ತು ಟೈರ್ ಇವುಗಳ ಬಳಕೆ ಇವತ್ತು ಎಷ್ಟು ಆಗುತ್ತಿದೆ ಇದಕ್ಕಿಂತಲೂ ಹೆಚ್ಚು ಸರ್ವೀಸಸ್ ತೆಗೆದುಕೊಳ್ಳುವುದಕ್ಕೆ ಸಾಧ್ಯ ಇದೆ. ಅದರ ಬಗ್ಗೆ ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ. ಇನ್ನೊಂದು ಬಹಳ ಮಹತ್ವದ ಮಾತನ್ನು ಹೇಳಬೇಕೆಂದರೆ, ಖರೀದಿ ಮಾಡುವಾಗ ಅನೇಕ ಲೋಪದೋಷಗಳು ನಮ್ಮ ಕಣ್ಣಿಗೆ ಕಾಣುತ್ತವೆ. ಖರೀದಿ ಮಾಡುವಾಗ, ಕೆಲವು ಅಧಿಕಾರಿಗಳು, ಯಾವುದು ಬಿಡಿಭಾಗಗಳು ಬೇಕು, ಆ ಬಿಡಿಭಾಗಗಳನ್ನು ಬಿಟ್ಟು ನಿರುಪಯೋಗವಾಗುವ ಬಿಡಿಭಾಗಗಳನ್ನು ತೆಗೆದುಕೊಂಡು ಲಕ್ಷಗಟ್ಟಲೆ ರೂಪಾಯಿ ಹಣವನ್ನು ಹಾನಿ ಮಾಡುತ್ತಿದ್ದಾರೆ, ಅದನ್ನು ತಡೆಹಿಡಿಯಬೇಕೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ತಮಗೆ ಒಂದು ಉದಾಹರಣೆ ಕೊಡಬೇಕೆಂದರೆ ಹಿಂದೆ ೧೨ ಲಕ್ಷ ರೂಪಾಯಿ ಬೆಲೆ ಬಾಳುವಂಥ ಬಿಡಿ ಭಾಗಗಳನ್ನು ತೆಗೆದುಕೊಂಡು, ಅನಂತರ ಅದನ್ನು ತೂಕದ ಬೆಲೆಗೆ ೧೦ ಸಾವಿರ ರೂಪಾಯಿಗಳಿಗೆ ಕೊಟ್ಟಿದ್ದಾರೆ. ಈ ರೀತಿಯಲ್ಲಿ ಆಗದಂತೆ ಕ್ರಮ ತೆಗೆದುಕೊಂಡರೆ, ಹಾನಿಯಾಗುವುದನ್ನು ಕಡಿಮೆ ಮಾಡಬಹುದೆಂದು ನನಗೆ ಅನಿಸುತ್ತದೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ಬೆಂಗಳೂರು ಮತ್ತು ಹುಬ್ಬಳ್ಳಿಯಲ್ಲಿ ಸುಸಜ್ಜಿತವಾದಂಥ ರೀಜನಲ್ ವರ್ಕ್‌ಷಾಪ್ ಇದೆ. ಅಲ್ಲಿ ಸಾಕಷ್ಟು ಬಿಡಿಭಾಗಗಳನ್ನು ತಯಾರು ಮಾಡಲಿಕ್ಕೆ ಸಾಧ್ಯ ಇದೆ. ನಮಗೆ ಬೇಕಾದಂಥ ಬಿಡಿಭಾಗಗಳನ್ನು ತಯಾರಿಸಿ, ನಾವು ಅವುಗಳನ್ನು ಉಪಯೋಗ ಮಾಡಿಕೊಳ್ಳಬಹುದು. ಆದರೆ ಆ ಕೆಲಸ ಸಾಕಷ್ಟು ಆಗುತ್ತಿಲ್ಲ ಎನ್ನುವ ಮಾತನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ಮತ್ತೊಂದು ವಿಷಯ ಅಂದರೆ, ಬಾಡಿ ಬಿಲ್ಡಿಂಗ್ ಮಾಡುವಂಥ ಶಕ್ತಿ ಸಾಮರ್ಥ್ಯ. ಮತ್ತು ಆ ಒಂದು ವೃತ್ತಿ ನಮ್ಮ ವರ್ಕರ್ಸ್‌ನಿಂದ ಆಗುತ್ತದೆ. ಅಲ್ಲಿರುವ ಸಾಕಷ್ಟು ಎಕ್ಸ್‌ಪರ್ಟ್‌ಗಳಿಂದ ಆ ಕೆಲಸವನ್ನು ತೆಗೆದುಕೊಳ್ಳಬೇಕು. ಆ ರೀತಿ ಮಾಡಿದರೆ, ಹಣವನ್ನು ಉಳಿಸಲಿಕ್ಕೆ ಸಾಧ್ಯ ಇದೆ. ಇನ್ನು ಲೋಕಲ್‌ನಲ್ಲಿ ಖರೀದಿ ಮಾಡುವಂಥ ವ್ಯವಸ್ಥೆ ಈಗ ಸಾಕಷ್ಟು ಇದೆ. ಇದು ಆದಷ್ಟೂ ಕಡಿಮೆಯಾಗಬೇಕೆಂದು ಹೇಳುತ್ತೇನೆ. ಇದರಲ್ಲಿ ಅಪರತಪರ, ಭ್ರಷ್ಟಾಚಾರ ಮಾಡುವಂಥ ಕೆಲಸ ನಡೆಯುತ್ತಿದೆ. ಇದನ್ನು ತಡೆಹಿಡಿದರೆ, ನಾವು ಸಾಕಷ್ಟು ಹಣವನ್ನು ಉಳಿಸಬಹುದು. ಆಮೇಲೆ, ಟೈರು ರೀಟ್ರೇಡಿಂಗ್ ಮಾಡುವಂಥ ಮಾಡರ್ನ್ ಮೆಷಿನ್‌ಗಳು ಸಾಕಷ್ಟು ಬೇಕು. ಈಗ ಹುಬ್ಬಳ್ಳಿಯಲ್ಲಿ ಹಳೆಯ ಪಾಂಟ್ ಇದೆ. ಅಲ್ಲಿ ಹೊಸ ಮಾಡರ್ನ್ ಪ್ಲಾಂಟ್ ಹಾಕಿದರೆ, ನಾವು ಹೊರಗಡೆ ರೀಟ್ರೇಡಿಂಗ್ ಮಾಡುವಂತಾದ್ದಕ್ಕೆ ಏನು ಹಣ ಕೊಡುತ್ತಿದ್ದೇವೆ. ಅದನ್ನು ತಪ್ಪಿಸಲಿಕ್ಕೆ ಸಾಧ್ಯ ಆಗುತ್ತದೆ. ಇನ್ನು ಬಸ್ಸು ಪಾಸುಗಳನ್ನು ಕೊಡುವ ವ್ಯವಸ್ಥೆಯ ಬಗ್ಗೆ ಒಂದೆರಡು ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ.

೫–೦೫ ಪಿ. ಎಂ.

ಹಿಂದಿನ ಸರ್ಕಾರದವರು ಸಾಕಷ್ಟು ಪಾಸ್‌ಗಳನ್ನು ಕೊಟ್ಟು ಈ ಸಂಸ್ಥೆಯ ಆದಾಯಕ್ಕೆ ತೊಂದರೆ ಕೊಟ್ಟಿದ್ದಾರೆ. ಈ ಪಾಸುಗಳನ್ನು ಕೊಡುವಾಗ ಸಾಕಷ್ಟು ಲಿಬರಲ್ ಆಗಿ ಕೊಡಬೇಡಿ ಮೊದಲು ನೀವು ನಿಮ್ಮ ಹಾಸಿಗೆ ಇದ್ದಷ್ಟು ಕಾಲು ಚಾಚಿರಿ, ನಿಮಗೆ ಎಷ್ಟು ಕೊಡಲಿಕ್ಕೆ ಆಗುತ್ತದೆ ಅಷ್ಟನ್ನು ಕೊಡಿ ಉದಾರವಾಗಿ ಕೊಡಲಿಕ್ಕೆ ಹೋಗಬೇಡಿ. ಈ ಪಾಸಿನ ಒಂದು ವ್ಯವಸ್ಥೆಯ ಬಗ್ಗೆ ಹೇಳುತ್ತೇನೆ, ಕಾಯಿಪಲ್ಯ ಮಾರುವವರು, ಹಾಲನ್ನು ಮಾರುವವರು, ಸರ್ಕಾರಿ ನೌಕರರು ಈ ಪಾಸಿನ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಅದನ್ನು ತಪ್ಪಿಸಲಿಕ್ಕೆ ನೀವು ಕ್ರಮ ತೆಗೆದುಕೊಳ್ಳಬೇಕು, ವಿದ್ಯಾರ್ಥಿಗಳಿಗೆ ಪಾಸನ್ನು ಕೊಡುವ ಉದ್ದೇಶವೇನೆಂದರೆ ಅವರು ರಿಯಾಯಿತಿ ದರದಲ್ಲಿ ಕಾಲೇಜಿಗೆ ಹೋಗಿ ಕಾಲೇಜಿನಿಂದ ಮನೆಗೆ ಬರಬೇಕೆಂಬ ಉದ್ದೇಶದಿಂದ. ಆ ಉದ್ದೇಶಕ್ಕೆ ನಾನು ಪೆಟ್ಟು ಕೊಡುವಂತಹ ಸಲಹೆಯನ್ನು ನಾನು ಮಾಡುತ್ತಿಲ್ಲ. ಪಾಸ್‌ಗಳಲ್ಲಿ ವಿದ್ಯಾರ್ಥಿಗಳು ಎರಡು ಸಲ ಹೋಗಿಬರುವಂತೆ ಅವಕಾಶ ಕೊಟ್ಟರೆ ಸುಮಾರು ಅದರಲ್ಲಿ ಕೋಟಿಗಟ್ಟಲೆ ಹಣವನ್ನು ಇದರಿಂದಲೂ ಉಳಿಸಬಹುದು.

ಇನ್ನು ಚೆಕಿಂಗ್ ಸಿಸ್ಟಂ ಬಗ್ಗೆ ಹೇಳುವುದಾದರೆ ಇಡೀ ರಾಜ್ಯದೊಳಗೆ ೯೦೦ ಗಾಡಿಗಳು ಓಡಾಡುತ್ತಿವೆ. ಅದನ್ನು ಚೆಕಿಂಗ್ ಮಾಡುವಂತಹ ಸಿಸ್ಟಂ ಸರಿಯಾಗಿಲ್ಲ. ಕೇವಲ ನೂರಾರು ಮಂದಿ ಚೆಕಿಂಗ್ ಅಧಿಕಾರಿಗಳು ಇದ್ದಾರೆ ಅವರಿಂದ ಚೆಕಿಂಗ್ ಮಾಡಲು ಸಾಧ್ಯವಿಲ್ಲ. ಇದನ್ನು ಸಂಪೂರ್ಣವಾಗಿ ಬೇರೆ ರೀತಿಯಿಂದ ಮಾಡಿದರೆ ಸಾಕಷ್ಟು ಹಣವನ್ನು ಉಳಿಸಬಹುದು. ಈ ಚೆಕಿಂಗ್ ಮಾಡುವಂತಹ ವ್ಯಕ್ತಿಗಳು ಏನಿದ್ದಾರೆ, ಮಾನ್ಯ ಸಿಂಧ್ಯರವರು ಹೇಳಿದಹಾಗೆ ಒಬ್ಬರಿಗೊಬ್ಬರಿಗೆ ಅನ್ಯೋನ್ಯವಾಗಿ ನಡೆಯುವಂತಹ ಒಂದು ಸರ್ಕಲ್ ಇದೆ. ಅದನ್ನು ತಪ್ಪಿಸಲು ಒಂದು ಉಪಾಯ ಮಾಡಬೇಕು, ಉಪಾಯ ವೇನೆಂದರೆ ಹೆಚ್ಚಿನ ಸಂಖ್ಯೆಯಲ್ಲಿ ಚೆಕ್ ಮಾಡುವಂತಹ ವ್ಯವಸ್ಥೆಯಾಗಬೇಕು. ಅದು ಆದರೆ ನಾವು ಸಾಕಷ್ಟು ಹಣವನ್ನು ಉಳಿಸಬಹುದು. ಚೆಕಿಂಗ್ ಅನ್ನು ಇಂತಹ ಅಧಿಕಾರಿಗಳೇ ಮಾಡಬೇಕೆಂದು ಮಾಡುವುದಕ್ಕೆ ಸುಪ್ರೀಂ ಕೋರ್ಟ್‌ನ ಆರ್ಡರ್ ಏನಾದರೂ ಇದ್ದರೆ, ಆ ಆರ್ಡರನ್ನು ತಪ್ಪಿಸಿ, ಬೇಕಾದರೆ ಏನಾದರೂ ಕಾಯಿದೆಯನ್ನು ಅಥವಾ ಕಾನೂನನ್ನು ಮಾಡಿ. ಈ ಚೆಕಿಂಗ್ ಸಿಸ್ಟಂ ಅನ್ನು ಮಾಡಬೇಕು. ಚೆಕಿಂಗ್ ಸಿಸ್ಟಂ ಅನ್ನು ಮಾಡಲು ಇಂಡಿಪೆಂಡೆಂಟ್ ಸ್ಕ್ವಾಡ್ ಇರಬೇಕು. ಇದು ಯಾರ ಅಧೀನದಲ್ಲೂ ಇರಬಾರದು, ನೇರವಾಗಿ ಎಂ. ಡಿ. ಯವರ ಅಧೀನದಲ್ಲಿ ಇರಬೇಕು. ಅವರು ಪ್ರಾಮಾಣಿಕವಾಗಿ ಕೆಲಸಮಾಡಿ ಕೆ.ಎಸ್.ಆರ್.ಟಿ.ಸಿ. ಬೊಕ್ಕಸವನ್ನು ಹೆಚ್ಚು ಮಾಡುವುದರಲ್ಲಿ ಏಳ್ಳಷ್ಟು ಸಂಶಯವಿಲ್ಲ. ಇಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಇದ್ದಾರೆ, ಅವರಿಗೆ ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಏನೆಂದರೆ ಪ್ರತಿವರ್ಷ ಸರ್ಕಾರದವರು ೧೨–೧೮ ಕೋಟಿ ರೂಪಾಯಿಗಳಷ್ಟು ಟ್ಯಾಕ್ಸ್ ಅನ್ನು ಏರಿಸಿ ಇದರ ಹಾನಿಯನ್ನು ಹೆಚ್ಚಾಗುವಂತೆ ಮಾಡುತ್ತಿದ್ದಾರೆ. ಕೆ.ಎಸ್.ಆರ್.ಟಿ.ಸಿ. ತನ್ನ ಕಾಲಿನ ಮೇಲೆ ಎಲ್ಲಿಯವರೆಗೆ ನಿಲ್ಲುವ ವ್ಯವಸ್ಥೆ ಆಗುವುದಿಲ್ಲ, ಅಲ್ಲಿಯವರೆಗೆ ಟ್ಯಾಕ್ಸ್ ಅನ್ನು ಹೆಚ್ಚು ಮಾಡಬಾರದೆಂದು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಡ್ರೈವರ್ ಮತ್ತು ಕಂಡಕ್ಟರ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಡ್ರೈವರ್ ಮತ್ತು ಕಂಡಕ್ಟರ್‌ರವರಿಗೆ ೮ ಗಂಟೆ ಸ್ಟೀರಿಂಗ್ ಡ್ಯೂಟಿ ಕೊಡಬೇಕು. ಈಗ ಏನಾಗುತ್ತಿದೆ ಅಂದರೆ ಕೆಲವರು ೫–೬ ಗಂಟೆ ಕೆಲಸ ಮಾಡಿ ಮನೆಗೆ ಹೋಗುತ್ತಾರೆ. ಇದನ್ನು ತಪ್ಪಿಸಬೇಕು, ಇದನ್ನು ತಪ್ಪಿಸಿ ೮ ಗಂಟೆ ಸ್ಟ್ರಿಕ್ಟ್ ಆಗಿ ಡ್ಯೂಟಿ ಕೊಡಬೇಕು. ಕೆಎಸ್‌ಆರ್‌ಟಿಸಿಯಲ್ಲಿ ಒಬ್ಬ ಡ್ರೈವರ್ ೬–೭ ಗಂಟೆ ಕೆಲಸ ಮಾಡಿದನಂತರ ಅವನನ್ನು ಮತ್ತೆ ಡ್ಯೂಟಿಗೆ ಹಾಕಿ ಡಬಲ್ ಪಗಾರ ಕೊಡುತ್ತಾರೆ. ಇದು ಆಗಬಾರದು ನಮ್ಮಲ್ಲಿ ಸಾಕಷ್ಟು ಸಿಬ್ಬಂದಿ ಇದ್ದರೂ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇದರಿಂದ ಕೆಎಸ್‌ಆರ್‌ಟಿಸಿ ಬೊಕ್ಕಸದ ಹಣ ನೌಕರರಿಗೆ ಹೋಗುತ್ತಿದೆ. ಕೆಎಸ್‌ಆರ್‌ಟಿಸಿ ಡಿವಿಜನಲ್ ಕಂಟ್ರೋಲರ್ ತಮಗೆ ಗೌರವ ಬರಬೇಕೆಂದು ತಮಗೆ ಹೆಸರು ಬರಬೇಕೆಂದು ಬಸ್‌ಗಳನ್ನು ಬಿಡುತ್ತಾರೆ. ಬೆಳಗಾಂ ಮತ್ತು ಹುಬ್ಬಳ್ಳಿ ಡಿವಿಜನ್‌ನವರು ಹೆಚ್ಚು ಬಸ್‌ಗಳನ್ನು ಬಿಡುತ್ತಾರೆ. ಬೆಳಗಾಂ ಡಿವಿಜನ್ ಬಸ್ ಬಿಟ್ಟ ೧೦ ನಿಮಿಷದ ನಂತರ ಹುಬ್ಬಳ್ಳಿ ಡಿವಿಜನ್ ಬಸ್ ಹೋಗುತ್ತದೆ, ಒಂದು ಬಸ್ ಖಾಲಿ ಹೋಗುತ್ತದೆ, ಇನ್ನೊಂದು ಬಸ್ ಭರ್ತಿಯಾಗಿ ಹೋಗುತ್ತದೆ. ಇದರಿಂದ ಕೂಡ ನಮಗೆ ಹಾನಿಯಾಗುತ್ತದೆ. ಇದನ್ನು ತಾವು ತಪ್ಪಿಸಬೇಕು. ಮತ್ತೊಂದು ವಿಚಾರವೇನೆಂದರೆ ಬಸ್ ನಿಲ್ದಾಣದಲ್ಲಿ ಖಾಸಗಿ ಬಸ್‌ಗಳು ಹಾಗೂ ಖಾಸಗಿ ಟೆಂಪೋಗಳು ಬಸ್ ನಿಲ್ದಾಣದೊಳಕ್ಕೆ ಬಂದು ಬಸ್‌ನಲ್ಲಿ ಕುಳಿತಂತಹವರನ್ನು ಕೆಳಕ್ಕೆ ಇಳಿಸಿ ಟೆಂಪೋಗಳಿಗೆ ಹತ್ತಿಸುವಂತಹ ಪ್ರಯತ್ನ ಮಾಡುತ್ತಾರೆ. ಇದನ್ನು ವಿಚಾರಣೆ ಮಾಡಬೇಕು. ಇವುಗಳನ್ನು ತಪ್ಪಿಸಿದರೆ ಹೆಚ್ಚು ಹಣ ಕೆಎಸ್‌ಆರ್‌ಟಿಸಿಗೆ ಬರುತ್ತದೆ. ಇನ್ನು ಡ್ಯೂಟಿ ಮುಗಿಸಿ ಇವತ್ತು ಬರುತ್ತಾರೆ ಎಂದರೆ ಅವರನ್ನೇ ಮತ್ತೆ ಡ್ಯೂಟಿಗೆ ಅಂದೇ ಕಳಿಸುತ್ತಾರೆ. ಇದರಿಂದ ಅವರಿಗೆ ಡಬಲ್, ತ್ರಿಬ್ಬಲ್ ಹಣ ಕೊಡಬೇಕಾಗುತ್ತದೆ ಇದನ್ನು ತಪ್ಪಿಸಬೇಕು. ಕೆಎಸ್ ಆರ್‌ಟಿಸಿಯಲ್ಲಿ ೫೦ ಸಾವಿರ ಕೆಲಸಗಾರರು ಇದ್ದರೆ ಡ್ರೈವರ್ ಕಂಡಕ್ಟರ್ಸ್ ಎಲ್ಲಾ ಸೇರಿದರೆ ಅದರಲ್ಲಿ ಹೆಚ್ಚು ಜನ ಗೈರು ಹಾಜರಾಗಿರುತ್ತಾರೆ, ಇದರಿಂದಾಗಿ ಆ ಕೆಲಸಕ್ಕೆ ಬೇರೆಯವರನ್ನು ಹೆಚ್ಚಿಗೆ ಪಗಾರ ಕೊಟ್ಟು ಕಳಿಸುತ್ತಾರೆ ಇಂತಹ ಅಬ್ಸೆಂಟೀಸ್ ಬಗ್ಗೆ ಸ್ಟ್ರಿಕ್ಟ್ ಆಗಿ ಕ್ರಮ ತೆಗೆದುಕೊಂಡು ಅವರನ್ನು ಮನೆಗೆ ಕಳಿಸುವಂತಹ ವ್ಯವಸ್ಥೆ ಮಾಡಬೇಕು. ಕೆಲಸಕ್ಕೆ ಬರುವಾಗ ೫–೧೦–೨೦ ಸಾವಿರ ರೂಪಾಯಿಗಳನ್ನು ಕೊಟ್ಟು ಕೆಲವು ಕಡೆ ಬಂದಿರುತ್ತಾರೆ. ೧೫ ದಿವಸದಲ್ಲಿ ಗೈರು ಹಾಜರಾಗುತ್ತಾರೆ, ಇದರ ಬಗ್ಗೆ ಗಮನ ಕೊಡಬೇಕು. ಕೆಎಸ್‌ಆರ್‌ಟಿಸಿಯಲ್ಲಿ ಸಾಕಷ್ಟು ಜನ ಅಧಿಕಾರಿಗಳು ದೊಡ್ಡ ದೊಡ್ಡ ಹುದ್ದೆಗಳಲ್ಲಿದ್ದಾರೆ ಇನ್ನು ಮೇಲೆ ಇಂತಹ ದೊಡ್ಡ ಅಧಿಕಾರಿಗಳನ್ನು ನೇಮಿಸದೆ ಕಂಡೆಕ್ಟರ್ಸ್ ಫಸ್ಟ್ ಡಿವಿಜನ್ ಕ್ಲಾರ್ಕ್ ಇಂತಹವರನ್ನು ನೇಮಿಸಿ ಅವರಿಂದ ಕೆಲಸ ಮಾಡಿಸುವಂತಹ ಕಾರ್ಯ ಇನ್ನು ಮುಂದೆ ತಮ್ಮಿಂದ ಆಗಬೇಕು. ಇನ್ನು ಕಾರ್‌ಗಳು, ಜೀಪುಗಳು ಇವರಲ್ಲಿದೆ ಇವುಗಳು ಸಾಕಷ್ಟು ಕಡೆಗೆ ಅಂದರೆ ಬಜಾರ್‌ಗೆ ಸಿನಿಮಾಕ್ಕೆ ಮತ್ತೊಂದು ಕಡೆ ಹೋಗುತ್ತವೆ. ಇವು ಮಿಸ್‌ಯೂಸ್ ಆಗದ್ದಂತೆ ನೋಡಿಕೊಳ್ಳುವಂತಹ ಜವಾಬ್ದಾರಿ ಸ್ಥಳೀಯ ಅಧಿಕಾರಿಗಳಿಗೆ ಇದೆ. ಅವರು ಅದನ್ನು ಸರಿಯಾಗಿ ಮಾಡುವಂತೆ ಸರಕಾರ ಗಮನ

ಕೊಡಬೇಕು, ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಇದರ ಬಗ್ಗೆ ಪ್ರಯತ್ನ ಮಾಡಬೇಕು. ಇದಲ್ಲದೆ ಇವರೆಲ್ಲರೂ ಓಡಾಡುವಂತಹ ಜೀಪ್ ಕಾರ್‌ಗಳು ಪೆಟ್ರೋಲ್‌ನಿಂದ ನಡೆಯುತ್ತವೆ. ಇವತ್ತು ಪೆಟ್ರೋಲ್ ಎಷ್ಟು ಕಾಸ್ಟ್ಲೀ ಇದೇ ಎನ್ನುವುದನ್ನು ನಾನು ಹೇಳಬೇಕಾಗಿಲ್ಲ. ಡಿಸೇಲ್ ಗಾಡಿಗಳಾದರೆ ಕಾಸ್ಟ್ ಕಡಿಮೆಯಾಗುತ್ತದೆ. ಇನ್ನು ಕೆಎಸ್‌ಆರ್‌ಟಿಸಿಯಲ್ಲಿ ಲಗೇಜ್‌ಗೆ ಹಣವನ್ನು ತೆಗೆದುಕೊಳ್ಳುತ್ತಾರೆ ಕೆಲವು ಸಲ ಬಿಡುತ್ತಾರೆ, ಇದರಿಂದ ಲಾಸ್ ಆಗುತ್ತಿದೆ. ಇದನ್ನು ಸರಿಯಾಗಿ ವಸೂಲು ಮಾಡಿದರೆ ಸಾಕಷ್ಟು ಲಾಭವಾಗುತ್ತದೆ ಎನ್ನುವ ಮಾತನ್ನು ಯಾರೂ ಕೂಡ ಅಲ್ಲಗೆಳೆಯಲಾರರು. ಇದನ್ನು ತೆಗೆದುಕೊಳ್ಳುವುದಕ್ಕೆ ಪ್ರತಿಯೊಂದು ಬಸ್ ಸ್ಟ್ಯಾಂಡ್‌ನವರೂ ಕೂಡ ಮೀನಾಮೇಷ ಮಾಡುತ್ತಾರೆ. ಇದು ಆಗಬಾರದು. ಲಗೇಜ್ ಚಾರ್ಜ್ ತೆಗೆದುಕೊಳ್ಳುವಂತಹ ಸಂಪ್ರದಾಯವನ್ನು ಇಲಾಖೆಯವರು ಹಾಕಿಕೊಳ್ಳಬೇಕು. ಇದರಿಂದ ಸಾಕಷ್ಟು ಆದಾಯ ಬರುತ್ತದೆ. ಇನ್ನು ನಮ್ಮ ಮನೆತನದಲ್ಲಿ ಆಪರೇಟರ್ ಆಗಿದ್ದೆನು. ಅಲ್ಲಿನ ಡ್ರೈವರ್‌ಗಳಿಗೆ ಈ ಹಿಂದೆ ೨೯ ಬಸ್‌ಗಳ ಮಾಲೀಕತ್ವವನ್ನು ಪಡೆದಿತ್ತು, ಆಗ ಹುಬ್ಬಳ್ಳಿಯಿಂದ ರಾಣಿಬೆನ್ನೂರಿಗೆ ಹೋಗುವಂತಹ ಕಡೆಗೆ ೨೦೦ ರೂಪಾಯಿ ಕಲೆಕ್ಷನ್ ಆಗುತ್ತಿತ್ತು, ಅದನ್ನು ೨೭೦ ಇಲ್ಲವೇ ೨೮೦ ಕಲೆಕ್ಷನ್ ಏನಾದರೂ ಅವರು ಮಾಡಿದರೆ ಆತನಿಗೆ ಇಂತಿಷ್ಟು ಹಣವೆಂದು ಖುಷಿ ಎಂದು ಕೊಡುತ್ತಿದ್ದೆವು. ಅದೇ ರೀತಿಯಾಗಿ ಇಲ್ಲೂ ಕೂಡ ಒಂದು ರೂಟಿನಲ್ಲಿ ಇಷ್ಟು ಕಲೆಕ್ಷನ್ ಆಗುವ ಕಡೆಯಲ್ಲಿ ೩೦೦ ರೂಪಾಯಿ ಹೆಚ್ಚಿಗೆ ತೆಗೆದುಕೊಂಡು ಬಂದರೆ ಬೋನಸ್ ಎಂದು ಆತನಿಗೆ ಕಾಣಿಕೆ ಕೊಟ್ಟರೆ ಹಣ ಹೆಚ್ಚಾಗಿ ಬರುತ್ತದೆ. ಅವರೂ ಕೂಡ ಪ್ರೀತಿಯಿಂದ ಹೆಚ್ಚು ಹಣ ತರುವುದಕ್ಕೆ ಪ್ರಯತ್ನ ಮಾಡುತ್ತಾರೆಂಬ ಮಾತನ್ನು ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇನ್ನು ಅಪಾಯಿಂಟ್‌ಮೆಂಟ್ ಆಫ್ ಬೋರ್ಡ್ ಆಫ್ ಡೈರೆಕ್ಟರ್ಸ್ ಅಂದರೆ ಡಿವಿಜನಲ್ ಅಡ್ವೈಜರಿ ಕಮಿಟಿಗಳು. ಇವು ಇವತ್ತು ಇಲ್ಲವೇ ಇಲ್ಲ. ಈ ಕೆಲಸವನ್ನು ಸರ್ಕಾರದ ಆಡಳಿತಾಧಿಕಾರಿಗಳೇ ಮಾಡುತ್ತಿದ್ದಾರೆ. ಜನರ ಪ್ರತಿನಿಧಿಗಳಾದ ನೀವು ಜನರ ಆಸೆಯನ್ನು ಪೂರೈಸುವಂಥ ಕೆಲಸವನ್ನು ಮಾಡಬೇಕು. ಈ ನಾಮಕರಣವನ್ನು ಮಾಡುವಾಗಲೂ ಕೂಡ ಈ ಉದ್ಯೋಗದಲ್ಲಿ ಪಳಗಿದವರನ್ನು, ಸಾಕಷ್ಟು ಕೆಲಸಮಾಡಿ ಚೆನ್ನಾಗಿ ಅನುಭವ ಇರುವವರನ್ನು ನಾಮಕರಣ ಮಾಡುವಾಗ ಪ್ರಾಶಸ್ತ್ಯ ಕೊಡಬೇಕು. ಅಂಥವರಿಗೆ ಪ್ರಾಶಸ್ತ್ಯವನ್ನು ಕೊಡದಿದ್ದರೆ ಆಡಳಿತದಲ್ಲಿ ಬಿಗಿ ಬರುವುದಿಲ್ಲ, ಕಂಟ್ರೋಲ್ ಬರುವುದಿಲ್ಲ. ಆಡಳಿತವನ್ನು ನಡೆಸುವಂಥ ಬೋರ್ಡ್ ಏನಿದೆ ಅದು ಚೆನ್ನಾಗಿ ದಕ್ಷತೆಯಿಂದ ಕೆಲಸ ಮಾಡುವುದಕ್ಕಾಗುವುದಿಲ್ಲ.

ಇನ್ನು ಡೆವಲಪ್‌ಮೆಂಟ್ ಆಕ್ಟಿವಿಟೀಸ್‌ನ್ನು ಮಾಡುವಾಗ ಇಂಜಿನಿಯರಿಂಗ್ ವಿಭಾಗ ಏನಿದೆ ಅದು ಸಾಕಷ್ಟು ಕೆಲಸವನ್ನು ವೇಗವಾಗಿ ಮಾಡುತ್ತಿಲ್ಲವೆಂದು ನಾನು ಹೇಳಬೇಕಾಗಿದೆ. ಯಾವುದೇ ಒಂದು ಕೆಲಸವನ್ನಾಗಲಿ ಎಷ್ಟು ದಿವಸದಲ್ಲಿ ಮಾಡುತ್ತಾರೆಂಬುದನ್ನು ದಯವಿಟ್ಟು ಪರಿಶೀಲಿಸಬೇಕು. ಅವರು ತಡವಾಗಿ ಮಾಡುವುದಕ್ಕೆ ಕಾರಣ ಅವರ ಅಲಕ್ಷ್ಯತನ ಎಂದು ಹೇಳುವುದಕ್ಕಾಗುವುದಿಲ್ಲ ಏಕೆಂದರೆ ಅವರಿಗೆ ಬೇಕಾದ ಸಿಬ್ಬಂದಿ ಇರುವುದಿಲ್ಲ. ಜೂನಿಯರ್ ಇಂಜಿನಿಯರ್ ಇರುವುದಿಲ್ಲ, ಓವರ್‌ಸಿಯರ್ಸ್ ಇರುವುದಿಲ್ಲ. ಬೇರೆಯವರೂ ಇರುವುದಿಲ್ಲ. ಎಲ್ಲಾ ಕೆಲಸವನ್ನೂ ಕೂಡ ಕೇವಲ ಇಂಜಿನಿಯರೇ ಮಾಡಬೇಕೆಂಬ ಕಡ್ಡಾಯವಿದೆ. ಆದ್ದರಿಂದ ಇದರ ಬಗ್ಗೆ ಕೂಡ ತಾವು ವಿಚಾರ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ಮಾನ್ಯ ಸಿಂಧ್ಯರವರು ಕಾನೂನು ವಿಭಾಗದಲ್ಲಿ ಏನೇನು ಅಚಾತುರ್ಯ ನಡೆಯುತ್ತವೆ ಎನ್ನುವ ಬಗ್ಗೆ ಹೇಳಿದರು. ಅಲ್ಲಿ ನಡೆಯುವಂಥ ಅಚಾತುರ್ಯಗಳು ಬಹಳ. ನನಗೆ ತಿಳಿದಂತೆ ನಿಮ್ಮ ಕೆಎಸ್‌ಆರ್‌ಟಿಸಿಯಲ್ಲಿ ಈ ಕಾನೂನು ವಿಭಾಗ ಇಲ್ಲದೇ ಇದ್ದಿದ್ದರೆ ಒಳ್ಳೆಯದಿತ್ತೋ ಏನೋ ಎಂದು ನನಗೆ ಅನಿಸುತ್ತದೆ. ಏಕೆಂದರೆ ಅಲ್ಲಿ ಸಾವಿರಾರು ಕೇಸುಗಳಿವೆ. ಅವುಗಳು ಸರಿಯಾಗಿ ತೀರ್ಮಾನವಾಗುವುದಿಲ್ಲ. ಆ ಎಲ್ಲ ಕೇಸುಗಳನ್ನೂ ತೆಗೆದುಕೊಂಡುಹೋಗಿ ಒಬ್ಬ ವಕೀಲನಿಗೆ ಕೊಡುತ್ತಾರೆ. ಇವರು ಕೊಡತಕ್ಕದ್ದು ಒಂದೊಂದು ಕೇಸಿಗೆ ೩೦೦ ರೂ.ಗಳು ಈ ೩೦೦ ರೂಪಾಯಿಗಳನ್ನು ತೆಗೆದುಕೊಂಡು ಯಾವ ವಕೀಲ ತಾನೆ ಸರಿಯಾಗಿ ಕೆಲಸ ಮಾಡುತ್ತಾನೆ. ಈ ಕೇಸುಗಳಾದರೋ ೬ ತಿಂಗಳು, ವರ್ಷ, ಎರಡು ವರ್ಷ ನಡೆಯುವುದಿಲ್ಲ. ಲೇಬರ್ ಕೋರ್ಟ್‌ನಲ್ಲಿ ೮–೧೦ ವರ್ಷಗಳವರೆಗೂ ನಡೆಯುತ್ತವೆ. ಕೇವಲ ೩೦೦ ರೂಪಾಯಿಗಳನ್ನು ತೆಗೆದುಕೊಂಡ ವಕೀಲ ೮–೧೦ ವರ್ಷಗಳವರೆಗೆ ಕೇಸನ್ನು ನಡೆಸುವುದಾದರೆ ಆ ವ್ಯಕ್ತಿಯಿಂದ ನಮಗೆ ನಿಜವಾಗಿಯೂ ನ್ಯಾಯ ದೊರಕುತ್ತದೆಯೋ, ಎಂಬುದನ್ನು ನೋಡಬೇಕು. ಅವರಿಗೆ ಕೊಟ್ಟಂಥ ಕೇಸುಗಳಲ್ಲಿ ಎಷ್ಟು ಇತ್ಯರ್ಥವಾಗಿವೆ? ಇತ್ಯರ್ಥವಾದವುಗಳ ಪೈಕಿ ಎಷ್ಟು ನಮ್ಮ ಪರವಾಗಿವೆ, ಎಷ್ಟು ನಮಗೆ ವಿರುದ್ಧವಾಗಿವೆ ಎಂದು ನೋಡಿದರೆ ನೂರಕ್ಕೆ ೯೦ರಷ್ಟು ಕೇಸುಗಳು ನಮಗೆ ವಿರುದ್ಧವಾಗಿಯೇ ತೀರ್ಮಾನವಾಗಿವೆ. ಒಂದೊಂದು ಕಡೆ ಒಂದೂವರೆ, ಎರಡು ಲಕ್ಷ ರೂಪಾಯಿಗಳವರೆಗೂ ಬ್ಯಾಕ್‌ವೇಜಸ್‌ನ್ನು ಕೊಡುವಂತೆ ಕೋರ್ಟ್‌ನವರು ಆದೇಶವನ್ನು

ಮಾಡಿದ್ದಾರೆ. ನಮ್ಮ ವಕೀಲರು ಸರಿಯಾಗಿ ಕೇಸುಗಳನ್ನು ನಡೆಸದೇ ಇರುವುದರಿಂದ ನಮ್ಮ ಕೆಎಸ್‌ಆರ್‌ಟಿಸಿಯವರು ಇಷ್ಟೊಂದು ಹಣವನ್ನು ಕೊಡಬೇಕಾಗುತ್ತದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಹೆಚ್ಚಿನ ಗಮನ ಹರಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಇವತ್ತು ಈ ವಕೀಲರು ಯಾರಿದ್ದಾರೆ ಅವರಿಗೆ ಪ್ರಾಕ್ಟಿಕಲ್ ಆಗಿ ಸಾಕಷ್ಟು ಅನುಭವ ಇರುವುದಿಲ್ಲ. ಇದಕ್ಕೆ ನನ್ನ ಒಂದು ಸಲಹೆ ಎಂದರೆ ಈ ಕೇಸುಗಳನ್ನು ನಡೆಸುವುದಕ್ಕೆ ನಿವೃತ್ತರಾದ ಡಿಸ್ಟ್ರಿಕ್ಟ್ ಜಡ್ಜ್‌ಗಳನ್ನು ಯಾರನ್ನಾದರೂ ನೇಮಕ ಮಾಡಿದರೆ ಅವರು ಚೆನ್ನಾಗಿ ನಡೆಸುತ್ತಾರೆ. ಏಕೆಂದರೆ ಅವರಿಗೆ ಕಾಯಿದೆಯ ಜ್ಞಾನ ಚೆನ್ನಾಗಿರುತ್ತದೆ. ಇನ್ನೊಂದು ವಿಚಾರ ಹೇಳುವುದಾದರೆ, ದಂಡಾಧಿಕಾರಿಗಳು ಕೊಡತಕ್ಕ ತೀರ್ಮಾನ ಏನಿದೆ, ಅದು ಕೋರ್ಟಿಗೆ ಹೋದಾಗ ಅವರು ಮಾರಿರತಕ್ಕದ್ದು ತಪ್ಪು, ಇದು ಕಾಯಿದೆಗೆ ಅನುಗುಣವಾಗಿಲ್ಲ ಆದ್ದರಿಂದ ಈ ಕೇಸ್‌ವನ್ನು ಡಿಸ್‌ಮಿಸ್ ಮಾಡಲಾಗಿದೆ. ಆ ಕಾರ್ಮಿಕರಿಗೆ ಕಳೆದ ೧೦ ವರ್ಷಗಳ ಪಗಾರವನ್ನು ಕೊಡಬೇಕು ಮತ್ತು ಅವನನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡುತ್ತಾರೆ. ಇಂಥ ಸಾವಿರಾರು ಕೇಸುಗಳು ಇವತ್ತು ನಿಮ್ಮ ಮುಂದಿವೆ. ಆದ್ದರಿಂದ ದಯವಿಟ್ಟು ಇಂಥಾದ್ದು ಮಾಡುವುದಕ್ಕೆ ಹೋಗಬೇಡಿ. ನಾವು ಏನು ಈ ಸಂಸ್ಥೆಗೆ ಹಣವನ್ನು ಕೊಡುತ್ತೇವೆ ಅದರ ಬಗ್ಗೆ ಮಾನ್ಯ ಮಂತ್ರಿಗಳು ಹೆಚ್ಚು ಗಮನ ಹರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ನಾನು ಇಷ್ಟು ಸಲಹೆಗಳನ್ನು ಕೊಟ್ಟು ಈ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಕೆಲಸ ಮಾಡಿ ನಿವೃತ್ತರಾದ ಜನರ ಬಗ್ಗೆ ಸ್ವಲ್ಪ ನೀವು ನಿಗಾವಹಿಸಬೇಕು, ಚಿಂತನೆ ಮಾಡಬೇಕೆಂದು ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಅವರು ೨೫-೩೦ ವರ್ಷಗಳವರೆಗೆ ನಿಮ್ಮ ಸಂಸ್ಥೆಯಲ್ಲಿ ಒಳ್ಳೆಯ ಕೆಲಸ ಮಾಡಿ ನಿವೃತ್ತರಾಗಿದ್ದಾರೆ. ಅವರ ಬೇಡಿಕೆಗಳೇನಿವೆ, ಅವುಗಳನ್ನು ಈಡೇರಿಸಬೇಕು ಅವರೇನು ದೊಡ್ಡ ಬೇಡಿಕೆಗಳನ್ನು ಇಟ್ಟಿಲ್ಲ. ನಮಗೆ ಬಸ್ ಪಾಸ್ ಕೊಡಿ ಎಂದು ಕೇಳುತ್ತಾರೆ. ರೈಲ್ವೆಯಲ್ಲಿ ಸಾಯುವವರೆಗೆ ಹೇಗೆ ಪಾಸ್ ಕೊಡುತ್ತಾರೆ ಹಾಗೆ ನಮಗೆ ಬಸ್ ಪಾಸ್ ಕೊಡಲಿ ಎಂದು ಕೇಳುತ್ತಾರೆ. ಅಲ್ಲಿ ೧೯೮೮ ರಿಂದ ಪ್ರೈಸ್ ಕೊಡುವುದಕ್ಕೆ ಹತ್ತಿದ್ದೀರಿ, ಅಂಥದ್ದು ನಮಗೂ ಕೊಡಿ ಎಂದು ಕೇಳುತ್ತಾರೆ. ಈ ವ್ಯವಸ್ಥೆ ಗುಜರಾತ್‌ನಲ್ಲಿ ಇದೆ, ಮಹಾರಾಷ್ಟ್ರದವರು ಮಾಡುವವರಿದ್ದಾರೆ. ಅವರು ಮಾಡಿದಂತಹ ಸೇವೆಗೆ ನೀವು ಒಂದು ಗೌರವ ಕೊಡುವಂತಹ ಕೆಲಸ ಮಾಡಿದರೆ ಬಹಳ ಒಳ್ಳೆಯದಾಗುತ್ತದೆ. ವೈದ್ಯಕೀಯ ಸೌಲಭ್ಯ ಕೊಡಿ ಎಂದು ಕೇಳುತ್ತಾರೆ. ಅದನ್ನು ಕೊಟ್ಟರೆ ನಿಮ್ಮದು ಕೋಟಿಗಟ್ಟಲೆ ಹಣ ಏನು ಹೋಗುವುದಿಲ್ಲ. ಅವರು ಇರುವುದು ೪ ಸಾವಿರ ಜನ ಮಾತ್ರ, ಅದರಲ್ಲಿ ೨ ಸಾವಿರ ಜನ ಈಗಾಗಲೇ ಸ್ವರ್ಗಲೋಕಕ್ಕೆ ಹೋಗಿದ್ದಾರೆ. ಇನ್ನು ಒಂದು ಸಾವಿರ ಜನರಿಗೆ ಓಡಾಡುವುದಕ್ಕೆ ಆಗುವುದಿಲ್ಲ. ಇರುವಂತಹ ಒಂದು ಸಾವಿರ ಜನರಿಗೆ ಅನುಕೂಲ ಮಾಡಿಕೊಟ್ಟರೆ ಬಹಳ ಉಪಕಾರವಾಗುತ್ತದೆ. ಕೆ ಎಸ್.ಆರ್ ಟಿ.ಸಿ.ಯಲ್ಲಿ ೨೫–೩೦ ವರ್ಷ ಸೇವೆ ಮಾಡಿದವರಿಗೆ ಈ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ಸಲಹೆ ಮಾಡಿ ನಮ್ಮ ಉತ್ತರ ಕರ್ನಾಟಕದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಹುಬ್ಬಳ್ಳಿ ರೀಜನಲ್ ಆಫೀಸ್ ಇವತ್ತು ೪ ದೊಡ್ಡ ಜಿಲ್ಲೆಗಳಿಂದ ಕೂಡಿದಂತಹ ಒಂದು ಆಫೀಸ್ ಆಗಿದೆ. ಹುಬ್ಬಳ್ಳಿ ರೀಜನಲ್ ಆಫೀಸನ್ನು ಕಂಟ್ರೋಲ್ ಮಾಡಬೇಕಾದರೆ ಎಂತಹ ಅಧಿಕಾರಿ ಬಂದರೂ ಆಗುವುದಿಲ್ಲ. ಆದ್ದರಿಂದ ಇದನ್ನು ಎರಡು ವಿಭಾಗಗಳನ್ನಾಗಿ ಮಾಡಬೇಕು, ಬೆಳಗಾಂ ಬಿಜಾಪುರ ಒಂದು ಮಾಡಬೇಕು ಧಾರವಾಡ ಮತ್ತು ಕಾರವಾರವನ್ನು ಒಂದು ಡಿವಿಜನ್ ಮಾಡಿದರೆ ಒಳ್ಳೆಯದಾಗುತ್ತದೆ. ಇದರಿಂದ ಆದಾಯದಲ್ಲಿ ಚುರುಕುತನ ಬರುತ್ತದೆ. ಆದಾಯದಲ್ಲಿ ಸೋರಿಕೆಯಾಗುವುದು ಕಡಿಮೆಯಾಗುತ್ತದೆಂದು ಹೇಳಬಯಸುತ್ತೇನೆ. ಹುಬ್ಬಳ್ಳಿ–ಧಾರವಾಡ ನಗರ ಮತ್ತು ಗ್ರಾಮಾಂತರಕ್ಕೆ ಸಬ್‌ಡಿವಿಷನ್ ಮಾಡುವುದಕ್ಕೆ ವ್ಯವಸ್ಥೆ ಮಾಡಿಕೊಡಬೇಕು. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂಬುದಕ್ಕೆ ಸಬ್ ಸ್ಟ್ಯಾನ್‌ಷಿಯಲ್ ರೀಸನ್ಸ್ ಕೊಡಬಯಸುತ್ತೇನೆ. ಹುಬ್ಬಳ್ಳಿ–ಧಾರವಾಡ ಒಂದು ಡಿವಿಜನ್ ಮಾಡುವುದಕ್ಕೆ ೧೯೯೯–೨೦ನೇ ಇಸವಿಯ ಫಿಗರ್ಸ್ ಕೊಡುವುದಾದರೆ, ಹುಬ್ಬಳ್ಳಿ ಗ್ರಾಮಾಂತರಕ್ಕೆ ೫೯.೪೮ ಲಕ್ಷ ರೂಪಾಯಿ ಆದಾಯ ಇದೆ, ಹುಬ್ಬಳ್ಳಿ ನಗರಕ್ಕೆ ೪೫.೪೮ ಲಕ್ಷ ರೂಪಾಯಿ ಇದೆ. ಧಾರವಾಡ ನಗರಕ್ಕೆ ೫೯.೬೬ ಲಕ್ಷ ರೂಪಾಯಿ ಆದಾಯ ಇದೆ. ಹೀಗೆ ಒಟ್ಟು ೧೫೪.೫೬ ಲಕ್ಷ ರೂಪಾಯಿ ಆದಾಯ ಆಗುತ್ತದೆ. ಹೀಗೆ ಒಟ್ಟು ೨೦ ಕೋಟಿ ರೂಪಾಯಿಗಳ ಆದಾಯ ಹುಬ್ಬಳ್ಳಿ–ಧಾರವಾಡ ನಗರ ಹಾಗೂ ಗ್ರಾಮಾಂತರಕ್ಕೆ ಬರುತ್ತದೆ. ಬಸ್ಸುಗಳು ಹುಬ್ಬಳ್ಳಿ ಗ್ರಾಮಾಂತರಕ್ಕೆ ೧೦೦, ನಗರಕ್ಕೆ ೧೩೨, ಧಾರವಾಡ ನಗರಕ್ಕೆ ೧೧೩ ಹೀಗೆ ಒಟ್ಟು ೩೪೫ ಬಸ್ಸುಗಳಿವೆ. ಇನ್ನು ಕೆಲಸಗಾರರು ಎಷ್ಟಿದ್ದಾರೆಂದರೆ ಸುಮಾರು ೨೫೦೦ ಜನ ಕಾರ್ಮಿಕರು ಹುಬ್ಬಳ್ಳಿ ಧಾರವಾಡ ಮಹಾನಗರ ಕಾರ್ಪೋರೇಷನ್ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಮಾಡುತ್ತಾರೆ. ವಾಹನಗಳ ಸಂಖ್ಯೆ ಹುಬ್ಬಳ್ಳಿ ಗ್ರಾಮಾಂತರದಲ್ಲಿ ೧೧೭ ಇದ್ದರೆ ಹುಬ್ಬಳ್ಳಿ ನಗರದಲ್ಲಿ ೧೪೮, ಧಾರವಾಡ ನಗರದಲ್ಲಿ ೧೩೪ ಹೀಗೆ ಒಟ್ಟು ೩೯೯ ಬಸ್ಸುಗಳು ಇವೆ. ಇನ್ನೂ ೫೦ ಬಸ್ಸುಗಳು ನಮಗೆ ಬೇಕಾಗುತ್ತವೆ.

ಅವುಗಳನ್ನು ಕೂಡಲೇ ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಪ್ರತಿ ಕಿಲೋಮೀಟರ್‌ಗೆ ಆದಾಯ ಎಷ್ಟು ಬರುತ್ತದೆಂದರೆ ಹುಬ್ಬಳ್ಳಿ ಗ್ರಾಮಾಂತರಕ್ಕೆ ಆದಾಯ ೫.೬೪ ರೂಪಾಯಿಗಳು, ಹುಬ್ಬಳ್ಳಿ ನಗರಕ್ಕೆ ೪.೭೩ ರೂಪಾಯಿಗಳು, ಧಾರವಾಡಕ್ಕೆ ೪.೮೨ ರೂಪಾಯಿಗಳು ಬರುತ್ತಿದೆ. ನೀವು ನೂತನ ವಿಭಾಗವನ್ನು ಮಾಡಿದರೆ ಹುಬ್ಬಳ್ಳಿ-ಧಾರವಾಡ ಮಹಾನಗರ ಜನ ಆಡಳಿತದಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಾರೆ. ಮತ್ತು ಅಲ್ಲಿ ಜನರಿಗೆ ಅಧಿಕಾರ ಚಲಾಯಿಸುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಅಲ್ಲಿ ದಯಮಾಡಿ ನೂತನ ವಿಭಾಗವನ್ನು ಮಾಡಬೇಕು. ಇನ್ನೊಂದು ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಉತ್ತರ ಕರ್ನಾಟಕದಲ್ಲಿ ಎರಡು ಬಸ್ ಹೊರಟರೆ ಒಂದು ಬಸ್ ಬ್ರೇಕ್ ಡೌನ್ ಆಗುತ್ತಿತ್ತು. ಅಂತಹ ಕಾಲ ಒಂದಿತ್ತು. ಮಾನ್ಯ ಸಿಂಧ್ಯ ಅವರು ಸಾರಿಗೆ ಮಂತ್ರಿಗಳಾಗಿ ಬಂದ ಮೇಲೆ ನಾವು ಹೊಸ ಗಾಡಿ ಮುಖ ನೋಡಿದೆವು. ಅವರನ್ನು ನಾವು ನೆನೆಸಿಕೊಳ್ಳಬೇಕಾಗಿದೆ. ಈಗ ಬಸ್ಸುಗಳು ಚೆನ್ನಾಗಿವೆ. ಆದರೆ ಲಗ್ಷುರಿ ಬಸ್ಸುಗಳು ನೋಡಿದರೆ ಯಾವುದಕ್ಕೂ ಬೇಡ ಅಂಥ ಸ್ಥಿತಿಯಲ್ಲಿವೆ. ಅವುಗಳ ರೀಪ್ಲೇಸ್ ಮಾಡಿ ಹೊಸ ಬಸ್ಸುಗಳನ್ನು ಕೊಡುವ ವ್ಯವಸ್ಥೆ ಮಾಡಬೇಕು. ಆಮೇಲೆ ಹುಬ್ಬಳ್ಳಿ-ಧಾರವಾಡ ನಗರ ಕರ್ನಾಟಕದ ಎರಡನೇ ಮಹಾನಗರ. ಅಲ್ಲಿ ಲಕ್ಷಾಂತರ ಜನರು ಓಡಾಡುತ್ತಾರೆ. ಅಲ್ಲಿ ಸುಸಜ್ಜಿತವಾದ, ನೂತನವಾದ ಮಾಡ್ರನ್ ಎಕ್ವಿಪ್‌ಮೆಂಟ್ಸ್ ಇರುವಂಥ ಬಸ್ ಸ್ಟ್ಯಾಂಡ್ ಇಲ್ಲದೇ ಇದ್ದರೆ ನಾಚಿಕೆಗೇಡು. ಹುಬ್ಬಳ್ಳಿ-ಧಾರವಾಡ ಪ್ರತಿನಿಧಿಗಳಾದರೂ ಹುಬ್ಬಳ್ಳಿ-ಧಾರವಾಡ ಮಹಾನಗರಕ್ಕೆ ಒಳ್ಳೆಯದು ಮಾಡಲಿಲ್ಲ ಎಂಬ ಭಾವನೆ ನಮ್ಮಲ್ಲಿದೆ. ೧೯೮೫-೮೬ರಲ್ಲಿ ೨೭ ಎಕರೆ ಜಮೀನನ್ನು ಕೆ.ಎಸ್.ಆರ್.ಟಿ.ಸಿ.ಯವರು ತೆಗೆದುಕೊಂಡಿದ್ದರು. ಅಲ್ಲಿ ಒಂದು ಬಸ್ ಸ್ಟ್ಯಾಂಡ್ ಕಟ್ಟಿಸಬೇಕೆಂದು ೫೦ ಲಕ್ಷ ರೂಪಾಯಿಗಳನ್ನು ಬಜೆಟ್‌ನಲ್ಲಿ ಪ್ರಾವಿಷನ್ ಕೂಡ ಮಾಡಿದ್ದರು. ಆದರೆ ರಾಮಕೃಷ್ಣ ಹೆಗಡೆಯವರು ಮತ್ತು ಬೊಮ್ಮಾಯಿಯವರು ಅಡಿಗಲ್ಲು ಹಾಕಿದರೂ ಇಲ್ಲಿಯವರೆಗೆ ಅಲ್ಲಿ ಒಂದು ಇಟ್ಟಿಗೆಯೂ ಬರಲಿಲ್ಲ, ಕಬ್ಬಿಣವೂ ಬರಲಿಲ್ಲ. ನೀವು ಈ ಬಗ್ಗೆ ಏನು ಪ್ಲಾನ್ ಮಾಡಿದ್ದೀರಿ ಎಂದು ನಾನು ಇಲ್ಲಿನ ಕೆ.ಎಸ್.ಆರ್.ಟಿ.ಸಿ. ಅಧಿಕಾರಿಗಳನ್ನು ಕೇಳಿದೆ. ಇದಕ್ಕೆ ಸುಮಾರು ೨ ಕೋಟಿ ರೂಪಾಯಿಗಳು ಬೇಕಾಗುತ್ತವೆ ಎಂದು ಅವರು ಹೇಳಿದರು. ಅದಕ್ಕೆ ಹುಬ್ಬಳ್ಳಿ-ಧಾರವಾಡ ಮಹಾನಗರ ಜನತೆಯ ಪರವಾಗಿ, ಮೂರೂ ಶಾಸಕರ ಪರವಾಗಿ ನಿಮ್ಮಲ್ಲಿ ಕೇಳಿಕೊಳ್ಳುತ್ತೇನೆ. ನೀವು ದಯಮಾಡಿ ಅಲ್ಲಿಗೆ ಒಂದು ಬಸ್ ಸ್ಟ್ಯಾಂಡನ್ನು ಆದಷ್ಟು ಜಾಗ್ರತೆ ಮಾಡಬೇಕು. ಎಷ್ಟು ಬೇಗ ಬಸ್ ಸ್ಟ್ಯಾಂಡ್ ಪ್ರಾರಂಭ ಮಾಡುತ್ತೀರೋ ಅಷ್ಟು ಬೇಗ ಜನತೆಗೆ ಒಳ್ಳೆಯದಾಗುತ್ತದೆ. ಅದನ್ನು ಮಾಡಬೇಕು ಎಂದು ಧಾರವಾಡ ಜಿಲ್ಲೆಯ ಶಾಸಕರ ಪರವಾಗಿ ಅತ್ಯಂತ ಕಳಕಳಿಯಿಂದ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನೊಂದು ವಿಷಾದದ ಮಾತು ಎಂದರೆ ಕೆ.ಎಸ್.ಆರ್.ಟಿ.ಸಿ.ಯವರು ಒಂದು ಆಸ್ಪತ್ರೆಯನ್ನು ಅಲ್ಲಿ ಕಟ್ಟಿಸಿದ್ದಾರೆ. ಅಲ್ಲಿಗೆ ಡಾಕ್ಟರ್ ಕುಲಕರ್ಣಿ ಎಂಬ ಒಬ್ಬರ ನೇಮಕವೂ ಆಯಿತು. ಆದರೆ ಅಲ್ಲಿ ಎಕ್ವಿಪ್‌ಮೆಂಟ್ಸ್ ಒಂದೂ ಇಲ್ಲ. ಆಸ್ಪತ್ರೆ ಏತಕ್ಕೆ ಕಟ್ಟಿಸಿದ್ದೀರಿ? ಡಾಕ್ಟರನ್ನು ಏತಕ್ಕೆ ನೇಮಿಸಿದ್ದೀರಿ? ಎಕ್ವಿಪ್‌ಮೆಂಟ್ಸ್ ಇಲ್ಲದಿದ್ದರೆ ಏನು ಪ್ರಯೋಜನ? ಅದಕ್ಕಾಗಿ ಸುಸಜ್ಜಿತವಾದ ಆಸ್ಪತ್ರೆ ಮಾಡಿ ಕೆ.ಎಸ್.ಆರ್.ಟಿ.ಸಿ. ಕಾರ್ಮಿಕರಿಗೆ ಔಷದೋಪಚಾರ ನೇರವಾಗಿ ಸಿಗುವಂತೆ ವ್ಯವಸ್ಥೆ ಮಾಡಬೇಕೆಂದು ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ರಾಣಿಬೆನ್ನೂರು ಬಸ್ ಸ್ಟ್ಯಾಂಡ್ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಅದನ್ನು ಯಾವಾಗ ಮಾಡುತ್ತೀರೋ ಗೊತ್ತಿಲ್ಲ. ದಯಮಾಡಿ ಅದನ್ನು ಆದಷ್ಟು ಜಾಗ್ರತೆ ಮಾಡಿ ಮುಗಿಸಿ. Now I will come to the Regional Workshop. It is the biggest workshop in North Karnataka and we turn out very good work from there. ಇಂಥ ಒಂದು ಸಂಸ್ಥೆ ಇರಬೇಕಾದರೆ ಆ ಸಂಸ್ಥೆಗೆ ಬೇಕಾದಂಥ ಜನರನ್ನು, ಟೆಕ್ನೀಷಿಯನ್‌ಗಳನ್ನು, ಆರ್ಟಿಸಾನ್‌ಗಳನ್ನು, ಹೆಲ್ಪರ್‌ಗಳನ್ನು ಕೊಡುವಂಥ ಕರ್ತವ್ಯ ನಿಮ್ಮದು. ಸುಮಾರು ೬೦೦ ಜನ ಆ ಸಂಸ್ಥೆಗೆ ಬೇಕಾಗಿದೆ. ಇದುವರೆಗೂ ಅದನ್ನು ಮಾಡಿದಂತೆ ಕಾಣಿಸಲಿಲ್ಲ. ಅದನ್ನು ದಯಮಾಡಿ ಮಾಡಿ ಎಂದು ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ಡಿವಿಷನ್‌ನಲ್ಲಿ ಸುಮಾರು ೮೦೦ ಬಸ್ಸುಗಳು ಓಡಾಡುತ್ತವೆ. ಆದರೆ ಅಲ್ಲಿ ಚೆಕಿಂಗ್ ಮಾಡುವವರು ೨೫ ಜನ. ನಾಲ್ಕು ಜಿಲ್ಲೆಗಳಿಗೆ ಸೇರಿ ಅಷ್ಟು ಜನ ಇದ್ದಾರೆ. ಹೀಗಾದರೆ ಯಾವ ಕಾಲಕ್ಕೆ ಕೆಲಸ ಆಗುತ್ತದೆ? ಮಾನ್ಯ ಸಾರಿಗೆ ಮಂತ್ರಿಗಳು ಯುವಕರಿದ್ದಾರೆ. ನೀವು ಈ ಸಂಸ್ಥೆಯನ್ನು ಸುಧಾರಿಸಬೇಕು, ಹಾನಿಯಾಗಬಾರದು, ಲಾಭದಾಯಕವಾಗಿ ಮಾಡಬೇಕು ಎಂದು ಹೊರಟಿದ್ದೀರಿ. ಅದಕ್ಕೆ ನನ್ನ ಸಲಹೆ ಏನೆಂದರೆ ಈ ಸಂಖ್ಯೆಯನ್ನು ಹೆಚ್ಚು ಮಾಡಬೇಕು. ಗವಗ್ ಡಿವಿಷನ್ ಮಾಡಿದರೆ ಒಳ್ಳೆಯದಾಗುತ್ತದೆ. ಅದನ್ನೂ ಕೂಡ ತಾವು ಮಾಡಿ.

ಇನ್ನು ಹುಬ್ಬಳ್ಳಿ–ಧಾರವಾಡಕ್ಕೆ ಮುಫ್ಯೂಸಿಯಲ್ ಏರಿಯಾವನ್ನು ಹೊಂದಾಣಿಕೆ ಮಾಡಿಕೊಂಡು ಡಿಪೋ ಒಂದನ್ನು ಮಾಡಬೇಕೆಂದು ಮಂಜೂರಾಗಿದೆ. ಆದರೆ ಆ ರೀತಿ ಮಂಜೂರಾಗಿದ್ದು ಕಾಗದದಲ್ಲೇ ಉಳಿದಿದೆ. ಕೃತಿಯಲ್ಲಿ ಬಂದಿಲ್ಲ. ಅದನ್ನು ಕೃತಿಯಲ್ಲಿ ತರಬೇಕೆಂದು ನಿಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಹುಬ್ಬಳ್ಳಿ–ಧಾರವಾಡ ಮಹಾನಗರ ಬಾಂಬೆ ಜೊತೆಯಲ್ಲಿ ಹೆಚ್ಚು ವ್ಯಾಪಾರ ಸಂಬಂಧ ಹೊಂದಿದೆ ಈಗ ಇರುವ ಬಸ್ಸುಗಳು ಸಾಲುವುದಿಲ್ಲ. ಇನ್ನೂ ಎರಡೂ ಬಸ್ಸುಗಳನ್ನು ಹೆಚ್ಚುವರಿಯಾಗಿ ಕೊಡಬೇಕು. ಅದೇ ರೀತಿ ಹುಬ್ಬಳ್ಳಿ–ಮೈಸೂರಿಗೂ ಬಸ್ಸುಗಳು ಇಲ್ಲ ಅಂತ ಅಲ್ಲ. ಆದರೆ ಈಗ ಇರುವ ಬಸ್ಸುಗಳು ಸಾಲದು. ಇನ್ನೂ ಹೆಚ್ಚುವರಿ ಬಸ್ಸುಗಳನ್ನು ಕೊಡಬೇಕು. ಹುಬ್ಬಳ್ಳಿ–ಬಾಂಬೆಗೆ ಎರಡು ಹೆಚ್ಚುವರಿ ಬಸ್ಸುಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಬ್ರೇಕ್‌ಡೌನ್ ಹಾಗೂ ಅಪಘಾತದ ಬಗ್ಗೆ ೧೯೮೪–೮೫ನೇ ಸಾಲಿನ ಅಂಕಿ ಅಂಶಗಳನ್ನು ನೋಡಿದರೆ ಬಹಳ ದುಃಖವಾಗುತ್ತದೆ. ಇದು ಏಕೆ ಆಗುತ್ತದೆಂಬುದನ್ನು ವಿಚಾರ ಮಾಡಬೇಕು. ಡ್ರೈವರ್‌ಗಳನ್ನು ನೇಮಕ ಮಾಡಿಕೊಳ್ಳಲಾಗುತ್ತದೆ. ಮಾನ್ಯ ಸಿಂಧ್ಯರವರು ಹೇಳಿದ ಹಾಗೆ ಅವರ ಕಡೆ ಫಸ್ಟ್ ಏಡ್ ಸರ್ಟಿಫಿಕೇಟ್ ಇರುವುದಿಲ್ಲ. ದುಡ್ಡು ಕೊಟ್ಟರೆ ಸರ್ಟಿಫಿಕೇಟ್ ಕೊಡುವ ಜನ ಇದ್ದಾರೆ. ೩೦೦–೫೦೦ ರೂಪಾಯಿಗಳನ್ನು ಕೊಟ್ಟರೆ ಲೈಸನ್ಸನ್ನು ಕೊಡುವ ಜನರಿದ್ದಾರೆ. ಅಂತಹ ಜನರನ್ನು ತೆಗೆದುಕೊಂಡು, ೧೮೦–೧೯೬ ಜನರ ಜೀವನವನ್ನು ಇವರ ಕೈಗೆ ಕೊಟ್ಟು ಕಳುಹಿಸಬೇಕು. ಇದರಿಂದ ಎಷ್ಟೋ ಅನಾಹುತವಾಗುತ್ತಿದೆ ಎಂಬುದನ್ನು ತಾವು ವಿಚಾರ ಮಾಡಬೇಕು. ಆದ್ದರಿಂದ ರೀಜನಲ್ ವರ್ಕ್‌ಷಾಪ್‌ನಲ್ಲಿ ಡ್ರೈವಿಂಗ್ ತರಬೇತಿಯನ್ನು ಕೊಡುವುದರ ಮೂಲಕ ಪೂರ್ಣ ಪ್ರಮಾಣದ ಎಲ್ಲಾ ಡ್ರೈವಿಂಗ್ ತರಬೇತಿ ಕೊಡುವ ವ್ಯವಸ್ಥೆಯನ್ನು ಮಾಡಬೇಕು. ಇದನ್ನು ಮಾಡಿದರೆ ಅಪಘಾತಗಳು ಕಡಿಮೆಯಾಗುತ್ತವೆ. ಇದನ್ನು ತಾವು ಒಪ್ಪುತ್ತೀರೆಂಬ ನಂಬಿಕೆ ಮತ್ತು ವಿಶ್ವಾಸ ನನಗಿದೆ.

ರಿಸರ್ವೇಷನ್ ಕೌಂಟರ್ ನಮ್ಮಲ್ಲೂ ಇದೆ. ಯಾವ ಮಂತ್ರಿಗಳೇ ಬರಲಿ. ಎಲ್ಲವೂ ಬೆಂಗಳೂರಿಗೇ ಮಾಡುತ್ತಾರೆ. ಬೆಂಗಳೂರಿನಲ್ಲೇ ಕಂಪ್ಯೂಟರ್ ರಿಸರ್ವೇಸನ್ ಇರಬೇಕಾ ? ಹುಬ್ಬಳ್ಳಿ–ಧಾರವಾಡದಂತಹ ಮಹಾನಗರ ಜನರು ಏನು ಇದ್ದಾರೆ, ಅವರೂ ಇದನ್ನು ಕಲಿತುಕೊಳ್ಳಬೇಕೆಂಬ ಅಭಿಲಾಷೆಯುಳ್ಳವರಾಗಿದ್ದಾರೆ. ಆದ್ದರಿಂದ ಅಲ್ಲೂ ಸಹ ಇದನ್ನು ಅಳವಡಿಸಬೇಕು. ಅಂದರೆ ಉತ್ತರ ಕರ್ನಾಟಕ ಎಲ್ಲ ಭಾಗಗಳಿಗೂ ಪ್ರಪೋರ್ಷನೇಟ್ ಆಗಿ ಇದನ್ನು ಮಾಡಿ ಅಂತ ಹೇಳುತ್ತೇನೆ.

ಇನ್ನು ಡಿವಿಜನಲ್ ಆಫೀಸು ನಮ್ಮಲ್ಲಿ ಒಂದು ಇದೆ. ೧೯೬೦ನಲ್ಲಿ ಬಸ್ ರಾಷ್ಟ್ರೀಕರಣ ಮಾಡಿದಾಗ ಕಟ್ಟಿದ್ದ ಒಂದು ಕಛೇರಿ. ಆವತ್ತು ೧೦೦ ಜನ ಕೆಲಸ ಮಾಡುತ್ತಿದ್ದರು. ಆದರೆ ಇವತ್ತು ೭೦೦–೮೦೦ ಜನ ಕೆಲಸ ಮಾಡುವಂತಹ ಆಫೀಸಾಗಿದೆ. ಜನರು ಕೂಡುವುದಕ್ಕೆ ಸ್ಥಳ ಇಲ್ಲ. ಕಾಗದ ಪತ್ರಗಳನ್ನು ಇಡುವುದಕ್ಕೆ ಸ್ಥಳ ಇಲ್ಲ. ಆದ್ದರಿಂದ ಬೇರೆ ವಿಭಾಗೀಯ ಕಛೇರಿಯನ್ನು ಅಂದರೆ ಎಲ್ಲರಿಗೂ ಅನುಕೂಲವಾಗುವ ಕಛೇರಿಯನ್ನು ಕಟ್ಟಿ ಅನುಕೂಲವನ್ನು ಮಾಡಿಕೊಟ್ಟರೆ, ಈಗ ಎಷ್ಟು ಕೆಲಸ ಮಾಡುತ್ತಿದ್ದಾರೋ ಅದಕ್ಕಿಂತ ದುಪ್ಪಟ್ಟು ಕೆಲಸ ಮಾಡುತ್ತಾರೆ. ಆದ್ದರಿಂದ ಒಳ್ಳೆಯ ಆಫೀಸೊಂದನ್ನು ಮಾಡಿಕೊಡಿ ಎಂದು ಹೇಳುತ್ತಿದ್ದೇನೆ.

ಮತ್ತೆ ಪ್ರಮೋಷನ್ ಕೊಡುವ ವಿಚಾರದಲ್ಲಿ ಹೇಳುವುದಾದರೆ, ವರ್ಕ್‌ಷಾಪಿನಲ್ಲಿ ಪ್ರಮೋಷನ್ ಕೊಡುವಾಗ ಇಂಜಿನಿಯರ್ಸ್ ಡಿಗ್ರಿ ಹೋಲ್ಡರ್ಸ್ ಯಾರು ಇದ್ದಾರೆ ಅವರಿಗೆ ಪ್ರಮೋಷನ್ ಕೊಡುತ್ತಾರೆ. ಆದರೆ ಅದೇ ಡಿಪ್ಲೊಮಾ ಹೋಲ್ಡರ್ಸ್‌ನ್ನು ಕೇರ್ ಮಾಡುವುದಿಲ್ಲ. ಈ ಸರ್ಕಾರದ ಎಲ್ಲ ಇನ್ನಿತರೆ ಇಲಾಖೆಗಳಲ್ಲಿ ಇಂತಿಷ್ಟು ಪರ್ಸೆಂಟ್ ಡಿಪ್ಲೊಮಾ ಹೋಲ್ಡರ್ಸ್‌ಗೂ ಪ್ರಮೋಷನ್ ಕೊಡಬೇಕು ಅಂತ ಇದೆ. ಅದನ್ನು ಏಕೆ ಇಲ್ಲೂ ಅಳವಡಿಸಬಾರದೆಂದು ನಾನು ಪ್ರಶ್ನೆಯನ್ನು ಕೇಳುತ್ತೇನೆ. ಬಹುಶಃ ತಾವು ಇದನ್ನು ಒಪ್ಪಿಕೊಳ್ಳುತ್ತೀರೆಂದು ಭಾವಿಸುತ್ತಾ, ಅದನ್ನು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇಷ್ಟು ವಿಷಯಗಳನ್ನು ಆದಷ್ಟು ಮಟ್ಟಿಗೆ ತೀವ್ರವಾಗಿ ಕಾರ್ಯರೂಪದಲ್ಲಿ ತರುತ್ತಾರೆಂಬ ವಿಶ್ವಾಸ ನನಗಿದೆ.

ಇನ್ನು ವರ್ಗಾವಣೆಯ ಬಗ್ಗೆ ನಾನು ಹೆಚ್ಚು ಮಾತನಾಡುವುದಿಲ್ಲ. ವರ್ಗಾವಣೆ ಮಾಡಿ. ಯಾರಿಗಾದರೂ ಮಾಡಿ. ವರ್ಗಾವಣೆಯನ್ನು ಮಾಡಿದರೂ ಒಳ್ಳೆಯದಕ್ಕೆ ಮಾಡಿ. ಕೆಟ್ಟದ್ದಕ್ಕೆ ಮಾಡಬಾರದು ಎನ್ನುವ ಮಾತನ್ನು ಹೇಳುತ್ತೇನೆ. ನಮ್ಮ ಹುಬ್ಬಳ್ಳಿ–ಧಾರವಾಡ ಮಹಾನಗರದ ಮಹಾ ಜನತೆಯ ಪರವಾಗಿ, ಆ ಭಾಗದ ಶಾಸಕರ ಪರವಾಗಿ ತಮಗೆ ಧನ್ಯವಾದಗಳನ್ನು, ಅಭಿನಂದನೆಗಳನ್ನು ಅರ್ಪಿಸುತ್ತಾ, ಇದರ ಜೊತೆ ನಾವು ಹೇಳಿದಂತಹ ಕೆಲಸಗಳು ನ್ಯಾಯಬದ್ಧವಾದ ನಾಲ್ಕು ಜನಕ್ಕೆ ಅನುಕೂಲವಾಗುವ ಕೆಲಸಗಳನ್ನು ಕೂಡಲೇ ಜಾರಿಯಲ್ಲಿ ತರುವ ದೊಡ್ಡ ಕೆಲಸವನ್ನು ತಾವು ಮಾಡಬೇಕು. ಆ ಕೆಲಸವನ್ನು ತಾವು ಮಾಡುತ್ತೀರೆಂಬ ವಿಶ್ವಾಸ-ನಂಬಿಕೆ ನಮಗೆ ಇದೆ. ನಮಗೆ

೫.೩೫ ಪಿ. ಎಂ.

೧೯೮೮-೮೯ರ ಪುಸ್ತಕ ಕೊಟ್ಟಿದ್ದಾರೆ. ಅದರಲ್ಲಿ ''ಇತರ ಆದಾಯ'' ಎಂದು ಬರೆದಿದ್ದಾರೆ. ಇದರಲ್ಲಿ ಜಾಹಿರಾತು ಆದಾಯ ಎಂದು ಇದೆ. ಪಬ್ಲಿಸಿಟಿ ಬೋರ್ಡ್ ಏನು ಇದೆ ಆದರದ್ದು ಇದೆ. ಅದರಲ್ಲಿ ಒಂದು ಪೈಸೆ ಕೂಡ ಜಮಾ ಇಲ್ಲ. ಎಲ್ಲಾ ಕಡೆ ಎಲ್ಲಾ ಬೋರ್ಡ್‌ಗಳು ಖಾಲಿ ಇವೆ. ಇದರ ಬಗ್ಗೆ ವಿಚಾರ ಮಾಡಬೇಕು. ಅಧ್ಯಕ್ಷರು ಬೆಲ್ ಹೊಡೆದಿದ್ದಾರೆ. ನಾನು ಇದರ ಬಗ್ಗೆ ಎರಡು ತಾಸು ಮಾತನಾಡಬೇಕೆಂದಿದ್ದೆ. ಆ ಬಗ್ಗೆ ಮತ್ತೊಮ್ಮೆ ಮಾತನಾಡುತ್ತೇನೆಂದು ಹೇಳಿ ಈಗ ಇತರೇ ಖಾತೆಗಳ ಬಗ್ಗೆ ನಾನು ಮಾತನಾಡುತ್ತೇನೆ.

ಅಧ್ಯಕ್ಷರು —ಇನ್ನೂ ಎರಡು ಖಾತೆಗಳ ಬಗ್ಗೆ ಮಾತನಾಡುತ್ತೀರಾ ?

ಶ್ರೀ ಗೋಪಿನಾಥ ಆರ್. ಸಾಂಡ್ರ.—ಮಾನ್ಯ ಅಧ್ಯಕ್ಷರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ ನಾನು ಈಗ ಕೋ ಆಪರೇಟೀವ್ ಡಿಪಾರ್ಟ್‌ಮೆಂಟ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ,

ಅಧ್ಯಕ್ಷರು,—ಅಧ್ಯಕ್ಷರಿಗೆ ಅಭಿನಂದನೆ ಸಲ್ಲಿಸಿದ ಮೇಲೆ ಕುಳಿತುಕೊಳ್ಳಬೇಕಾಗುತ್ತದೆ.

ಶ್ರೀ ಗೋಪಿನಾಥ ಆರ್. ಸಾಂಡ್ರ.—ಒಂದು ಖಾತೆ ಬಗ್ಗೆ ನಾನು ತಮಗೆ ಅಭಿನಂದನೆ ಸಲ್ಲಿಸಿದ್ದೇನೆ. ಕೋ-ಆಪರೇಟೀವ್ ಇಲಾಖೆ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಇವತ್ತು ಕೋ-ಆಪರೇಟೀವ್ ಮೂವ್‌ಮೆಂಟ್ ದಿಕ್ಕಿಲ್ಲದ ಹಾಗೆ ಆಗಿದೆ. ಇದಕ್ಕೆ ಇವತ್ತು ಕಾರಣಕರ್ತರು ಯಾರು ? ನಮ್ಮಂಥಹ ಪೊಲಿಟಿಷಿಯನ್ಸ್ ಹಾಗೂ ನಮ್ಮ ಜೊತೆಗೆ ಅಧಿಕಾರಿಗಳು. ಇವತ್ತು ಅಧಿಕಾರಿಗಳು ಯಾರೂ ಎಂದರೆ ತಪ್ಪು ಭಾವಿಸಬಾರದು, ಕೆಲವು ಕಿರಿಯ ಅಧಿಕಾರಿಗಳು ದೊಡ್ಡ ಅಧಿಕಾರಿಗಳ ಕಿವಿ ತುಂಬುತ್ತಾರೆ. ಆದರಿಂದ ಇವತ್ತು ಅನಾಹುತ ಆಗುತ್ತಿದೆ. ಇವತ್ತು ನಾನು ಆಹಾರ ಸಾಮಗ್ರಿಗಳ ಡಿಸ್ಟ್ರಿಬ್ಯೂಷನ್ ಬಗ್ಗೆ ಮಾತನಾಡುವುದಿಲ್ಲ. ಇವತ್ತು ಇಂಡಸ್ಟ್ರಿಯಲ್ ಕೋ-ಆಪರೇಟೀವ್ ಸೊಸೈಟಿಗಳು ಏನು ಇವೆ ಅವು ಇವತ್ತು ಜೀವಂತ ಇಲ್ಲ ಅವು ಜೀವಂತ ಸಮಾಧಿಯಾಗಿವೆ ಎಂದು ಹೇಳಿ ಅವುಗಳ ಬಗ್ಗೆ ನಾನು ಈಗ ಲೆಕ್ಕ ಕೊಡುವುದಕ್ಕೆ ಹೋಗುವುದಿಲ್ಲ. ನಾನು ಇವತ್ತು ವೈಯುಕ್ತಿಕವಾಗಿ ಹೇಳುವುದಾದರೆ ಇವತ್ತು ಈ ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಸೊಸೈಟಿಗಳನ್ನು ಯಾರು ಪ್ರಾರಂಭ ಮಾಡುತ್ತಾರೆ? ಕುಂಬಾರ, ಕಮ್ಮಾರ, ನೇಕಾರ, ಅಕ್ಕಸಾಲಿಗರು ಇದನ್ನು ಮಾಡುತ್ತಾರೆ. ಇವತ್ತು ಯಾರಿಗೆ ವಿದ್ಯಾಬುದ್ಧಿ ಇರುವುದಿಲ್ಲ, ಯಾರಿಗೆ ಜ್ಞಾನ ಇರುವುದಿಲ್ಲ ಅವರು ಸಹಕಾರಿ ಸಂಘ ಮಾಡುತ್ತಾರೆ. ಆದರೆ ಇವತ್ತು ಈ ಅಧಿಕಾರಿಗಳ ಒತ್ತಾಯದಿಂದ ಅವು ಇವತ್ತು ನಿರ್ನಾಮವಾಗಿವೆ. ಅವುಗಳನ್ನು ಅಮಾಲ್ಗಮೇಶನ್ ಮಾಡಬೇಕೆಂದು ಒಂದು ಸಲ ಹೇಳುತ್ತಾರೆ. ಅದೇನೋ ಏನೇನೋ ಮಾಡಬೇಕೆಂದು ಹೇಳಿ ಈ ಇಂಡಸ್ಟ್ರಿಯಲ್ ಕೋ-ಆಪರೇಟಿವ್ ಸೊಸೈಟಿ ಮೂವ್‌ಮೆಂಟ್ ಬಂದ್ ಆಗಿದೆ, ಇವತ್ತು ಸಹಕಾರಿ ಕ್ಷೇತ್ರದಲ್ಲಿ, ಬಡವರಿಗೆ ಸಹಾಯ ಮಾಡುವ ಕ್ಷೇತ್ರ. ಇಲ್ಲಿ ಯಾರಿಗೂ ಕೂಡಾ ಅನ್ಯಾಯವಾಗಬಾರದು. ಈ ಸಂಸ್ಥೆಗಳ ಬಗ್ಗೆ ಸರ್ಕಾರ ಹೆಚ್ಚು ಗಮನ ಹರಿಸಬೇಕು. ಇವತ್ತು ಅಲ್ಲಿ ಯಾರು ತಪ್ಪು ಮಾಡಿರುತ್ತಾರೆ, ಅವರಿಗೆ ಶಿಕ್ಷೆ ಕೊಡಿ. ಆದರೆ ಅವತ್ತು ಇಲ್ಲಿ ಕೇವಲ ೧೦ ಸಾವಿರ, ಇಲ್ಲವೇ ೧ ಲಕ್ಷ ಅಥವಾ ಹೆಚ್ಚೆಂದರೆ ೨೦ ಲಕ್ಷ ರೂಪಾಯಿ ಅವ್ಯವಹಾರ ಆಗಿರಬಹುದು. ಇವತ್ತು ಉಳಿದ ಸಂಸ್ಥೆಗಳಲ್ಲಿ ಕೋಟಿಗಟ್ಟಲೆ ಲುಕ್ಸಾನು ಆಗಿದೆ, ಆ ಬಗ್ಗೆ ತಾವು ಹೆಚ್ಚು ಗಮನವನ್ನು ಕೊಡಬೇಕು. ಇವತ್ತು ಒಂದು ಮಿಲ್ಲ್‌ನಲ್ಲಿ ೩-೪ ಕೋಟಿ ರೂಪಾಯಿ ಲುಕ್ಸಾನು ಆಗುತ್ತದೆ. ಆ ಬಗ್ಗೆ ಗಮನ ಹರಿಸಿ, ಅಂತಹವರ ಬಗ್ಗೆ ಕ್ರಮ ಕೈಗೊಳ್ಳಿ. ಇವತ್ತು ಅಧಿಕಾರಿಗಳಿಗೆ ಒಂದು ಅಸ್ತ್ರ ಸಿಕ್ಕಿದೆ, ಇವತ್ತು ನಿಯಮ ೩೦ ಹಾಗೂ ೩೦(ಎ)ನ್ನು ಉಪಯೋಗ ಮಾಡಿ ಯಾವುದೇ ಕಾರಣವನ್ನು ಕೊಡದೇ ಅವುಗಳನ್ನು ಸೂಪರ್‌ಸೀಡ್ ಮಾಡುತ್ತಾರೆ. ಯಾವುದೇ ಕಾರಣ ಕೊಡದೇ ಸುಮೋಟೋ ಮಾಡುತ್ತಾರೆ. ಇದರ ಬಗ್ಗೆ ಸರ್ಕಾರ ಗಮನ ಕೊಡಬೇಕು. ಇದಕ್ಕೆ ಒಂದು ಹಿಡಿತ ಇರಬೇಕು. ಇದನ್ನು ತಾವು ಮಾಡದೇ ಇದ್ದರೆ ಇವತ್ತು ಕೋ-ಆಪರೇಟಿವ್ ಮೂವ್‌ಮೆಂಟ್ ಉಳಿಯುವುದಿಲ್ಲ. ಒಂದು ಉದಾಹರಣೆಯನ್ನು ನಾನು ಕೊಡುತ್ತೇನೆ. ಕರ್ನಾಟಕ ಕೋ-ಆಪರೇಟಿವ್ ವೀವರ್ಸ್ ಅಪೆಕ್ಸ್..... ಸೊಸೈಟಿ ಎಂದು ಇದೆ. ಒಂದು ಕಾಲಕ್ಕೆ ನಾನೂ ಅದರ ಅಧ್ಯಕ್ಷ ಇದ್ದೆ. ಮಾನ್ಯ ದೇವರಾಜ ಅರಸ್ ಅವರ ಸಹಾಯದಿಂದ ಆ ಸಂಸ್ಥೆ ದೊಡ್ಡದಾಗಿ ಬೆಳೆದು ವರ್ಷಕ್ಕೆ ಅದು ೨೦ ಲಕ್ಷ ರೂಪಾಯಿ ಪ್ರಾಫಿಟ್ ಮಾಡುತ್ತಾ ಇತ್ತು. ಅದರ ಮುಖಾಂತರ ೭೨ ಶೋರೂಮ್‌ಗಳನ್ನು ಸಹಾ ಮಾಡಿದ್ದೆವು. ಅಲ್ಲಿ ಒಳ್ಳೆಯ ಅನೇಕ ಸುಧಾರಣೆಗಳು ಆಗಿದ್ದವು. ಆದರೆ ರಾಜಕಾರಣಿಗಳ ಒತ್ತಾಯಕ್ಕೆ ಬಲಿಬಿದ್ದು ಅಧಿಕಾರಿಗಳು ಅದನ್ನು ಸೂಪರ್‌ಸೀಡ್ ಮಾಡಿದರು. ಬನಹಟ್ಟಿಯಲ್ಲಿ ಅದರ ಎಕ್ಸ್‌ಪ್ಲಾನೇಷನ್ ಮಾಡಿಲ್ಲ, ಮತ್ತೊಂದು ಮಾಡಿಲ್ಲ ಎಂದು ಆಪಾದನೆ ಮಾಡಿ ಅದನ್ನು ಸೂಪರ್‌ಸೀಡ್ ಮಾಡಿದರು. ಅದನ್ನು ಮಾಡಿ ೫ ವರ್ಷಗಳಾದರೂ ಸಹಿತ ಒಂದು ಪೈಸೆಯಷ್ಟು ಸುಧಾರಣೆ ಆಗಿಲ್ಲ.

೭೦ ಷೋರೂಮ್‌ಗಳನ್ನು ಕಟ್ಟಲಾಗಿತ್ತು. ಈಗ ೪೦ ಷೋರೂಮ್‌ಗಳಿಗೆ ಬಂದಿದೆ. ಇದ್ದ ಜಾಗವನ್ನು ಮಾರಿಕೊಂಡು ತಿನ್ನಲಿಕ್ಕೆ ಹತ್ತಿದ್ದಾರೆ. ಅದನ್ನು ಸೆಕ್ರೆಟರಿಯವರಿಗೆ ಹೇಳಿದ್ದೇನೆ. ರಿಜಿಸ್ಟ್ರಾರ್‌ರವರಿಗೆ ಹೇಳಿದ್ದೇನೆ. ರಾಜ್ಯಪಾಲರ ಆಡಳಿತ ಇದ್ದಾಗ ಆ ಮಾತನ್ನು ಹೇಳಿದ್ದೇನೆ. ದಯವಿಟ್ಟು ಇದನ್ನು ವಿಚಾರಮಾಡಿ. ನಾನು ಹೆಚ್ಚು ಒತ್ತಾಯ ಮಾಡುವುದಿಲ್ಲ. ಇವತ್ತಿನವರೆಗೆ ಆ ಬಗ್ಗೆ ಉತ್ತರವಿಲ್ಲ ಆ ಸಂಸ್ಥೆಯಲ್ಲಿ ಕೆಎಎಸ್ ಅಧಿಕಾರಿಯೊಬ್ಬ ಕೆಲಸ ಮಾಡಿದ್ದಾನೆ ಅಲ್ಲಿ ಒಂದು ಕೋಟಿ ರೂಪಾಯಿ ಹಾನಿಯಾಗಿದೆ. ಆ ಹಾನಿಯನ್ನು ಅವನು ಮಾಡಿದ್ದಾನೆ ಎಂದು ಕೈಯಲ್ಲಿ ಬರೆದು ಸಹಿ ಹಾಕಿ ಕೊಟ್ಟರೂ ಇವತ್ತಿನವರೆಗೆ ಆ ಬಗ್ಗೆ ವಿಚಾರಣೆ ಇಲ್ಲ ಸೂಪರ್‌ಸೀಡ್ ಮಾಡಬೇಕಾದರೆ ಎರಡು ಮೂರು ವರ್ಷಗಳಲ್ಲಿ ಚುನಾವಣೆ ಮಾಡಬೇಕೆಂದು ಕಾನೂನಿನಲ್ಲಿದೆ. ಆದರೆ ಸೂಪರ್‌ಸೀಡ್ ಮಾಡಿ ಐದು ವರ್ಷ ಆದರೂ ಏನೂ ಮಾಡಲಿಲ್ಲ, ಇನ್ನೊಂದು ಜನರಲ್‌ಬಾಡಿ ಮೀಟಿಂಗ್ ಕರೆದು ಬೈಲಾ ತಿದ್ದುಪಡಿ ಮಾಡಬೇಕೆಂದು ಪ್ರಯತ್ನ ಮಾಡಿದರು. ಅದಕ್ಕೆ ೨ನೇ ಮೂರು ಅಂಶದಷ್ಟು ಮೆಂಬರ್ ಓಟು ಕೊಟ್ಟರೆ ಬೈಲಾ ತಿದ್ದುಪಡಿಯಾಗುತ್ತದೆ. ಆದರೆ ಅದು ಯಾವುದೂ ನೋಡಲಿಲ್ಲ. ಒಂದು ಓಟು ಹೆಚ್ಚಿಗೆಯಾಯಿತು ಎಂದು ಅಧಿಕಾರಿಗಳು ಒತ್ತಾಯ ತಂದು ಸೂಪರ್‌ಸೀಡ್ ಮಾಡಿದರು. ಬೈಲಾ ತಿದ್ದುಪಡಿ ಮಾಡಿಕೊಂಡು ತಮಗೆ ಬೇಕಾದವರನ್ನು ಅಲ್ಲಿಗೆ ತಂದರು. ಎಲೆಕ್ಷನ್ ಮಾಡಿದರು. ಎಲೆಕ್ಷನ್ ಮಾಡಬೇಡಿಯೆಂದು ನಾವು ಹೇಳಿದ್ದೆವು ಅವರು ಇಲ್ಲ ನಾವು ಮಾಡೇ ತಿರುವವರು ಎಂದು ಮಾಡಿದರು. ಏತಕ್ಕೆ ಮಾಡಿದರೂ ಅಂದರೆ, ಆ ಕೆಎಎಸ್ ಅಧಿಕಾರಿಯ ಮೇಲೆ ಇದೆಲ್ಲಾ ಬರುತ್ತದೆಂದು ತಿಳಿದು ಅಧಿಕಾರವನ್ನು ಜನರ ಕೈಗೆ ಕೊಟ್ಟು ಹೋಗೋಣವೆಂದು ಮಾಡಿದರು. ಮುಂದೆ ಏನು ಮಾಡಿದರೆಂಬುದು ಆ ದೇವರಿಗೇಗೊತ್ತು. ಯಾವುದೇ ಕೆಲಸ ಮಾಡುವಾಗ ಈ ರೀತಿ ಕೆಟ್ಟ ಭಾವನೆ ಇರಬಾರದು. ಇದನ್ನೆಲಾ ನಾನೂ ಮಂತ್ರಿಗಳಿಗೆ ಹೇಳಿದಾಗ ಅವರೊಂದು ಪತ್ರ ಬರೆದು ಕೊಟ್ಟರು. ಮಂತ್ರಿಗಳು ಒಂದು ಆರ್ಡರ್ ಕೂಡ ಮಾಡಿದರು. ಇವರಿಗೆ ಸಹಾಯ ಮಾಡಿ ಎಂದು ಅದರಲ್ಲಿ ಹೇಳಿದ್ದರು. ಅದಕ್ಕೆ ಇವರ ಉತ್ತರ ಏನು ಬಂತು? ಸೂಪರ್‌ಸೀಡ್ ಮಾಡಿದ ಮೇಲೆ ಮತ್ತೆ ಹಿಂದಿನವರ ಕೈಗೆ ಅಧಿಕಾರ ಹೇಗೆ ಕೊಡುವುದು ಎಂದು? ಅಗ ಸೂಪರ್‌ಸೀಡ್ ಏತಕ್ಕೆ ಮಾಡಿದರು ಅಂದರೆ. ಈಗ ಅದನ್ನು ಹೇಳಲೇ ಬೇಕಾಗಿದೆ. ಬೊಮ್ಮಾಯಿಯವರಿಗೂ ನನಗೂ ಆಗುತ್ತಿರಲಿಲ್ಲ. ಆಗ ಅವರು ಮುಖ್ಯಮಂತ್ರಿಗಳಾಗಿದ್ದರು. ನನ್ನ ಗುಂಪಿನವರು ಎಲ್ಲೆಲ್ಲಿ ಇದ್ದರು ಅಲ್ಲೆಲ್ಲ ಸರ್ವನಾಶ ಮಾಡಲಿಕ್ಕೆ ಅವರು ಪ್ರಯತ್ನ ಮಾಡಿದರು. ಅವರ ಮಾತು ಕೇಳಿದ ಅಧಿಕಾರಿಗಳು ನಮ್ಮವರು ಇದ್ದ ಜಾಗಗಳನ್ನು ಸೂಪರ್‌ಸೀಡ್ ಮಾಡಿದರು. ನಾವು ತಪ್ಪಿತಸ್ಥರು ಇದ್ದರೆ ನಮ್ಮನ್ನು ಗಲ್ಲಿಗೆ ಹಾಕಲಿ, ನಮಗೆ ಶಿಕ್ಷೆ ಆಗಲಿ, ದಂಡ ಆಗಲಿ. ಆದರೆ ನ್ಯಾಯವಾಗಿ ನಡೆಯುವಂತಹವರಿಗೆ ಅಡ್ಡಿ ತರುವಂತಹ ಕೆಲಸ ಮಾಡಬಾರದು. ನಾನು ಸೆಕ್ರೆಟರಿಯವರ ಮೇಲೆ ಹೇಳುವುದಿಲ್ಲ. ಆದರೆ ಕೆಲವೊಂದು ವಿಶಿಷ್ಟ ಅಧಿಕಾರಿಗಳು ಏನಿದ್ದಾರೆ, ಅವರು ಇವರ ಕಿವಿ ತುಂಬಿ ತಲೆತುಂಬಿ ಈ ಕೆಲಸ ಮಾಡಿಸುತ್ತಾರೆ. ತಾವು ಇಂತಹ ಕೆಲಸ ಮಾಡುವುದಕ್ಕೆ ಹೋಗಬೇಡಿ. ಇನ್ನು ಮೇಲೆ ನಿಮಗೆ ನಮಸ್ಕಾರ. ನಿಮ್ಮ ಸಂಸ್ಥೆಗಳಿಗೆ ನಾವು ಮೆಂಬರ್‌ಗಳಾಗುವುದಿಲ್ಲ. ನಾನಂತೂ ನಿರ್ಧಾರ ಮಾಡಿದ್ದೇನೆ, ಕೋಆಪರೇಟಿವ್ ಸಂಸ್ಥೆಗೆ ಎಂದೂ ಮೆಂಬರ್ ಆಗಬಾರದು ಎಂದು, ಆದರೆ ಸಹಕಾರಿ ಕ್ಷೇತ್ರದಲ್ಲಿ ಒಳ್ಳೆಯ ಕೆಲಸಗಳನ್ನು ಮಾಡಲಿಕ್ಕೆ ನಾನೇನು ಸಹಾಯ ಮಾಡಬೇಕಾಗಿದೆ, ನನ್ನ ಶಕ್ತಿ ಏನಿದೆ ಆ ಪ್ರಕಾರ ನಾನು ಮಾಡುತ್ತೇನೆ. ನಮ್ಮ ಸಹಕಾರ ಮಂತ್ರಿಗಳು ಹೊಸಬರು ಇದ್ದಾರೆ.

ಒಬ್ಬ ಮಾನ್ಯ ಸದಸ್ಯರು: ಯಾರ ಕಾಲಕ್ಕೆ ಎಷ್ಟು ಕಷ್ಟವಿತ್ತೆಂಬುದನ್ನು ನೀವು ಹೇಳುತ್ತೀರಾ?

ಶ್ರೀ ಗೋಪಿನಾಥ ಆರ್. ಸಾಂದ್ರ:—ಅದು ಎಲ್ಲ ಬಹಳ ದೊಡ್ಡ ಕಥೆ ಇದೆ. ಅದನ್ನೆಲ್ಲ ಹೇಳುವುದಕ್ಕೆ ಹೊರಟರೆ ಅಧ್ಯಕ್ಷರು ಕೂಡ್ರಿ ಎಂದು ಹೇಳುತ್ತಾರೆ, ಅದೆಲ್ಲ ಈಗಬೇಡ. ಬಡವರು, ಕುಂಬಾರರು, ಕುರುಬರು ರೇಷ್ಮೆ ಕೆಲಸ ಮಾಡುವವರು ಅಕ್ಕಸಾಲಿಗರು, ನೇಕಾರರು ಇರುವಂತಹ ಸಹಕಾರಿ ಸಂಸ್ಥೆಗಳು ಪುನರ್‌ಜೀವನಗೊಳಿಸುವಂತಹವುಗಳಿವೆ. ಅವುಗಳನ್ನು ಪುನಶ್ಚೇತನಗೊಳಿಸುವಂತಹ ಕೆಲಸವನ್ನು ಮಾಡಿ. ಬಡವರ ಕೆಲಸ ನಮ್ಮ ಪಕ್ಷದ ಕೆಲಸವೆಂದು ಎಲ್ಲ ಪಕ್ಷದವರು ಹೇಳುತ್ತಾರೆ. ನಾವೆಲ್ಲರೂ ಬಡವರ ಬಂಧುಗಳೆಂದು ಹೇಳುತ್ತಾರೆ. ಅವರು ಈಗ ಕಷ್ಟದಲ್ಲಿದ್ದಾರೆ, ಅವರನ್ನು ಉದ್ಧಾರ ಮಾಡಲಿಕ್ಕೆ ಪುನಶ್ಚೇತನಗೊಳಿಸಲಿಕ್ಕೆ ಅವರಿಗೆ ಪ್ರೋತ್ಸಾಹ ಕೊಡಿ. ಕೆಟ್ಟವರು ಇದ್ದರೆ ಅಂತಹವರನ್ನು ಹೊರಗೆ ಹಾಕಿ. ಒಳ್ಳೆಯವರು ಯಾರು ಬರುತ್ತಾರೆ ಅಂತಹವರಿಗೆ ಪ್ರೋತ್ಸಾಹ ಕೊಡುವಂತಹ ಕೆಲಸವನ್ನು ನೀವು ಮಾಡಬೇಕು. ತಾವು ಹೊಸಬರಿದ್ದೀರಿ. ತಮ್ಮನ್ನು ತಪ್ಪುದಾರಿಗೆ ಎಳೆಯುವಂತಹ ಕೆಲವು ಅಧಿಕಾರಿಗಳಿದ್ದಾರೆ. ಅವರ ಬಗ್ಗೆ ನೀವು ಎಚ್ಚರಿಕೆಯಿಂದ ಇರಬೇಕು. ನೀವು ಏನೇ ಮಾಡಬೇಕಾದರೂ ಅಧಿಕಾರಿಗಳನ್ನು ಕರೆಯಿರಿ ನಮ್ಮಂತಹವರನ್ನು ಕರೆಯಿರಿ. ಇಬ್ಬರನ್ನು ಎದುರು ಬದುರಿಗೆ ಕೂಡಿಸಿ ಅವರು ಹೇಳುವುದನ್ನು ಕೇಳಿ, ನಾವು ಹೇಳುವುದನ್ನು ಕೇಳಿ. ಅದು ಬಿಟ್ಟು ಅಧಿಕಾರಿಗಳು

ಹೇಳುತ್ತಾರೆಂದು ತಾವು ನಿರ್ಣಯ ಕೊಡಲಿಕ್ಕೆ ಹೋಗಬೇಡಿಯೆಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕಾನೂನು ಪ್ರಕಾರ ಮಾಡಿ, ಕಾನೂನು ಬಿಟ್ಟು ಎಂದೂ ಹೋಗಬೇಡಿ. ಇನ್ನೊಂದು ಮಾತು ಹೇಳುತ್ತೇನೆ. ಹುಬ್ಬಳ್ಳಿ ಎಪಿಎಂಸಿ ಅತ್ಯಂತ ದೊಡ್ಡದಾದ ಮಾರುಕಟ್ಟೆ. ಬೆಂಗಳೂರು ಬಿಟ್ಟರೆ ಹುಬ್ಬಳ್ಳಿ ಎರಡನೆಯ ಸ್ಥಾನದಲ್ಲಿದೆ. ಅಲ್ಲಿ ಸಾಕಷ್ಟು ಉತ್ಪನ್ನ ಬರುತ್ತದೆ. ಈಗ ಹುಬ್ಬಳ್ಳಿ ಕಲಘಟಗಿ, ಶಿಗ್ಗಾವಿ ಈ ಮೂರು ಕೂಡಿಸಿ ಒಂದು ಮಾಡಿದ್ದಾರೆ. ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಹುಬ್ಬಳ್ಳಿಯನ್ನು ಪ್ರತ್ಯೇಕ ಮಾಡಿ. ಕಲಘಟಗಿ ಮತ್ತು ಶಿಗ್ಗಾವಿ ಎರಡೂ ಕೂಡಿಸಿ ಒಂದು ಮಾಡಿರಿ ಎಂದು ನಾನೂ ಕೇಳಿಕೊಂಡಿದ್ದೇನೆ. ನಾನು ಆ ರೀತಿ ಮಾಡಬೇಕೆಂದು ಒಂದು ಪತ್ರವನ್ನು ಬರೆದಿದ್ದೇನೆ. ಅದಕ್ಕೆ ಇನ್ನು ಉತ್ತರ ಬರಲಿಲ್ಲ. ಜವಾಬ್ದಾರಿಯುತ ಶಾಸಕರು ಪತ್ರ ಬರೆದರೆ ಅದಕ್ಕೆ ಉತ್ತರ ಕೊಡುವ ಸೌಜನ್ಯವನ್ನು ತಾವು ತೋರಿಸಬೇಕು ಕೆಲಸ ಆಗದಿದ್ದರೂ ಸರಿಯೇ, ಆದರೆ ತಾವು ಮತ್ತು ತಮ್ಮ ಅಧಿಕಾರಿಗಳು ಕೂಡಲೇ ಉತ್ತರ ಕೊಡುವ ವ್ಯವಸ್ಥೆಯನ್ನು ಮಾಡಿಯೆಂದು ತಮ್ಮಲ್ಲಿ ಹೇಳುತ್ತೇನೆ. ತಾವು ಹೊಸಬರಿದ್ದೀರಿ.

ನೀವು ಬಹಳ ಉತ್ಸಾಹದಿಂದ ನಮ್ಮ ಮಾತುಗಳನ್ನು ಕೇಳುತ್ತೀರಿ, ಅವುಗಳನ್ನು ಕಾರ್ಯ ರೂಪದಲ್ಲಿ ತರುವುದಕ್ಕೆ ಪ್ರಯತ್ನ ಮಾಡುತ್ತೀರಿ ಎಂದು ಹಾರೈಸುತ್ತೇನೆ. ದೇವರು ನಿಮಗೆ ಯಶಸ್ಸು ಕೊಡಲಿ. ಈ ಸಹಕಾರಿ ಕ್ಷೇತ್ರ ಆದರ್ಶವಾದಂಥ ಕ್ಷೇತ್ರ ನಿಮ್ಮ ಕಾಲದಲ್ಲಿ ಆಗಲಿ. ಈಗ ಇವತ್ತು ಒಂದು ಮಾತನ್ನು ಹೇಳುತ್ತೇನೆ. ಸಹಕಾರ ಸಂಘಗಳನ್ನು ಯಾವ ರೀತಿ ಮಾಡಬೇಕೆಂದು ಶ್ರೀ ಕೆ. ಎಚ್. ಪಾಟೀಲರು ರಿಪೋರ್ಟನ್ನು ಕೊಟ್ಟಿದ್ದಾರೆ ಇನ್ನು ಬೇರೆ ಏನೂ ಮಾಡುವುದು ಬೇಡ. ಕೆ. ಎಚ್. ಪಾಟೀಲರು ಏನು ರಿಪೋರ್ಟ್ ಕೊಟ್ಟಿದ್ದಾರೆ. ಅದನ್ನು ನೀವು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಿ. ಅಲ್ಪಸ್ವಲ್ಪ ಬದಲಾವಣೆ ಮಾಡುವುದಾದರೆ ಮಾಡಿರಿ. ಆದರೆ ಆದಷ್ಟು ಬೇಗ ಅದನ್ನು ಜಾರಿಗೆ ತೆಗೆದುಕೊಂಡು ಬನ್ನಿ, ಅದರಿಂದ ಸಹಕಾರ ಕ್ಷೇತ್ರ ಉದ್ಧಾರವಾಗುತ್ತದೆ. ಈ ಮಾರ್ಕೆಟಿಂಗ್ ಕಮಿಟಿ, ಮಾರ್ಕೆಟಿಂಗ್ ಸೊಸೈಟಿ ಏನಿದೆ, ಅದಕ್ಕ ಶ್ರೀ ಅಜ್ಜೀಬಾಳ ಹೆಗದೆಯವರು ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಈ ಎರಡು ರಿಪೋರ್ಟಗಳನ್ನು ನೀವು ತರಿಸಿಕೊಳ್ಳಿ ಇದರಲ್ಲಿ ಏನು ನ್ಯೂನತೆಗಳಿವೆ, ಲೋಪದೋಷಗಳಿವೆ ಅವುಗಳಿಗ ತಿದ್ದುಪಡಿ ಮಾಡುವುದರ ಬಗ್ಗೆ ಆದಷ್ಟು ಬೇಗ ಕಾರ್ಯರೂಪಕ್ಕೆ ತೆಗೆದುಕೊಂಡುಬನ್ನಿ. ಇನ್ನು, ಧಾರವಾಡ ಜಿಲ್ಲೆ ಕೋಆಪರೇಟಿವ್ ಜಿಲ್ಲೆ. ಕೋಆಪರೇಟಿವ್ ಮೂವ್‌ಮೆಂಟ್ ಹುಟ್ಟಿದ್ದೇ ಇಲ್ಲಿ. ಶ್ರೀ ಕೆ. ಎಚ್. ಪಾಟೀಲರಂಥ ನಾಯಕರು ಇಲ್ಲಿ ಇದ್ದಾರೆ ಇವತ್ತು ಬಾಗಲಕೋಟೆ, ಬಿಜಾಪುರ ಗುಲ್ಬರ್ಗ ಹೀಗೆ ಎಲ್ಲೆಲ್ಲಿ ಟೆಕ್ಸಟೈಲ್ ಮಿಲ್‌ಗಳು ಏನಿದೆ. ಇವುಗಳೆಲ್ಲ ಬಂದ್ ಆಗಿವೆ ಅವರಿಗೆ ೫೦ ಲಕ್ಷ ಕೊಡಿ ಒಂದು ಕೋಡಿ ಎಂದು ಅಧಿಕಾರಿಗಳು ಶಿಫಾರಸ್ಸು ಮಾಡುತಾರೆ. ಮಾಡಲಿ. ಇವು ಏಕೆ ಲಾಸನ್ನು ಆಗುತ್ತಿದೆ ಮತ್ತು ಶ್ರೀ ಪಾಟಿಲರದ್ದು ಏಕೆ ಲಾಭ ಆಗುತ್ತದ? ನೀವು ಅವರಿಗೆ ಈ ಪ್ರಶ್ನೆಯನ್ನು ಕೇಳಿ. ಶ್ರೀ ಕೆ. ಹೆಚ್. ಪಾಟೀಲರು ಮಾಡಿದಂಥ ಕೆಲಸವನ್ನು ಉಳಿದವರು ಏಕೆ ಮಾಡಬಾರದು? ಅದಕ್ಕಾಗಿ ದಯವಿಟ್ಟು ಈ ಎಲ್ಲಾ ಮಾತುಗಳನ್ನು ತಾವು ಗಮನದಲ್ಲಿಟ್ಟುಕೊಂಡು ಯಾವುದು ದಿಟ್ಟ ಯಾವುದು ಸತ್ಯ, ಯಾವುದು ಒಳ್ಳೆಯದು, ಯಾವುದು ನಾಲ್ಕು ಜನರಿಗೆ ಸಹಾಯವಾಗುತ್ತದೆ, ಅಂತಹ ಕೆಲಸವನ್ನು ಮಾಡುವುದಕ್ಕೆ ಹಿಂದೆಮುಂದೆ ನೋಡಬೇಡಯೆಂದು ನಾನು ನಿಮ್ಮಲ್ಲಿ ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಂಡು ನಿಮ್ಮ ಖಾತೆ ಬಗ್ಗೆ ನನ್ನ ಮಾತನ್ನು ಮುಗಿಸುತ್ತೇನೆ.

ಇನ್ನು, ಆಹಾರ ಮತ್ತು ಸರಬರಾಜು ಬಗ್ಗೆ ಹೇಳುತ್ತೇತ್ತೇನೆ. ಇದರ ಬಗ್ಗೆ ನಾನು ಹೆಚ್ಚಿಗೆ ಮಾತನಾಡುವುದಿಲ್ಲ. ನಾನು ಮೊದಲೇ ಹೇಳಿದ್ದೇನೆ ಏನೆಂದರೆ ಶ್ರೀ ಅಜೀಜ್‌ಸೇಠ್‌ರು ಬಡವರ ಬಂಧು ಎಂದು ಅವರು ಈ ಆಹಾರ ಮತ್ತು ನಾಗರಿಕ ಸರಬರಾಜು ಖಾತೆಯನ್ನು ತೆಗೆದುಕೊಂಡಾಗ ನನಗೆ ಬಹಳ ಸಂತೋಷವಾಯಿತೋ ಸಂತೋಷದಿಂದ ನಾನು ಅವರಲ್ಲಿಗೆ ಹೋಗಿ ಹೇಳಿದ್ದೆ ಏನೆಂದರೆ, ಸ್ವಾಮಿ, ನೀವು ಈ ಖಾತೆಯನ್ನು ತೆಗೆದುಕೊಂಡಮೇಲೆ ಈ ಸರಬರಾಜು ಸರಿಯಾಗಿ ಆಗಬೇಕು. ಎಲ್ಲಕಿಂತಲೂ ಹೆಚ್ಚಿನದು ಎಂದರೆ ಆಂಧ್ರಪ್ರದೇಶದವರು ಸಬ್ಸಿಡಿ ಕೊಟ್ಟು ೨ ರೂಪಾಯಿಗೆ ಒಂದು ಕೆ. ಜಿ ಅಕ್ಕಿ ಕೊಡುತ್ತಾರೆ, ನೀವು ಏಕೆ ಕೊಡಬಾರದು ಎಂದು, ನಮ್ಮ ಭಾಗದ ಜನರಿಗೆ ಅಕ್ಕಿ ಬೇಡ: ರಾಗಿ, ಜೋಳ ಕೊಡಿರಿ. ಇದು ಬಡವರು ತಿನ್ನುವಂಥಾದ್ದು. ಸಬ್ಸಿಡಿ ಒಂದು ಕೋಟಿ, ಎರಡು ಕೋಟಿ ಸರ್ಕಾರದಿಂದ ಕೊಡಿಸಿರಿ ಅಥವಾ ಏನಾದರೂ ಮಾಡಿರಿ. ಆಂಧ್ರದವರು ಏನು ಮಾಡುತ್ತಿದ್ದಾರೆ ಎಂದರೆ ರೈಸ್ ಮಿಲ್‌ಗಳಿಂದ ರೈಸ್ ತೆಗೆದುಕೊಂಡು, ಓಪನ್ ಮಾರ್ಕೆಟ್‌ನಲ್ಲಿ ರೈಸ್ ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆ. ಶ್ರೀ ವಿರೇಂದ್ರ ಪಾಟೀಲ್ ಸರ್ಕಾರ ಏಕೆ ಇದನ್ನು ಮಾಡಬಾರದು? ಜನರಿಗೆ ಅನುಕೂಲವಾಗುವ, ಅವರಿಂದ ಪ್ರೀತಿವಿಶ್ವಾಸ ಬರುವಂಥ ಕೆಲಸ ಮಾಡಿರಿ. ಅದನ್ನು ಮಾಡೇ ಮಾಡುತ್ತೀರಿ ಎಂಬ ಭರವಸೆ. ವಿಶ್ವಾಸ ನನಗೆ ಇದೆ. ಒಂದು ವಿಷಯ ಇಲ್ಲಿ ನಾವು ಹೇಳಬೇಕು.

ಏನೆಂದರೆ ಬೆಂಗಳೂರಿನವರಿಗೆ ಏಕೆ ಸಕ್ಕರೆ ಹೆಚ್ಚು ಕೊಡುತ್ತೀರಿ? ಹೊರಗಿನವರಿಗೆ ಏಕೆ ಹೆಚ್ಚು ಕೊಡುವುದಿಲ್ಲ? ಇದು ಪ್ರಶ್ನೆಯಾಗಿ ಉಳಿದಿದೆ. ಇನ್ನು ಎಷ್ಟು ದಿವಸ ಇದರ ಬಗ್ಗೆ ಸದನದಲ್ಲಿ ಮಾತನಾಡಬೇಕೋ ಗೊತ್ತಿಲ್ಲ. ಹಿಂದಿನ ಮಂತ್ರಿಗಳು ಹೀಗೆ ಮಾಡುತ್ತಿದ್ದರು ಆದರೆ ಶ್ರೀ ಅಜೀಜ್‌ಸೇಠ್‌ರವರು ಹೀಗೆ ಮಾಡುವುದಿಲ್ಲ ಎಂದು ನನಗನ್ನಿಸುತ್ತದೆ. ಅವರು ಈ ಭೇಧಭಾವ ಏನಿದೆ ತಾರತಮ್ಯ ಏನಿದೆ ಅದನ್ನು ತೆಗೆದುಹಾಕಬೇಕು. ಏಕೆಂದರೆ, ಅವರೂ ಮನುಷ್ಯರೇ, ನಾವೂ ಮನುಷ್ಯರೇ. ಅವರು ಎಷ್ಟು ಸಕ್ಕರೆ ತಿನ್ನುತ್ತಾರೋ ನಾವು ಅಷ್ಟೇ ಸಕ್ಕರೆ ತಿನ್ನುತ್ತೇವೆ ಆದ್ದರಿಂದ ಇದರ ಬಗ್ಗೆ ಬೇಧಭಾವ ಮಾಡಬೇಡಿ ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. ಈ ಇಲಾಖೆಯಲ್ಲಿ ಈ ಫುಡ್‌ಇನ್‌ಸ್ಪೆಕ್ಟರುಗಳ ಒಂದು ಸೆಕ್ಷನ್ ಇದೆ. ಅವರು ಪಗಾರ ತೆಗೆದುಕೊಳ್ಳುತ್ತಾರೆ, ಆದರೆ ಕೆಲಸ ಏನೂ ಮಾಡುವುದಿಲ್ಲ. ಅವರ ಡೈರಿಗಳನ್ನು ತರಿಸಿ ನೀವು ನೋಡಬೇಕು. ಚಿಮಣಿ ಎಣ್ಣೆಯೊಳಗೆ ನೀರು ಕೂಡಿಸುತ್ತಾರೆ. ಪೆಟ್ರೋಲ್‌ಗೆ ಆಯಿಲ್ ಕೂಡಿಸುತ್ತಾರೆ, ಪಾವೆಡೀಲಿನ್‌ಗೆ ಡೀಸಲ್ ಕೂಡಿಸಿ ಕೊಡುತ್ತಾರೆ. ಇದೆಲ್ಲ ಕಣ್ಣಿಗೆ ಕಾಣುತ್ತಿದ್ದರೂ ಕೂಡ ನಿಮ್ಮ ಡಿಪಾರ್ಟ್‌ಮೆಂಟ್ ನಿದ್ದೆ ಹೊಡೆಯುತ್ತಿದೆ. ಇದಕ್ಕೆ ಏನಾದರೂ ಚಾಟಿ ಏಟು ಕೊಟ್ಟು ಎಬ್ಬಿಸಿ ಕೆಲಸ ಮಾಡಿಯೆಂದು ಹೇಳಿಬೇಕು. ಇಲ್ಲಿ ನೀವು ಫುಡ್ ಡಿಪಾರ್ಟ್‌ಮೆಂಟ್‌ಗೆ ಬೇಡ ಎಂದು ಹೇಳಬೇಕು. ಈ ಎರಡರಲ್ಲಿ ಯಾವುದಾದರೂ ಒಂದನ್ನು ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ರೇಷನ್ ಕಾರ್ಡ್ ಬಗ್ಗೆ ಹುಬ್ಬಳ್ಳಿ ಧಾರವಾಡ ಮಹಾನಗರದೊಳಗೆ ನಾವು ಸರ್ವೆ ಮಾಡಿದ್ದೇವೆ. ನಿಮ್ಮ ಡಿಪಾರ್ಟ್‌ಮೆಂಟ್‌ನವರೂ ಸರ್ವೆ ಮಾಡಿರಬಹುದು. ಇವತ್ತು ಇನ್ನೂ ೧೬ ಸಾವಿರ ಜನರಿಗೆ ಈ ರೇಷನ್ ಕಾರ್ಡ್ ಇಲ್ಲ. ಕಾರ್ಡ್ ಇಲ್ಲವೆಂದರೆ, ನೀವು ತಿಳಿದುಕೊಳ್ಳಬಹುದು. ಇವರೆಲ್ಲರೂ ಶ್ರೀಮಂತರೆಂದು. ಆದರೆ ಅವರು ಬಡವರು, ಜೋಪಡಿಗಳಲ್ಲಿ ಇರತಕ್ಕ ಜನ. ಅವರಿಗೆ ಬೇಕಾದ ಸೀಮೆಎಣ್ಣೆ, ಸಕ್ಕರೆ, ಅಕ್ಕಿ ಮುಂತಾದ ದಿನನಿತ್ಯದ ವಸ್ತುಗಳನ್ನು ಯಾರ ಕಡೆ ಹೋಗಿ ಕೇಳ ಬೇಕು ದೊಡ್ಡವರು ಯಾರನ್ನಾದರೂ ಭೇಟಿ ಮಾಡಿ ತೆಗೆದುಕೊಂಡು ಬರುತ್ತಾರೆ. ಅಥವಾ ನಮ್ಮ ಹತ್ತಿರ ದುಡ್ಡು ಇದೆ, ನಾವು ತೆಗೆದುಕೊಂಡು ಬರುತ್ತೇವೆ. ಆದರೆ ಈ ಬಡವರು ಎಲ್ಲಿ ಹೋಗಿ ತೆಗೆದು ಕೊಳ್ಳುತ್ತಾರೆ. ನಾವು ಈ ವಿಚಾರದಲ್ಲಿ ರೇಷನ್ ಆಫೀಸರ್‌ನ್ನು ಕೇಳಿದೆವು, ಅವರು, ನಮ್ಮಲ್ಲಿ ಪ್ರಿಂಟೆಂಡ್ ಕಾರ್ಡ್ ಇಲ್ಲವೆಂದು ಮೊದಲು ಉತ್ತರ ಕೊಟ್ಟರು. ಅದಕ್ಕೆ ನಾವೇ ಪ್ರಿಂಟ್ ಮಾಡಿಸಿ ಕೊಡುತ್ತೇವೆಂದು ಹೇಳಿದಕ್ಕೆ, ಅದು ಆಗುವುದಿಲ್ಲವೆಂದು ಹೇಳಿದರು. ಮತ್ತೆ ಒಳಗಿನ ಮಾತು, ನಮ್ಮಲ್ಲಿ ಆಹಾರಧಾನ್ಯ ಕೇಂದ್ರದಿಂದ ಬರುವುದು ಕಡಿಮೆಯಾಗಿದೆ, ಅದಕ್ಕಾಗಿ ಸರ್ಕಾರದವರು ಮತ್ತು ನಮ್ಮ ಫುಡ್ ಮಿನಿಸ್ಟರು, ಅವರಿಗೆ ಏನಾದರೂ ಹೇಳಿ, ಸುಮ್ಮನೆ ಹೋಗಿ ಎಂದು ಹೇಳಿ, ಮುಂದೆ ಹಾಕಿ ಎಂದು ಹೇಳಿದರು. That responsible officer, I am quoting his name also if you want, but I don't want to quote his name This is the truth and I want that 16,000 people who are cardless, should be issued cards immediately within one month or fifteen days. ಆದರೆ ನಾವು ಮೊನ್ನೆ ಬಹಳ ಪ್ರಯತ್ನ ಮಾಡಿದಾಗ, ಚಿಮಣಿ ಎಣ್ಣೆ ತೆಗೆದುಕೊಳ್ಳಿ ಎಂದು ಒಂದು ಸ್ಲಿಪ್ ಕೊಟ್ಟರು. ಅದರಲ್ಲಿ ಚಿಮಣಿ ಎಣ್ಣೆ ಕೊಡಿ ಎಂದು ಹೇಳಿದ್ದರೂ ಸೀಮೆ ಎಣ್ಣೆ ಸಿಕ್ಕುವುದಿಲ್ಲ. ಅವರು ಕೊಡತಕ್ಕ ಸೀಮೆಎಣ್ಣೆಯಲ್ಲಿಯೇ ತಮ್ಮ ಅಡಿಗೆ ಇತ್ಯಾದಿಗಳನ್ನು ಮಾಡಿಕೊಂಡು ಹೋಗುತ್ತಿದ್ದಾರೆ. ಆದ್ದರಿಂದ ಇವತ್ತು, ನಮ್ಮ ಭಾಗದಲ್ಲಿರುವ ೧೬ ಸಾವಿರ ಜನರಿಗೆ ಕಾರ್ಡ್ ಕೊಡುವಂತಹ ಕೆಲಸ ಆಗಬೇಕು. ಅಲ್ಲಿ ಜೆನ್ಯೈನ್ ಇದ್ದರೆ ಕೊಡಿ. ನೀವು ಪರಿಶೀಲನೆ ಮಾಡಿ, ನಿಮ್ಮ ಆಫೀಸರನ್ನು ಅಲ್ಲಿ ಕಳುಹಿಸಿ, ಅವರು ನೋಡಿ ಇಷ್ಟು ಜನಕ್ಕೆ ಕೊಡಬಹುದೆಂದು ಶಿಫಾರಸ್ ಮಾಡಲಿ, ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಂಡು, ನಾನು ಹೆಚ್ಚು ಮಾತನಾಡುವುದಿಲ್ಲ, ಒಂದೆರಡು ಮಾತುಗಳನ್ನು ಹೇಳಿದ್ದೇನೆ, ನೀವು ದಯವಿಟ್ಟು ಈ ಕೆಲಸ ಮಾಡಿ, ನಿಮ್ಮ ಗೌರವಕ್ಕೆ ಧಕ್ಕೆ ಬರುವುದಿಲ್ಲ, ನಿಮ್ಮ ಅಧಿಕಾರಿಗಳ ಗೌರವಕ್ಕೆ ಧಕ್ಕೆ ಬರುವುದಿಲ್ಲ. ತಾವು ಆಂಧ್ರ ರಾಜ್ಯಕ್ಕೆ ಹೋಗಿ. ನೋಡಿಕೊಂಡು ಬನ್ನಿ, ಅವರು ಮಾಡಿದ ಹಾಗೆಯೇ ನೀವೂ ಮಾಡಿ ಎಂದು ಹೇಳುವುದಿಲ್ಲ. ಆದರೆ ಪದ್ಧತಿಯನ್ನು ಅನುಸರಿಸಲು ಸಾಧ್ಯವಿದ್ದರೆ ನೀವೂ ಅದನ್ನು ಜಾರಿಗೆ ತನ್ನಿ. ಅಥವಾ ಬೇರೆ ಬೇರೆ ಕಡೆಗಳಲ್ಲಿ ಏನಿದೆ, ಅದನ್ನು ನೋಡಿಕೊಂಡು ಬಂದು ನೀವು ನಮ್ಮ ಕರ್ನಾಟಕಕ್ಕೆ, ನಮ್ಮ ಸರ್ಕಾರಕ್ಕೆ ಕೀರ್ತಿ ಬರುವಂತಹ ಕೆಲಸ ಮಾಡಿ ನೀವು ಈ ಕೆಲಸ ಮಾಡುತ್ತೀರಿ ಎನ್ನುವ ನಂಬಿಕೆ, ವಿಶ್ವಾಸ ನನಗಿದೆ. ಇಷ್ಟು ಹೇಳಿ, ತಾವು ಇಷ್ಟರವರೆಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೀರಿ, ಆದ್ದರಿಂದ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಂಜುನಾಥ್ ಸಿ. ಕುನ್ನೂರ್.—ಮಾನ್ಯ ಸದಸ್ಯರು ಸಹಕಾರಿ ಇಲಾಖೆಯ ಬಗ್ಗೆ ಮಾತನಾಡುತ್ತಾ, ಶಿಗ್ಗಾಂವ್ ಎ.ಪಿ.ಎಂ.ಸಿ.ಯನ್ನು, ಹುಬ್ಬಳ್ಳಿ ಎ.ಪಿ.ಎಂ.ಸಿ.ಯಿಂದ ಪ್ರತ್ಯೇಕಿಸಬೇಕೆಂಬ ವಿಚಾರದಲ್ಲಿ ಮಾನ್ಯ ಸಚಿವರ ಗಮನವನ್ನು ಸೆಳೆದಿದ್ದೇನೆಂದು ಹೇಳಿದ್ದಾರೆ. ಈ ವಿಚಾರದಲ್ಲಿ ಈಗ್ಗೆ ೧೫ ದಿವಸಗಳ ಹಿಂದೆ ಚರ್ಚೆ ಕೂಡ ಮಾಡಿದ್ದೇವೆ. ನಮ್ಮ ಶಿಗ್ಗಾಂವ್ ಎ.ಪಿ.ಎಂ.ಸಿ. ಯಿಂದ ಹುಬ್ಬಳ್ಳಿ ಎ.ಪಿ.ಎಂ.ಸಿ. ಯವರು ಸಾಕಷ್ಟು ಲಾಭ ಪಡೆದಿದ್ದಾರೆ. ಆದ್ದರಿಂದ ಶಿಗ್ಗಾಂವ್ ಎ.ಪಿ.ಎಂ.ಸಿ.ಯನ್ನು ಹುಬ್ಬಳ್ಳಿ ಎ.ಪಿ.ಎಂ.ಸಿ. ಯಿಂದ ಪ್ರತ್ಯೇಕಿಸಬಾರದೆಂದು ತಮ್ಮ ಮೂಲಕ, ಸಹಕಾರ ಮಂತ್ರಿಗಳಲ್ಲಿ ವಿನಂತಿಸುತ್ತೇನೆ.

† ಶ್ರೀ ಕೆ. ಶಿವಮೂರ್ತಿ (ಭರಮಸಾಗರ).—ಮಾನ್ಯ ಅಧ್ಯಕ್ಷರೇ, ಈ ಸದನದ ಮುಂದೆ ಮಂಡಿಸಿರತಕ್ಕ ಬೇಡಿಕೆಗಳಿಗೆ ನನ್ನ ಬೆಂಬಲವನ್ನು ಸೂಚಿಸುತ್ತಾ, ಆಹಾರ ಸಚಿವರಾದ ಮಾನ್ಯ ಅಜೀಜ್ ಸೇಠ್ ರವರಿಗೆ ಒಂದೆರಡು ಸಲಹೆಯನ್ನು ಕೊಡುತ್ತೇನೆ. ಏಕೆಂದರೆ, ಅವರ ಡಿಪಾರ್ಟ್‌ಮೆಂಟ್ ಬಗ್ಗೆ ಮಾತನಾಡುವುದು ಏನೂ ಉಳಿದಿಲ್ಲ. ಜನತಾ, ಜನತಾದಳ ಸರ್ಕಾರ ಇದ್ದಾಗ, ಒಳ್ಳೆಯ ಉದ್ದೇಶದಿಂದ ಮಾಡಿದೆವು ಎಂದು ಮಾನ್ಯ ಸಿಂಧ್ಯರವರು ಹೇಳಿದರು. ಈ ಗ್ರೀನ್‌ಕಾರ್ಡ್ ಅಂದರೆ ಹಸಿರು ಕಾರ್ಡ್ ಎಂದು ಮಾಡಿ, ಯಾರು ನಿಜವಾದ ಬಡವರು ಇದ್ದಾರೆ, ಅವರಿಗೆ ಈ ಗ್ರೀನ್ ಕಾರ್ಡ್ ಸಿಗದೇ ಬರೀ ಶ್ರೀಮಂತರಿಗೇ ಸಿಗುತ್ತಿದೆ, ಬಡವರಿಗೆ ಸಿಕ್ಕಿಲ್ಲವೆಂದು ಅಸಮಾಧಾನ ಇದೆ. ಬಡವರು ಯಾರು ಇದ್ದಾರೆ, ಪಟ್ಟಿಯಲ್ಲಿ ಬಿಟ್ಟುಹೋಗಿರತಕ್ಕಂಥ ಬಡವರನ್ನು ಹುಡುಕಿ, ಅವರಿಗೆ ಈ ಗ್ರೀನ್ ಕಾರ್ಡ್ ಕೊಟ್ಟು, ರೇಷನ್ ಕೊಡತಕ್ಕ ವ್ಯವಸ್ಥೆ ಮೊದಲು ಮಾಡಬೇಕೆಂದು ನನ್ನ ಪ್ರಾರ್ಥನೆ. ತಾವು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದೀರಿ, ಶಕ್ತಿವಂತರು ಯಾರೇ ಇರಲಿ ಅವರಿಗೆ ಈ ಕಾರ್ಡ್ ಕೊಡುವುದಿಲ್ಲವೆಂದು ಹೇಳಿದ್ದೀರಿ. ಆಮೇಲೆ ನ್ಯಾಯಬೆಲೆ ಅಂಗಡಿಗಳು ಹಳ್ಳಿಗಳಲ್ಲೂ ಬಂದಿವೆ. ಇವೆಲ್ಲಾ ಇವತ್ತು ಅನ್ಯಾಯ ಬೆಲೆ ಅಂಗಡಿಗಳಾಗಿವೆ. ಇವುಗಳನ್ನು ಯಾರ ಕೈಗೆ ಕೊಟ್ಟಿದ್ದಾರೆ ಎಂದರೆ, ಯಾರು ಪಕ್ಕಾ ಅನ್ಯಾಯ ಮಾಡುವವರು ಇದ್ದಾರೆ, ಅವರಿಗೇ ಕೊಟ್ಟಿದ್ದಾರೆ. ಈ ನ್ಯಾಯ ಬೆಲೆ ಅಂಗಡಿಗಳನ್ನು ಅನ್ಯಾಯ ಮಾಡತಕ್ಕ ಜನರಿಗೆ ಕೊಟ್ಟಿದ್ದಾರೆ. ಫುಡ್ ಡಿಸ್ಟ್ರಿಬ್ಯೂಷನ್ ಒಂದು ಕಡೆ, ಫುಡ್ ಪ್ರೊಡಕ್ಷನ್ ಒಂದು ಕಡೆ. ಫುಡ್ ಡಿಸ್ಟ್ರಿಬ್ಯೂಷನ್ ಸರಿಯಾಗಿ ಆಗಬೇಕು. ಬಡವರಿಗೆ ಯಾರು ಬಡತನದ ರೇಖೆಯಿಂದ ಕೆಳಗಿರುತ್ತಾರೆ ಅವರಿಗೆ ಆಗಬೇಕು. ಹಳ್ಳಿಯಲ್ಲಿ ಏನಾಗಿದೆ ಎಂದರೆ, ಆ ಗ್ರಾಮಕ್ಕೆ ಅಂಟಿಕೊಂಡಿರತಕ್ಕಂಥ ಬೇಚರಾಕ್ ಗ್ರಾಮಗಳು ಇರುತ್ತವೆ. ವಡ್ಡರಹಟ್ಟಿ, ಬೋವಿಕಾಲೋನಿ, ಲಂಬಾಣಿ ತಾಂಡಾ, ಹರಿಜನ ಕಾಲೋನಿಗಳು ಅಥವಾ ಗೊಲ್ಲರಹಟ್ಟಿ ಇರಬಹುದು. ಅಲ್ಲೆಲ್ಲಾ ೫೦ ಕಾರ್ಡ್ ಅಥವಾ ೪೦ ಕಾರ್ಡ್ ಇರುತ್ತದೆ. ಇವರು ಮುಖ್ಯ ಗ್ರಾಮಕ್ಕೆ ಬಂದು ರೇಷನ್ ತೆಗೆದುಕೊಳ್ಳಬೇಕು. ಅವರು ಬಂದ ದಿವಸ ಇವರು ರೇಷನ್ ಕೊಡುವುದಿಲ್ಲ. ನಾಳೆ ಬನ್ನಿ, ಸ್ಟಾಕ್ ಇಲ್ಲ ಎಂದು ಅವಾಯ್ಡ್ ಮಾಡತಕ್ಕ ಸಿಸ್ಟಮ್ ಇಟ್ಟುಕೊಂಡಿದ್ದಾರೆ. ಇಷ್ಟನ್ನು ಆ ಗ್ರಾಮಗಳಿಗೆ ಕೊಡಬೇಕೆಂದು ನಿಗದಿ ಆಗಿದ್ದರೂ ಅದರಲ್ಲಿ ಅರ್ಧ ಕೊಟ್ಟು, ಇನ್ನು ಅರ್ಧ ಆಮೇಲೆ ಬನ್ನಿ ಎಂದು ಹೇಳುತ್ತಾರೆ. ಅವರ ಹತ್ತಿರ ರುಜು ತೆಗೆದುಕೊಳ್ಳುತ್ತಾರೆ. ಅವರು ಇನ್ನೋಸೆಂಟ್ ಇರುತ್ತಾರೆ. ಅವರನ್ನು ಈ ರೀತಿ ಎಕ್ಸ್‌ಪ್ಲಾಯಿಟ್ ಮಾಡತಕ್ಕ ಪದ್ಧತಿ ಇದೆ. ನ್ಯಾಯ ಬೆಲೆ ಅಂಗಡಿ ಮೂಲಕ ಅನ್ಯಾಯ ನಡೆಯತಕ್ಕ ಪರಿಪಾಠ ಆಗಿದೆ. ಅವರು ಕೇಳತಕ್ಕಂಥಾದ್ದು ಕೇವಲ ದವಸಧಾನ್ಯಗಳು. ಅವರು ಏನು ಊಟ ಮಾಡತಕ್ಕ ಪದ್ಧತಿ ಇದೆ ಅದನ್ನು ಕೇಳುತ್ತಾರೆ. ಈ ಕಡೆ ಎಲ್ಲಾ ಅಕ್ಕಿ ಬೇಕೆಂದು ಕೇಳಿದರೆ, ಆ ಕಡೆ ರಾಗಿ ಜೋಳ ಬೇಕೆಂದು ಕೇಳುತ್ತಾರೆ. ನಮ್ಮ ಕಡೆ ರಾಗಿ ಜೋಳ ತಿನ್ನುತ್ತಾರೆ. ರಾಗಿ ಜೋಳ ಕೊಡಿ ಎಂದು ಕೇಳಿದರೆ, ಗೋಧಿ ಕೊಡುತ್ತೇವೆ ಎಂದು ಹೇಳುತ್ತಾರೆ. ರಾಗಿ ಜೋಳ ತಿನ್ನುವವರಿಗೆ, ಊಟ ಮಾಡುವವರಿಗೆ, ಗೋಧಿ ಕೊಡುವ ಇದೊಂದು ಪರಿಪಾಠ ಇದೆ. ಆಯಾ ಭಾಗದಲ್ಲಿ, ಆಯಾ ಜನರ ಬೇಡಿಕೆ ಏನಿದೆ ಅದಕ್ಕೆ ತಕ್ಕಂತೆ ಆಹಾರ ಪೂರೈಕೆ ಮಾಡಬೇಕು. ಇದರ ಜೊತೆಗೆ ಸಕ್ಕರೆ ಒಂದು ಕೊಡುತ್ತೀರಿ. ಬೆಲ್ಲ ಅಂತೂ ಸೊಸೈಟಿ ಮೂಲಕ ಕೊಡುತ್ತಿಲ್ಲ. ಸಕ್ಕರೆ ಕೊಡುತ್ತಿದ್ದೀರಿ. ದುಡ್ಡಿರುವವರು ಅದನ್ನು ತೆಗೆದುಕೊಳ್ಳುತ್ತಾರೆ. ಅದೂ ಹಬ್ಬದ ದಿನ ಮಾತ್ರ ಕೊಡುತ್ತೀರಿ. ಬಾಕಿ ಯಾವ ಟೈಮ್‌ನಲ್ಲೂ ಕೊಡುವುದಿಲ್ಲ. ಬಡವರು ಸಕ್ಕರೆ ಕೇಳುವುದೇ ಇಲ್ಲ. ಅವರಿಗೆ ರಾಗಿ ಜೋಳ ಎರಡು ಸಿಕ್ಕಿಬಿಟ್ಟರೆ ಸಾಕು, ಬೇಳೆ ಮೆಣಸಿನಕಾಯಿ ಎರಡನ್ನೂ ಕಿವಿಚಿಕೊಂಡು ತಿನ್ನುತ್ತಾರೆ. ಅವರ ದೃಷ್ಟಿಯಿಂದ ಈ ನ್ಯಾಯ ಬೆಲೆ ಅಂಗಡಿಗಳನ್ನು ಯಾವರೀತಿ ಇಟ್ಟುಕೊಳ್ಳಬೇಕು ಆ ರೀತಿ ಇಟ್ಟುಕೊಳ್ಳಬೇಕು. ಸರಿಯಾದ ರೀತಿ ಸೂಪರ್‌ವಿಷನ್ ಮಾಡಬೇಕು. ಮಾನ್ಯ ಸಿಂಧ್ಯಾರವರು ಸಿಟ್ಟಾಗದಿದ್ದರೆ ಒಂದು ಮಾತನ್ನು ಹೇಳುತ್ತೇನೆ. ನ್ಯಾಯ ಬೆಲೆ ಅಂಗಡಿಗಳು ಪೂರ್ತಿ ಜನತಾ ದಳದ ಕಾರ್ಯಕರ್ತರ ಕೈಯಲ್ಲಿದೆ. ನಾನು ರಾಜಕೀಯ ಉದ್ದೇಶದಿಂದ ಮಾತನಾಡುತ್ತಿಲ್ಲ. ಯಾರೇ ಇರಲಿ, ಅವರ ಪಕ್ಷದವರು ಎಂದು ಮಾಡಿದ್ದಾರೆ. ಅದರಲ್ಲಿ ತಪ್ಪೇನಿಲ್ಲ. ಹಾಗೆಂದ ಮಾತ್ರಕ್ಕೆ ಈಗ

ಕಾಂಗ್ರೆಸ್ ಕಾರ್ಯಕರ್ತರ ಕೈಯಲ್ಲಿ ಕೊಡಿ ಎಂದು ನಾನು ಹೇಳುವುದಿಲ್ಲ. ಯಾರು ನ್ಯಾಯಯುತ ವಾಗಿ ನಡೆಸತಕ್ಕಂಥ ವ್ಯಕ್ತಿಗಳು ಇರುತ್ತಾರೆ ಅವರಿಗೆ ಕೊಡಿ ಎಂದು ಹೇಳುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಕಾಂಗ್ರೆಸ್‌ನವರು ಯಾರೂ ಇಲ್ಲ. ಎಲ್ಲಾ ಜನತಾ ಕಾರ್ಯಕರ್ತರಿಗೇ ಕೊಟ್ಟಿದ್ದಾರೆ. ಎಲ್ಲಾ ಅವರೇ ಇದ್ದಾರೆ.

ಶ್ರೀ ಕೆ. ಶಿವಮೂರ್ತಿ — ಅವರ ಅಧಿಕಾರದಲ್ಲಿ ಅವರು ಮಾಡಿದರು. ನಮಗೆ ಅಧಿಕಾರ ಬಂದಿದೆ. ಹಾಗೆಂದ ಮಾತ್ರಕ್ಕೆ ಅನ್ಯಾಯ ಮಾಡತಕ್ಕ ಕಾಂಗ್ರೆಸ್ ಕಾರ್ಯಕರ್ತರಿಗೆ ಕೊಡುವುದು ಬೇಡ ಇದರ ಬಗ್ಗೆ ಸಮತೋಲನ ಮಾಡಿ. ಅಧಿಕಾರಿಗಳಿಂದ ರಿಪೋರ್ಟ್ ತರಿಸಿಕೊಳ್ಳಿ. ನ್ಯಾಯವಾಗಿ ನಡೆಸ ತಕ್ಕಂಥವರಿಗೆ ಕೊಡಿ. ಸೊಸೈಟಿಗಳಲ್ಲಿ ಆಹಾರಧಾನ್ಯಗಳನ್ನು ತೆಗೆದುಕೊಳ್ಳುವುದು. ಅದನ್ನು ಅಲ್ಲೇ ಮಾರಿಕೊಂಡು ಹೋಗುವುದು, ಮಾರಿಕೊಂಡ ದುಡ್ಡು ತೆಗೆದುಕೊಂಡು ಬರುತ್ತಾರೆ. ಈ ರೀತಿ ಮಾಡುತ್ತಾರೆ. ಬಡವರು ಇರುತ್ತಾರೆ, ಅವರಿಗೆ ಯಾರಿಗೆ ಕಂಪ್ಲೇಂಟ್ ಮಾಡಬೇಕೋ ಗೊತ್ತಾಗುವುದಿಲ್ಲ. ನ್ಯಾಯಬೆಲೆ ಅಂಗಡಿಯವರು ಏನು ಮಾಡುತ್ತಾರೆ ಎಂದರೆ ಬಡವರ ರೇಷನ್ ಕಾರ್ಡ್ ತೆಗೆದುಕೊಂಡು ಅಲ್ಲಿ ಎಲ್ಲೋ ಒಂದು ಕಡೆ ಎಂಟ್ರಿ ಮಾಡಿಕೊಂಡು ಬಿಡುತ್ತಾರೆ. ಅದು ಬಡವರಿಗೆ ಗೊತ್ತಾಗುವುದಿಲ್ಲ. ಆದಕ್ಕೋಸ್ಕರ ಸರಿಯಾದ ತನಿಖೆ ಮಾಡಿ. ಈ ಹ್ಯಾಮ್ಲೆಟ್ ಅಥವಾ ಬೇಚರಾಕ್ ಗ್ರಾಮಗಳಿಗೆ ಮೊದಲು ನ್ಯಾಯ ಬೆಲೆ ಅಂಗಡಿ ಕೊಡತಕ್ಕಂಥ ಕೆಲಸ ಮಾಡಿ. ಮೂರು ಮೂರು ಹಳ್ಳಿಗಳನ್ನು ನೋಡಿ, ಯಾವುದು ಕೇಂದ್ರ ಸ್ಥಾನದಲ್ಲಿದೆ ಎಂಬುದನ್ನು ನೋಡಿ, ಅದಕ್ಕೆ ಸರಿ ಯಾದ ಜಾಗ ನಿಗದಿಮಾಡಿ ನ್ಯಾಯ ಬೆಲೆ ಅಂಗಡಿಗಳನ್ನು ಕೊಡತಕ್ಕ ಕೆಲಸ ಮೊದಲು ಮಾಡಬೇಕು. ಆದರೆ ನನ್ನ ಒಪೀನಿಯನ್ ಎಂದರೆ ಈ ನ್ಯಾಯ ಬೆಲೆ ಅಂಗಡಿಗಳನ್ನು ತೆಗೆದುಹಾಕತಕ್ಕದ್ದು ಸೂಕ್ತ. ಸರಕಾರದ ಅಧಿಕಾರಿಗಳೇ ನಡೆಸಲಿ. ಅದನ್ನು ತಾವೇ ಮಾಡಬೇಕೆಂದು ನನ್ನ ಅಭಿಪ್ರಾಯ. ಇನ್ನು ಫುಡ್ ಟ್ರಾನ್ಸ್‌ಪೋರ್ಟೇಷನ್ ಹೇಗೆ ನಡೆಯುತ್ತದೆಂದು ಹೇಳಿದರೆ, ಎಸೆನ್ಷಿಯಲ್ ಕಮಾಡಿಟೀಸ್ ಆಕ್ಟ್ ಫೋರ್ಸ್‌ನಲ್ಲಿದೆ ಎಂದು ನಾವು ಹೇಳುತ್ತೇವೆ. ಅಜೀಜ್‌ಸೇಠ್ ಸಾಹೇಬರು ಮಂತ್ರಿಗಳಾಗಿದ್ದಾರೆ. ಹೋರ್ಡಿಂಗ್, ಬ್ಲಾಕ್ ಮಾರ್ಕೆಟಿಂಗ್, ಅಡಲ್ಟ್ರೇಷನ್ ನಡೆಯುತ್ತಲೇ ಇದೆ. ಸೀಮೆ ಎಣ್ಣೆ, ಡೀಸಲ್, ಪೆಟ್ರೋಲ್ ಇವುಗಳನ್ನೆಲ್ಲಾ ಕಲಬೆರಕೆ ಮಾಡಿ ಮಾರುತ್ತಿದ್ದಾರೆ. ಆಮೇಲೆ ಅಕ್ಕಿಯಲ್ಲಿ ಕಲ್ಲು ಬೆರೆಸುತ್ತಾರೆ. ರವೆಯಲ್ಲಿ ಬೆರೆಸುತ್ತಾರೆ. ಎಲ್ಲದರಲ್ಲೂ ಅಡಲ್ಟ್ರೇಷನ್ ಆಗುತ್ತಿದೆ. ನಾವು ಊಟ ಮಾಡುವುದರಲ್ಲೂ ಅಡಲ್ಟ್ರೇಷನ್ ಎಂದರೆ ಏನು? ಅದಕ್ಕೋಸ್ಕರ ಈ ಅಡಲ್ಟ್ರೇಷನ್ ಮಾಡುವುದನ್ನು ಪತ್ತೆ ಹಚ್ಚುವ ಸ್ಕ್ವಾಡ್‌ನಲ್ಲಿರುವ ಅಧಿಕಾರಿಗಳು ಭಾರಿ ಪ್ರಾಮಾಣಿಕರಾಗಿರಬೇಕು. They should be constan ly vigilant and sincere. They should find out. ಸರಿಯಾಗಿ ಸೂಪರ್‌ವಿಷನ್ ಮಾಡಬೇಕು. ಈ ಫುಡ್‌ಟ್ರಾನ್ಸ್‌ಪೋರ್ಟೇಷನ್ ಬಗ್ಗೆ ಹೇಳಬೇಕೆಂದರೆ ಡಿಪೋನಲ್ಲಿ ೧.೮೦ಕ್ಕೆ ಕೊಡತಕ್ಕಂಥ ಅಕ್ಕಿಯನ್ನು ಹೊರಗಡೆ ಸಾಗಿಸಿ ಅದನ್ನು ಪಾಲಿಷ್ ಮಾಡಿ, ೪ ರೂಪಾಯಿಗೆ ಮಾರುತ್ತಿದ್ದಾರೆ.

ಈ ರೀತಿಯ ಒಂದು ಪರಿಪಾಠ ನಡೆಯುತ್ತಿದೆ. ಈ ರೀತಿ ಕಲಬೆರಕೆ ನಡೆಯುತ್ತಿರತಕ್ಕಂಥಾದ್ದರ ಬಗ್ಗೆ ತಾವು ದಯಮಾಡಿ ನೋಡಬೇಕು. ಮತ್ತು ಎಲ್ಲರಿಗೂ ಇಕ್ವಲ್ ಡಿಸ್ಟ್ರಿಬ್ಯೂಷನ್ ಮಾಡಿ ಎಲ್ಲಾ ಜನರಿಗೂ ಸಿಗುವಂತೆ ಮಾಡಬೇಕು. ತಾವೇನಾದರೂ ರಿಸ್ಟ್ರಿಕ್ಷನ್ ಮಾಡಿದರೆ ಹೊರಗಡೆ ಆರ್ಟಿಫಿಷಿಯಲ್ ಮಾರ್ಕೆಟ್ಸ್ ಶುರುವಾಗಿ ಆ ಜನಗಳು ಕರೆಫ್ಟ್ ಮಾಡಲು ಶುರು ಮಾಡುತ್ತಾರೆ. ಈಗ ರಿಸ್ಟ್ರಿಕ್ಷನ್ ಡೀಜಲ್ ಮತ್ತು ಪೆಟ್ರೋಲ್ ಬಂಕ್‌ಗಳಿಗೆ ಮಾಡಿದ್ದಾರೆ. ಒಂದು ದಿನ ಬಂದ್ ಮಾಡಬೇಕೆಂದು. ಆಗ ಏನು ಮಾಡುತ್ತಾರೆ ಕಳ್ಳತನದಲ್ಲಿ ಒಂದಕ್ಕೆ ಎರಡಷ್ಟು ಕೊಟ್ಟು ಕೊಂಡು ಕೊಳ್ಳಬೇಕಾಗುತ್ತದೆ. ಇದರಿಂದ ಆಟೋರಿಕ್ಷಾ ಡ್ರೈವರ್ಸ್‌ಗೆ ಬಹಳ ತೊಂದರೆಯಾಗುತ್ತದೆ. ಬಡಕೂಲಿಕಾರರಿಗೆ ತೊಂದರೆಯಾಗುತ್ತದೆ. ಶ್ರೀಮಂತರಿಗೆ ಬಿಡಿ, ಅವರು ಒಂದಕ್ಕೆ ಎರಡರಷ್ಟು ಕೊಟ್ಟು ಊಟ ಮಾಡತಕ್ಕಂಥ ಪರಿಸ್ಥಿತಿಯಲ್ಲಿ ಇರುತ್ತಾರೆ. ಆದರೆ ಬಡವರ ಬಗ್ಗೆ ಹೇಳಿ. ಶ್ರೀಮಂತರು ಎಷ್ಟು ರೇಟ್ ಆದರೂ ಬೇರೆ ಮಾಡುತ್ತಾರೆ. ಅವರಿಗೆ ಆ ಶಕ್ತಿ ಇರುತ್ತದೆ. ಶ್ರೀಮಂತರ ಪರವಾಗಿ ನಾವ್ಯಾರೂ ಇಲ್ಲ. ನೀವು ಏನಾದರೂ ರಿಸ್ಟ್ರಿಕ್ಷನ್ ಜಾರಿ ಮಾಡುವುದರಿಂದ ಮಾರ್ಕೆಟ್‌ನಲ್ಲಿ ಕಡಿಮೆ ಆಗಿ ಆರ್ಟಿಫಿಷಿಯಲ್ ಮಾರ್ಕೆಟ್ಸ್ ಹುಟ್ಟಿಕೊಳ್ಳುತ್ತವೆ. ಆಗ ಮಾರ್ಕೆಟ್ ನಲ್ಲಿ ಕಾಂಪಿಟೇಷನ್ ಶುರು ಆಗುತ್ತದೆ. ಬಡವರಿಗೆ ಆ ರೇಟ್‌ನಲ್ಲಿ ಕೊಂಡುಕೊಳ್ಳುವ ಶಕ್ತಿ ಇರುವುದಿಲ್ಲ ಬಡವರಿಗೆ ಹೆಚ್ಚು ಹೊರೆಯಾಗುತ್ತದೆ. ಆದ್ದರಿಂದ ನಾನು ಹೇಳುವುದೇನೆಂದರೆ ಓಪನ್ ಮಾರ್ಕೆಟ್‌ನಲ್ಲಿ ಅಗತ್ಯ ವಸ್ತುಗಳು ಎಲ್ಲರಿಗೂ ಸಿಗಬೇಕು ಯಾವ ಪ್ರೈವೇಟ್‌ನಲ್ಲಿ ಹೋದರೂ ಸಹ ಒಂದು ಫಿಕ್ಸೆಡ್ ಬೆಲೆಯಲ್ಲಿ ಸಿಗಬೇಕು ಓಪನ್ ಮಾರ್ಕೆಟ್‌ನಲ್ಲಿ ಎಷ್ಟು ಬೇಕಾದರೂ ಕೊಂಡುಕೊಳ್ಳಬಹುದು ಬಡವರು ಕೂಲಿಕಾರರು ಊಟ ಮಾಡತಕ್ಕಂಥ ದವಸಧಾನ್ಯಗಳು ಸುಲಭವಾಗಿ ಸಿಗುವಂತೆ ಮಾಡಿಕೊಡಬೇಕೆಂದು

ನಾನು ಹೇಳುತ್ತೇನೆ. ಈ ನ್ಯಾಯಬೆಲೆ ಅಂಗಡಿಗಳಿಗೆ ಇಷ್ಟೇ ಕಾರ್ಡ್ ಇಷ್ಟೇ ರೇಷನ್ ಎಂದು ರಿಸ್ಟ್ರಿಕ್‌ಷನ್ ಮಾಡಿದರೆ Again the economy fluctuates and again the poor people are hit. ಬಡವರಿಗೆ ಗುಡಿಸಲುಗಳಲ್ಲಿ ವಾಸ ಮಾಡುವವರು ಇದಕ್ಕೆ ಗುರಿಯಾಗುತ್ತಾರೆ. ದಯಮಾಡಿ ತಾವು ಈ ಅಗತ್ಯ ವಸ್ತುಗಳು ಓಪನ್ ಮಾರ್ಕೆಟ್‌ನಲ್ಲಿ ಸಿಗುವಂತಹ ವ್ಯವಸ್ಥೆ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಷ್ಟು ಹೇಳುತ್ತಾ ಈಗ ಕೇಂದ್ರ ಸರ್ಕಾರದವರು ಮಾಡಿರತಕ್ಕಂಥ ಪೆಟ್ರೋಲ್ ಮತ್ತು ಡೀಜಲ್ ಅನ್ನು ಭಾನುವಾರ ಬಂದ್ ಮಾಡಿರುವುದು ಮತ್ತು ರಿಸ್ಟ್ರಿಕ್‌ಷನ್ ಮಾಡಿರುವ ನೀತಿ ಸರಿ ಇಲ್ಲ ಎಂದು ನಾನು ಹೇಳುತ್ತೇನೆ. ಮತ್ತೆ ಇಲ್ಲಿ ಕೆಲವು ಪರ್ಚೇಸಸ್ ನಡೆದಿದೆ. ಮಾನ್ಯ ಮಂತ್ರಿಗಳು ಹಿರಿಯರಿದ್ದಾರೆ. ಅವರು ಇದನ್ನು ನೋಡಬೇಕು Purchases supply and erection of heating system. ಇದು ಪರ್ಚೇಸ್‌ನಲ್ಲಿ ೪ ಲಕ್ಷ ೧೪ ಸಾವಿರ ರೂಪಾಯಿಗಳು ಎಂದು ಮೆನ್‌ಷನ್ ಮಾಡಿದ್ದಾರೆ ಆ ಕಾಪಿ ಸಹ ತಮಗೆ ಕಳುಹಿಸಿಕೊಡುತ್ತೇನೆ. ದಯಮಾಡಿ ತಾವು ಇದನ್ನು ಪರಿಶೀಲನೆ ಮಾಡಿ. ಇದು ಎಷ್ಟು ವರ್ತ್ ಇದೆ ಅಷ್ಟು ಅವರು ಸಪ್ಲೈ ಮಾಡಿರುವುದು ಸರಿ ಇದೆಯೋ, ಅವರು ಎಷ್ಟು ಪೂರೈಸಿದ್ದಾರೆಯೋ ಎನ್ನುವುದನ್ನು ನೋಡಬೇಕು. ಕೊಟೇಷನ್ ಕರೆಯುವುದು ಅಡ್ವರ್‌ಟೈಜ್‌ಮೆಂಟ್ ಮತ್ತು ಟೆಂಡರ್ ಕರೆಯುವುದು ಇವು ನೆಪ ಮಾತ್ರ, ಮಾನ್ಯ ಮಂತ್ರಿಗಳು ಕೇಸ ಮಾಡಿದ್ದಾರೆ. ಅವರಿಗೆ ಇದೆಲ್ಲಾ ಅನುಭವ ಇದೆ ಜಾಹೀರಾತು ಮಾಡಬೇಕೆಂಬ ನೀತಿಯಿದ್ದರೆ ಅದನ್ನು ಯಾವುದೋ ಒಂದು ಮೂಲೆಯಲ್ಲಿರುವ ಲೋಕಲ್ ಪತ್ರಿಕೆಯಲ್ಲಿ ಕೊಟ್ಟು ಆ ಲೋಕಲ್ ಪತ್ರಿಕೆಗಳಿಲ್ಲವನ್ನೂ ಅವರೇ ಪರ್ಚೇಸ್ ಮಾಡಿ ಬೇರೆಯವರು ಬರುವುದನ್ನು ತಪ್ಪಿಸಿ ಟೆಂಡರ್ ಕೊಟೇಷನ್ ಅನ್ನು ಎಸ್.ಪಿ.ಡಿ ರೇಟ್‌ನಲ್ಲಿ ಒಂದು ಬ್ಲಾಕ್‌ಲಿಸ್ಟ್ ಮಾಡಿ ಇಟ್ಟಿರುತ್ತಾರೆ. ಅದರಲ್ಲಿ ಅವರಿಗೆ ಇಷ್ಟು ಪರ್ಸೆಂಟ್ ಮಾಮೂಲಿ ಎಂದು ಇರುತ್ತದೆ. ಅದು ಸಿಗುತ್ತದೆ ಪರ್ಚೇಜ್ ಮಾಡಿದ್ದರಲ್ಲಿ ಕ್ವಾಲಿಟಿ ಮೆಟೀರಿಯಲ್ಸ್ ಇದೆಯೋ ಇಲ್ಲವೇ ಎನ್ನುವುದನ್ನು ನೋಡುವುದೇ ಇಲ್ಲ ಇದು ನಡೆಯುತ್ತಿದೆ. ಅದು ಸ್ಟ್ಯಾಂಡರ್ಡ್ ಇದೆಯೋ ಅಥವಾ ಸಬ್ ಸ್ಟ್ಯಾಂಡರ್ಡ್ ಇದೆಯೋ ಎಂಬುದನ್ನು ಯಾವುದನ್ನು ಸಹ ನೋಡುವುದಿಲ್ಲ. ನಾನು ಹೇಳಿದತಕ್ಕಂಥ ಪ್ರಕರಣವನ್ನು ತಾವು ತನಿಖೆ ಮಾಡಿ ಎಂದು ಹೇಳುತ್ತೇನೆ. ಇನ್ನು ಸಾರಿಗೆ ಇಲಾಖೆ ಬಗ್ಗೆ ಮಾನ್ಯ ಸಿಂಧ್ಯರವರು ಬಹಳ ಸವಿಸ್ತಾರವಾಗಿ ಮಾತನಾಡಿದರು. ಮಾನ್ಯ ಸಿಂಧ್ಯಾರವರಲ್ಲಿ ನಾನು ತಮ್ಮ ಮೂಲಕ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ತಾವು ಹಿಂದೆ ಅಧಿಕಾರದಲ್ಲಿದ್ದವರು. ಸಾಕಷ್ಟು ವಿಷಯ ತಿಳಿದುಕೊಂಡಿದ್ದೀರಿ. You are very efficient. You have proved efficiency and worthiness. ತಾವು ಮಾಡುವಂತಹ ದಿಸೆಯಲ್ಲಿದ್ದಾಗ ನಿಮ್ಮ ಕಾಲು ಎಳೆದರು ಎನ್ನುವುದನ್ನು ನಾವು ಒಪ್ಪಿಕೊಳ್ಳುತ್ತೇನೆ. ತಾವು ಮಾತನಾಡುತ್ತಾ ಕೆಲವು ಒಳ್ಳೆಯ ಪಾಯಿಂಟ್‌ಗಳನ್ನು ಕೊಟ್ಟಿದ್ದೀರಿ. ತಾವು ಮಾತನಾಡುತ್ತಾ ಎಲ್ಲರೂ ರಾಜಕಾರಣಿಗಳು ಕರೆದುಕೊಂಡು ಬರುತ್ತಾರೆ ಆದ್ದರಿಂದ ನಾವೇನು ಮಾಡುವುದಕ್ಕೆ ಆಗುವುದಿಲ್ಲ ಎಂದು, ರಾಜಕಾರಣಿಗಳು ನಿಮ್ಮ ದೃಷ್ಟಿಯಲ್ಲಿ ಕೆಟ್ಟವರೇ ? ನಮ್ಮ ಕ್ಷೇತ್ರದಲ್ಲಿ ಒಬ್ಬ ಬಡವನಿಗೆ ನೇರವಾಗಿ ಅನ್ಯಾಯವಾಗಿರತಕ್ಕ ಒಬ್ಬ ಕಂಡಕ್ಟರ್‌ನ್ನು ಸಸ್‌ಪೆಂಡ್ ಮಾಡಿರುತ್ತಾರೆ. ಆತ ಪ್ರಾಮಾಣಿಕ ಇರುತ್ತಾನೆ ಎಲ್ಲಾ ಕಂಡಕ್ಟರ್ಸ್ ಅಪ್ರಾಮಾಣಿಕರು ಇರುವುದಿಲ್ಲ. ಕೆಲವು ಸಾರಿ ಉನ್ನತ ಅಧಿಕಾರಿಗೆ ಲಂಚ ಕೊಡದಿದ್ದರೆ ಆತ ದ್ವೇಷದಿಂದ ಸಸ್‌ಪೆಂಡ್ ಮಾಡುತ್ತಾನೆ. ಅಂತಹ ಸಂದರ್ಭಗಳಲ್ಲಿ ರಾಜಕಾರಣಿಗಳು ನಿಮ್ಮಂತಹ ಮಂತ್ರಿಗಳ ಹತ್ತಿರ ಬರುವುದು ತಪ್ಪೋ ? ನೀವು ನಮ್ಮನ್ನು ಏತಕ್ಕೆ ಗುರಿ ಮಾಡುತ್ತೀರಿ ? ಏನಾಗುತ್ತದೆ ಅಂದರೆ ರಾಜಕಾರಣಿಗಳ ನೆಪದಲ್ಲಿ ಫೈಲ್‌ಗಳ ಮಧ್ಯದಲ್ಲಿ ಏನೇನು ನಡೆಯುತ್ತದೆ ಎನ್ನುವುದನ್ನು ಪ್ರತಿಯೊಂದು ಆಫೀಸ್‌ಗೆ ಹೋಗಿ ನೋಡಿ, ಆಗ ಗೊತ್ತಾಗುತ್ತದೆ. ನಾನು ತಮ್ಮ ಆ ಮಾತುಗಳನ್ನು ಒಪ್ಪುವುದಿಲ್ಲ. ಇನ್ನು ಕೆಲವು ಬಸ್ ರೂಟ್ಸ್ ರಾಷ್ಟ್ರೀಕರಣ ಮಾಡಿದ್ದೀರಿ. I support the nationalisation spirit. ರಾಷ್ಟ್ರೀಕರಣ ಮಾಡಿ. ಆದರೆ ಖಾಸಗಿ ಬಸ್ಸುಗಳನ್ನು ತೆಗೆದು ಸರ್ಕಾರಿ ಬಸ್ಸುಗಳನ್ನು ಹಾಕಿದಿರಿ. ನಮ್ಮ ಜಿಲ್ಲೆಯಲ್ಲಿ ಪರಿಸ್ಥಿತಿ ಏನಾಗಿದೆ. ರಾಷ್ಟ್ರೀಕರಣ ಮಾಡಿದ ತಕ್ಷಣ ನಾವೆಲ್ಲ ಸ್ಟ್ರೈಕ್ ಮಾಡಿದೆವು: ಜಿಲ್ಲಾ ಪರಿಷತ್ತಿನವರು ಮಂಡಲ ಪಂಚಾಯತ್ ಸದಸ್ಯರು ಮತ್ತು ನಾನು ಸೇರಿ ಮಾಡಿದೆವು ಆದರೆ ತಾವು ಒಂದು ಮಾತು ಹೇಳಿದಿರಿ. ಅಲ್ಲಿ ಸ್ಟ್ರೈಕ್ ಮಾಡುತ್ತಿರುವವರೆಲ್ಲರೂ ಪ್ರೈವೇಟ್ ಮಾಲೀಕರ ಏಜೆಂಟ್ಸ್ ಎಂದು. ಅದು ನನಗೆ ಗೊತ್ತಾಗಲಿಲ್ಲ. ಬೇರೆ ಯಾರೋ ಹೇಳಿದರು. ಅಂತಹ ಒಂದು ದೊಡ್ಡ ಮಾತು ತಾವು ಹೇಳಿದಿರಿ. ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ರಾಷ್ಟ್ರೀಕರಣ ಮಾಡಿದ ಮೇಲೆ ಜನರಿಗೆ ಫೆಸಿಲಿಟೀಸ್ ಬೇಕು. ಹಳ್ಳಿಯ ಜನರಿಗೆ ಗೊತ್ತಾಗುವುದಿಲ್ಲ. ಅವರು ಬುದ್ಧಿವಂತರು ಅಲ್ಲ. ಬುದ್ಧಿವಂತರು ಪ್ರಜ್ಞೆ ಇರುವವರು ರಾಷ್ಟ್ರೀಕರಣ ಅಂದ್ರೆ ಏನು ಎಂದು ತಿಳಿದುಕೊಳ್ಳುತ್ತಾರೆ. ನಾವು ಅವರಿಗೆ

ಫೆಸಿಲಿಟೀಸ್ ಕೊಡಬೇಕು. ಸರ್ಕಾರ ಬಸ್ಸು ಆಗಲಿ ಖಾಸಗಿ ಬಸ್ ಆಗಲಿ ಲಗ್ಸುರಿ ಬಸ್ ಆಗಲಿ, ಟ್ರೈನ್ ಆಗಲಿ ಯಾವುದಾದರೂ ಬರಲಿ, ಒಟ್ಟಿನಲ್ಲಿ ಅವರು ಊರು ತಲುಪಬೇಕು.

೬–೦೫ ಪಿ.ಎಂ.

ಜನಕ್ಕೆ ಏನು ಬೇಕು ಸ್ವಾಮಿ ? ಸಮಯಕ್ಕೆ ಸರಿಯಾಗಿ ಊರಿಗೆ ಸೇರುವುದಕ್ಕೆ ಅನುಕೂಲವಾಗುವ ಹಾಗೆ ಬಸ್‌ಗಳು ಬೇಕು. ರಾಷ್ಟ್ರೀಕರಣವಾದ ಮೇಲೆ ಬಸ್‌ಗಳ ಸಂಖ್ಯೆ ಕಡಿಮೆಯಾಗುವುದಲ್ಲದೆ ಅದರ ಜೊತೆಗೆ ಅನುಕೂಲಗಳೂ ಕಡಿಮೆಯಾಗುತ್ತವೆ. ಒಂದು ಮಾತ್ರ ಜಾಸ್ತಿಯಾಗಿದೆ. ಅದೇನೆಂದರೆ, ಬಸ್‌ಗಳ ಟಿಕೇಟ್ ಬೆಲೆ ಜಾಸ್ತಿಯಾಗಿದೆ. ಸರ್ಕಾರಿ ಬಸ್‌ಗಳಲ್ಲಿ ಹೆಚ್ಚಿಗೆ ಟಿಕೇಟ್ ಬೆಲೆ ಇದ್ದರೆ ಅದೇ ಪ್ರೈವೇಟ್ ಬಸ್‌ಗಳಲ್ಲಿ ಕಡಿಮೆ ಟಿಕೇಟ್ ಬೆಲೆ ಇರುತ್ತದೆ. ಅದೂ ಅಲ್ಲದೆ ೫೦ ಪೈಸೆ ಕಡಿಮೆ ಇದೆ ಎಂದರೂ ಅವರು ಪ್ಯಾಸೆಂಜರ್‌ಗಳನ್ನು ಕರೆದುಕೊಂಡು ಹೋಗುತ್ತಾರೆ. ಮತ್ತು ಪ್ಯಾಸೆಂಜರ್ಸ್ ತರುವ ಮೂಟೆ ಮತ್ತು ಸಾಮಾನುಗಳನ್ನು ಪ್ರೈವೇಟ್ ಬಸ್‌ನವರುಗಳೇ ಬಸ್ ಮೇಲಕ್ಕೆ ಹಾಕುವುದಕ್ಕೆ ಸಹಾಯ ಮಾಡುತ್ತಾರೆ ಆದರೆ ಸರ್ಕಾರಿ ಬಸ್‌ಗಳ ಕಂಡಕ್ಟರುಗಳು ಒಂದು ಪೈಸೆ ಕಡಿಮೆ ಇದ್ದರೂ ಪ್ಯಾಸೆಂಜರ್‌ಗಳನ್ನು ಇಳಿಸುತ್ತಾರೆ ಹಾಗೂ ಲಗೇಜ್‌ಗಳನ್ನು ಎತ್ತಿಹಾಕುವ ಬಗ್ಗೆ ಸಹಾಯ ಮಾಡುವುದಿಲ್ಲ, ಅವರಿಗೆ ಬಸ್‌ಗಳಲ್ಲಿ ಜನ ಬಂದರೆ ಎಷ್ಟು ಬಿಟ್ಟರೆ ಎಷ್ಟು ? ಅವರಿಗೆ ತಿಂಗಳಿಗೆ ಸರಿಯಾಗಿ ಸಂಬಳ ಬಂದರೆ ಸಾಕು. ಸರ್ಕಾರಿ ಬಸ್‌ಗಳಲ್ಲಿ ಕೆಲಸ ಮಾಡುವವರಿಗೆ ಇರುವ ಒರಟುತನ ಖಾಸಗಿ ಬಸ್‌ಗಳಲ್ಲಿ ಕೆಲಸ ಮಾಡುವ ನೌಕರರುಗಳಿಗೆ ಇರುವುದಿಲ್ಲ. ನೀವು ರಾಷ್ಟ್ರೀಕರಣ ಮಾಡುತ್ತೇವೆ ಎನ್ನುವ ನೀತಿ ಸರಿಯಾಗಿದೆ. ಆದರೆ, ರಾಷ್ಟ್ರೀಕರಣ ಮಾಡಿದ ಮೇಲೆ ಸೂಕ್ತ ಪ್ರಮಾಣದಲ್ಲಿ ಬಸ್‌ಗಳನ್ನು ಹಾಕುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ರಾಷ್ಟ್ರೀಕರಣವಾಗುವ ಮೊದಲು ಪ್ರೈವೇಟ್ ಬಸ್ ಮಾಲೀಕರು ಎಷ್ಟು ಸಂಖ್ಯೆಯಲ್ಲಿ ಬಸ್‌ಗಳನ್ನು ಓಡಿಸುತ್ತಿದ್ದರೋ ಆ ಸಂಖ್ಯೆಗೆ ಸಮನಾಗಿ ಬಸ್‌ಗಳನ್ನು ಹಾಕಿದರೆ ಜನರುಗಳಿಗೆ ಸಹಾಯ ಮಾಡಬೇಕು ೮೦ ಬಸ್‌ಗಳು ಮೊದಲು ಓಡುತ್ತಿದ್ದರೆ. ರಾಷ್ಟ್ರೀಕರಣವಾದ ಮೇಲೆ ನೀವು ೪೦ ಬಸ್‌ಗಳನ್ನು ಹಾಕಿದರೆ ಜನರುಗಳಿಗೆ ಯಾವ ರೀತಿ ತೊಂದರೆಯಾಗಬಹುದೆಂದು ತಾವು ಯೋಜನೆ ಮಾಡಬೇಕು. ರಾಷ್ಟ್ರೀಕರಣವಾದ ಮೇಲೆ ಎಲ್ಲಾ ಹಳ್ಳಿಗಳಿಗೂ, ಇಂಟೀರಿಯರ್ ಇರುವ ಪ್ರದೇಶಗಳಿಗೂ ಬಸ್‌ಗಳನ್ನು ಹಾಕಲಾಗುತ್ತದೆಂದು ಹೇಳಲಾಗಿತ್ತು. ಆದರೆ ಆ ರೀತಿ ಮಾಡಲಾಗಿಲ್ಲ. ಆಮೇಲೆ, ಕೆಲವು ಹಳ್ಳಿಗಳಿಗೆ ಬಸ್‌ಗಳನ್ನು ಹಾಕಿ ಎಂದು ನಾವು ಕೇಳಿಕೊಂಡಾಗ, ಆ ರಸ್ತೆಗಳು ಸರಿಯಿಲ್ಲ ಬ್ರಿಡ್ಜ್‌ಗಳು ಸರಿಯಿಲ್ಲ ಎಂದು ಹೇಳಿದರು. ನಾನು ಮತ್ತು ಜಿಲ್ಲಾ ಪರಿಷತ್ತಿನ ಸದಸ್ಯರುಗಳೆಲ್ಲಾ ಸೇರಿ ಜಿಲ್ಲಾಪರಿಷತ್ತಿಗೆ ರೋಜ್‌ಗಾರ್ ಯೋಜನೆಯಡಿಯಲ್ಲಿ ಬಂದಂಥ ಹಣವನ್ನು ರಸ್ತೆ ರಿಪೇರಿ ಮಾಡುವುದಕ್ಕೆ ಖರ್ಚು ಮಾಡಿ ರಸ್ತೆಗಳನ್ನು ಉತ್ತಮ ಸ್ಥಿತಿಗೆ ತಂದೆವು ಆದರೂ ಬಸ್‌ಗಳು ಆ ರಸ್ತೆಗಳಲ್ಲಿ ಬರಲೇ ಇಲ್ಲ. ಇದರ ಬಗ್ಗೆ ಸುಮಾರು ೨೦ ಪತ್ರಗಳನ್ನು ನಿಮ್ಮ ಇಲಾಖೆಗೆ ಬರೆದಿದ್ದೇನೆ. ಇದರಿಂದ ಏನೂ ಪ್ರಯೋಜನವಾಗಲಿಲ್ಲ. ಅಲ್ಲಿ ಯಾವ ಬಸ್‌ಗಳು ಯಾವ ರೂಟ್‌ಗೆ ಹೋಗಬೇಕೋ ಆ ರೂಟ್‌ಗಳಿಗೆ ಹೋಗುತ್ತಿಲ್ಲ. ಇದರ ಬಗ್ಗೆ ಇಲಾಖೆಯ ಮಂತ್ರಿಗಳು ಮತ್ತು ಎಂ.ಡಿ. ಅವರ ಹತ್ತಿರವೂ ಅರಿಕೆ ಮಾಡಿಕೊಂಡಿದ್ದೇನೆ. ಈಗಲಾದರೂ ಮಾನ್ಯ ಮಂತ್ರಿಗಳು ಇತ್ತ ಕಡೆ ಗಮನ ಹರಿಸಿ ನಮ್ಮ ಕ್ಷೇತ್ರದ ಹಳ್ಳಿಗಳ ಕಡೆ ಬಸ್‌ಗಳನ್ನು ಹಾಕಿಸಿಕೊಡಬೇಕು. ಬಸ್‌ಗಳು ಬರುವ ಹಾಗೆ ಮಾಡುವುದಕ್ಕೆ ಚಿತ್ರದುರ್ಗ ಜಿಲ್ಲೆಯಲ್ಲಿ ನ್ಯಾಷನಲ್ ಹೈವೇನಲ್ಲಿ ಬಸ್‌ಗಳನ್ನು ತಡೆಹಿಡಿಯುವ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ನಮ್ಮ ಕ್ಷೇತ್ರದಲ್ಲಿ ಜನರು ಹೇಳುತ್ತಾರೆ. ಆದರೆ ಅದಕ್ಕೆ ನಾವೇ ಒಪ್ಪುತ್ತಿಲ್ಲ. ಏಕೆಂದರೆ, ಏನಾದರೂ ಗಲಾಟೆಯಾಗಿ ಫೈರಿಂಗ್ ಮಾಡಿದಾಗ ಜನರು ಸಾಯುತ್ತಾರೆ ಆ ಹೆದರಿಕೆಯಿಂದ ನಾವು ಬಸ್‌ಗಳನ್ನು ತಡೆಹಿಡಿಯುವ ಕೆಲಸ ಮಾಡಿಲ್ಲ. ಹಳ್ಳಿಗಳ ಕಡೆ ಹಾಕುವ ಬಸ್‌ಗಳು ವಾರದಲ್ಲಿ ಒಂದು ದಿವಸ ಬಂದರೆ ಇನ್ನು ನಾಲ್ಕು ದಿವಸ ಬರುವುದಿಲ್ಲ. ಒಂದು ಸಾರಿ ಬೆಂಗಳೂರು ಮತ್ತು ಸಿರಿಗೆರೆ ಊರಿಗೆ ಒಂದು ಬಸ್ ಬಿಡಬೇಕೆಂದು ಕೇಳಿಕೊಂಡಾಗ ಒಂದು ಬಸ್ಸನ್ನು ಬಿಟ್ಟರು. ಆ ದಿನ ನಾನೂ ಸಹ ಉದ್ಘಾಟನೆಗೆ ಹೋಗಿದ್ದೆ ಇನ್ನು ಮೇಲೆ ಇಲ್ಲಿಗೆ ಬಸ್ ಬರುವುದರಿಂದ ಎಲ್ಲಾ ಜನರುಗಳಿಗೆ ಅನುಕೂಲವಾಗುತ್ತದೆಂದು ನಾನು ಹೇಳಿದ್ದೆ ಅದಕ್ಕೆ ಅಲ್ಲಿದ್ದ ಜನರು ಇವತ್ತು ಮಾತ್ರ ಈ ಬಸ್ ಬರುತ್ತದೆ ಆಮೇಲೆ ಇದು ಬರುವುದಿಲ್ಲ ಎಂದು ಹೇಳಿದರು. ಅವರು ಹೇಳಿದ ಹಾಗೆ ಒಂದು ವಾರ ಮಾತ್ರ ಆ ಬಸ್ ಬಂದು ಆಮೇಲೆ ನಿಂತು ಹೋಯಿತು. ಆಮೇಲೆ ನಮ್ಮ ಭರಮಸಾಗರ ತಾಲ್ಲೂಕಿನ ಇಂಟೀರಿಯರ್ ಹಳ್ಳಿಗಳಿಗೆ ಬಸ್‌ಗಳು ಹಾಕಬೇಕೆಂದು ನಮ್ಮ ಮಂತ್ರಿಗಳಲ್ಲಿ ಕೇಳಿಕೊಂಡೆ ಅಲ್ಲಿರುವ ಹಳ್ಳಿಗಳಿಗೆ ಬಸ್‌ಗಳನ್ನು ಹಾಕಿದರೆ ಕಲೆಕ್ಷನ್ನೇ ಆಗುವುದಿಲ್ಲವೆಂದು ಅಧಿಕಾರಿಗಳು ಹೇಳಿದರು. ನಾನೇ ಒಂದು ಸಾರಿ ಬಸ್‌ನಲ್ಲಿ ಕುಳಿತುಕೊಂಡು ಇಂಟೀರಿಯರ್ ಹಳ್ಳಿಗಳಿಗೆ ಹೋದೆ. ಅಲ್ಲಿ ಬಹಳ ಚೆನ್ನಾಗಿ ಕಲೆಕ್ಷನ್ ಆಯಿತು. ಆದರೆ ಇಲ್ಲಿ ಒಂದು

ಪ್ರಾಬ್ಲಮ್ ಏನೆಂದರೆ ನಮ್ಮ ಜಿಲ್ಲೆಯಲ್ಲಿರುವ ಬಸ್ ಡಿಪೋಗಳಲ್ಲಿ ಗುಲ್ಬರ್ಗಾ, ಬೀದರ್ ಕಡೆಯುವರನ್ನು ಡ್ರೈವರ್ ಮತ್ತು ಕಂಡಕ್ಟರುಗಳಾಗಿ ಹೆಚ್ಚು ಸಂಖ್ಯೆಯಲ್ಲಿ ತೆಗೆದುಕೊಳ್ಳಲಾಗಿದೆ. ಇವರುಗಳು ವಾರದಲ್ಲಿ ನಾಲ್ಕೈದು ದಿನಗಳು ರಜಾ ಹಾಕಿ ಹೋಗಿಬಿಡುತ್ತಾರೆ ಸರಿಯಾದ ಸಂಖ್ಯೆಯಲ್ಲಿ ಕಂಡಕ್ಟರುಗಳು ಮತ್ತು ಡ್ರೈವರುಗಳು ಇಲ್ಲದೇ ಇದ್ದರೆ ಬಸ್‌ಗಳನ್ನು ಓಡಿಸುವುದಕ್ಕಾಗುವುದಿಲ್ಲ. ಇಲ್ಲಿರುವ ಡಿಪೋ ಮ್ಯಾನೇಜರ್‌ಗೂ ಬಹಳ ಕಷ್ಟ ಇದೆ, ಬಹಳ ಜನ ರಜಾ ಹಾಕಿದರೆ ಯಾವ ರೂಟ್‌ಗೆ ಯಾರನ್ನು ಕಳುಹಿಸುತ್ತೀರಿ ? ಆದ್ದರಿಂದ ಡ್ರೈವರುಗಳ ಮತ್ತು ಕಂಡಕ್ಟರುಗಳ ಕೊರತೆ ಇರುವುದರಿಂದ ಹೊಸದಾಗಿ ನೇಮಕ ಮಾಡಿಕೊಳ್ಳಬೇಕು ಆಮೇಲೆ ನಮ್ಮ ಜಿಲ್ಲೆಯಲ್ಲಿ ರಾಷ್ಟ್ರೀಕರಣವಾಗುವುದಕ್ಕಿಂತ ಮುಂಚಿತವಾಗಿ ಎಷ್ಟು ಬಸ್‌ಗಳು ಓಡುತ್ತಿದ್ದವೋ ಅಷ್ಟು ಪ್ರಮಾಣದಲ್ಲಿ ಬಸ್‌ಗಳನ್ನು ಓಡಿಸಬೇಕೆಂದು ಹೇಳುತ್ತೇನೆ. ಈ ಸರಕಾರಿ ಬಸ್‌ಗಳಿಂದ ನಮಗೆ ರಕ್ಷಣೆ ಕೊಡಬೇಕೆಂದು ಜನರು ನಮ್ಮನ್ನು ಕೇಳಿಕೊಳ್ಳುವಂಥ ಪರಿಸ್ಥಿತಿಯು ಬಂದಿದೆ. ಅಪಘಾತದ ವಿಚಾರವಾಗಿ ಮಾನ್ಯ ಸಿಂಧ್ಯರವರು ಕೂಡ ಹೇಳಿದರು ರಾಷ್ಟ್ರೀಯ ಹೆದ್ದಾರಿಯಲ್ಲಿ ಸರಕಾರಿ ಬಸ್‌ಗಳು ಹೋದರೆ ಎಲ್ಲರೂ ಹೆದರಿಕೊಳ್ಳಬೇಕು ಅಷ್ಟು ವೇಗ ಅವರದ್ದು ಇದರ ಬಗ್ಗೆ ಸ್ವಲ್ಪ ವೇಗಮಿತಿ ಮತ್ತು ಜಾಗ್ರತೆಯನ್ನು ವಹಿಸುವಂತೆ ತಾವುಗಳು ಸಂಬಂಧಪಟ್ಟವರಿಗೆ ಸೂಚನೆ ಕೊಡಬೇಕು ಎಲ್ಲಾ ಡ್ರೈವರ್, ಕಂಡಕ್ಟರ್‌ಗಳುಗಳು ಕೆಟ್ಟವರು ಎಂದು ಹೇಳುವುದಿಲ್ಲ, ಎಷ್ಟೋ ಜನರು ಒಳ್ಳೆಯವರು ಇದ್ದಾರೆ. ಕೆಲವು ಮಾನ್ಯ ಸದಸ್ಯರು ಕಂಡಕ್ಟರ್, ಡ್ರೈವರ್‌ಗಳ ಮನೆ-ಆಸ್ತಿಯನ್ನು ಜಪ್ತಿ ಮಾಡಿ ಎಂದು ಮಾತನಾಡುವಾಗ ಹೇಳಿದರು. There is a vicious circle. ಇದರಲ್ಲಿ ನಾವು ಒಪ್ಪುವ ಅಂಶ ಎಲ್ಲಾ ಇಲ್ಲ. ಏಕೆಂದರೆ ಬರೀ ಡ್ರೈವರ್ ಅಥವಾ ಕಂಡಕ್ಟರ್ ದುಡ್ಡು ತಿಂದು ಹಾಕುವುದಿಲ್ಲ. ಡಿಪೋ ಮ್ಯಾನೇಜರ್‌ನಿಂದ ಹಿಡಿದು ಕ್ಲೀನರ್ ತನಕ ಇವರುಗಳು ಇಷ್ಟಿಷ್ಟು ಪರ್‌ಸೆಂಟೇಜ್ ಅನ್ನು ಕೊಡಬೇಕಾಗುತ್ತದೆ. ಆದುದರಿಂದ ಇಂಥ ಒಂದು ವಿಷವರ್ತುಲ ಏನಿದೆ ಅದನ್ನು ಪತ್ತೆ ಹಚ್ಚಿ ಸೂಕ್ತ ಕ್ರಮ ತೆಗೆದುಕೊಳ್ಳಿ. ಏಕೆಂದರೆ ಒಬ್ಬ ಟಿ.ಸಿ. ಯು ತನ್ನ ವ್ಯಾಪ್ತಿಯಲ್ಲಿ ಬರುವ ಕಂಡಕ್ಟರ್ ಹಣ ಕೊಡಲಿಲ್ಲ ಅಂದರೆ ಅವನನ್ನು ಹೊಂಚುಹಾಕಿಕೊಂಡು ಕಾದು ಯಾವಾಗಲಾದರೊಮ್ಮೆ ಸಮಯ ನೋಡಿ ಬಲೆಹಾಕಿ ಹಿಡಿದು ಬಿಡುತ್ತಾನೆ. ಏನಾದರೂ ಮಾಡಿ ತೊಂದರೆ ಕೊಡುವುದಕ್ಕೆ ಮುಂದಾಗುತ್ತಾನೆ. ಆದರೆ ಮಾಮೂಲು ಸರಿಯಾಗಿ ಕೊಟ್ಟುಕೊಂಡು ಬಂದರೆ ಅವರಿಗೆ ಏನೂ ತೊಂದರೆ ಆಗುವುದಿಲ್ಲ. ಇಂಥ ಕೃತ್ಯಗಳನ್ನು ನಿಲ್ಲಿಸಬೇಕು. ಯಾವ ಯಾವ ಡಿಪೋಗಳಲ್ಲಿ ಯಾರ್ಯಾರ ಮೇಲೆ ಅಲಿಗೇಶನ್ ಇದೆಯೋ ಅಂಥವರನ್ನು ಪತ್ತೆ ಹಚ್ಚಿ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಿ. ಯಾರು ಒಳ್ಳೆಯ ಕೆಲಸ ಮಾಡುವವರಿದ್ದಾರೆ ಅವರನ್ನು ಪ್ರೋತ್ಸಾಹಿಸಿ. ಒಟ್ಟಿನಲ್ಲಿ ಇಂಥ ವ್ಯವಸ್ಥೆಯನ್ನು ಸರಿಯಾಗಿ ಇರುವಂತೆ ನೋಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಎಸ್.ಸಿ. ಮತ್ತು ಎಸ್.ಟಿ. ಅಧಿಕಾರಿಗಳು ತಮ್ಮಲ್ಲಿ ಹೆಚ್ಚು ಸಂಖ್ಯೆಯಲ್ಲಿಲ್ಲ. ಈ ಬಗ್ಗೆ ತಾವುಗಳು ಸ್ವಲ್ಪ ಹೆಚ್ಚು ಗಮನವನ್ನು ಕೊಡಬೇಕು. ನಮ್ಮ ತತ್ವದ ಪ್ರಕಾರ ಎಲ್ಲಾ ವರ್ಗದ ಜನರಿಗೆ ಮಾನ್ಯತೆ ಕೊಡಬೇಕೆಂದು ಇದೆ. ಅದರಂತೆ ಸಾರಿಗೆ ಸಂಸ್ಥೆಯಲ್ಲೂ ಆ ಜನರಿಗೆ ಸೂಕ್ತ ಪ್ರಾತಿನಿಧ್ಯ ಇರಲಿ ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಟಿಕೆಟ್‌ಲೆಸ್ ಪ್ರಯಾಣಿಕರ ಬಗ್ಗೆ ಬಹಳಷ್ಟು ದೂರುಗಳು ಬರುತ್ತವೆ. ನಿಜವಾಗಿ ಇದಕ್ಕೆ ಕಾರಣಕರ್ತರು ಯಾರು? ಪ್ರಯಾಣಿಕರು ಟಿಕೆಟ್ ಪಡೆದುಕೊಳ್ಳುವುದಿಲ್ಲವೇ ? ಅಥವಾ ಕಂಡಕ್ಟರ್ ಹಣ ಪಡೆದೂ ಟಿಕೆಟ್ ಕೊಡುವುದಿಲ್ಲವೆ ಎಂಬುದು ನೋಡಬೇಕಾದ ವಿಷಯ. ಟಿಕೆಟ್ ಲೆಸ್‌ನಿಂದಾಗಿ ನಷ್ಟ ಸಂಭವಿಸುತ್ತದೆ ಎಂಬ ದೂರೂ ಕೂಡ ಇದೆ. ಕೆಲವು ಬಾರಿ ಕಂಡಕ್ಟರ್ ಈ ರೀತಿಯಾಗಿ ಮಾಡುತ್ತಾರೆ. ಆದರೆ ಕೆಲವು ಬಾರಿ ಎಲ್ಲೋ ಪ್ರಯಾಣಿಕರು ಅಪ್ಪಿತಪ್ಪಿ ಇಂಥ ವರ್ತನೆ ಮಾಡಿರಬಹುದು. ಕೆಲವು ಕಡೆಗಳಲ್ಲಿ ಕುಡಿದವರು ಎಲ್ಲಾದರೂ ವಾದ ಮಾಡಿದರೆ ಸಾಕು, ಅವರು ಕಂಡಕ್ಟರ್ ಡ್ರೈವರ್‌ನ್ನು ಹೊಡೆದರು ಎಂದು ಹೇಳಿ ಅಲ್ಲಿಗೇ ಬಸ್‌ನ್ನು ನಿಲ್ಲಿಸಿ ಬಿಡುತ್ತಾರೆ. ಯಾರೋ ಮಾಡಿದ ತಪ್ಪಿಗೆ ಎಲ್ಲರಿಗೂ ಶಿಕ್ಷೆಯನ್ನು ಇವರು ಕೊಡುತ್ತಾರೆ. ಇದರಲ್ಲಿ ನಾನು ಜನರದ್ದು ತಪ್ಪು ಇಲ್ಲ, ಕೇವಲ ಕಂಡಕ್ಟರ್‌ನದ್ದೇ ತಪ್ಪು ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಆದರೂ ಸರಕಾರದ ಸಂಸ್ಥೆಯ ಸಿಬ್ಬಂದಿಯಾಗಿ ಸಾರ್ವಜನಿಕರೊಂದಿಗೆ ಹೇಗೆ ವರ್ತಿಸಬೇಕೆಂಬ ಬಗ್ಗೆ ಸೂಕ್ತ ತಿಳುವಳಿಕೆ ಇರಬೇಕಾದುದು ಅವಶ್ಯಕ. ಇಲ್ಲಿ ಮೇಲಧಿಕಾರಿಗಳ ಸೂಕ್ತ ಮೇಲ್ವಿಚಾರಣೆ ಇದ್ದಲ್ಲಿ ಸರಿಯಾಗಿ ನಡೆಯುತ್ತದೆ ಎಂಬುದನ್ನು ಅಲ್ಲಗಳೆಯಬಾರದು. ಎಲ್ಲರನ್ನೂ ಒಂದೇ ರೀತಿಯಲ್ಲಿ ನೋಡಿಕೊಳ್ಳುವ ಮನೋಭಾವನೆ ಅವರಲ್ಲಿ ಬರಬೇಕು. ಜನರು ಜಾಗೃತರಾಗಿದ್ದರೆ ಕಂಡೆಕ್ಟರ್ ಕೂಡ ಸರಿಯಾಗಿ ಟಿಕೆಟ್ ಕೊಡುತ್ತಾನೆ. Discipline should not be preached at the lowest level, it should be taught at the highest level. ಸಂಸ್ಥೆಯಲ್ಲಿ ಇರುವವರು ಪ್ರಭಾವಶಾಲಿಗಳೇ ಇರಬಹುದು. ಯೂನಿಯನ್‌ಗಳ ಬಲ ಅವರಿಗೆ ಇರಬಹುದು ರಾಜಕಾರಣಿಗಳ ಆಶೀರ್ವಾದ ಕೂಡ ಪಡೆದಿರಬಹುದು. ಅಂಥವರನ್ನು ಲಕ್ಷಿಸದೆ ರಾಜ್ಯದ

ಜನರ ಹಿತದೃಷ್ಟಿಯಿಂದ ತೆಗೆದುಕೊಳ್ಳಬೇಕಾದ ಯಾವುದೇ ಕಾರ್ಯಕ್ರಮಕ್ಕೆ ಅಂಜದೇ, ಅಳುಕದೇ, ಸಕಾಲಿಕ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಬಸ್‌ಗಳ ಸಮಯದ ಬಗ್ಗೆ ಸಾರ್ವಜನಿಕರಲ್ಲಿ ಒಳ್ಳೆಯ ಅಭಿಪ್ರಾಯವಿಲ್ಲ. ಜನರು ಶಾಲಾ ಕಾಲೇಜುಗಳಿಗೆ, ಮಾರ್ಕೆಟಿಗೆ ಮದುವೆ ಮುಂಜಿ ಮುಂತಾದ ಸಮಾರಂಭಗಳಿಗೆ ಸೂಕ್ತ ಸಮಯದಲ್ಲಿ ಹೋಗಬೇಕಾಗುತ್ತದೆ. ಆದರೆ ಸಮಯಕ್ಕೆ ಬರಬೇಕಾದ ಬಸ್ ಬಾರದೆ ಅವರು ತೊಂದರೆಗೊಳಗಾಗುತ್ತಾರೆ. ಇದನ್ನು ಸರಿಪಡಿಸಬೇಕು. ಇದಕ್ಕೆ ಡಿಪೋದಲ್ಲಿನ ಅವ್ಯವಸ್ಥೆಯೂ ಕಾರಣ. ಅಲ್ಲಿ ಸಿಬ್ಬಂದಿಯ ಕೊರತೆ, ಅಕಸ್ಮಾತ್ತಾಗಿ ರಜೆ ಮೇಲೆ ಹೋಗಿರುವ ಸಿಬ್ಬಂದಿ ಮುಂತಾದ ತೊಂದರೆಗಳು ಇರುತ್ತವೆ. ಮ್ಯಾನೇಜರ್ ಅಲ್ಲಿ ಇರುವ ಸಿಬ್ಬಂದಿಯನ್ನು ವಿನಂತಿಸಿಕೊಂಡು ಸಮಯಕ್ಕೆ ಸರಿಯಾಗಿ ಬಸ್ ಬಿಡುವ ಕೆಲಸವನ್ನು ಕಷ್ಟಪಟ್ಟು ಮಾಡಬೇಕಾಗುತ್ತದೆ. ಹೀಗೆ ಸ್ವಲ್ಪ ತಡವಾದರೂ ಪ್ರಯಾಣಿಕರು ತಮಗೆ ಸಿಕ್ಕ ಟ್ರಕ್, ಟೆಂಪೋ, ಟ್ರಾಕ್ಟರ್. ಮುಂತಾಗಿ ಸಿಕ್ಕಿದ್ದರಲ್ಲಿ ಹೋಗಿ ಬಿಡುತ್ತಾರೆ ನಂತರ ಇವರ ಬಸ್ ಬರುವಾಗ ಪ್ರಯಾಣಿಕರು ಇರುವುದಿಲ್ಲ. ಪ್ರಯಾಣಿಕರು ಆ ಲೈನ್‌ನಲ್ಲಿ ಇಲ್ಲ ಎಂದು ಆ ಮೇಲೆ ದೂರಿಕೊಳ್ಳುತ್ತಾರೆ. ಆದುದರಿಂದ ಸೂಕ್ತ ಸಮಯಕ್ಕೆ ಸರಿಯಾಗಿ ಬಸ್ ಬಿಡುವ ಒಂದು ಪರಿಪಾಠವನ್ನು ಸಂಸ್ಥೆಯಲ್ಲಿ ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ದಯಮಾಡಿ ನಮ್ಮ ಭರಮಸಾಗರ ಕ್ಷೇತ್ರಕ್ಕೆ ಎರಡು ಪ್ರತ್ಯೇಕವಾದ ಬಸ್‌ಗಳನ್ನು ಓಡಿಸುವ ಏರ್ಪಾಡು ಮಾಡಬೇಕು ರಾಷ್ಟ್ರೀಕರಣವಾದ ಮೇಲೆ ನಮಗೆ ಸಾರಿಗೆ ಸಮಸ್ಯೆಯು ಹೆಚ್ಚಾಗಿದೆ. ಬಸ್‌ಗಳು ಸಾಕಷ್ಟು ಇಲ್ಲದೆ, ಬಸ್‌ಗಳ ಟಾಪ್‌ನಲ್ಲಿ ಕುಳಿತುಕೊಂಡು ಹೋಗುವ ದೃಶ್ಯವನ್ನು ನೋಡುತ್ತಿದ್ದೇವೆ ನಾಳೆಯೇನಾದರೂ ದುರ್ಘಟನೆಗಳು ಸಂಭವಿಸಿದಲ್ಲಿ ನಾವೇ ಹೊಣೆ ಆಗಬೇಕಾಗುತ್ತದೆ. ಈ ಬಗ್ಗೆ ಎಸ್ ಪಿ.ಯವರು ಕೇಸ್ ಹಾಕಿದ್ದಾರೆ. ಎಸ್.ಐ. ಅವರೂ ಕೇಸ್ ಹಾಕಿದ್ದಾರೆ. ಆಮೇಲೆ ಆರ್.ಟಿ.ಓ. ಅವರಿಗೆ ನಾವೇ ತಿಳಿಸಿದ್ದೇವೆ. ಆದರೂ ಅನಿವಾರ್ಯವಾಗಿ ಜನರು ಹೆದರದೇ ಹೋಗುತ್ತಿದ್ದಾರೆ ಇಷ್ಟು ಓವರ್‌ಲೋಡ್ ಇದ್ದರೂ ಕೂಡ ನಿಮ್ಮ ಬಸ್‌ಗಳಲ್ಲಿ ನೀವು ನಷ್ಟ ಎಂದು ಹೇಳುತ್ತಿದ್ದೀರಿ. ಸೋಮವಾರದ ಸಂತೆಯ ದಿನಗಳಲ್ಲಂತೂ ಬಸ್ ಹೇಗೆ ತುಂಬಿಕೊಂಡು ಹೋಗುತ್ತದೆ ಎಂದು ನೀವೇ ನೋಡಿ. ಹೀಗೆ ಟಾಪ್ ಮೇಲೆ ಕುಳಿತು ಪ್ರಯಾಣ ಮಾಡುವುದು ಸರಿಯಲ್ಲ. ಸಾಕಷ್ಟು ಬಸ್‌ಗಳನ್ನು ಓಡಿಸಿ. ಇಲ್ಲದಿದ್ದರೆ ಅಪಘಾತಗಳಾದ ಮೇಲೆ ಯಾರೂ ಬಂದು ಶಾಂತಿ ಮಾಡುವುದು ಬೇಡ. ಸಾಕಷ್ಟು ಬಸ್‌ಗಳನ್ನು ಓಡಿಸುವ ವ್ಯವಸ್ಥೆಯನ್ನು ಮಾಡಿ. ಮಾನ್ಯ ಸಚಿವರಾಗಿದ್ದ ಸಿಂಧ್ಯರವರು ರಾಜ್ಯದ ಕೆಲವು ಜಿಲ್ಲೆಗಳನ್ನು ರಾಷ್ಟ್ರೀಕರಣ ಮಾಡದೇ ಹಾಗೆಯೇ ಬಿಟ್ಟಿದ್ದಾರೆ. ಬಿಟ್ಟ ಜಿಲ್ಲೆಗಳನ್ನು ಕೂಡ ರಾಷ್ಟ್ರೀಕರಣ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೋ–ಆಪರೇಷನ್ ಇಲಾಖೆ. ಈ ಮೂವ್‌ಮೆಂಟ್ ಬಹಳ ಚೆನ್ನಾಗಿದೆ. ಇದರಲ್ಲಿ ಇರಬೇಕಾದವರೆಲ್ಲ ಬಡವರೇ. ನಮ್ಮ ಜಿಲ್ಲೆಯವರೇ ಆದ ಶ್ರೀ ಏಕಾಂತಯ್ಯನವರು ಬಹಳ ಚೆನ್ನಾಗಿ ಭಾಷಣ ಮಾಡಿದರು. ಸಹಕಾರಿ ಆಂದೋಲನ ಈ ದೇಶದಲ್ಲಿ ಪ್ರಬುದ್ಧಮಾನಕ್ಕೆ ಒಂದು ಕಾಲಕ್ಕೆ ಬಂತು ಅದರ ಸ್ಪಿರಿಟ್ ಮತ್ತು ತತ್ವ ಎಲ್ಲವನ್ನೂ ಒಪ್ಪಿಕೊಳ್ಳುತ್ತೇನೆ. ಆದರೆ ಇದೂ ಕೂಡ ವಿಶಿಯಸ್ ಸರ್ಕಲ್ ಇಲ್ಲಿಯೂ ಸಹ ಒಂದೇ ವರ್ಗದ ಒಂದೇ ಗುಂಪಿನ ಜನ ತುಂಬಿದ್ದಾರೆ. ಅವರು ಆ ಸೊಸೈಟಿ ಮುಳುಗಿಸಿದರೆ ಇವರು ಈ ಸೊಸೈಟಿ ಮುಳುಗಿಸಿ ಇನ್ನೊಂದಕ್ಕೆ ಹೋಗುತ್ತಾರೆ. ಇವರೆಲ್ಲಾ ಒಂದೇ ವರ್ಗಕ್ಕೆ ಸೇರಿದ ಜನ ಈ ಚಳವಳಿ ಬಡವರ ಕೈಗೆ ತಲುಪುವುದಕ್ಕೆ ಸಾಧ್ಯವೇ ಇಲ್ಲ. ಬರೀ ಶಕ್ತಿವಂತರ ಕೈಲೇ ಇದೆ. ಯಾರೋ ಸಮಾಜಕಾರ್ಯಕರ್ತರು ನಿಸ್ಪೃಹರಿದ್ದು, ಅವರಿಂದ ಇದು, ಸ್ವಲ್ಪ ಮಟ್ಟಿಗಾದರೂ ಯಶಸ್ವಿಯಾಗಿದೆ. ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿ ಇದೆ ಕೆಟೆಕ್ಸ್ ಇದೆ ವೀವರ್ಸ್ ಸೊಸೈಟಿ ಇದೆ. ವುಲನ್ ಸೊಸೈಟಿ ಇದೆ, ಸಿಲ್ಕ್ ಸೊಸೈಟಿ ಇದೆ. ಇದೆಲ್ಲಾ ಹಾಳಾಗಿ ಪಾಪರ್ ಚೀಟಿ ಕೊಡುವ ಮಟ್ಟಕ್ಕೆ ಬಂದಿದೆ. ಯಾರು ಇದಕ್ಕೆ ಕಾರಣವೋ ಗೊತ್ತಿಲ್ಲ ಅವುಗಳಲ್ಲಿದ್ದ ಸಾಮಾನೆಲ್ಲ ಕೊಳೆತುಹೋಗಿಬಿಟ್ಟಿದೆ. ಲಿಕ್ವಿಡೇಟರ್‌ನ ಅಪಾಯಿಂಟ್‌ಮೆಂಟ್ ಮಾಡಿದ್ದರೂ ಸಹ ಆತ ಇನ್ನೂ ಬಂದು ಚಾರ್ಜ್ ತೆಗೆದುಕೊಂಡಿಲ್ಲ. ಈ ಸೊಸೈಟಿಗಳಲ್ಲಿ ಇದ್ದಿದ್ದನ್ನು ಯಾರುಯಾರೊ ಹೊತ್ತುಕೊಂಡು ಹೋಗಿ ಬಿಟ್ಟಿದ್ದಾರೆ. ಇಂತಹ ಸೊಸೈಟಿಗಳನ್ನು ಆದಷ್ಟು ಬೇಗ ನೀವು ತಪಾಸಣೆ ಮಾಡಬೇಕು ಎಷ್ಟೆಷ್ಟು ಆಸ್ತಿಯನ್ನು ಯಾರ್‍ಯಾರು ಮಾಡಿಕೊಂಡಿದ್ದಾರೆ ಎಂದು ಒಂದು ತನಿಖೆ ಮಾಡಿಸಿ ವರ್ಷ ವರ್ಷವೂ ಆಡಿಟ್ ಆಗುತ್ತಿಲ್ಲ. ಸರ್ಕಾರ ಇವಕ್ಕೆ ಸಮಯಕ್ಕೆ ಸರಿಯಾಗಿ ಹಣ ಒದಗಿಸಿದರೆ ಇವು ಚಾಲನೆಗೆ ಬರುತ್ತವೆ. ಮತ್ತು ಇವಕ್ಕೆ ಚಾಲನೆ ಕೊಡುವ ವ್ಯಕ್ತಿಗಳನ್ನು ತಾವು ಹುಡುಕಿ ಹಾಕಬೇಕು ಮತ್ತು ಈ ಸಂಸ್ಥೆಗಳಿಗೆ ಒಳ್ಳೆಯ ಆಫೀಸರ್‌ಗಳನ್ನು ಹಾಕಿದರೆ ನಿಜವಾಗಿಯೂ ಇವು ಪ್ರವೃದ್ಧಮಾನಕ್ಕೆ ಬರುವುದರಲ್ಲಿ ಆಶ್ಚರ್ಯವಿಲ್ಲ ಮತ್ತು ಅನುಮಾನವಿಲ್ಲವೆಂದು ಹೇಳುತ್ತೇನೆ.

ಆಮೇಲೆ ಮಿಲ್ಕ್ ಮತ್ತು ಸಿಲ್ಕ್ ಬಗ್ಗೆ ಹೇಳಬೇಕೆಂದರೆ, ಇವುಗಳಲ್ಲಿ ಹೆಣ್ಣುಮಕ್ಕಳಿಗೆ ಒಳ್ಳೆಯ ಆಸಕ್ತಿಯ ಅನುಭವ ಇರುತ್ತದೆ, ಅವರಿಗೆ ಇವನ್ನು ಕೊಡಿ. ಮಿಲ್ಕಿನ ಒಂದು ರೆವಲ್ಯೂಷನ್ ಏನಿದೆ ಅದರ ಹೆಜ್ಜೆಯಲ್ಲಿ ನಾವು ಯಶಸ್ವಿ ಆಗುತ್ತೇವೆ. ದಯವಿಟ್ಟು ತಾವು ಇದನ್ನು ಮಾಡಬೇಕು. ಮಿಲ್ಕ್ ಮತ್ತು ಸಿಲ್ಕ್ most productive, most popular and most reputed. ಆದ್ದರಿಂದ ಈ ಬಗ್ಗೆ ಹೆಣ್ಣುಮಕ್ಕಳ ಸಲುವಾಗಿ ಏನಾದರು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇವತ್ತು ಹಳ್ಳಿಗಳಲ್ಲಿ ಬರೀ ಸಾಲ ಮನ್ನಾ ಮಾಡಿ, ಬಡ್ಡಿ ಮನ್ನಾ ಮಾಡಿ ಎಂದು ಹೇಳುತ್ತಾರೆ. ಆದರೆ ಇದು ಹೇಗೆ ಸಾಧ್ಯವಾಗುತ್ತದೆ ? ಈ ಸಾಲ ಮನ್ನಾದಿಂದ ಸಹಕಾರಿ ಚಳುವಳಿ ಅಧಃಪತನ ಗೊಂಡಿದೆ. ಅದು ಏಳ್ಗೆಯಾಗಲು ಹೇಗೆ ಸಾಧ್ಯ ? ಅದು ಅಸಾಧ್ಯ. ಇದರಿಂದ ಪ್ರಾಂಪ್ಟ್ ಪೇಯರ್ಸ್ ಯಾರಿದ್ದಾರೆ, ಅವರೂ ಕಟ್ಟುತ್ತಿಲ್ಲ, ಏಕೆಂದರೆ ತಮ್ಮ ಸಾಲವೂ ಮನ್ನಾ ಆಗುತ್ತದೆಂದು ಮಾನಸಿಕವಾಗಿ ಅವರಿಗೆ ಬಂದುಬಿಟ್ಟಿದೆ. ಇದರಿಂದ ಸೊಸೈಟಿಗಳು ಅಧೋಗತಿಗೆ ಇಳಿದಿವೆ. ಹಳ್ಳಿಗೆ ಹೋದರೆ ಎಂಎಲ್ಎ ಗಳನ್ನು ಸಾಲ ಮನ್ನಾ ಯಾವಾಗ ಮಾಡ್ತೀರಿ ಎನ್ನುತ್ತಾರೆ ? ಅದು ಯಾವ ಸಾಲ ಯಾವ ಬಡ್ಡಿ ? ಎಷ್ಟನೇ ವರ್ಷದ ಸಾಲ ಎಂಬ ಬಗ್ಗೆ ಯಾವುದೇ ಲೆಕ್ಕಾಚಾರ ಇಲ್ಲ. ಸರ್ಕಾರದಿಂದ ತೆಗೆದುಕೊಂಡ ಸಾಲವೆಲ್ಲ ಮನ್ನಾ ಆಗುತ್ತದೆಂದು ಅವರು ತಿಳಿದುಕೊಂಡು ಬಿಟ್ಟಿದ್ದಾರೆ. ಸಹಕಾರಿ ಸಚಿವರು ಇದನ್ನು ಅರ್ಥಮಾಡಿಕೊಳ್ಳಬೇಕು. ಯಾವ್ಯಾವ ಸಾಲ ಎಷ್ಟೆಷ್ಟು ಮನ್ನಾ ಮಾಡುತ್ತೇವೆಂದು ಮಾನ್ಯ ಸಚಿವರು ಕ್ಲಿಯರಾಗಿ ಹೇಳಿಬಿಡಬೇಕು. ಇಲ್ಲಾಂದರೆ ಪ್ರಾಂಪ್ಟ್ ಪೇಯರ್ಸ್ ಸಹ ಡಿಫಾಲ್ಟ್ ಆಗಿಬಿಡುತ್ತಾರೆ. ನಾವಾಗಿಯೇ ಅವರನ್ನು ಸೋಮಾರಿಗಳನ್ನಾಗಿ ಮಾಡಿದ್ದೇವೆ. ಇದಕ್ಕೆ ನಾವು ಪ್ರೋತ್ಸಾಹ ಕೊಟ್ಟರೆ ಈ ಸಹಕಾರಿ ಚಳುವಳಿಯೇ ಹಾಳಾಗುತ್ತದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಆಮೇಲೆ ಕ್ಯಾಸ್ಟ್ ಓರಿಯೆಂಟೆಡ್ ಸೊಸೈಟಿಗಳನ್ನು ರಿಜಿಸ್ಟರ್ ಮಾಡುತ್ತಾರೆ. ವೈಶ್ಯ ಬ್ಯಾಂಕ್ ಆ ರೀತಿಯಲ್ಲಿ ಬ್ಯಾಂಕ್‌ಗಳನ್ನು ರಿಜಿಸ್ಟರ್ ಮಾಡುತ್ತಾರೆ. ಇಂಥವುಗಳನ್ನು ತಾವು ತಡೆಗಟ್ಟಬೇಕು. ಕೋ-ಆಪರೇಟಿವ್ ಮೂವ್‌ಮೆಂಟ್‌ನಲ್ಲಿ ಯಾವುದೇ ಜಾತಿಯ ಲೇಬಲ್ ಮೇಲೆ ಮಾಡತಕ್ಕಂಥದ್ದು ಇದೆಯಲ್ಲಾ, ಇದನ್ನು ತಡೆಗಟ್ಟಬೇಕು ಎಂಬ ಮಾತನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಅಧ್ಯಕ್ಷರೇ, ಮುಗಿಸಿ ಎಂದು ಹೇಳುತ್ತಿದ್ದೀರಾ? ಮುಗಿಸಿಬಿಡುತ್ತೇನೆ. ಕೊನೆಯದಾಗಿ...

ಅಧ್ಯಕ್ಷರು.—ಮುಗಿಸಬೇಕೆಂದು ನಾನು ಹೇಳುತ್ತಿಲ್ಲ. ಮಾನ್ಯ ಅಜೀಜ್‌ಸೇಠ್‌ರವರು ಹೇಳುತ್ತಿದ್ದಾರೆ.

ಶ್ರೀ ಕೆ. ಶಿವಮೂರ್ತಿ.—ಅವರು ಹಿರಿಯರು. ತಾವು ಕೂಡಾ ಹಿರಿಯರು ನಾನು ಒಪ್ಪಿಕೊಳ್ಳುತ್ತೇನೆ. ಈ ಕೋ-ಆಪರೇಟಿವ್ ಮೂವ್‌ಮೆಂಟ್‌ನಲ್ಲಿ ಬಹಳ ಜನ ಅಲ್ಲಿರತಕ್ಕಂಥ ಅಧಿಕಾರಿಗಳು ಬಹಳ ಎಫಿಷಿಯೆಂಟ್ ಆಗಿದ್ದಾರೆ. ಕೋ-ಆಪರೇಟಿವ್ ಲಾ ಎಲ್ಲಾ ಗೊತ್ತಿರತಕ್ಕಂಥವರು, ಕೋ-ಆಪರೇಟಿವ್ ಫೀಲ್ಡ್‌ನಲ್ಲಿ ಕೆಲಸ ಮಾಡಿರತಕ್ಕಂಥವರು. ಎಫಿಷಿಯೆನ್ಸಿ ಎಂದರೆ ಏಕಾಏಕಿ ಬಂದುಬಿಡುತ್ತದೆಯೆ? ಅಲ್ಲಿ ಐ.ಎ.ಎಸ್. ಅಧಿಕಾರಿಗಳನ್ನು ಹಾಕಿದ ತಕ್ಷಣ ಎಫಿಷಿಯೆನ್ಸಿ ಬಂದುಬಿಡುತ್ತದೆಯೇ? He has to under go training. He must be taught enough about co-operative movement and co-operative laws. ಅವನಿಗೆ ಗೊತ್ತಿರಬೇಕು. ಅಂಥ ಎಕ್ಸ್‌ಪೀರಿಯೆನ್ಸ್ ಆಗಿರತಕ್ಕಂಥ ಅಧಿಕಾರಿಗಳಿದ್ದಾರೆ. ನಮ್ಮಲ್ಲಿ ನಾಗರಾಜನ್ ಎಂದು ಇದ್ದರು ಸಂಗಮೇಶ್ವರ್ ಎಂದು ಐಎಎಸ್. ಅಧಿಕಾರಿಗಳಿದ್ದರು. ಅಂತಹವರನ್ನು ತಾವು ಅಡಿಪಾರ್ಟ್‌ಮೆಂಟ್‌ಗೆ ಹಾಕಿ. ನಿಜವಾಗಿಯೂ ಕೋ-ಆಪರೇಟಿವ್ ಸೊಸೈಟಿ ಎಂದರೆ ಏನು? ಕೋ-ಆಪರೇಟಿವ್ ಮೂವ್‌ಮೆಂಟ ಎಂದರೇನು? ಯಾರು ಅಲ್ಲಿ ಏನು ಮಾಡುತ್ತಿದ್ದಾರೆ ಎಂಬ ಬಗ್ಗೆ ಅವರಲ್ಲಿ ಆ ಮಾಹಿತಿ ಇದೆ. ಅವರಿಗೆ ಅನುಭವ ಇದೆ. ಅಂತರಾಳ ಇದೆ. ಅಂಥ ಅಧಿಕಾರಿಗಳನ್ನು ತಾವು ಇಟ್ಟುಕೊಳ್ಳಬೇಕು. ದಯಮಾಡಿ ಇದನ್ನು ನಾನು ಹೇಳುತ್ತಿಲ್ಲ. ಎಲ್ಲಾ ಮಾನ್ಯ ಪ್ರತಿನಿಧಿಗಳು ಕೋ-ಆಪರೇಟಿವ್ ಮೂವ್‌ಮೆಂಟ್ ಗೊತ್ತಿರುವಂಥವರು, ಲೋಕಸಭಾ ಸದಸ್ಯರಾದ ಗುಂಡದಿನ್ನಿ ಅವರು ಕೂಡಾ ಈ ಮಾತನ್ನು ಹೇಳಿದ್ದಾರೆ. ದಯಮಾಡಿ ಇದನ್ನು ಮಾಡಿ ಎಂದು ಹೇಳುತ್ತೇನೆ. ಅಲ್ಲಿ ಅಧಿಕಾರಿಗಳು ಯಾವ ರೀತಿಯಲ್ಲಿ ಮೋಸ ಮಾಡುತ್ತಾರೆ ಎಂದು ಹೇಳುತ್ತೇನೆ, ಇದು ನಮ್ಮ ರಾಜಕೀಯದಲ್ಲಿ ಮನವರಿಕೆಯಾಗಿದೆ. ತಮಗೆ ಎಷ್ಟು ಮನವರಿಕೆಯಾಗಿದೆಯೋ ಗೊತ್ತಿಲ್ಲ. ಎಂ.ಎಲ್.ಎ. ಲೆಟರ್ ಹಾಕಿದ ತಕ್ಷಣ ಕೆಲಸವಾಗಿಬಿಡುತ್ತದೆಯೇ ಎಂದು ಅಧಿಕಾರಿಗಳು ಹೇಳುತ್ತಾರಂತೆ. ಅವರ ಹತ್ತಿರವೇ ಮಾಡಿಸಿಕೊಳ್ಳಿ ಹೋಗಿ ಎಂದು ಹೇಳುತ್ತಾರಂತೆ. ಇವನ್ನು ಜನರು ನಮಗೆ ಹೇಳುತ್ತಾರೆ. M.L.A. is powerful or Officer is powerful ಎಂದು ಅವರು ಹೇಳುತ್ತಾರೆ. ಅದನ್ನು ನಾನು ಡಿಫೈನ್ ಮಾಡಬೇಕಾಗಿಲ್ಲ. ಅವರ ಧಾಟಿ

ಬದಲಾವಣೆ ಆಗಬೇಕು. ನಾವು ಜನಗಳಿಗೋಸ್ಕರ ಬಂದಿದ್ದೇವೆ ಎಂದು ನಮ್ಮ ಮನಸ್ಸು ಇದೆ. ನಮ್ಮ ಧ್ಯೇಯ ಧೋರಣೆಗಳು ಆ ರೀತಿ ಇದೆ. ಸರ್ಕಾರದ ಮೆಷಿನರಿಯನ್ನು ನಡೆಸಿಕೊಂಡು ಹೋಗುವುದಕ್ಕೆ ಅವರಿದ್ದಾರೆ. ದಯಮಾಡಿ ಇಂಥ ಸಂದರ್ಭಗಳಲ್ಲಿ ಅಧಿಕಾರಿಗಳು ಬಹಳ ಮರೆ ಮಾಡುತ್ತಾರೆ. ಹೌಸಿಂಗ್ ಸೊಸೈಟಿ ಬಗ್ಗೆ ಹೇಳುವುದಾದರೆ ಇದರ ಬಗ್ಗೆ ಬಹಳ ದೊಡ್ಡ ತನಿಖೆ ಯಾಗುತ್ತಿದೆ. ಅದರ ಅಡಿಯಲ್ಲಿ ಎಷ್ಟೆಷ್ಟು ಆಸ್ತಿ ಯಾರ್ಯಾರು ಮಾಡಿದ್ದಾರೆ? ಯಾರ್ಯಾರು ಶಾಮೀಲಾಗಿದ್ದಾರೆ. ಅದರ ದಾಖಲೆಯನ್ನು ತಮಗೆ ತಂದುಕೊಡುತ್ತೇನೆ. ಹೌಸಿಂಗ್ ಸೊಸೈಟಿಯಲ್ಲಿ ಯಾರ್ಯಾರು ಶಾಮೀಲಾಗಿದ್ದಾರೆ. ಪರ್ಚೇಸ್‌ನಲ್ಲಿ ಎಷ್ಟೆಷ್ಟು ಯಾವ ಯಾವ ಕ್ವಾಲಿಟಿಯಲ್ಲಿ ಎಲ್ಲೆಲ್ಲಿ ಮಾಡಿದ್ದಾರೆ ಎಂದು ಹೇಳತಕ್ಕಂಥದ್ದು. ಈಗ ಏನೂ ವಿವರ ಕೊಡುತ್ತಿಲ್ಲ ಯಾರು ಏನೂ ಎಂದು ಹೇಳುತ್ತಿಲ್ಲ. ಅದರ ಬಗ್ಗೆ ತಮಗೆ ಅಧಿಕಾರ ಇದೆ. ತಾವು ತನಿಖೆ ಮಾಡಿ, ಅಲ್ಲಿ ಏನು ನಡೆದಿದೆ ಎನ್ನುವುದನ್ನು ಪರಾಮರ್ಶೆ ಮಾಡಿ. ಯಾರ್ಯಾರು ಎಷ್ಟೆಷ್ಟು ಆಸ್ತಿ ಮಾಡಿದ್ದಾರೆ? ದುಡ್ಡನ್ನು ಎಲ್ಲಿ ಇಟ್ಟಿದ್ದಾರೆ? ಯಾವ ಅಕೌಂಟ್‌ನಲ್ಲಿ ದುಡ್ಡನ್ನು ಇಟ್ಟಿದ್ದಾರೆ? ಎಲ್ಲಿ ಪರ್ಚೇಸ್ ಮಾಡುತ್ತಿದ್ದಾರೆ ಯಾವ ರೀತಿಯಲ್ಲಿ ಪರ್ಚೇಸ್ ಮಾಡಿದ್ದಾರೆ? ಯಾವ ರೀತಿ ಕಾನೂನನ್ನು ತಮ್ಮದೇ ರೀತಿಯಲ್ಲಿ ಬಳಸಿಕೊಳ್ಳುತ್ತಿದ್ದಾರೆ. ಇದು ದೊಡ್ಡ ಮಟ್ಟದಲ್ಲಿ ಆಗುತ್ತಿದೆ. ಇದರ ಬಗ್ಗೆ ಸರಿ ಮಾಡಬೇಕು ಎಂದು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಕೆ. ಶಿವಣ್ಣ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ನಾನು ಈ ಕೋ-ಆಪರೇಟಿವ್ ಡಿಪಾರ್ಟ್‌ಮೆಂಟ್ ಬಗ್ಗೆ ನನ್ನ ರಾಜಕೀಯ ಜೀವನದಲ್ಲಿ ಹಾಗೂ ಮೊದಲನೆಯದಾಗಿ ಹೆಜ್ಜೆ ಇಟ್ಟು ಬಂದಿರುವಂಥಾದ್ದು ನನ್ನ ಮಾತೃ ಸಂಸ್ಥೆ ಅಂದರೆ ಕೋ-ಆಪರೇಟಿವ್ ಡಿಪಾರ್ಟ್‌ಮೆಂಟ್ ಎಂದು ಭಾವಿಸಿಕೊಂಡಿದ್ದೇನೆ. ಆ ಬಗ್ಗೆ ನನಗೆ ಬಹಳ ಅಪಾರವಾದ ವಿಶ್ವಾಸ, ಗೌರವ ಎಲ್ಲಾ ಹೊಂದಿದ್ದೇನೆ. ಅದಕ್ಕೆ ಪ್ರತ್ಯೇಕವಾಗಿ ಬಹುಶಃ ಇವೊತ್ತು ಹೆಚ್ಚಿನದಾಗಿ ಮಾತನಾಡಲಿಕ್ಕೆ ಅವಕಾಶ ಬೇಕಾಗಿಲ್ಲ ಎಂದು ಭಾವಿಸಿಕೊಂಡಿದ್ದೇನೆ. ಕಾರಣ ಸನ್ಮಾನ್ಯ ವೀರೇಂದ್ರ ಪಾಟೀಲರು ನಮ್ಮ ಜಿಲ್ಲೆಯವರಾಗಿರತಕ್ಕಂಥ ಶ್ರೀಮಾನ್ ರಾಜುರವರನ್ನು ಸಹಕಾರ ಇಲಾಖೆಯ ಮಂತ್ರಿಯಾಗಿ ಮಾಡಿರುವುದರಿಂದ ನಮ್ಮ ಜಿಲ್ಲೆಗೆ ಹಾಗೂ ಕರ್ನಾಟಕ ರಾಜ್ಯಕ್ಕೆ ಹೆಮ್ಮೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ ಎಂದು ನಾನು ಭಾವಿಸಿಕೊಂಡಿದ್ದೇನೆ. ಬಹುಶಃ ಈ ಕೋ-ಆಪರೇಟಿವ್ ಸೊಸೈಟಿಗಳ ಮೂಲಕವಾಗಿ ನಾವು ರಾಜಕೀಯ ಜೀವನದಲ್ಲಿ ಬಹುಶಃ ಅನೇಕ ಕಾಮಗಾರಿಗಳನ್ನು ಮಾಡುತ್ತೇವೆ, ಸವಲತ್ತನ್ನು ಒದಗಿಸುತ್ತೇವೆ. ಸಾಮಾನ್ಯ ಜನರ ಅಭಿವೃದ್ಧಿಗೆ ನಾವು ಸಹಾ ಕಾರಣಕರ್ತರಾಗುತ್ತೇವೆ ಎನ್ನತಕ್ಕಂಥದ್ದನ್ನು ಅನೇಕ ವೇದಿಕೆಗಳಲ್ಲಿ ಭಾಷಣ ಮಾಡಿ ಬಂದಿದ್ದೇವೆ. ಆದರೆ ಇದು ಭಾಷಣ ರೂಪದಲ್ಲಿಯೇ ಆಗಬಾರದು. ನಾವು ಅವರಿಗೆ ಸವಲತ್ತನ್ನು ಕೊಡಬೇಕಾದಾಗ ನಿಜವಾಗಿಯೂ ಏನು ಕೊಡುವುದಕ್ಕೆ ಸಾಧ್ಯ ಎಂದರೆ ಅದು ಕೋ-ಆಪರೇಟಿವ್ ಡಿಪಾರ್ಟ್‌ಮೆಂಟ್‌ನ ಮೂಲಕವಾಗಿ ನಾವು ಸಾಮಾನ್ಯ ಜನರ ಒಂದು ಆರ್ಥಿಕ ಪರಿಸ್ಥಿತಿಯನ್ನು ನಾವು ಸುಧಾರಿಸುವುದಕ್ಕೆ ಪ್ರಯತ್ನ ಮಾಡುವುದಕ್ಕೆ ಸಾಧ್ಯವಾಗುವಂತಹ ಸ್ಥಾನ ಎಂದರೆ ಅದು ಕೋ-ಆಪರೇಟಿವ್ ಸೊಸೈಟಿಗಳ ಮೂಲಕ ಸಾಧ್ಯ. ಹೀಗೆ ಮಾಡಿದಾಗ ನಾವು ಬಡವರ ಆಗುಹೋಗುಗಳ ಬಗ್ಗೆ ನಾವು ಚಿಂತನೆಯನ್ನೂ ಸಹಾ ಮಾಡಬಹುದು, ಅವರ ಆರ್ಥಿಕ ಸುಧಾರಣೆಯನ್ನು ನಾವು ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂಥ ನಂಬಿಕೆಯನ್ನು ನಾನು ಇಟ್ಟುಕೊಂಡಿದ್ದೇನೆ. ಬಹುಶಃ ಕೋ-ಆಪರೇಟಿವ್ ಮೂವ್‌ಮೆಂಟ್ ಈಸ್ ದಿ ಪೀಪಲ್ಸ್ ಮೂವ್‌ಮೆಂಟ್. ಹಾಗೂ ಇದರಲ್ಲಿ ಯಾರು ಪಾಲುದಾರ, ಯಾರು ಪಾಲುದಾರ ಅಲ್ಲ ಅಥವಾ ಯಾರು ಇದರಲ್ಲಿ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಅಥವಾ ಸಾಧ್ಯವಿದೆ ಎನ್ನುವಂಥ ಪ್ರಶ್ನೆಯಲ್ಲ, ಎಲ್ಲರೂ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಇನ್ನೊಂದು ಕಡೆ ಏನಾಗುತ್ತದೆಯೆಂದರೆ, ಕೋ-ಆಪರೇಟಿವ್ ಡಿಪಾರ್ಟ್‌ಮೆಂಟ್‌ನಲ್ಲಿ ಬಹುಶಃ ನಾವು ಲಾಭವನ್ನು ಮಾಡಬಹುದು ಅಥವಾ ನಷ್ಟವನ್ನೂ ಸಹ ಮಾಡಬಹುದು Co-operative movement is the People's movement. Co-operative Department is everybody's property, It is nobody's property also. ಏಕೆಂದರೆ ಇದು ಎಲ್ಲರ ಆಸ್ತಿಯೂ ಹೌದು, ಯಾರ ಆಸ್ತಿಯೂ ಅಲ್ಲ ಎನ್ನುವಂಥ ಮಾತನ್ನು ನಾವು ನೆನಸಿಕೊಳ್ಳಬೇಕಾಗುತ್ತದೆ. ಏಕೆಂದರೆ ಇಲ್ಲಿ ಎಷ್ಟೇ ಸಂಪಾದನೆ ಮಾಡಲಿ, ಏನೇ ಮಾಡಲಿ, ಅದು ಸಾಮಾನ್ಯ ಜನರ ಕೈಗ, ಎಲ್ಲ ಷೇರುದಾರರ ಕೈಗೆ ಸಲ್ಲುವಂಥಾದ್ದು ಹಾಗೂ ಗ್ರಾಹಕರ ಕೈಗೆ ಸಲ್ಲುವಂಥ ಒಂದು ನಮ್ಮ ಮೂಲಭೂತ ಉದ್ದೇಶವಾಗಿ ಇಟ್ಟುಕೊಂಡಿರುವುದನ್ನು ನಾವು ಇಲ್ಲಿ ನೆನೆಸಿಕೊಂಡರೆ ತಪ್ಪಾಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಆದರೆ ಇವತ್ತಿನ ದಿವಸ ಕೋ-ಆಪರೇಟಿವ್ ಸೊಸೈಟಿಗಳು ಬಹಳ ಉತ್ತಮಮಟ್ಟಕ್ಕೆ

ಹೋಗುವುದನ್ನು ನಾವು ನೋಡಬೇಕು ಎನ್ನತಕ್ಕಂಥ ಆತುರ, ಆಸಕ್ತಿ, ಕಾತುರತೆ ಎಲ್ಲರಿಗೂ ಇದೆ. ಆದರೆ ಕರ್ನಾಟಕ ರಾಜ್ಯದಲ್ಲಿ ಈ ೪೬೩೫ ಕೋ-ಆಪರೇಟಿವ್ ಸೊಸೈಟಿಗಳಿವೆ ಎಂದು ಈ ವಾರ್ಷಿಕ ವರದಿ ಪುಸ್ತಕದಲ್ಲಿ ನಾವು ನೋಡಿದ್ದೇವೆ, ಸಂತೋಷ. ಆದರೆ ಅವುಗಳ ಶಕ್ತಿ ಗುಣಮಟ್ಟ ಎಷ್ಟರ ಮಟ್ಟಿಗೆ ಹೆಚ್ಚಿದೆ ಅಂದರೆ ಬಹುಶಃ ಬರುತ್ತಾ ಬರುತ್ತಾ ಅದು ಕ್ಷೀಣತೆಗೆ ಹೋಗುತ್ತಾ ಇದೆ ಎನ್ನುವ ಮಾತನ್ನು ಬಹಳ ವ್ಯಸನದಿಂದ ಹೇಳಲು ಇಷ್ಟಪಡುತ್ತೇನೆ. ಬಹುಶಃ ಈ ವ್ಯಸನಕ್ಕೆ ಕಾರಣ ಯಾರು ಎನ್ನುವಂಥ ಪ್ರಶ್ನೆ ಬೇಡ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಅಧ್ಯಕ್ಷರೆ, ಸಮಯ ಆಗಲೆ ಆರೂವರೆ ಆಯಿತು. ಬೆಳಿಗ್ಗೆಯಿಂದ ನಾವು ಸ್ಕೂಲು ಹುಡುಗರು ಕುಳಿತ ಹಾಗೆ ಕುಳಿತಾಗಿದೆ. ಇದಕ್ಕೆ ಏನಾದರೂ ಪರಿಹಾರ ಒದಗಿಸಬೇಕು ಎಂದು ಮಾನ್ಯ ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಎಷ್ಟು ಹೊತ್ತು ಕುಳಿತು ಕೊಳ್ಳುವುದು ಎಂದು ಹೇಳಿಬಿಟ್ಟರೆ ಬೇಕಾದರೆ ೧೧ ಗಂಟೆ ರಾತ್ರಿಯಾದರೂ ಕುಳಿತುಕೊಳ್ಳುವುದಕ್ಕೆ ನಾವು ರೆಡಿ ಇದ್ದೇವೆ, ಅದಕ್ಕೆ ಸಿದ್ಧತೆಯನ್ನು ಮಾಡಿಕೊಳ್ಳುತ್ತೇವೆ. ಎಷ್ಟು ಹೊತ್ತು ಕುಳಿತರೂ ಅಡ್ಡಿಯಿಲ್ಲ, ಟೈಂ ಫಿಕ್ಸ್ ಆಗಲಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ, ಒರಿಜಿನಲ್ ಕ್ಯಾಲಂಡರ್ ಆಫ್ ಇವೆಂಟ್ಸ್ ಪ್ರಕಾರ ಈಗಾಗಲೇ ನಾವು we are ten days behind schedule. ಈವನ್ ರಿವೈಸ್ಡ್ ಅಜೆಂಡಾ ಮಾಡುವಾಗ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಮ್ಮ ಮಾನ್ಯ ಸ್ನೇಹಿತರು ಇದ್ದರು, ಎಲ್ಲ ಇದ್ದರು. At no cost we should be changed ಎಂಬ ತಿಳಿವಳಿಕೆಗೆ ನಾವು ಬಂದ ಮೇಲೆ ನಾವು ಇವತ್ತು ಇನ್ನೂ ಸಭೆ ಸೇರಿದ್ದೇವೆ. ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ. ಈ ಸದನದಲ್ಲಿ ಡಿಮ್ಯಾಂಡ್ಸ್ ಮೇಲೆ ೧೮-೨೦ ದಿವಸಗಳ ಮೇಲೆ ಚರ್ಚೆ ಯಾವಾಗಲೂ ಆಗಲಿಲ್ಲ. This debate what is happenning to-day is uuprecedented asfar as the duration is concerned. Perhaps 30-35 days we are sitting. ೧೨ನೇ ತಾರೀಖು ಮುಗಿಯುವುದು ಇದ್ದರೂ ಕೂಡ ಈಗಿನ ಪರಿಸ್ಥಿತಿ ನೋಡಿದರೆ we are three days behind schedule. ಎಲ್ಲ ವಿಷಯಗಳ ಮೇಲೆ ಎಲ್ಲ ಸನ್ಮಾನ್ಯ ಸದಸ್ಯರು ಮಾತನಾಡಲೇಬೇಕು ಎಂದು ಕುಳಿತುಕೊಂಡರೆ ಬಹುಶಃ ೬೦ ದಿವಸ ಕುಳಿತುಕೊಂಡರೂ ಈ ಡಿಬೇಟ್ ಆಗುವುದಿಲ್ಲ. ಈಗ ಆಗತಕ್ಕಂಥ ಡಿಬೇಟ್‌ನ ಪರಿಸ್ಥಿತಿ ನೋಡಿದರೆ ನನಗನ್ನಿಸುತ್ತದೆ, ಬಹುಶಃ another ten days we will have to postpone. ಆದುದರಿಂದ ಈ ಪರಿಮಿತಿಯನ್ನು ಸನ್ಮಾನ್ಯ ಸದಸ್ಯರು ತಿಳಿದುಕೊಂಡು ಈ ಡಿಬೇಟನ್ನು ಮುಗಿಸಲಿಕ್ಕೆ ಸಹಕಾರ ಕೊಡಬೇಕು ಎಂದು ತಮ್ಮ ಮುಖೇನ ಸನ್ಮಾನ್ಯ ಸದಸ್ಯರನ್ನು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಾ ಇದ್ದೇನೆ. ಇಲ್ಲದಿದ್ದರೆ ಏನಾಗುತ್ತದೆಯೆಂದರೆ this will go beyond 25th of next month. We are schedule'd to complete it by 12th July 1990, at the most. It is left to the Hon'ble Speaker. ತಮ್ಮ ಮುಖೇನ ಸದನಕ್ಕೆ ನನ್ನ ಪ್ರಾರ್ಥನೆ ಏನೆಂದರೆ, ಯಾವುದು ಕೆಲವು ಪ್ರಾಮುಖ್ಯವಾದಂಥ ಡಿಮ್ಯಾಂಡ್‌ಗಳಿವೆ ಅವುಗಳ ಮೇಲೆ ನಾವು ಅಧ್ಯಯನ ಮಾಡಿಕೊಂಡು ಇಲ್ಲಿ ಚರ್ಚೆ ಮಾಡಿದರೆ ಹೆಚ್ಚು ಫಲದಾಯಕವಾಗುತ್ತದೆ, ಹೆಚ್ಚು ಪರಿಣಾಮಕಾರಿಯಾಗುತ್ತದೆ. ಇಲ್ಲ, ಎಲ್ಲ ಡಿಮ್ಯಾಂಡ್‌ಗಳ ಮೇಲೆ ಸಾಮಾನ್ಯವಾಗಿ ಎಲ್ಲ ಮಾನ್ಯ ಸದಸ್ಯರು ಮಾತನಾಡಬೇಕು ಇಲ್ಲ ಎನ್ನುವಂಥ ಧಾಟಿಯಲ್ಲಿ ಹೋದರೆ ಡಿಬೇಟ್ ಕೂಡ ಪರಿಣಾಮಕಾರಿಯಾಗುವುದಿಲ್ಲ, ಫಲಪ್ರದ ಆಗುವುದಿಲ್ಲ, ಇದರಿಂದ ಸರ್ವೇಸಾಮಾನ್ಯವಾದಂಥ ಪರಿಣಾಮ ಆಗುತ್ತದೆ. ಆದುದರಿಂದ ಸದನದಲ್ಲಿ ಪರಿಣಾಮಕಾರಿಯಾದಂಥ ಚರ್ಚೆಯ ದೃಷ್ಟಿಯಿಂದ ಕೂಡ ಯಾವ ಒಂದು ಪರಿಮಿತಿಯನ್ನು ಹಾಕಿದ್ದೇವೆ ಆ ಪರಿಮಿತಿಗೆ ಹೋಗುವುದು ಒಳ್ಳೆಯದೆಂದು ನನಗನ್ನಿಸುತ್ತದೆ. My suggestion is that even if it cannot be concluded to-day's business, perhaps, tomorrow 1-$1\frac{1}{2}$ hours can be extended immediately. Three Ministers are there. They can be asked to conclude it. As it is three days we are behind schedule.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾವು ಬಿಎಸಿನಲ್ಲಿ ಏನು ಒಪ್ಪಿಕೊಂಡಿದ್ದೇವೆ, ಅದರ ಪ್ರಕಾರ ನಡೆದುಕೊಳ್ಳಬೇಕಾದುದು ಎಲ್ಲರ ಇಚ್ಛೆ ಕೂಡ ಆಗಿದೆ ಆದರೆ ತಮಗೆ ಗೊತ್ತಿರುವ ಹಾಗೆ, ೨-೩ ವಿಚಾರಗಳ ಬಗ್ಗೆ ತೀರಾ ಅನಿವಾರ್ಯವಾಗಿ ಸದನದಲ್ಲಿ ಮಾತನಾಡಬೇಕಾದ ಒಂದು ಸಂದರ್ಭ ಒದಗಿ ಬಂತು. ಎರಡು ದಿನಗಳ ಕಾಲ ದೂರವಾಣಿ ಕದ್ದಾಲಿಕೆ ಬಗ್ಗೆ ಚರ್ಚೆ ಮಾಡಬೇಕಾದ ಪ್ರಸಂಗ ಬಂತು. ಈ ಬಗ್ಗೆ ಬಿಎಸಿನಲ್ಲೇ ಎರಡೂವರೆ ಗಂಟೆಗಳ ಕಾಲ ಮಾತ್ರ ಚರ್ಚೆ ಮುಗಿಸಬೇಕೆಂದು ತೀರ್ಮಾನ ಮಾಡಿ,

ಅದರಂತೆ ನಡೆದುಕೊಂಡಿದ್ದರೆ, ಮಾನ್ಯ ಸಂಸದೀಯ ಸಚಿವರು ಹೇಳಿದಂತೆ ನಾವು ಮೂರು ದಿನ ಹಿಂದೆ ಇರುತ್ತಿರಲಿಲ್ಲ, ಒಂದು ದಿನ ಹಿಂದೆ ಇರುತ್ತಿದ್ದೆವು. ನಾನು ಈ ಸದನದಲ್ಲಿ ಕೆಲಸ ಮಾಡಿದ್ದೇನೆ. ತಾವು ಕೂಡ ಬಜೆಟ್ ಬಗ್ಗೆ ಇಷ್ಟೊಂದು ದೀರ್ಘವಾಗಿ ಚರ್ಚೆ ಮಾಡಲಿಕ್ಕೆ ತಾವು ಮತ್ತು ಸರ್ಕಾರದವರು ಅವಕಾಶ ಕೊಟ್ಟಿದ್ದೀರಿ, ಇಲ್ಲ ಅಂತ ಹೇಳುವುದಿಲ್ಲ. ಆದರೆ, ನಾವು ಎರಡೂವರೆ ಗಂಟೆ ಕಾಲ ಮಾತ್ರ ಮಾತನಾಡಿದ್ದೇವೆ, ಆ ಕಡೆ ಸದಸ್ಯರೂ ಕೂಡ ಎರಡೂವರೆ ಮೂರು ಗಂಟೆಕಾಲ ಮಾತನಾಡಿದ್ದಾರೆ. ಇವತ್ತು ಸಾರಿಗೆ ಇಲಾಖೆ ಮೇಲೆ ಮಾತನಾಡಲಿಕ್ಕೆ ಮಹತ್ವದ ವಿಚಾರಗಳು ಇದ್ದವು ಆದರೆ, ಅವರನ್ನು ಖಾಸಗೀಯಾಗಿ ಭೇಟಿ ಮಾಡಿದಾಗ ಹೇಳುತ್ತೇನೆ. ನಮಗೂ ತೊಂದರೆಯಾಗಿದೆ, ಆದರೂ ನಾನು ಮನವಿ ಮಾಡುವುದೇನೆಂದರೆ ಬಿಎಸಿನಲ್ಲಿ ಉಳಿದ ವಿಚಾರಗಳನ್ನು ನಾವು ತೀರ್ಮಾನ ಮಾಡೋಣ. ೧೧ ಗಂಟೆಗೆ ಸೇರಿದ್ದೇವೆ, ೬ ಗಂಟೆಗೆ ಮುಗಿಸೋಣ. ಇನ್ನೂ ಒಂದು ಅಥವಾ ಒಂದೂವರೆ ಗಂಟೆಗಳ ಕಾಲ ಕೂತು ಚರ್ಚೆ ಮಾಡೋಣ. ಇವೊತ್ತು ಈ ಚರ್ಚೆ ಸಮಾಪ್ತಿಯಾಗಲಿ, ಬೆಳಿಗ್ಗೆ ೯ ಗಂಟೆಯಿಂದ ೧ ಗಂಟೆ ಚರ್ಚೆ ಮಾಡಿ, ಅನಂತರ ಮಂತ್ರಿಗಳು ಉತ್ತರ ಕೊಡಲಿ, ಆ ಮೇಲೆ ಮುಂದಿನ ಕಾರ್ಯ ಕಲಾಪಗಳನ್ನು ಮುಂದುವರಿಸಿಕೊಂಡು ಹೋಗೋಣ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾಳೆ ಬೆಳಿಗ್ಗೆ ಕ್ಯಾಬಿನೆಟ್ ಮೀಟಿಂಗ್ ಕರೆದಿರುವುದರಿಂದ ಕೂತುಕೊಳ್ಳುವುದಕ್ಕೆ ಸಮಸ್ಯೆ ಇದೆ. ೧೮–೨೦ ದಿವಸಗಳ ಹಿಂದೆ ನಾವು ಏನು ಕಾಲ ಕಳೆಯುತ್ತಿದ್ದೆವು, ಅಲ್ಲಿಂದ ಇಲ್ಲಿಯವರೆಗೆ ಬೇರೆ ಕಲಾಪಗಳನ್ನು ಸೇರಿಸಿಕೊಂಡರೂ ಸಹ ಹೆಚ್ಚಿನ ಬೇಡಿಕೆಗಳನ್ನು ಪಾಸ್ ಮಾಡಲು ಸಾಧ್ಯವಾಗಲಿಲ್ಲ. With all that we are extending it to 30–35 days. If it is necessary we can meet again in the Business Advisory Committee meeting aud sort out which are the subjects where we must pinpoint and discuss. ಇದನ್ನು ಮಾಡಿದರೆ, ಬಹುಶಃ ಷೆಡ್ಯೂಲ್ಡ್ ಪ್ರಕಾರ ಹೋಗುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಸಿಂಧ್ಯಾರವರು ಹೇಳಿದ ಪ್ರಕಾರ ಇವತ್ತು ಚರ್ಚೆ ಮುಗಿಸಿದರೆ, tomorrow there are three ministers who have got to answer. Perhaps, they can take up and we can take up fresh demands tomorrow.

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ, ಆ ಕಡೆ ೨೫-೩೦ ಜನ ಇದ್ದು ೨-೩ ಗಂಟೆ ಮಾತನಾಡುತ್ತಾರೆ. ನಾವು ಇಲ್ಲಿ ೧೮೫ ಜನ ಇದ್ದೇವೆ. ನಾವು ಪ್ರತಿಸಾರಿ ಪ್ರಶ್ನೆ ಕೇಳಿದಾಗ, ಡಿಮ್ಯಾಂಡ್ ಬಂದಾಗ ಕೇಳಿ ಎಂದು ಹೇಳುತ್ತೀರಿ. ಈಗ ಡಿಮ್ಯಾಂಡ್ ಬಂದಾಗ ಮಾತನಾಡುವುದಕ್ಕೆ ಅವಕಾಶ ಇರುವುದಿಲ್ಲ. ಹೀಗಾದರೆ ನಮ್ಮ ಗತಿ ಏನು ?

ಶ್ರೀ ಪಿ. ಸಿ. ಸಿದ್ದನಗೌಡ.—ನೀವು ಸಂಖ್ಯೆ ಕಡಿಮೆ ಮಾಡಿಕೊಳ್ಳಿ, ಆಗ ಸರಿಹೋಗುತ್ತದೆ

ಶ್ರೀ ಕೆ. ಹೆಚ್. ಹನುಮೇಗೌಡ.—ನೀವು ಮಾಡಬಾರದ್ದು ಮಾಡಿ ಅಲ್ಲಿ ಕೂತಿದ್ದೀರಿ. ಅದಕ್ಕೆ ನಾವು ಜವಾಬ್ದಾರರಲ್ಲ. ಚರ್ಚೆ ಮಾಡಲು ನಮಗೆ ರಿಸ್ಟ್ರಿಕ್ಷನ್ ಮಾಡದೇ ನಮಗೂ ಅವರಷ್ಟೇ ಟೈಂ ಕೊಡಬೇಕು. ಮಾನ್ಯ ಸಂಸದೀಯ ಸಚಿವರು ಟೈಂಲಿಮಿಟ್ ಹಾಕಿ ಎಂದು ಹೇಳಿದರೆ, ನಮ್ಮ ಗತಿ ಹೇಗೆ ? ನಮ್ಮ ಕ್ಷೇತ್ರದ ಗತಿ ಹೇಗೆ ? ಆಯಾ ಇಲಾಖೆಗಳ ಬಗ್ಗೆ ನಮ್ಮ ಅಭಿಪ್ರಾಯವನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದು ನಮ್ಮ ಕೆಲಸಗಳನ್ನು ಈಡೇರಿಸಿಕೊಳ್ಳಬೇಕೆಂದು ನಮಗೆ ಇರುತ್ತದೆ. ಆದ್ದರಿಂದ ದಯಮಾಡಿ ಅವರಿಗೆ ಟೈಂ ಕಡಿಮೆ ಕೊಡಿ. ಸಿಂಧ್ಯಾರವರಿಗೆ ಅನುಭವ ಇದೆ. ಅವರು ಮಾತನಾಡಲಿ, ಆದರೆ ಉಳಿದವರೂ ಗಂಟೆಗಟ್ಟಲೆ ಮಾತನಾಡಿದರೆ ನಮಗೆ ಕಷ್ಟವಾಗುತ್ತದೆ. ನಾವೂ ಜನಗಳಿಂದ ಚುನಾಯಿತರಾಗಿ ಬಂದಿದ್ದೇವೆ. ನಾವು ಊರಿಗೆ ಹೋದಾಗ ಕೇಳುತ್ತಾರೆ. ಅಸೆಂಬ್ಲಿಗೆ ಹೋಗಿದ್ದೀರೋ ಅಥವಾ ಬೇರೆ ಎಲ್ಲಿಗಾದರೂ ಹೋಗಿದ್ದಿರೋ ಎಂದು ಕೇಳುತ್ತಾರೆ. ಮೂರೊತ್ತು ಅವರದ್ದೇ ಪತ್ರಿಕೆಗಳಲ್ಲಿ ಬರುತ್ತೆ ಎಂದು ಹೇಳುತ್ತಾರೆ. ನಾವು ೧೦ ನಿಮಿಷ ಮಾತನಾಡಬೇಕಾದರೆ, ವಾರಗಟ್ಟಲೆ ಕಾಯಬೇಕು. ನಮಗೆ ಓಟು ಕೊಟ್ಟ ಆ ಮಾಸ್ಟರುಗಳ ಮಾತು ಕೇಳಬೇಕೋ ಅಥವಾ ಇಲ್ಲಿರತಕ್ಕ ಮಾಸ್ಟರುಗಳ ಮಾತು ಕೇಳಬೇಕೋ? ನಮಗೂ ಕಷ್ಟವಿದೆ. ಸಮಸ್ಯೆಗಳು ಬಗೆಹರಿಯಬೇಕು. ಇಲಾಖೆಗಳ ಬಗ್ಗೆ ಸರ್ಕಾರದ ಮತ್ತು ಮಂತ್ರಿಗಳ ಗಮನಕ್ಕೆ ತಂದು ನ್ಯೂನತೆಗಳನ್ನು ಸರಿಪಡಿಸದೇ ಹೋದರೆ ಆಡಳಿತವನ್ನು ಚುರುಕುಗೊಳಿಸುವುದು ಹೇಗೆ ? ಮಾನ್ಯ ಸಚಿವರು ೧೦ ದಿವಸ ಜಾಸ್ತಿಯಾಯಿತೆಂದು ಹೇಳಿದರು. ಎರಡು ದಿನ ಟೀಪಿಗೆ ಹೋಯಿತಲ್ಲ, ಅದಕ್ಕೆ ಯಾರು ಜವಾಬ್ದಾರರು ? ಕಾವೇರಿ ನೀರಿಗೆ ಹೋಯಿತಲ್ಲಾ ಅದಕ್ಕೆ ಯಾರು ಜವಾಬ್ದಾರರು ? ರೈತರ ಸಾಲಕ್ಕೆ ಹೋಯಿತಲ್ಲಾ ಅದಕ್ಕೆ ಯಾರು ಜವಾಬ್ದಾರರು ? ಇವೆಲ್ಲಾ ಪ್ರಾಮುಖ್ಯವಾದ ವಿಚಾರಗಳೇ, ಇವುಗಳ ಬಗ್ಗೆ ಚರ್ಚೆ ಮಾಡಬಾರದೆಂದು ನಾನು ಹೇಳುವುದಿಲ್ಲ.

ಇವುಗಳ ಬಗ್ಗೆ ಚರ್ಚೆ ನಡೆದಿದ್ದರಿಂದ ಈ ರಾಜ್ಯದ ಜನತೆಗೆ ಒಳ್ಳೆಯ ಅಭಿಪ್ರಾಯ ಬಂತು.

೬–೩೫ ಪಿ.ಎಂ.

ಆದ್ದರಿಂದ ಬೇಡಿಕೆಗಳ ಮೇಲೆ ಮಾತನಾಡಲು ಅವರಿಗೆ ಎಷ್ಟು ಸಮಯ ಕೊಡುತ್ತೀರೋ ಅದರ ಮೂರರಷ್ಟು ಸಮಯ ನಮಗೆ ಕೊಟ್ಟು ಮಾತನಾಡಲಿಕ್ಕೆ ಅವಕಾಶ ಮಾಡಿ ಕೊಡಬೇಕು. ಬೇಕಾದರೆ ಬೆಳಗಿನತನಕ ಕುಳಿತುಕೊಳ್ಳಿ ಅಂದರೆ ಕುಳಿತುಕೊಳ್ಳುತ್ತೇನೆ. ಏಕೆಂದರೆ ಜನರಿಂದ ನಾವು ಸಹ ಓಟು ತೆಗೆದುಕೊಂಡು ಬಂದಿದ್ದೇವೆ. ನಾವು ಊರಿಗೆ ಹೋಗಿ ಜನರ ಹತ್ತಿರ ಮಾತು ಕೇಳಲು ಆಗುವುದಿಲ್ಲ. ಎಲ್ಲಾ ನೀವೇ ಮಾತನಾಡಿಕೊಂಡು ಹೋದರೆ ನಾವು ಇಲ್ಲಿ ತುತ್ತೂರಿ ಬಾರಿಸಲಿಕ್ಕೆ ಏನಾದರು ಬಂದಿದ್ದೇವೆಯೇ ?

ಡಾ|| ಎನ್. ಬಿ. ನಂಜಪ್ಪ.—ಮಾನ್ಯ ಅಧ್ಯಕ್ಷರೆ, ಈಗ ಬೆಳಗಿನಿಂದ ಕೇವಲ ನಾಲ್ಕು ಜನ ಮಾತ್ರ ಮಾತನಾಡಿದ್ದಾರೆ. ಆದ್ದರಿಂದ ಅವರು ಟೈಮ್ ಕಾನ್‌ಷಿಯಸ್‌ನೆಸ್ ಇಟ್ಟುಕೊಂಡು ಒಂದು ಟೈಮ್‌ಬಾಂಡ್ ಪ್ರೋಗ್ರಾಮ್ ತರಹ ನಾವು ಮಾಡಿದರೆ ಖಂಡಿತ ಎಲ್ಲರಿಗೂ ಕೂಡ ಅವಕಾಶ ಸಿಕ್ಕುತ್ತದೆ. ನಾವು ಸುಮ್ಮನೆ ಸಮಯವನ್ನು ಕಳೆಯುತ್ತಿದ್ದೇವೆ. ಯಾರೂ ಕೂಡ ಅದರ ಬಗ್ಗೆ ಕಾನ್‌ಷಿಯಸ್‌ನೆಸ್ ಇಲ್ಲದೆ, ಮೊದಲಿನಿಂದಲೂ ನಡೆಸುತ್ತಾ ಇರುವುದರಿಂದ, ಈ ಪ್ರಾಬ್ಲಮ್ ಇದೆ. ಆದ್ದರಿಂದ ಎಲ್ಲ ಸದಸ್ಯರು ದಯಮಾಡಿ ಮನಸ್ಸು ಮಾಡಿದರೆ ೧೦–೧೫ ನಿಮಿಷಗಳಲ್ಲಿ ತಮ್ಮ ಸಬ್ಜೆಕ್ಟ್ ಎಲ್ಲಾ ಮುಗಿಸಬಹುದು. ಅದನ್ನು ಬಿಟ್ಟು ನಾವು ಅವರು ಇವರು ಎಂದು ಮಾತನಾಡುವುದಕ್ಕಿಂತ ಎಲ್ಲರೂ ಆ ಕಡೆಯವರು, ಈ ಕಡೆಯವರು, ಒಂದು ಸಮಯ ನಿಗದಿ ಮಾಡಿಕೊಂಡು ಮಾತನಾಡಿದರೆ, ಎಲ್ಲವೂ ಸುಗಮವಾಗಿ ನಡೆಯುತ್ತದೆಂದು ನಾನು ಅಂದುಕೊಂಡಿದ್ದೇನೆ.

ಶ್ರೀ ಯು. ಕೆ. ಶಾಮಣ್ಣ.—ಸನ್ಮಾನ್ಯ ಅಧ್ಯಕ್ಷರೆ, ನಾನು ಬೆಳಗಿನಿಂದ ಸಾಯಂಕಾಲದವರೆಗೆ ಕಾದಿದ್ದೆ. ನಾನು ಏನೋ ಮಾತನಾಡಬೇಕೆಂದು ಹೊರಟಾಗ, ಬರಗಾಲದಲ್ಲಿ ಮಗ ಊಟ ಮಾಡುವುದು ಕಲಿತ ಎಂದು ಹೇಳುವ ತರಹ ಆಗಿದೆ. ಈಗ ನನಗೆ ಕೊಟ್ಟಿರುವಂಥ ಅಲ್ಪ ಕಾಲದಲ್ಲಿ ಆದಷ್ಟು ಬೇಗ ನನಗೆ ಗೊತ್ತಿರುವಂಥ ಕೆಲವು ಪಾಯಿಂಟ್‌ಗಳನ್ನು ಹೇಳಿ ನನ್ನ ಮಾತನ್ನು ಮುಗಿಸಲಿಕ್ಕೆ ಪ್ರಯತ್ನ ಪಡುತ್ತೇನೆ. ಈ ಕೋ-ಆಪರೇಟೀವ್ ಸೊಸೈಟಿಗಳು ಹೀನಸ್ಥಿತಿಗೆ ಬರಲಿಕ್ಕೆ ಕಾರಣ ಅಂದರೆ ಸರ್ಕಾರ ಇವುಗಳ ಮೇಲೆ ಹಿಡಿತವನ್ನು ಇಟ್ಟಿಲ್ಲ ಎಂದು ಹೇಳಿದರೆ ತಪ್ಪಿಲ್ಲ ಎಂದು ನಾನು ಹೇಳುತ್ತೇನೆ. ಇವುಗಳ ಮೇಲೆ ಯಾವರೀತಿ ಹಿಡಿತ ಇಡಬೇಕು ಅಂದರೆ ಈ ಒಂದು ಕೆಳಮಟ್ಟದ ಪ್ರೈಮರಿ ಕೋ–ಆಪರೇಟೀವ್ ಸೊಸೈಟಿ ಮೂಲಕ ತಾವು ಹಿಡಿತವನ್ನು ಇಡಬೇಕು. ಅದಕ್ಕೆ ಒಂದು ಫೋರ್ಸ್ ಸೆಲ್ ಇಡಬೇಕು. ಈಗ ಯಾವ ಒಂದು ಇತಿಮಿತಿ ಇಲ್ಲದೆ, ಪ್ರತಿವರ್ಷವೂ ನಡೆಯುವಂಥ ಜನರಲ್ ಬಾಡಿ ಮೂಲಕ ನಾವು ಯಾವುದೇ ಹಿಡಿತವನ್ನು ಹಿಡಿಯುವುದಕ್ಕೆ ಸಾಧ್ಯವಾಗುವುದಿಲ್ಲ. ಕಾರಣ ಅಂದರೆ, ಆಡಿಟ್ ಆಗದೇ, ಪ್ರಾವಿನ್‌ಷಿಯಲ್ ಬ್ಯಾಲೆನ್ಸ್‌ಷೀಟ್ ಮೂಲಕವಾಗಿ ಪ್ರತಿ ಸೊಸೈಟಿಗಳ ಜನರಲ್‌ಬಾಡಿ ಮೀಟಿಂಗ್ ಮಾಡುವುದರಿಂದ ಮೊದಲನೆಯ ಅಪರಾಧವನ್ನು ನಾವಾಗಿ ಅವರಿಗೆ ಕಲಿಸಿದಂತಾಗುತ್ತದೆ. ಆದ್ದರಿಂದ ಜನರಲ್‌ಬಾಡಿ ಮೀಟಿಂಗ್ ಆಗಬೇಕಾದಾಗಲೂ ನಾವು ಆಡಿಟ್ ಮಾಡಿಸಿ, ಲಾಭ ನಷ್ಟದ ತಃಖ್ತೆಯನ್ನು ತಾವು ನೋಡುವುದರ ಮೂಲಕವಾಗಿ ಈ ಸೊಸೈಟಿಗಳ ಅಭಿವೃದ್ಧಿಯನ್ನು ತಾವು ಕಾಯಬೇಕು ಎಂದು ಹೇಳುತ್ತೇನೆ. ಇನ್ನು ಈ ಕೋ–ಆಪರೇಟಿವ್ ಸೆಕ್ಟರ್‌ಗೆ ಪೋಲೀಸ್ ಇಲಾಖೆ, ಫಾರೆಸ್ಟ್ ಇಲಾಖೆಯಲ್ಲಿ ಇರುವ ಹಾಗೆ ಒಂದು ಫೋರ್ಸ್ ಇಡಬೇಕು, ಒಂದು ಸ್ಕ್ವಾಡ್ ಇಡಬೇಕು. ಈ ರೀತಿಯ ಒಂದು ಸ್ಕ್ವಾಡ್ ಇದ್ದರೆ ಮಾತ್ರ ಅಲ್ಲಿ ನಡೆಯುವಂಥ ಅವ್ಯವಹಾರಗಳನ್ನು ನಿಲ್ಲಿಸಲಿಕ್ಕೆ ಸ್ವಲ್ಪ ಪ್ರಯತ್ನವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈಗ ಗ್ರಾಮಾಂತರ ಪ್ರದೇಶಗಳಲ್ಲಿರುವ ಸೊಸೈಟಿಗಳಲ್ಲಿ ದುರ್ವ್ಯವಹಾರ ಮಾಡುವಂಥಾದ್ದು ಸೆಕ್ರೆಟರಿಗಳ ಮೂಲಕ ನಡೆಯುತ್ತದೆಂದು ಹೇಳಿದರೆ ತಪ್ಪಿಲ್ಲ. ಇದು ಎಲ್ಲರಿಗೂ ಗೊತ್ತಿರುವಂಥ ವಿಚಾರ. ಗ್ರಾಮಾಂತರ ಪ್ರದೇಶಗಳಲ್ಲಿ ಸಂಬಳ ಇಲ್ಲದೆ ಸೊಸೈಟಿ ಸೆಕ್ರೆಟರಿಗಳನ್ನು ನೇಮಿಸಿಕೊಂಡರೂ ಸಹ ಅವರು ತಮ್ಮ ಜೀವನವನು ಸುಲಲಿತವಾಗಿ ನಡೆಸುವಂಥ ವ್ಯವಸ್ಥೆಯನ್ನು ಅವರು ಈಗಾಗಲೇ ಬೆಳೆಸಿಕೊಂಡಿದ್ದಾರೆ. ಇದೆಲ್ಲಾ ಅನೇಕ ಜನರಿಗೆ ಗೊತ್ತಿದೆ ಎಂದು ಹೇಳಿದರೆ ತಪ್ಪಿಲ್ಲ. ಇದ್ದಕ್ಕೆ ಕಾರಣ ನಾವು ಇವರ ಮೇಲೆ ಬಿಗಿಯನ್ನು ಹಿಡಿಯದೇ ಇರುವುದೇ ಕಾರಣ. ಈ ಅವ್ಯವಹಾರಗಳನ್ನು ಮಾಡುವುದಕ್ಕೆ ಅವಕಾಶ ಇಲ್ಲದ ರೂಪದಲ್ಲಿ ಒಂದು ಸ್ಕ್ವಾಡ್‌ನ್ನು ಇಡುವುದರ ಮೂಲಕ ಆ ಕೆಲಸವನ್ನು ಮಾಡಬೇಕು. ಈ ಸೊಸೈಟಿ ಸೆಕ್ರೆಟರಿ ಅಂದರೆ ನನ್ನ ಶೃಂಗೇರಿಯ ಕೊಪ್ಪ ತಾಲ್ಲೂಕಿನ ಅತ್ತಿಕೂಡಿಗೆ ಎಂದು ಹೇಳುವಂಥ ಒಂದು ಸೊಸೈಟಿ. ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುತ್ತದೆ. ಹಾಗೂ ಜಯಪುರ ಎಂದು ಹೇಳುವಂಥಾದ್ದು ಈ ಎರಡು ಸೊಸೈಟಿಗಳಲ್ಲಿ ಬಹುಶಃ ಬಹಳಷ್ಟು

ಅವ್ಯವಹಾರಗಳು ನಡೆದಿದೆ. ಅಲ್ಲಿ ಹೇಗೆ ನಡೆಯುತ್ತದೆ ಅಂದರೆ, ಒಬ್ಬ ಸೊಸೈಟಿ ಸೆಕ್ರೆಟರಿ ಆದವನು, ಮಂಡಲದ ಪ್ರಧಾನನಾಗಿರುತ್ತಾನೆ. ಆ ಮಂಡಲ ಪಂಚಾಯಿತಿಗೆ ಒಳಪಟ್ಟಿರುವಂಥ ಭೂ ಅಭಿವೃದ್ಧಿ ಬ್ಯಾಂಕಿನ ಡೈರೆಕ್ಟರ್ ಸಹ ಅವನಾಗಿರುತ್ತಾನೆ. ಅವನು ಒಬ್ಬ ಪ್ರತಿಷ್ಠಿತ ವ್ಯಕ್ತಿ ಸಹ ಆಗಿರುತ್ತಾನೆ. ಆ ಪ್ರದೇಶದಲ್ಲಿ ಅವನು ತನ್ನ ಸ್ವಂತ ಫ್ಯಾಮಿಲಿಯ ಸದಸ್ಯರ ಹೆಸರುಗಳನ್ನು ಕೊಟ್ಟು, ಜಿಲ್ಲಾ ಕೇಂದ್ರ ಬ್ಯಾಂಕಿನ ಮೂಲಕ ಎಂಟು ಲಕ್ಷ ರೂಪಾಯಿಗಳನ್ನು ಪಡೆದಿದ್ದಾನೆ.

ಅದರ ವಿಚಾರಣೆ ನಡೆಯಬೇಕು ಎನ್ನುವುದನ್ನು ೩-೪ ವರ್ಷಗಳಿಂದಲೂ ಕೇಳುತ್ತಿದ್ದರೂ ಸಹ ಇಲ್ಲಿಯವರೆಗೆ ಆ ಕೆಲಸ ನಡೆದಿಲ್ಲ. ಅದು ಬಹುಶ: ಅವರು ಸೊಸೈಟಿಯ ಸೆಕ್ರೆಟರಿಯಾಗಿರುವುದರಿಂದ ಆ ಹಣ ವಾಪಸ್ಸು ಕಟ್ಟಿದ್ದೇವೆಂದು ಹೇಳುವಂತಹದ್ದು. ಕಟ್ಟದೆ ಇಲ್ಲದಿದ್ದರೂ ಕಟ್ಟಿದ್ದೇವೆಂದು ಹೇಳಿ ಪಾಸ್ ಬುಕ್‌ನಲ್ಲಿ ತೋರಿಸುವಂತಹ ವ್ಯವಸ್ಥೆ ಮಾಡಿದ್ದಾರೆಂದು ಹೇಳುವಂತಹದ್ದನ್ನು ಸಂಬಂಧಪಟ್ಟ ಸೂಪರ್‌ವೈಜರ್ ಮೂಲಕವಾಗಿ ನಾವು ತಿಳಿಸಿದ್ದೇವೆ. ಆದರೆ ಮೇಲ್ಪಟ್ಟ ಅಧಿಕಾರಿಗಳಿಗೆ ತಾವು ಇದರ ಬಗ್ಗೆ ವಿಚಾರಣೆ ಮಾಡಬೇಕೆಂದು ಅನೇಕ ಸಾರಿ ಒತ್ತಾಯ ಪೂರ್ವಕವಾಗಿ ಹೇಳಿದ್ದೇವೆ. ಆ ಸೊಸೈಟಿಯ ಸೆಕ್ರೆಟರಿ ಬಹಳ ಚುರುಕಾಗಿದ್ದಾನೆ. ಮತ್ತು ಪ್ರಭಲವಾಗಿದ್ದಾನೆ. ಆರ್ಥಿಕವಾಗಿ ಚೆನ್ನಾಗಿದ್ದಾನೆ, ಅವನು ಬಹುಶಃ ಮೇಲ್ಪಟ್ಟ ಅಧಿಕಾರಿಯನ್ನು ಸಹ ವರ್ಗಾ ಮಾಡಿಸಿ ತನಗೆ ಬೇಕಾದಂತಹ ಅಧಿಕಾರಿಯನ್ನು ಸಹ ಪುನಃ ಹಾಕಿಸಿಕೊಂಡಿರುವಂತಹ ನಿದರ್ಶನಗಳು ನಮ್ಮ ಜಿಲ್ಲೆಯಲ್ಲಿ ಇದೆ. ಆದರಿಂದ ಆತ ಎಷ್ಟು ಪಳಗಿದ್ದಾನೆ ಎಂಬ ವಿಚಾರವನ್ನು ತಮಗೆ ಬಿಡುತ್ತಿದ್ದೇನೆ. ಮಾನ್ಯ ಸಹಕಾರ ಸಚಿವರು ನಮ್ಮ ಜಿಲ್ಲೆಯವರಾದ್ದರಿಂದ ಈ ಬಗ್ಗೆ ಹೆಚ್ಚಿನ ಗಮನವನ್ನು ಹರಿಸಬೇಕೆಂದು ಹೇಳುತ್ತೇನೆ. ಅವನು ಏನು ೮ ಲಕ್ಷ ರೂಪಾಯಿಯನ್ನು ಏನು ದುರುಪಯೋಗ ಮಾಡಿದ್ದಾನೋ, ಅದನ್ನು ಇದುವರೆಗೂ ಕಟ್ಟಿಲ್ಲ. ಕಟ್ಟದೇ ಇದ್ದಾಗಲೂ ಸಹ ಅದರ ತನಿಖೆಗೆ ಮೇಲ್ಪಟ್ಟ ಅಧಿಕಾರಿಗಳು ಏಕೆ ಹೋಗುತ್ತಿಲ್ಲವೆಂಬ ಬಗ್ಗೆ ನಮಗೆ ಅನುಮಾನ ಬರುತ್ತಿದೆ. ಅವರು ಸೂಪರ್‌ವೈಜರ್‌ಗಳಿಗೆ ನೀವೇ ಹೋಗಿ ಲೆಕ್ಕ ನೋಡಿ ಎಂದು ಹೇಳುತ್ತಿದ್ದಾರೆ. ಈ ವ್ಯವಸ್ಥೆಯನ್ನು ನಿಲ್ಲಿಸದೇಹೋದರೆ ಅವರನ್ನು ಹಿಡಿಯುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಪ್ರಭಲವಾದಂತಹ ಒಂದು ಸ್ಕ್ವಾಡ ಅನ್ನು ಇಟ್ಟುಕೊಂಡರೆ ಈ ಕೆಲಸವನ್ನು ಮಾಡಲು ಸಾಧ್ಯವಾಗುತ್ತದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

(ಶ್ರೀ ಜಿ. ಎಸ್. ಆಚಾರ್‌ರವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ನಾನು ಈ ಸೊಸೈಟಿಗಳ ಬಗ್ಗೆ ಹೆಚ್ಚು ಮಾತನ್ನು ಹೇಳದೆ ಈ ಸಾಲವನ್ನು ಮರುಪಾವತಿ ಮಾಡಬೇಕು, ಮನ್ನಾ ಮಾಡಬೇಕೆನ್ನುವ ಬಗ್ಗೆ ಈಗಾಗಲೇ ಹಿಂದಿನ ಭಾಷಣಗಾರರು ಹೇಳಿದ್ದಾರೆ. ನಾನು ಹೆಚ್ಚು ಹೇಳದೆ ನಾವು ಕ್ರೆಡಿಟ್ ಕಾರ್ಡ್ ಕೊಡುವ ವ್ಯವಸ್ಥೆಗೆ ಬರಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ, ಏಕೆಂದರೆ ಸಾಲ ಮಂಜೂರಾತಿ ಮಾಡಿಸಿಕೊಳ್ಳಬೇಕೆಂದರೆ ಅವರು ಯಾರು ಸೆಕ್ರೆಟರಿ ಇರುತ್ತಾನೋ ಅವನಿಗೆ ಅರ್ಜಿ ಸಲ್ಲಿಸಬೇಕು. ಅವನು ಅದನ್ನು ಕಮಿಟಿ ಮುಂದೆ ಇಡಬೇಕು. ಆಲ್ಲಿ ನಾವು ಕೇಳುವಷ್ಟು ಹಣ ಕೊಡುವುದಿಲ್ಲವೆಂದು ದೂರು ಒಂದು ಕಡೆ ಬರುತ್ತದೆ. ಮತ್ತೊಂದು ಕಡೆ ಅವನು ಕೇಳುವಂತಹ ರೆಕಾರ್ಡ್ಸ್ ಒದಗಿಸಿಲ್ಲವೆಂದು ದೂರು ಬರುತ್ತದೆ. ಇದರಿಂದಾಗಿ ಅನೇಕ ಜನರಿಗೆ ಸಾಲ ಸಿಕ್ಕುತ್ತಿಲ್ಲವೆಂದು ಬಹಳ ಜನರಿಂದ ದೂರು ಬಂದಿರುವುದರಿಂದ ಈ ಕ್ರೆಡಿಟ್ ಕಾರ್ಡ್ ಸಿಸ್ಟಂ ಅನ್ನು ನಾವು ಏನು ಪಾಶ್ಚಿಮಾತ್ಯ—ಪ್ರದೇಶದಲ್ಲಿ ಕೊಡುತ್ತಿದ್ದಾರೋ ಅದೇ ರೂಪದಲ್ಲಿ ನಾವು ಸಹ ಹೊಸದಾಗಿ ಕೊಡಲಿಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಅನೇಕ ಮಲೆನಾಡು ಪ್ರದೇಶಗಳಲ್ಲಿ ಉಗ್ರಾಣಗಳ ಕೊರತೆ ಇದೆ. ಎನ್. ಸಿ. ಡಿ. ಸಿಯವರು ಎಲ್ಲಾ ಕಡೆಗಳಿಗೆ ಉಗ್ರಾಣಗಳನ್ನು ಕೊಡುತ್ತೇವೆನ್ನುತಕ್ಕ ಮಾತನ್ನು ಹೇಳಿದ್ದಾರೆ. ಅದರಲ್ಲಿ ನಮ್ಮ ಚಿಕ್ಕಮಗಳೂರು ಸಹ ಸೇರಿತ್ತು. ಆದರೆ ಇದುವರೆಗೂ ನನ್ನ ಶೃಂಗೇರಿ ಕ್ಷೇತ್ರಕ್ಕೆ ಒಂದೂ ಸಹ ಉಗ್ರಾಣ ಬಂದಿಲ್ಲ. ಆದಷ್ಟು ಬೇಗ ಇದನ್ನು ಒದಗಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ನಮ್ಮ ಜಿಲ್ಲಾ ಬ್ಯಾಂಕ್‌ಗಳ ಪರಿಸ್ಥಿತಿ ಏನಾಗಿದೆ ಎಂದು ಹೇಳುವಾಗ ಅಲ್ಲಿ ಲೋನ್ ವಿತರಣೆ ಕ್ರಮ ಸರಿಯಾಗಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಜಿಲ್ಲಾ ಪರಿಷತ್ತಿನವರು ಪ್ರತಿ ವರ್ಷ ನೋಡಿದರೆ ನಮಗೆ ಲಾಸ್ ಆಗುತ್ತಿದೆ, ಆದಾಯ ಇಲ್ಲ. ನಮ್ಮ ವಾಹನದ ಖರ್ಚು ವೆಚ್ಚಗಳು ಜಾಸ್ತಿ ಆಗುತ್ತಿದೆ ಎಂದು ಹೇಳತಕ್ಕದ್ದು ಒಂದು ಕಡೆ ಇದೆ. ಆದರೆ ಅದಕ್ಕೆ ಒಂದು ಇತಿ ಮಿತಿ ಹಾಕಬೇಕಾಗುತ್ತದೆ. ನಮ್ಮ ಜಿಲ್ಲಾ ಬ್ಯಾಂಕಿನ ವಾಹನಗಳು ಮದುವೆ ಸಮಾರಂಭಗಳಿಗೆ ಸತತವಾಗಿ ಓಡಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ರಾತ್ರಿಯೂ ಸಹ ಓಡಾಡುತ್ತಿರುತ್ತವೆ, ಅದು ನಾನ್ ಸ್ಟಾಪ್ ಆಗಿ ಓಡುವುದು ಅಷ್ಟೊಂದು ಮುಖ್ಯವಲ್ಲ. ಇದು ಜನರ ಮನಸ್ಸಿಗೂ ಸಹ ನೋವನ್ನು ತರುವಂತಹದ್ದು ಆಗಿರುತ್ತದೆ. ಇವತ್ತು ನಬಾರ್ಡ್‌ನಿಂದ ಸಾಲವನ್ನು ಡಿ. ಸಿ. ಸಿ. ಬ್ಯಾಂಕ್‌ನವರಿಗೆ ಕೊಡುತ್ತಿದ್ದಾರೆ. ಅದರಲ್ಲಿ ಆಪೆಕ್ಸ್ ಬ್ಯಾಂಕ್‌ನವರಿಗೆ ನಬಾರ್ಡ್‌ನವರು ಶೇಕಡಾ ೫ ರಿಂದ ಶೇಕಡ ೬ರವರೆಗೆ

ಏನು ಬಡ್ಡಿಯನ್ನು ವಿಧಿಸುತ್ತಾರೋ ಅದನ್ನು ಕಡಿಮೆ ಮಾಡಿ ಡಿ. ಸಿ. ಸಿ. ಬ್ಯಾಂಕ್‌ಗೆ ಕೊಡುವುದರಲ್ಲಿ ಇನ್ನೂ ಶೇಕಡ ೧ರಷ್ಟು ಕಡಿಮೆ ಮಾಡಿದಾಗ ರೈತರಿಗೆ ಶೇಕಡ ೧ ಮಾರ್ಜಿನ್ ಕೊಡಬಹುದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಬಾಕಿ ಸಾಲವನ್ನು ವಾಪಸ್ಸು ಕಟ್ಟುವಾಗ ಮೊದಲು ಅವರು ಇಂಟರೆಸ್ಟ್ ವಜಾ ಮಾಡಿಕೊಳ್ಳುತ್ತಾರೆ. ಇಂಟರೆಸ್ಟ್ ವಜಾ ಮಾಡಿಕೊಂಡಾಗ ಏನಾಗುತ್ತದೆ ಅಂದರೆ ಪ್ರತಿ ವರ್ಷ ಸಾಲ ಮಂಜೂರಾದರೆ ಸಾಲ ಮತ್ತು ಬಡ್ಡಿಯನ್ನು ಕಟ್ಟಲು ತೊಂದರೆ ಏನು ಆಗುವುದಿಲ್ಲ. ಆದರೆ ಸರ್ಕಾರದಿಂದ ಕಟ್ಟಬೇಕಾದ ಇಂಟರೆಸ್ಟ್ ಸಬ್ಸಿಡಿಯನ್ನು ಸಕಾಲದಲ್ಲಿ ಕಟ್ಟದಿರುವ ಕಾರಣದಿಂದ ಆ ಹಣದ ಮೇಲೂ ಸಹ ಬಡ್ಡಿಯನ್ನು ಹಾಕುತ್ತಿರುವುದರಿಂದ, ಅದನ್ನು ಕಟ್ಟಲು ಪ್ರೈಮರಿ ಸೊಸೈಟಿಗಳಿಗೆ ಆಗದೆ ಅವು ಹೆಚ್ಚಿನ ನಷ್ಟವನ್ನು ಅನುಭವಿಸುತ್ತಿವೆ.

ಆದ್ದರಿಂದ ಅವರ ಅರ್ಹತೆಯನ್ನು ತಾವು ಮೊಟಕು ಮಾಡಿದ ಹಾಗಾಗುತ್ತದೆ. ಇದಕ್ಕೆ ದಯಮಾಡಿ ಸಹಾಯ ಮಾಡಬೇಕೆಂದು ನನ್ನ ವಿನಂತಿ. ಇನ್ನು ಕೋ ಆಪರೇಟೀವ್ ವಿಭಾಗದಲ್ಲಿ ನಮ್ಮ ಕ್ಯಾಂಪ್ಕೋ ಏನು ಇದೆ, ಇದು ನಮಗೆಲ್ಲರಿಗೂ ಬಿಸಿ ತುಪ್ಪ ಇದ್ದ ಹಾಗೆ ಇದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಇದನ್ನು ಕರ್ನಾಟಕ ಹಾಗೂ ಕೇರಳ ರಾಜ್ಯಗಳ ಒಂದು ಸಹಕಾರದ ಮೂಲಕವಾಗಿ ಸ್ಥಾಪನೆ ಮಾಡಿದೆ. ಇದು ಬಂದಾದ ಮೇಲೆ ನಮ್ಮ ಪ್ರದೇಶದಲ್ಲಿ ಬೆಳೆದಂತಹ ಅಂದರೆ ಸೌತ್ ಕೆನರಾದಲ್ಲಿ ಬೆಳೆದಂತಹ ಅಡಕೆ ಮಾರುಕಟ್ಟೆಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡುತ್ತಾರೆಂದು ನಂಬಿದ್ದೆವು. ಆದರೆ ಅದು ಆ ರೀತಿಯಾಗಲಿಲ್ಲ. ಇದನ್ನು ಬಿಸಿ ತುಪ್ಪ ಎಂದು ಹೇಳಿದರೆ ತಪ್ಪಾಗುವುದಿಲ್ಲವೆಂದು ನನ್ನ ಭಾವನೆ. ಇದು ಎಲ್ಲರ ಸ್ವತ್ತಾಗಿಲ್ಲ. ಇದು ಕೇವಲ ಕೆಲವರ ಸ್ವತ್ತಾಗಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಆ ವಿಭಾಗದಲ್ಲಿ ಕೆಲಸ ಮಾಡುವಂತಹ ಮಂದಿ ಏನು ಇದ್ದಾರೆ, ಅವರು ವಿಶಾಲ ಭಾವನೆಯನ್ನು ಇಟ್ಟುಕೊಂಡು ಕೆಲಸ ಮಾಡಿದರೆ ಅಡಕೆ ಬೆಳೆಗಾರರಿಗೆ ಸ್ವಲ್ಪ ಅನುಕೂಲವಾಗುತ್ತದೆ. ಮತ್ತು ಅಡಕೆಗೆ ಉತ್ತಮ ಧಾರಣೆಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಅಡಕೆಯನ್ನು ಖರೀದಿ ಮಾಡಬೇಕೆಂದು ಹೇಳುವಂತಹದ್ದು ಅವರ ಮೊದಲನೆಯ ಕಾರ್ಯಕ್ರಮದಲ್ಲಿತ್ತು, ಅದು ಕುಂಠಿತವಾಗಿದೆ.

ಶ್ರೀ ವಾಟಾಳ್ ನಾಗರಾಜ್.— ಈ ಸಭೆಯನ್ನು ಇನ್ನೂ ಎಷ್ಟು ಹೊತ್ತು ನಡೆಸಬೇಕೆಂದಿದ್ದೀರಿ ಮತ್ತು ಎಷ್ಟು ಹೊತ್ತಿನವರೆಗೆ ಮುಂದುವರಿಸುತ್ತೀರಿ ಎಂಬುದನ್ನು ಹೇಳಬೇಕು. ನನ್ನ ನಾಮಧೇಯವೇನಾದರೂ ತಮ್ಮ ಪಟ್ಟಿಯಲ್ಲಿ ಇದೆಯೋ? ತಾವು ದಯಮಾಡಿ ಅದನ್ನು ತಿಳಿಸಿಬಿಡಿ. ನಿನ್ನೆ ಇಡೀ ಈ ಸಭೆಯಲ್ಲಿ ಒಂದು ಕುರ್ಚಿ ಖಾಲಿ ಇಲ್ಲದೇ ಜನರು ತುಂಬಿದ್ದರು, ಆಗ ರಾಜಕೀಯ ಚರ್ಚೆ ನಡೆಯುತ್ತಿತ್ತು. ಅದೇ ಇವತ್ತು ಈ ರಾಜ್ಯಕ್ಕೆ ಸಂಬಂಧಪಟ್ಟಂತಹ ವಿಚಾರ ಚರ್ಚೆ ನಡೆಯುತ್ತಿರುವಾಗ ಎಷ್ಟು ಖಾಲಿ ಕುರ್ಚಿ ಇವೆ ಎಂಬುದನ್ನು ನೋಡಿ. ರಾಜಕೀಯದ ಚರ್ಚೆಗೆ ಎಷ್ಟು ಜನ ಸೇರಿದ್ದರು.

ಶ್ರೀ ಎಲ್. ಆರ್. ಶಿವರಾಮೇಗೌಡ.— ವಾಟಾಳ್ ನಾಗರಾಜ್ ಅವರೂ ಸಹ ಈಗ ಬಂದಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.— ಎಷ್ಟು ಹೊತ್ತಿನವರೆಗೆ ಸಭೆ ನಡೆಸುತ್ತೀರಿ ಎಂಬುದು ಇನ್ನೂ ತೀರ್ಮಾನವಾಗಿಲ್ಲ. ಜನತಾ ದಳದವರು ೪ ಜನ ಮಾತನಾಡಿದ್ದಾರೆ. ನಮ್ಮ ಹಣೆಬರಹ ಇನ್ನು ನಿರ್ಧಾರವಾಗಿಲ್ಲ. ಅದೂ ತೀರ್ಮಾನವಾಗಲಿ. ನಮಗೂ ಮಾತನಾಡಲು ೨ ನಿಮಿಷವಾದರೂ ಅವಕಾಶ ಕೊಡುವುದಿಲ್ಲವೇ?

ಚೇರ್ಮನ್.— ಇನ್ನೂ ಅನೇಕ ಮಂದಿ ಮಾತನಾಡಬೇಕು. ಇನ್ನು ಸ್ವಲ್ಪ ಹೊತ್ತು ಡಿಬೇಟ್ ನಡೆಯಲಿ. ಮುಂದೆ ಎಷ್ಟು ಸಮಯದವರೆಗೆ ಸಭೆ ನಡೆಯಬೇಕೆಂದು ತೀರ್ಮಾನ ಮಾಡೋಣ.

ಶ್ರೀ ಎಂ. ಎಸ್. ಪಾಟೀಲ್.— ತಾವು ತಮ್ಮ ಹಣೆಬರಹ ತೋರಿಸುವುದಕ್ಕೆ ಹೋಗುತ್ತಿದ್ದೀರಿ ನಿಮ್ಮ ಹಣೆಯೇ ಕಾಣುವುದಿಲ್ಲ. ಇನ್ನು ಬರಹವನ್ನು ಎಲ್ಲಿ ನೋಡುವುದು?

ಶ್ರೀ ವಾಟಾಳ್ ನಾಗರಾಜ್.— ನಮ್ಮ ಹಣೆಯನ್ನು ತೋರಿಸಿದರೆ ನಮ್ಮ ಹಣೆ ಉಳಿಯುವುದಿಲ್ಲ. ನಮ್ಮ ಹಣೆ ಬರಹ ಸರಿಯಿಲ್ಲವೆಂದು ಈ ಸಭೆಯಲ್ಲಿ ಈ ಕಡೆ ಕೊನೆಯಲ್ಲಿ ಕೂತಿದ್ದೇವೆ. ೭೮ರಲ್ಲಿ ಮುಂದಿನ ಕುರ್ಚಿಯಲ್ಲಿ ಕೂತಿದ್ದೆ. ಈಗ ನಮ್ಮ ಹಣೆಬರಹ ಸರಿಯಿಲ್ಲವೆಂದು ನಮ್ಮನ್ನು ಹಿಂದಕ್ಕೆ ಹಾಕಿದ್ದೀರಿ. ಈಗ ಮಾತನಾಡುವುದಕ್ಕೂ ನಮ್ಮ ಹಣೆಬರಹ ಸರಿಯಿಲ್ಲವೆಂದು ಹೇಳಿದರೆ ಹೇಗೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಆ ಜಾಗ ಬಹಳ ಒಳ್ಳೆಯದು ಇದೆ. ಹಿಂದೆ ದೇವೇಗೌಡರು ಅಲ್ಲಿ ಕೂಡುತ್ತಿದ್ದರು.

ಶ್ರೀ ವಾಟಾಳ್ ನಾಗರಾಜ್.— ರಾತ್ರಿ ೧೧ ಗಂಟೆ ಆಗಲಿ, ನಾವು ಇಲ್ಲಿಯೇ ಕುಳಿತುಕೊಳ್ಳುತ್ತೇವೆ ಆದರೆ ತಾವು ನಮಗೆ ಊಟ ತರಿಸಬೇಕು. ಮಲಗಿಕೊಳ್ಳುವುದಕ್ಕೆ ಹಾಸಿಗೆ, ದಿಂಬು ಎಲ್ಲವನ್ನೂ ಕೂಡ ತಾವು ತರಿಸಬೇಕಾಗುತ್ತದೆಂದು ಎಚ್ಚರಿಕೆ ಕೊಡುತ್ತಿದ್ದೇನೆ. ನೀವು ಏನಾದರೂ ಮಾಡಿಕೊಳ್ಳಿ.

ಶ್ರೀ ಎಂ. ಕೆ. ಶಾಮಣ್ಣ.— ಈ ಅಡಕೆ ಖರೀದಿಯ ಬಗ್ಗೆ ಕ್ಯಾಮ್ಕೋ ಸಂಸ್ಥೆಯವರು ಮಾಡಿದಂತಹ ಕಾರ್ಯಕ್ರಮ ಏನು ಇದೆ, ಅದನ್ನು ವ್ಯವಸ್ಥಿತವಾಗಿ ಮಾಡುವಂತಹ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಮಾನ್ಯ ಸಹಕಾರ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇದಕ್ಕೆ ಕಾರಣ ಇಷ್ಟೆ, ಮಂಗಳೂರು ವಿಭಾಗದಲ್ಲಿ ಕ್ಯಾಂಪ್ಕೋ ಬಂದಮೇಲೆ ಉತ್ತಮ ರೇಟು, ಉತ್ತಮ ವಿತರಣೆ ಮಾಡತಕ್ಕ ವ್ಯವಸ್ಥೆಯನ್ನು ಅವರು ಅಳವಡಿಸಿದ್ದಾರೆ. ಆದರೆ ದೇಶಾವರದ ಅಡಿಕೆ ಎಂದು ಕೊಪ್ಪ, ಶೃಂಗೇರಿ, ಬೀರೂರು, ಕಡೂರು ಭಾಗಗಳಲ್ಲಿ ಬೆಳೆಯುತಕ್ಕ ಅಡಿಕೆ ಏನಿದೆ, ಅದನ್ನು ಚೆನ್ನಾಗಿ, ಹದವಾಗಿ ಬೇಯಿಸಿ ಒಳ್ಳೆಯ ಬಣ್ಣವನ್ನು ಕೊಟ್ಟು ಮಾಡಿದ ಉತ್ತಮ ದರ್ಜೆಯ ಅಡಿಕೆಗೆ ಇರತಕ್ಕ ಮಾರ್ಕೆಟ್ ಎಂದರೆ ಮದ್ರಾಸ್, ಸೇಲಂ, ಆಂಧ್ರ ಭಾಗಗಳಲ್ಲಿ ಬಹಳ ಹೆಚ್ಚಾಗಿರುವುದರಿಂದ ಈ ವ್ಯವಸ್ಥೆಗೆ ಅವರು ಹೆಚ್ಚಿನ ಅವಕಾಶವನ್ನು ಅವರು ಕೊಟ್ಟಿಲ್ಲ ಎಂದು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ಅವರು ಹೊಸದಾಗಿ ಪ್ರಾರಂಭ ಮಾಡಿರತಕ್ಕ ೧೦ ಬ್ರಾಂಚ್‌ಗಳು ಎಂದರೆ ಕಾನ್‌ಪುರ, ಡೆಲ್ಲಿ, ಬಾಂಬೆ, ಇತ್ಯಾದಿ ಕಡೆಗಳಲ್ಲಿವೆ, ಆದರೆ ಈ ಬ್ರಾಂಚ್‌ಗಳು ಏನಿವೆ, ಇವು ಬಹುಶಃ ಚೆನ್ನಾಗಿ ಕೆಲಸ ಮಾಡುತ್ತಿಲ್ಲವೆಂದು ಹೇಳುವಂಥ ಶಂಕೆ ನಮಗೆ ಬಂದಿದೆ. ಏಕೆಂದರೆ ಅಲ್ಲಿಗೆ ಬೇಕಾದಂಥ ರಿಕ್ವೈರ್‌ಮೆಂಟ್ಸ್‌ನ್ನು ಹೆಚ್ಚಾಗಿ ಬೀರೂರು. ಶಿವಮೊಗ್ಗ, ಈ ಪ್ರದೇಶಗಳಿಂದ ಈ ದೇಶವರದ ಅಡಿಕೆ ಹೋಗಬೇಕಾಗಿದೆ. ಇದನ್ನು ನೇರವಾಗಿ ಪರ್ಚೇಸ್ ಮಾಡುವುದಕ್ಕೋಸ್ಕರ ಜನರು ಅಲ್ಲೀದ ಬರುತ್ತಿದ್ದಾರೆಯೇ ಹೊರತು, ಕ್ಯಾಂಪ್ಕೋದವರು ಯಾರೂ ಕೂಡ ಶಿವಮೊಗ್ಗಾಕ್ಕೆ ಬಂದು ಖರೀದಿ ಮಾಡುತ್ತಿಲ್ಲ. ಶಿವಮೊಗ್ಗಾದಲ್ಲಿ ಖರೀದಿ ಮಾಡುವುದಾದರೂ ಮ್ಯಾಮ್ಕೋಸ್ ಅಂತ. ಇದನ್ನು ಮಲೆನಾಡು ಅಡಿಕೆ ಸೊಸೈಟಿಯಲ್ಲಿ ಮಾತ್ರ ಖರೀದಿ ಮಾಡುತ್ತಿದ್ದಾರೆ. ಸೊಸೈಟಿಗಳಲ್ಲಿ ಖರೀದಿ ಮಾಡುವುದಾದರೆ ಬಹಳ ಸಂತೋಷ. ಆದರೆ ಲೈಸೆನ್ಸ್ ಇರತಕ್ಕ ಡೀಲರ್ಸ್ ಯಾರಿದ್ದಾರೆ, ಅವರೇ ಈ ಕಡೆಯಿಂದ ತರಿಸಿ ಇಟ್ಟುಕೊಂಡಿರುತ್ತಾರೆ. ಇದರಿಂದಾಗಿ ಇವರ ವ್ಯವಸ್ಥೆಯನ್ನೇ ಅವರು ಕುಂಠಿತ ಮಾಡಿದ್ದಾರೆ.

ಇನ್ನೊಂದು ವಿಚಾರವನ್ನು ಇಲ್ಲಿ ಹೇಳುವುದಾದರೆ, ಈ ಕ್ಯಾಂಪ್ಕೋದವರು ಸಿಹಿಯಾಗಿರತಕ್ಕ ಚಾಕ್ಲೇಟ್‌ನ್ನು ಕೊಡುತ್ತೇವೆಂದು ಒಂದು ಪ್ರಚಾರ ಮಾಡಿದರು. ನೀವೆಲ್ಲರೂ ರೈತರು, ನೀವು ಕೋಕೋವನ್ನು ಬೆಳೆಯಿರಿ ಎಂದು ಹೇಳಿ ಹುರಿದುಂಬಿಸಿದರು. ಅದೇ ರೀತಿ ನಾವು ೧೫೪೭ ಹೆಕ್ಟೇರ್ ಜಮೀನಿನಲ್ಲಿ ಕೋ ಕೋವನ್ನು ಬೆಳೆಯುವಂತೆ ಹೇಳಿದರು. ನಮ್ಮ ಮಲೆನಾಡಿನ ರೈತರು ಅಲ್ಲಿಯ ಮಳೆ, ಹವಾಮಾನವನ್ನನ್ನುಸರಿಸಿಕೊಂಡು ಬೆಳೆಯುವಂತೆ ಮೊದಲು ಪ್ರೋತ್ಸಾಹವನ್ನು ಕೊಟ್ಟರು. ಬಹಳ ಸಂತೋಷ. ಆದರೆ ಈಗ ಅವರು ಬಹಳ ದೊಡ್ಡ ಪ್ಲಾಂಟ್‌ನ್ನು ಹಾಕಿದ್ದಾರೆಂದು ಕೇಳಿದ್ದೇವೆ. ಅದಕ್ಕೆ ೧೧ ೭೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುವುದಾಗಿ ನಾವು ಕೇಳಿದ್ದೇವೆ. ಹಾಗೂ ೯ ಸಾವಿರ ಮೆಟ್ರಿಕ್ ಟನ್ ಕೋ ಕೋ ನಮಗೆ ಬೇಕಾಗುತ್ತದೆಂದು ಹೇಳಿದ್ದಾರೆ. ಆದರೆ ಇವತ್ತು ನಾವು ಏನು ಕೋ ಕೋವನ್ನು ಬೆಳೆದಿದ್ದೇವೆ ಅದಕ್ಕೆ ಮಾರ್ಕೆಟ್ ಇಲ್ಲ. ಕ್ಯಾಂಪ್ಕೋ ಮೂಲಕ ನಾವು ಕೊಂಡುಕೊಳ್ಳುತ್ತೇವೆಂದು ಅವರು ಹೇಳಿದರು, ಮತ್ತು ಕಳೆದ ವರ್ಷದವರೆಗೂ ಅವರು ಕೊಂಡುಕೊಂಡರು. ಆದರೆ ಈವರ್ಷ ನಾವು ಕೊಂಡುಕೊಳ್ಳುವುದಿಲ್ಲವೆಂದು ಹೇಳಿದ್ದಾರೆ. ಈರೀತಿ ಮಾಡಿದರೆ ಕೋ ಕೋ ಬೆಳೆದಿರುವಂಥ ನಮ್ಮ ರೈತರು ಕೊಪ್ಪ, ಶೃಂಗೇರಿ, ತೀರ್ಥಹಳ್ಳಿ ಭಾಗದಲ್ಲಿ ಏನು ಬೆಳೆದಿದ್ದಾರೆ ಅವರಿಗೆ ಸರಿಯಾದ ಬೆಲೆ ಸಿಕ್ಕಿಲ್ಲ, ಮೊದಲು ೧ ಕೆ. ಜಿ. ಕೋ ಕೋ ಹಣ್ಣಿಗೆ ೨ ರೂಪಾಯಿ ಕೊಡುತ್ತಿದ್ದರು. ಆದರೆ ಇವತ್ತು ೫೦ ಪೈಸೆಗೂ ಕೂಡ ಕೇಳುವವರಿಲ್ಲ. ಇವತ್ತು ಏನಾಗಿದೆ ಎಂದರೆ, ಈ ಹಣ್ಣನ್ನು ಅಲ್ಲಿಗೇ ತೆಗೆದುಕೊಂಡು ಹೋಗಿ ಬೀಜವನ್ನು ತೆಗೆದು ಕೇವಲ ೨೪ ಗಂಟೆಯೊಳಗೆ ಕೊಡಬೇಕು ಎನ್ನುವಂಥ ವ್ಯವಸ್ಥೆಯನ್ನು ಅವರು ಮಾಡಿದ್ದಾರೆ. ಇದರಿಂದಾಗಿ ಕೋ ಕೋ ಬೆಳೆದಿರುವವರಿಗೆ ಬಹಳ ತೊಂದರೆಯಾಗಿದೆ. ಉತ್ತಮ ಬೆಲೆ ಸಿಕ್ಕುತ್ತಿಲ್ಲ. ೨ ರೂಪಾಯಿಗೆ ೧ ಕೆ.ಜಿ. ಹಣ್ಣನ್ನು ತೆಗೆದುಕೊಳ್ಳುತ್ತಿದ್ದವರು ಇವತ್ತು ನಮಗೆ ೫೦ ಪೈಸೆಗೂ ಬೇಡ ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಇವತ್ತು ಇದನ್ನು ಕೊಯ್ಯುವ ಖರ್ಚೂ ಕೂಡ ನಮಗೆ ಸಿಕ್ಕುತ್ತಿಲ್ಲ. ಇದನ್ನು ಕೊಯ್ಯುವುದಕ್ಕೆ ಬದಲಾಗಿ ಗಿಡದಲ್ಲೇ ಬಿಡುತ್ತಿದ್ದೇವೆ. ಅದು ನಾಶವಾಗಿ ಹೋಗುತ್ತಿದೆ. ಇದನ್ನು ತಪ್ಪಿಸುವಂಥ ಪ್ರಯತ್ನವನ್ನು ತಾವು ಮಾಡಬೇಕು. ಜೊತೆಗೆ ಉತ್ತಮ ರೇಟನ್ನೂ ಕೂಡ ಈ ಕೋ ಕೋಗೆ ಕೊಡಿಸಬೇಕೆಂದು ಮಾನ್ಯ ಸಹಕಾರ ಸಚಿವರಲ್ಲಿ ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

(ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇನ್ನು ಸೊಸೈಟಿಗಳ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಉತ್ತಮವಾಗಿ ಕೆಲಸ ಮಾಡತಕ್ಕಂಥ ತಾಲೂಕು ಮಾರ್ಕೆಟಿಂಗ್ ಸೊಸೈಟಿಗಳ ವ್ಯವಸ್ಥೆಯನ್ನು ನೀವು ಬಲ ಪಡಿಸಬೇಕೆಂದು ಹೇಳು ಬಯಸುತ್ತೇನೆ. ನನ್ನ ಕೊಪ್ಪದಲ್ಲಿರತಕ್ಕ ತಾಲೂಕು ಮಾರ್ಕೆಟಿಂಗ್ ಸೊಸೈಟಿ ಬಹುಶಃ ಬಹಳ ಉತ್ತಮವಾದ ಕೆಲಸ ಮಾಡುವಂಥದ್ದು. ಇದನ್ನು ನಾನು ಬಹಳ ಸಂತೋಷದಿಂದ ಹೇಳುತ್ತಿದ್ದೇನೆ. ಬಹಳ ವರ್ಷಗಳಿಂದ ಉತ್ತಮ ಲಾಭವನ್ನು ಗಳಿಸಿರುವಂಥ ಸೊಸೈಟಿ ಇದು. ನಾನು ಇಲ್ಲಿ ೫ ವರ್ಷ ಕಾಲ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಇದು ಇವತ್ತೂ ಕೂಡ ಲಾಭದಲ್ಲಿ ನಡೆಯುತ್ತಿದೆ. ನನ್ನ ಕ್ಷೇತ್ರದಲ್ಲಿ ಸರ್ಕಾರದ ಷೇರು ಕ್ಯಾಪಿಟಲ್‌ನ್ನೇ ಇಟ್ಟುಕೊಳ್ಳದೆ ಬಹಳ ಉತ್ತಮವಾಗಿ ಕೆಲಸವನ್ನು ಮಾಡುತ್ತಿರುವಂಥ ಒಂದು ತಾಲೂಕು ಮಾರ್ಕೆಟಿಂಗ್ ಸೊಸೈಟಿಯನ್ನು ನಾವು ಹೊಂದಿದ್ದೇವೆ ಎಂದು ಹೆಮ್ಮೆಯಿಂದ ಹೇಳುತ್ತಿದ್ದೇನೆ. ಇವತ್ತು ರಾಜ್ಯದಲ್ಲಿ ಒಂದು ಉತ್ತಮವಾದ ಸೊಸೈಟಿ ಇದೆಯೆಂದು ಹೇಳುವುದಾದರೆ ಅದಕ್ಕೆ ಸರ್ಕಾರದ ಮೂಲಕವಾಗಿ ಬೆನ್ನು ತಟ್ಟುವಂಥ ಅಭ್ಯಾಸ ಇಟ್ಟುಕೊಳ್ಳಬೇಕೆಂದು ನಾನು ಈ ಸದನದ ಮೂಲಕ ಕೇಳಿಕೊಳ್ಳುತ್ತೇನೆ.

ಇನ್ನು ಕ್ಯಾಷ್ ಕ್ರೆಡಿಟ್ ಲೋನ್‌ನ್ನು ಅದಕ್ಕೆ ಕೊಡುವಂಥ ಸಂದರ್ಭದಲ್ಲಿ ಅದಕ್ಕೆ ಏನು ಬಡ್ಡಿ ಹಾಕುತ್ತಿದ್ದೀರಿ ಅದನ್ನು ಕಡಿಮೆ ಮಾಡಿಸಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೆ, ಈಗಾಗಲೇ ಸಾಕಷ್ಟು ಸಮಯ ಆಗಿರುವುದರಿಂದ ಬಹಳ ಜನ ಮಾನ್ಯ ಸದಸ್ಯರು ಇಲ್ಲಿಂದ ಹೊರಗೆ ಹೋಗಬೇಕೆಂಬ ಆತುರದಲ್ಲಿರುವುದರಿಂದ ನಾನು ಹೆಚ್ಚು ಮಾತನಾಡಲು ಹೋಗದೆ ನನ್ನ ಮಿತ್ರರು ಮತ್ತು ಯುವಕರೂ ಆಗಿರತಕ್ಕ ಮಾನ್ಯ ಜಾರ್ಜ್‌ರವರು ಸಾರಿಗೆ ಸಚಿವರಾಗಿರುವುದರಿಂದ ಅವರನ್ನು ಅಭಿನಂದಿಸಿ ಅವರು ಉತ್ತಮ ಕೆಲಸ ಮಾಡಲೆಂದು ಭಗವಂತನಲ್ಲಿ ಪ್ರಾರ್ಥಿಸಿಕೊಂಡು ರಾಜ್ಯಮಟ್ಟದ ಈ ಬಸ್ ನಿಲ್ದಾಣದ ವ್ಯವಸ್ಥೆ ಕೂಡ ಉತ್ತಮವಾಗಬೇಕೆಂದು ಕೇಳಿಕೊಳ್ಳುತ್ತೇನೆ,

ಈ ಮಾತನ್ನು ಏಕೆ ಹೇಳುತ್ತೇನೆಂದರೆ ನಾನು ವೈಯಕ್ತಿಕ ಅನುಭವವನ್ನು ಪಡೆದಿದ್ದೇನೆ. ಬೆಂಗಳೂರಿನಂತಹ ರಾಜ್ಯಮಟ್ಟದ ಬಸ್ ನಿಲ್ದಾಣದಲ್ಲೇ ವ್ಯವಸ್ಥೆ ಸರಿಯಾಗಿಲ್ಲದೆ ಹೋದರೆ ಬಹಳ ಕಷ್ಟವಾಗುತ್ತದೆಂದು ಹೇಳುತ್ತಾ ಕಾಲಕ್ಕೆ ಸರಿಯಾಗಿ ಬಸ್ಸುಗಳನ್ನು ಬಿಡಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ ಬಹಳಷ್ಟು ಜನ ಪ್ರಯಾಣಿಕರಿಗೆ ತೊಂದರೆ ಯಾಗುತ್ತದೆ. ಇದಕ್ಕೆ ನಾನು ಶಾಸಕನಾಗಿ ಬಸ್ಸಿಗೆ ಹೋದಾಗ ಬಸ್ ನಿಲ್ದಾಣದಲ್ಲಿ ನಡೆದ ಒಂದು ನಿದರ್ಶನವನ್ನು ಹೇಳುತ್ತೇನೆ. ಮಳೆ ಬರುವ ಸಂದರ್ಭದಲ್ಲಿ ಇನ್ನೂ ಹತ್ತು ನಿಮಿಷ ಕಾಲ ಇದ್ದಾಗ ಈ ಲಕ್ಸುರಿ ಬಸ್ಸುಗಳು ಹೊರಟು ಹೋಗುವ ವ್ಯವಸ್ಥೆ ಇತ್ತು, ಅದು ನನ್ನ ಪಾಲಿಗೂ ಬಂದಿತ್ತು. ೧೦ ನಿಮಿಷ ಬಿಟ್ಟು ಹೋದರೆ ತೊಂದರೆ ಇಲ್ಲ. ಕಾಲಕ್ಕೆ ಬೆಲೆ ಕೊಡದೆ ಇದ್ದರೆ ಬಹಳ ಕಷ್ಟವಾಗುತ್ತದೆ. ಇನ್ನು ಸೀಟು ಭರ್ತಿ ಯಾಗಿರಲಿಲ್ಲ, ಎಲ್ಲರ ಸೂಟ್‌ಕೇಸುಗಳನ್ನು ಬಸ್ಸಿನಲ್ಲಿಟ್ಟು ಇನ್ನೂ ಸಮಯ ಇದೆ ಎಂದು ಕಾಫಿಗೆ ಹೋಗಿದ್ದೆವು. ವಾಪಸ್ ಬರುವಷ್ಟರಲ್ಲಿ ಬಸ್ ಹೊರಟು ಹೋಗಿತ್ತು. ರಿಸೆಪ್ಷನಿಸ್ಟ್ ಹತ್ತಿರ ಹೋಗಿ ಮುಂದಿನ ಸ್ಟಾಪ್‌ಗೆ ಮೆಸೇಜ್ ಕೊಡಿ ಎಂದು ಕೇಳಿದೆವು. ಆಗ ಅವರು ನಮ್ಮಲ್ಲಿರತಕ್ಕ ಎಲ್ಲಾ ಇನ್‌ಸ್ಟ್ರುಮೆಂಟ್‌ಗಳು ಡೆಡ್ ಆಗಿವೆ, ನೀವು ಪೊಲೀಸ್ ಸ್ಟೇಷನ್‌ಗೆ ಹೋಗಿ ಎಂದರು. ಎಷ್ಟು ದಿವಸದಿಂದ ಈ ವ್ಯವಸ್ಥೆ ಹೀಗಾಗಿದೆ ಎಂದರೆ ೮ ದಿವಸಗಳಿಂದ ಎಂದು ಹೇಳಿದರು. ಆದುದರಿಂದ ಇಂಥ ಉತ್ತರಗಳು ಬಾರದಂತೆ ತಮ್ಮ ಕಾಲದಲ್ಲಿ ಸೂಕ್ತ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇನ್ನು ಗ್ರಾಮಾಂತರ ಪ್ರದೇಶಗಳ ಬಸ್ ನಿಲ್ದಾಣದ ವ್ಯವಸ್ಥೆಯನ್ನು ನೋಡಬೇಕು. ನಾನು ಎರಡು ಬಸ್ ನಿಲ್ದಾಣಗಳಲ್ಲಿ ಹಾದು ಹೋಗಬೇಕಾಗಿದೆ. ಜಿಲ್ಲಾ ಕೇಂದ್ರಗಳಾದ ಚಿಕ್ಕಮಗಳೂರು ಮತ್ತು ಶಿವಮೊಗ್ಗದ ಬಸ್ ನಿಲ್ದಾಣಗಳನ್ನು ನೋಡಿದರೆ, ಶಿವಮೊಗ್ಗದಲ್ಲಿ ಬಸ್ಸುಗಳ ಗ್ಲಾಸನ್ನು ಏರಿಸದೆ ಹೋದರೆ ಕೂರುವುದಕ್ಕಾಗುವುದಿಲ್ಲ. ಹೊಸ ಬಸ್‌ಸ್ಟ್ಯಾಂಡ್ ಕೆಲಸವನ್ನು ನಿಲ್ಲಿಸಿದ್ದಾರೆ. ಅದನ್ನು ಜಾಗ್ರತೆ ಮಾಡಬೇಕು. ಅಲ್ಲಿ ಮೂತ್ರಿ ವ್ಯವಸ್ಥೆ ಇಲ್ಲದೆ ಇರುವುದರಿಂದ ಪ್ರಯಾಣಿಕರು ಯಾರೂ ಬಸ್ ಸ್ಟ್ಯಾಂಡ್ ಒಳಗೆ ಹೋಗುವುದಕ್ಕೆ ಸಾಧ್ಯವಿಲ್ಲ. ಮೂಗು ಹಾಕಿಕೊಳ್ಳದೆ ಒಳಗಡೆ ಹೋಗುವ ಹಾಗೇ ಇಲ್ಲ. ಹೊಸ ಬಸ್ ಸ್ಟ್ಯಾಂಡನ್ನು ಕಟ್ಟಿಸುವುದರ ಜೊತೆಗೆ ನೈರ್ಮಲ್ಯವನ್ನು ಕಾಪಾಡಬೇಕೆಂದು ಹೇಳುತ್ತೇನೆ. ಚಿಕ್ಕಮಗಳೂರಿನಲ್ಲಿ ಕೂಡ ಅಷ್ಟೆ. ಅಲ್ಲಿ ಯಾರಿಗೆ ಕ್ಲೀನಿಂಗ್ ಕಾಂಟ್ರಾಕ್ಟ್ ಕೊಟ್ಟಿದ್ದಾರೋ ಗೊತ್ತಿಲ್ಲ. ಕ್ಲೀನ್ ಮಾಡುವವರು ಬಂದಿಲ್ಲ, ಅವರ ಮೇಲೆ ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲವೆಂದು ಅಲ್ಲಿನ ಡಿಪೋ ಮ್ಯಾನೇಜರ್ ಹೇಳುತ್ತಾರೆ. ಈ ರೀತಿ ಹಗುರವಾಗಿ ಹೇಳುವುದು ಸರಿಯಿಲ್ಲವೆಂದು ಪ್ರಶ್ನೆ ಮಾಡಿದ್ದೇನೆ. ಆದರೆ ಅವರು ಅವರ ಕಷ್ಟವನ್ನು ಹೇಳುತ್ತಾರೆ. ಡಿಪೋ ಮ್ಯಾನೇಜರ್‌ಗೆ ಸಂಪೂರ್ಣವಾದ ಅಧಿಕಾರ ಕೊಟ್ಟು ಕ್ಲೀನಿಂಗ್ ಮಾಡಿಸುವ ವ್ಯವಸ್ಥೆ ಮಾಡಬೇಕು. ಲೇಡೀಸ್ ಲ್ಯಾವೆಟ್ರಿ ಒಳಗಂತೂ ಹೋಗವ ಹಾಗೆ ಇಲ್ಲ. ಈ ವ್ಯವಸ್ಥೆಯನ್ನು ಸರಿ ಮಾಡದಿದ್ದರೆ

ಮಾನವೀಯತೆಯ ದೃಷ್ಟಿಯಿಂದ ಇಲಾಖೆಯವರು ಕೆಲಸ ಮಾಡುತ್ತಿಲ್ಲವೆಂದು ಆಗುತ್ತದೆ. ಇದರಿಂದ ಇಲಾಖೆಗೆ ಕೆಟ್ಟ ಹೆಸರು ಬರುತ್ತದೆಂದು ಹೇಳುತ್ತೇನೆ. ನನ್ನ ಕ್ಷೇತ್ರವಾದ ಶೃಂಗೇರಿಗೆ ಬಸ್ ನಿಲ್ದಾಣ ಇಲ್ಲ. ೧೦೨ ಬಸ್ಸುಗಳು ಅಲ್ಲಿಗೆ ಬರುತ್ತವೆಂದು ಕೇಳಿದ್ದೇನೆ. ಎಲ್ಲಾ ಪ್ರದೇಶಗಳಿಗಿಂತ ಶೃಂಗೇರಿ ಪವಿತ್ರವಾದ ಜಾಗ. ಎಲ್ಲ ಕಡೆಯಿಂದ ಟೂರಿಸ್ಟ್ ಬಸ್ಸುಗಳು, ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು ಮತ್ತು ಖಾಸಗೀ ಬಸ್ಸುಗಳು ಅಲ್ಲಿಗೆ ಬರುತ್ತವೆ. ಅಲ್ಲಿ ಬಸ್ ನಿಲ್ದಾಣ ಇಲ್ಲದಿರುವುದರಿಂದ ಬಹಳ ಕಷ್ಟವಾಗಿದೆ. ಆ ಊರು ಚಿಕ್ಕದಾಗಿರುವುದರಿಂದ ಬಸ್ಸುಗಳನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಅಲ್ಲಿ ಜನರಿಗೆ ಓಡಾಡುವುದಕ್ಕೆ ತೊಂದರೆಯಾಗಿದೆ. ಬೇಸಿಗೆಯಲ್ಲಿ ಹೊಳೆ ದಂಡೆಯಲ್ಲಿ ನಿಲ್ಲಿಸುತ್ತಾರೆ, ಮಳೆಗಾಲ ಬಂದಾಗ ಪೇಟೆಯಲ್ಲಿಯೇ ನಿಲ್ಲಿಸಬೇಕಾಗಿರುವುದರಿಂದ ಬಹಳ ಕಷ್ಟವಾಗಿದೆ. ಅಲ್ಲಿ ಬಸ್ ನಿಲ್ದಾಣವನ್ನು ಕಟ್ಟಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಮಲೆನಾಡಿನ ಭಾಗದಲ್ಲಿ ಗ್ರಾಮಾಂತರ ಪ್ರದೇಶದ ಜನರಿಗೆ ಬಸ್ಸಿನ ಸೌಕರ್ಯ ಇಲ್ಲದೆ ಬಹಳ ಕಷ್ಟಕ್ಕೆ ಬಂದಿದೆ. ಕಷ್ಟ ಒಂದು ತರಹವಲ್ಲಿ ಅಲ್ಲ. ನನ್ನ ಕ್ಷೇತ್ರದಲ್ಲಿ ಖಾಸಗಿ ಬಸ್ಸುಗಳು ಮತ್ತು ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು ಓಡಾಡುತ್ತಿವೆ. ಬಸ್‌ಧಾರಣೆ ಜಾಸ್ತಿ ಮಾಡಿದ್ದೀರಿ. ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು ಜಾಸ್ತಿ ಇವೆ. ಖಾಸಗಿ ಬಸ್ಸುಗಳು ಕಡಿಮೆ ಇವೆ. ಅವುಗಳಿಗೆ ಯಾರೂ ಅಡ್ಡ ಹಾಕುವ ಪ್ರವೃತ್ತಿ ಬಂದಿಲ್ಲ. ಆದರೆ ಈಗ ಧಾರಣೆಯನ್ನು ಏನು ಗೊತ್ತು ಮಾಡಿದ್ದೀರಿ, ಅದನ್ನು ಸ್ವಲ್ಪ ಪುನರ್ ವಿಮರ್ಶೆ ಮಾಡುವುದಕ್ಕೆ ಅವಕಾಶ ಇದ್ದರೆ ಮಾಡಬೇಕೆಂದು ಈ ಸಂದರ್ಭದಲ್ಲಿ ಸಲಹೆ ಮಾಡಲಿಚ್ಛಿಸುತ್ತೇನೆ.

ಹೈದರಾಬಾದ್‌ನಿಂದ ಶೃಂಗೇರಿಗೆ ಬಸ್ ಬರುತ್ತದೆ. ಅದು ಹೈದರಾಬಾದ್‌ನಿಂದ ಶಿವಮೊಗ್ಗಕ್ಕೆ ಬಂದು ಶಿವಮೊಗ್ಗದಿಂದ ಶೃಂಗೇರಿಗೆ ಬಸ್ ಬರುತ್ತದೆ. ಬೆಳಿಗ್ಗೆ ಬಂದು ೮ ಘಂಟೆಗೆ ಶಿವಮೊಗ್ಗ ಬಿಡಬೇಕೆಂದಿದೆ. ಆದರೆ ಅದು ೯ ಘಂಟೆಗೆ ಬಿಡುತ್ತದೆ, ೧೦ ಘಂಟೆಗೆ ಬಿಡುತ್ತದೆ, ಒಂದೊಂದು ಸಾರಿ ೧೧ ಘಂಟೆಯನ್ನಾದರೂ ಬಿಡುವುದಿಲ್ಲ. ಇಂಥ ನಿದರ್ಶನಗಳು ಬೇಕಾದಷ್ಟಿವೆ. ಇದು ದಿನಚರಿ. ಮತ್ತೆ ಕೆಲವು ಸಲ ಬಸ್ಸನ್ನು ಬಿಡುವುದೇ ಇಲ್ಲ. ಏತಕ್ಕೆ ಎಂದು ಕೇಳಿದರೆ ಶಿವಮೊಗ್ಗದಿಂದ ಶೃಂಗೇರಿಗೆ ಹೋಗುವ ಪ್ಯಾಸೆಂಜರ್ ಇಲ್ಲ ಎಂದು ಹೇಳುತ್ತಾರೆ. ಇದು ಡ್ರೈವರ್ ಮತ್ತು ಕಂಡಕ್ಟರ್ ಡಿಸ್ಕ್ರಿಷನರಿ ಪವರ್ ಇದ್ದ ಹಾಗೆ ಇದೆ ಕಾಣುತ್ತದೆ. ಬಸ್ ಬರುವ ಗ್ಯಾರಂಟಿ ಇಲ್ಲದೆ ಪ್ಯಾಸೆಂಜರುಗಳು ಖಾಸಗಿ ಬಸ್ಸಿಗೆ ಹೋಗುವ ಪ್ರಸಂಗ ಬರುತ್ತದೆ. ಆದ್ದರಿಂದ ಅಲ್ಲಿ ವೇಳೆಗೆ ಸರಿಯಾಗಿ ಬಸ್ ಓಡಿಸಬೇಕೆಂದು ಹೇಳುತ್ತೇನೆ. ಆದಿಚುಂಚನಗಿರಿ ಮತ್ತು ತೀರ್ಥಹಳ್ಳಿಗೆ ಹೋಗುವುದಕ್ಕೆ ಬಸ್ ವ್ಯವಸ್ಥೆ ಮಾಡಿದ್ದೀರಿ. ಈ ಬಸ್ಸುಗಳು ಯಾವ ಡಿಪೋದಿಂದ ಬರುತ್ತದೋ ಗೊತ್ತಿಲ್ಲ. ಅಲ್ಲಿ ಕೇಳಿದರೆ ಹಾಸನ ಡಿಪೋ ಎಂದು ಹೇಳುತ್ತಾರೆ. ಹಾಸನ ಡಿಪೋದಲ್ಲಿ ಕೇಳಿದರೆ ಚಿಕ್ಕಮಂಗಳೂರು ಡಿಪೋ ಎಂದು ಹೇಳುತ್ತಾರೆ. ಈ ಬಸ್ಸು ಕೂಡ ಕಾಲಕ್ಕೆ ಸರಿಯಾಗಿ ಹೋಗುತ್ತಿಲ್ಲ. ಬಾಳೆಹೊನ್ನೂರಿಗೆ ಬಂದರೆ ಸುಮ್ಮನೆ ಅಲ್ಲೇ ನಿಲ್ಲಿಸಿಬಿಡುತ್ತಾರೆ. ಡ್ರೈವರ್‌ಗೆ ಬೇಜಾರಾದಾಗ ಅಲ್ಲೇ ಬಸ್ ನಿಲ್ಲಿಸುತ್ತಾನೆ. ಮುಂದೆ ಹೋಗುವವರಿದ್ದರೆ ಪ್ರೈವೇಟ್ ಬಸ್ಸಿಗೆ ಹೋಗಿ ಎಂದು ಹೇಳುತ್ತಾನೆ. ನಾನು ಶಾಸಕನಾಗುವುದಕ್ಕಿಂತ ಮುಂಚೆ ಇದನ್ನು ಅನುಭವಿಸಿದ್ದೇನೆ, ಅದೇ ಪದ್ಧತಿ ಈಗಲೂ ನಡೆಯುತ್ತಿದೆ. ಆದ್ದರಿಂದ ಇದರ ಬಗ್ಗೆ ಸೂಕ್ತ ವ್ಯವಸ್ಥೆ ಮಾಡುವುದರ ಜೊತೆಗೆ ಅಲ್ಲಿಗೆ ಹಳೇ ಬಸ್ ಹಾಕಿದ್ದಾರೆ, ಕಾರಣ ಕೇಳಿದರೆ ಡ್ರೈವರ್ ಹೇಳುವುದು, ಬಸ್ ಸರಿಯಿಲ್ಲ, ರಿಪೇರಿ ಮಾಡುವ ವ್ಯವಸ್ಥೆ ಇಲ್ಲ ಎಂದು ಹೇಳುತ್ತಾನೆ. ಇದರಿಂದ ಆ ಬಸ್‌ನಲ್ಲಿ ಹೋಗುವವರಿಗೆ ಹೆದರಿಕೆ ಶುರುವಾಗುತ್ತದೆ. ಬ್ರೇಕ್ ಇದೆಯೋ ಇಲ್ಲವೋ ಎಂದು ಭಯವಾಗುತ್ತದೆ. ಆದ್ದರಿಂದ ಅಲ್ಲಿ ಸರಿಯಾದ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಆಮೇಲೆ ಟ್ರಾನ್ಸ್‌ಪೋರ್ಟೇಷನ್‌ನಿಂದ ಬಹಳ ನಷ್ಟವಾಗುತ್ತಿದೆ ಎಂದು ಕೇಳಿದ್ದೇನೆ. ಅದಕ್ಕೆ ಕಾರಣ, ನಾನು ಅನೇಕ ಸಂದರ್ಭದಲ್ಲಿ ನೈಟ್ ಸರ್ವೀಸ್ ಬಸ್ಸಿನಲ್ಲಿ ಬರುತ್ತೇನೆ. ಅದರಲ್ಲಿ ಪ್ರಯಾಣಿಕರು ಲೀಲಾಜಾಲವಾಗಿ ಬರುತ್ತಾರೆ. ಡಿಪಾರ್ಟ್‌ಮೆಂಟಿನವರು ಮಧ್ಯದಲ್ಲಿ ಅಡ್ಡ ಹಾಕಿ ಒಂದು ದಿವಸವೂ ಚೆಕ್ ಮಾಡಿಲ್ಲ. ನನ್ನ ಜೀವನದಲ್ಲಿ ಒಂದು ದಿವಸವೂ ಚೆಕ್ ಮಾಡಿದ್ದು ನೋಡಿಲ್ಲ. ಹಗಲಿನಲ್ಲಿ ಹೋಗುವಾಗ ಕೆಲವು ಸಂದರ್ಭದಲ್ಲಿ ಮಾತ್ರ ಚೆಕ್ ಮಾಡುತ್ತಾರೆ, ರಾತ್ರಿ ಓಡಾಡುವ ಬಸ್ಸಿನಲ್ಲಿ ಸಹ ಚೆಕ್ಕಿಂಗ್ ಮಾಡುವ ವ್ಯವಸ್ಥೆ ಮಾಡಬೇಕು. ಶಾಸಕರಿಗೆ ಒಂದು ಪ್ರಿವಿಲೈಜ್ ಕೊಟ್ಟಿದ್ದೀರಿ. ಅವರು ಎರಡು ಸೀಟು ಹಾಕಿಕೊಂಡು ಹೋಗಬಹುದು. ಬಹುಶಃ ಇದರಲ್ಲೂ ದುರುಪಯೋಗ ಆಗುತ್ತಿದೆ ಎಂದು ಕೇಳಿದ್ದೇನೆ. ಈ ವಿಚಾರದಲ್ಲೂ ಕೂಡ ಚೆಕಿಂಗ್ ಮಾಡುವ ವ್ಯವಸ್ಥೆ ಇಡಬೇಕು. ಶಾಸಕರಲ್ಲದಿದ್ದರೂ ಅವರ ಹೆಸರಿನಲ್ಲಿ ಬೇರೆಯವರನ್ನು ಕರೆದುಕೊಂಡು ಹೋಗುತ್ತಾರೆಂದು ಕಾಣುತ್ತದೆ. ಈ ರೀತಿ ಆಗಬಾರದು. ಇದರ ಬಗ್ಗೆ ವಿಚಾರ ಮಾಡಬೇಕು. ಮಲೆನಾಡು ಪ್ರದೇಶದಲ್ಲಿ ಅನೇಕ ಬಸ್ಸುಗಳು ಬೇಕು. ಬೆಂಗಳೂರು, ಶಿವಮೊಗ್ಗ ಆಗುಂಬೆಗೆ

ಇದುವರೆಗೂ ಕೆಂಪು ಬಸ್ ಇರುವುದನ್ನು ಜನ ನೋಡಿಲ್ಲ. ನಾಲ್ಕು ಘಂಟೆಗೆ ಎನ್. ಆರ್. ಪುರ ಬಸ್ ಸ್ಟ್ಯಾಂಡಿನಲ್ಲಿ ಜನ ನಿಲ್ಲುತ್ತಾರೆ. ಅವುಗಳನ್ನು ಮುಂದುವರೆಸಬೇಕು ಎಂದು ಕಳಕಳಿಯಿಂದ ಪ್ರಾರ್ಥಿಸುತ್ತೇನೆ ಮತ್ತು ಬಸ್ಸುಗಳ ಸಂಖ್ಯೆಯನ್ನು ಹೆಚ್ಚು ಮಾಡಬೇಕು. ಗ್ರಾಮಾಂತರ ಪ್ರದೇಶದಲ್ಲಿ ೫ ಕಿಲೋಮೀಟರಿನಿಂದ ೧೦ ಕಿಲೋಮೀಟರ್‌ಗೆ ಒಂದೊಂದು ಹಳ್ಳಿಗಳು ಇರುತ್ತವೆ. ಆ ಹಳ್ಳಿಗಳಲ್ಲಿ ಕೈ ಅಡ್ಡ ಹಾಕಿದರೂ ಬಸ್ ನಿಲ್ಲಿಸುವುದಿಲ್ಲ. ಕಾರಣ ಅಲ್ಲಿಗೆ ಸ್ಟಾಪ್ ಕೊಟ್ಟಿರುವುದಿಲ್ಲ, ಜನಭರಿತ ಹಳ್ಳಿಗಳಲ್ಲಿ ಬಸ್ ಸ್ಟಾಪ್ ಕೊಡುವುದಕ್ಕೆ ಮೊದಲ ಆದ್ಯತೆ ಕೊಡಬೇಕೆಂದು ಈ ಸಂದರ್ಭದಲ್ಲಿ ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಇಷ್ಟನ್ನು ಹೇಳಿ ತಾವು ಸಾರಿಗೆ ಸಚಿವರಾಗಿ ತಮ್ಮ ಕಾಲದಲ್ಲಿ ಉತ್ತಮವಾದ ಸಾರಿಗೆ ಸೌಲಭ್ಯವನ್ನು ಮಾಡಿಕೊಡಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಂಡು ಇನ್ನು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಬಗ್ಗೆ ಮಾತನಾಡುತ್ತೇನೆ. ಮಲೆನಾಡು ಪ್ರದೇಶದಲ್ಲಿ ಇದು ಬಹಳ ಮುಖ್ಯವಾದುದೆಂದು ನಾನು ಭಾವಿಸಿಕೊಂಡಿದ್ದೇನೆ. ಕೋ-ಆಪರೇಷನ್ ಡಿಪಾರ್ಟ್‌ಮೆಂಟಿಗೂ ಫುಡ್ ಡಿಪಾರ್ಟ್‌ಮೆಂಟಿಗೂ ಇಲ್ಲಿ ಕ್ಲ್ಯಾಷನ್ ಬರುತ್ತಿರುತ್ತದೆ. ಬಿ.ಡಿ.ಓ. ಅಲಾಟ್ ಮಾಡಿರುವುದನ್ನು ಲಿಫ್ಟ್ ಮಾಡಿಕೊಂಡು ಹೋಗುವ ಸಂದರ್ಭದಲ್ಲಿ ಸಮಸ್ಯೆ ಬರುತ್ತದೆ. ಮಲೆನಾಡಿನಲ್ಲಿ ಹಸಿರು ಕಾರ್ಡಿನ ವಿತರಣೆ ಸರಿಯಾಗಿ ಆಗಿಲ್ಲ. ಅದು ಶ್ರೀಮಂತರ ಕೈಯಲ್ಲಿ ೫–೧೦ ಕಾರ್ಡ್‌ಗಳಿವೆ ಎಂದು ಶ್ರೀಮತಿ ಮೋಟಮ್ಮ ಅವರು ಹೇಳಿದ್ದನ್ನು ನಾನೂ ಸಹ ಒಪ್ಪುತ್ತೇನೆ. ಅದನ್ನು ತಪಾಸಣೆ ಮಾಡಿ ಯಾರಿಗೆ ಹಸಿರು ಕಾರ್ಡಿನ ಅವಶ್ಯಕತೆ ಇರುತ್ತದೆ, ಯಾರಿಗೆ ಹಸಿರು ಕಾರ್ಡ್ ಇಲ್ಲ ಅವರಿಗೆ ಕೊಡಿಸುವ ವ್ಯವಸ್ಥೆಯನ್ನು ಕೂಡಲೇ ಮಾಡಬೇಕು. ಜೊತೆಗೆ ಹಸಿರು ಕಾರ್ಡ್ ರೇಷ್ಯೋ ಮೇಲೆ ಫುಡ್ ಕೊಡಬೇಕೆಂದು ಹೇಳುತ್ತೇನೆ.

ಈಗ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಜನರಿಗೆ ಕೊಡುವುದಕ್ಕಿಂತ ಹೆಚ್ಚು ಪಟ್ಟಣಕ್ಕೆ ಆಹಾರ ಪದಾರ್ಥಗಳನ್ನು ಕೊಡುತ್ತಿದ್ದೀರಿ, ಅಷ್ಟೇ ಪ್ರಮಾಣದಲ್ಲಿ ಗ್ರಾಮಾಂತರ ಪ್ರದೇಶದ ರೈತರಿಗೆ ಕೊಡುತ್ತಿಲ್ಲ. ಇಲ್ಲಿ ಸಕ್ಕರೆಯನ್ನು ಹೆಚ್ಚು ಕೊಡುತ್ತೀರಿ. ಅಕ್ಕಿಯನ್ನು ಹೆಚ್ಚು ಕೊಡುತ್ತೀರಿ. ಅದು ಸಹಜ. ಕೊಡಿ ನಾವು ಬೇಡ ಅಂತ ಹೇಳುವುದಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಅಕ್ಕಿಯನ್ನು ಬೆಳೆಯುತ್ತೇವೆ. ಆದರೆ ಸಕ್ಕರೆಯನ್ನು ಬೆಳೆಯುವುದಿಲ್ಲ. ಸಕ್ಕರೆ ಹೊರಗಡೆಯಿಂದ ಬರಬೇಕಾಗುತ್ತದೆ. ನಮಗೆ ಹೆಚ್ಚು ಗೋಧಿ ಬೇಕು. ಸಕ್ಕರೆ ಬೇಕು. ಅಲ್ಲಿ ವಿತರಣೆ ವ್ಯವಸ್ಥೆ ಕೂಡ ಸರಿಯಾಗಿ ನಡೆಯುತ್ತಿಲ್ಲ. ಅಲ್ಲಿಗೆ ಬರತಕ್ಕ ಸಕ್ಕರೆ ಗೋಧಿ ಎಲ್ಲಿ ಹೋಗುತ್ತಿದೆ ಎಂಬ ಪ್ರಶ್ನೆಯನ್ನು ನಾನು ಕೇಳಬೇಕಾಗುತ್ತದೆ. ೫೦ ಕ್ವಿಂಟಾಲ್ ಅಕ್ಕಿಯನ್ನು ಆಹಾರ ಇಲಾಖೆಯ ಮತಿಯಿಂದ ಬಿಡುಗಡೆ ಮಾಡಿಕೊಂಡು ತೆಗೆದುಕೊಂಡು ಹೋಗಬೇಕಾದರೆ, ಆ ಸೊಸೈಟಿಯ ಕಾರ್ಯದರ್ಶಿಗಳು ಏನು ಇದ್ದಾರೆ, ಅವರು ಅಷ್ಟೇ ಬಲಾಢ್ಯರಿದ್ದಾರೆ. ಬಹುತೇಕ ಅವರು ಲಾರಿಗಳನ್ನು ವ್ಯಾನ್‌ಗಳನ್ನು ಇಟ್ಟುಕೊಂಡಿರುತ್ತಾರೆ. ಅವರದೇ ವಾಹನದಲ್ಲಿ ಸಾಗಾಣಿಕೆಯನ್ನು ಮಾಡುತ್ತಾರೆ. ಆಗ ಅದು ತಾಲ್ಲೂಕು ಮಾರುಕಟ್ಟೆ ಸೊಸೈಟಿಯಿಂದ ಸರ್ವೀಸ್ ಕೊ-ಆಪರೇಟಿವ್ ಸೊಸೈಟಿಗೆ ಸರಿಯಾಗಿ ಮುಟ್ಟುತ್ತಿದೆಯೋ ಎಂಬುದನ್ನು ತಾವು ನೋಡಬೇಕು ಹಾಗೂ ಇದನ್ನು ತಾವು ಸರಿಪಡಿಸಬೇಕೆಂದು ಹೇಳುತ್ತೇನೆ. ಮತ್ತೇ ಪಾಮೊಯಿಲ್ ವಿತರಣೆ ಬಗ್ಗೆ ಕೂಡ ಅನೇಕ ತೊಂದರೆಯಾಗಿದೆ. ಇದರ ವಿತರಣೆ ಸರಿಯಾಗಿ ನಡೆಯುತ್ತಿಲ್ಲ. ಫುಡ್ ಇನ್ಸ್‌ಪೆಕ್ಟರ್ ಏನು ಆಹಾರ ಇಲಾಖೆಯಲ್ಲಿದ್ದಾನೆ, ಅವನು ಸರಿಯಾಗಿ ಬಂದು ನೋಡುತ್ತಿಲ್ಲ. ಇವರು ಯಾವ ರೀತಿಯ ತಪಾಷಣೆ ಮಾಡುತ್ತಾರೆಂಬುದಕ್ಕೆ ಒಂದು ಸಂಗತಿಯನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುತ್ತೇನೆ. ನನ್ನ ತಾಲ್ಲೂಕಿನ ಮಾರುಕಟ್ಟೆ ಸೊಸೈಟಿಯಲ್ಲಿ ೨೫ ಕೆ.ಜಿ. ಪಾಮಾಯಿಲ್ ತುಂಬುವ ಡ್ರಮ್‌ಗಳಿದ್ದು ಅವುಗಳಿಗೆ ಸಂಬಂಧಪಟ್ಟಂತೆ ಮಾತ್ರ ಕೇಸ್ ಹಾಕಿದರು. ನಾನು ಏಕಪ್ಪಾ ಕೇಸ್ ಹಾಕಿದ್ದೀಯಾ ಅಂತ ಕೇಳಿದಾಗ ಆತ ಹೇಳಿದ್ದು ಏನೆಂದರೆ, ಖಾಲಿ ಡ್ರಮ್‌ಗಳನ್ನು ತೂಕ ಮಾಡಿದಾಗ ಬಂದಿರುವುದು ೨೫ ಕೆ.ಜಿ. ಹೆಚ್ಚು ತೂಕ. ಆದ್ದರಿಂದ ಪಾಮಾಯಿಲ್‌ನ್ನು ದುರುಪಯೋಗ ಮಾಡಿದ್ದಾರೆಂದು ಅವರು ಬಂದು ಕೇಸ್ ರಿಜಿಸ್ಟರ್ ಮಾಡಿಕೊಂಡು ಹೋಗಿದ್ದರು. ಇದರ ಬಗ್ಗೆ ನಾನು ಸ್ವತಃ ಸಂಬಂಧಪಟ್ಟ ಜಿಲ್ಲಾಧಿಕಾರಿಗಳನ್ನು ಕೇಳಿದಾಗ, ಅವರು ನಕ್ಕು, ಆ ಆಹಾರ ಇಲಾಖೆಯ ಇನ್ಸ್‌ಪೆಕ್ಟರನ್ನು ಕುರಿತು, ಇಂತಹ ಕೇಸ್‌ಗಳನ್ನು ಹಿಡಿಯುವುದಕ್ಕೆ ಬದಲು ಬೇರೆ ವ್ಯವಸ್ಥಿತವಾದ ಕೇಸನ್ನು ಹಿಡಿಯಬೇಕೆನ್ನುವ ಮಾತನ್ನು ಹೇಳಿ ಅದನ್ನು ವಜಾ ಮಾಡಿದರು.

ಶ್ರೀ ಎಂ. ಮಹದೇವ್.—ಮಾನ್ಯ ಅಧ್ಯಕ್ಷರೇ, ಎಷ್ಟು ಹೊತ್ತಿನವರೆಗೆ ಸಭೆ ನಡೆಯುತ್ತದೆಂಬುದನ್ನು ತಾವು ನಿಗದಿ ಮಾಡಿ. ಏಕೆಂದರೆ ಇವತ್ತು ಬೆಳಗ್ಗೆ ೯ ಗಂಟೆಗೆ ನಮ್ಮ ಪಾರ್ಟಿ ಮೀಟಿಂಗ್ ಶುರುವಾಯಿತು. ಅಲ್ಲಿಂದ ಇಲ್ಲಿಯತನಕ ಇಲ್ಲೇ ಕುಳಿತಿದ್ದೇನೆ. ನಮ್ಮ ಊರಿನಲ್ಲಿ

ಒಂದು ನಾಟಕಕ್ಕೆ ನನ್ನ ಅಧ್ಯಕ್ಷತೆಯಲ್ಲಿ ಹೋಗಿದ್ದೆ. ಅಲ್ಲಿ ನನ್ನ ಪಾತ್ರ ಬರುತ ದೆ ನೋಡಿಕೊಂಡು ಹೋಗಿ ನಮ್ಮ ಪಾತ್ರ ಬರುತ್ತದೆ ನೋಡಿಕೊಂಡು ಹೋಗಿ ಎಂದು ಹೇಳಿ ಬೆಳಗಿನ ಜಾವದವರೆಗೆ ಕೂರಿಸಿದ್ದರು. ಆದ್ದರಿಂದ ಅದೇ ರೀತಿ ನನ್ನ ಪಾತ್ರ ಇಲ್ಲಿ ಯಾವಾಗ ಬರುತ್ತದೆಂಬುದನ್ನು ತಿಳಿಸಿದರೆ ಅನುಕೂಲವಾಗುತ್ತದೆ. ಈಗ ಚರ್ಚೆಯನ್ನು ಮುಗಿಸಿ ನಾಳೆ ಬೆಳಗ್ಗೆ ಚರ್ಚೆ ಪ್ರಾರಂಭ ಮಾಡೋಣ. ಆಗ ಎಲ್ಲರಿಗೂ ಮಾತನಾಡಲು ಅನುಕೂಲವಾಗುತ್ತದೆಂದು ತಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನನಗೂ ಅದೇ ರೀತಿ ಅನ್ನಿಸುತ್ತಿದೆ. ನಾವೂ ಸಹ ಬೆಳಗ್ಗೆಯೇ ಬಂದಿದ್ದೇವೆ.

ಶ್ರೀ ಎಸ್. ಹೆಚ್. ಕೌಜಲಗಿ.—ಬೆಳಿಗ್ಗೆ ಕ್ಯಾಬಿನೆಟ್ ಮೀಟಿಂಗ್ ಇದೆ ಅಂತ ಕೇಳಿದ್ದೇನೆ. ಆದರೂ ಈ ಮೂರು ಜನ ಮಂತ್ರಿಗಳು ಇಲ್ಲಿದ್ದರೆ ಸಾಕು. ಆದ್ದರಿಂದ ಬೆಳಿಗ್ಗೆಯೇ ಕೂಡೋಣ.

ಶ್ರೀ ಯು. ಕೆ. ಶಾಮಣ್ಣ.—ಮಾನ್ಯ ಅಧ್ಯಕ್ಷರೆ, ಈಗ ಕಾಲ ಮೀರಿರುವುದರಿಂದ ಹೆಚ್ಚು ಮಾತನಾಡದೆ ನನಗೆ ಇಷ್ಟು ಸಮಯ ಮಾತನಾಡಲು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದಿರೆ).—ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ...

ಅಧ್ಯಕ್ಷರು.—ಈಗ ಸದನ ಮುಂದುವರೆದು ನಾಳೆ ಬೆಳಗ್ಗೆ ೧೧–೦೦ ಗಂಟೆಗೆ ಮತ್ತೆ ಸಮಾವೇಶಗೊಳ್ಳುತ್ತದೆ.

(ಸದನವು ಸಂಜೆ ೭–೧೯ಕ್ಕೆ ಮುಂದೂಡಲ್ಪಟ್ಟು ದಿನಾಂಕ ೨೮–೬–೧೯೯೦ರ ಗುರುವಾರದಂದು ಬೆಳಗ್ಗೆ ೧೧–೦೦ ಗಂಟೆಗೆ ಪುನಃ ಸಮಾವೇಶಗೊಳ್ಳಲು ತೀರ್ಮಾನಿಸಿತು.)